CC-O. In Public Domain. Digitized by eGangotri



Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಕನ್ನಡ ಅಧ್ಯಯನ ಸಂಸ್ಥೆ ಪ್ರಕಟಣೆ-೧೭೮
ಪ್ರಾಚ್ಯ ಕಾವ್ಯಮಾಲೆ–೩೦

ಪ್ರಧಾನ ಸಂಪಾದಕ
ಡಾ. ಹಾ. ಮಾ. ನಾಯಕ

ವಿಭಾಗ ಸಂಪಾದಕ
ಎನ್. ಬಸವಾರಾಧ್ಯ

ಲಿಂಗಣ್ಣ ಕವಿ ವಿರಚಿತ

ಕೆಳದಿನೃಪ ವಿಜಯಂ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಲಿಂಗಣ್ಣ ಕವಿ ವಿರಚಿತ

ಕೆಳದಿನೃಪ ವಿಜಯಂ

ಸಂಪಾದಕ

ಆರ್. ಶಾಮಶಾಸ್ತ್ರಿ

ಕನ್ನಡ ಅಧ್ಯಯನ ಸಂಸ್ಥೆ

ಮೈಸೂರು ವಿಶ್ವವಿದ್ಯಾನಿಲಯ

೧೯೭೩

Sri Vidyabharathi Book Centre, Sringeri

CC-O. In Public Domain. Digitized by eGangotri

KELADINRUPA VIJAYAM by Linganna Kavi, edited by R. Shamashastri, published by the Institute of Kannada Studies, Manasagangotri, University of Mysore, Mysore-6.
Second Edition 1973 Pp xxvi+193.

ಎಲ್ಲ ಹಕ್ಕುಗಳನ್ನೂ ಕಾದಿರಿಸಿದೆ

ಮೊದಲ ಮುದ್ರಣ ೧೯೨೧
ಎರಡನೆಯ ಮುದ್ರಣ ೧೯೭೩
(ಕನ್ನಡ ಅಧ್ಯಯನ ಸಂಸ್ಥೆಯಿಂದ ಮೊದಲ ಮುದ್ರಣ)

ಬೆಲೆ : ರೂ. 6-00

ಮಾರಾಟಗಾರರು: ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು
Sri Vidyabharathi Book Centre, Sringeri
ಮುದ್ರಕರು : ಯು. ಎಸ್. ಪ್ರಿಂಟರ್ಸ್, ಮೈಸೂರು

CC-O. In Public Domain. Digitized by eGangotri

ಮುನ್ನುಡಿ

ಕನ್ನಡ ಅಧ್ಯಯನಕ್ಕೆ ಸಂಬಂಧಪಟ್ಟ ಚಟುವಟಿಕೆಗಳೆಲ್ಲವನ್ನೂ ಕೇಂದ್ರೀಕರಿಸುವ ದೃಷ್ಟಿಯಿಂದ 1966ರ ಕೊನೆಯಲ್ಲಿ ಪ್ರಾಚ್ಯ ಸಂಶೋಧನಾಲಯದ ಕನ್ನಡ ವಿಭಾಗವನ್ನು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ವಿಲೀನಗೊಳಿಸಲಾಯಿತು. ಅಂದಿನಿಂದ ಈ ವಿಭಾಗವನ್ನು ಅಧ್ಯಯನ ಸಂಸ್ಥೆಯ 'ಸಂಪಾದನ ವಿಭಾಗ'ವೆಂದು ಹೆಸರಿಸಲಾಯಿತು. ಕ್ರಿ.ಶ. 1436ರಲ್ಲಿ ಪ್ರತಿಮಾಡಲಾಗಿರುವ 'ಪುಷ್ಪದಂತ ಪುರಾಣ'ದ ಹಸ್ತಪ್ರತಿಯಿಂದ ಹಿಡಿದು 1850 ರಲ್ಲಿ ರಚಿತವಾಗಿರುವ 'ಪ್ರಭಾವತಿ ಪರಿಣಯ'ದ ಹಸ್ತಪ್ರತಿಯ ವರೆಗೆ ಇಂದು 5,000ಕ್ಕೂ ಹೆಚ್ಚು ಹಸ್ತಪ್ರತಿಗಳನ್ನು ಹೊಂದಿರುವ 'ಸಂಪಾದನ ವಿಭಾಗ' ಅಧ್ಯಯನ ಸಂಸ್ಥೆಯ ಒಂದು ಪ್ರಧಾನ ಅಂಗವಾಗಿದೆ. ಕನ್ನಡ ಭಾಷಾ ಸಾಹಿತ್ಯಗಳಿಗೆ ಸಂಬಂಧಿಸಿದ ಅಧ್ಯಯನವನ್ನು ಕೈಗೊಳ್ಳುವವರಿಗೆ, ಸಂಶೋಧಕರಿಗೆ, ಸ್ನಾತಕ ಮತ್ತು ಸ್ನಾತಕೋತ್ತರ ಕನ್ನಡ ವಿದ್ಯಾರ್ಥಿಗಳಿಗೆ ಇದು ಆಕರ ಗ್ರಂಥಗಳ ತವರಾಗಿದೆ, ಪ್ರೇರಣೆಯ ಸ್ರೋತವಾಗಿದೆ.

ಮುದ್ರಣ ಸೌಲಭ್ಯ ಈಗ್ಗೆ ಕೆಲವು ಶತಮಾನಗಳಿಂದೀಚೆಗೆ ಮಾನವ ಜನಾಂಗಕ್ಕೆ ದೊರೆತ ವರ. ಈ ಸೌಲಭ್ಯವಿಲ್ಲದಿದ್ದ ಕಾಲದಲ್ಲಿ ಓಲೆಗರಿ ಅಥವಾ ತಾಡಪತ್ರದ ಮೇಲೆ ಕಂಠದಿಂದ ಕೊರೆದು, ಅನನ್ಯ ಶ್ರದ್ಧೆಯಿಂದ ಆ ಸಾಹಿತ್ಯವನ್ನು ಅಭ್ಯಸಿಸಿ, ಅದನ್ನು ಕಾಯ್ದುಕೊಂಡು ಬಂದ ಹಿರಿಯರಿಂದ ಅಂದಿನ ಅಪೂರ್ವ ಸಾಹಿತ್ಯ ನಮ್ಮ ಸಂಪತ್ತಾಗಿ ಉಳಿದಿದೆ. ತಮಗೆ ಪ್ರಿಯವೆನಿಸಿದ ಸಾಹಿತ್ಯ ಕೃತಿಗಳನ್ನು ಪ್ರತಿಮಾಡಿಸಿ ಇಟ್ಟುಕೊಳ್ಳುತ್ತಿದ್ದುದು ಆ ಕಾಲದ ಒಂದು ಬಗೆಯ ಹವ್ಯಾಸವೇ ಆಗಿತ್ತು. ಈ ಕಾರಣದಿಂದಾಗಿಯೇ, ಓಲೆಗರಿಯ ಒಂದು ಸಂಪುಟದಲ್ಲಿಯೇ ಅನೇಕ ಗ್ರಂಥಗಳನ್ನು, ಗ್ರಂಥಭಾಗಗಳನ್ನು ಪ್ರತಿಲಿಪೀಕರಿಸಿರುವುದನ್ನು ಕಾಣುತ್ತೇವೆ. ಹಸ್ತಪ್ರತಿಗಳ ಅನೇಕ ಪ್ರತಿಗಳನ್ನು ಸಿದ್ಧಪಡಿಸಿ ಹಂಚುವುದನ್ನೂ ಪುಣ್ಯಕಾರ್ಯವೆಂದು ಬಗೆದು ಆ ರೀತಿ ಮಾಡುತ್ತಿದ್ದುದಕ್ಕೂ ಉದಾಹರಣೆಗಳಿವೆ. ಪ್ರತಿಲಿಪೀಕರಣ ಹಲವರಿಗೆ ಜೀವನೋಪಾಯದ ಸಾಧನವಾಗಿಯೂ ಇತ್ತು. ಹಸ್ತಪ್ರತಿಗಳನ್ನು ಸುಂದರ ಸಂದರ್ಭೋಚಿತ ಚಿತ್ರಗಳಿಂದ ಅಲಂಕರಿಸುವ ವಾಡಿಕೆಯೂ ಇತ್ತು. ಇವು ನಮ್ಮ ಜನಗಳ ಸಾಹಿತ್ಯ-ಶಾಸ್ತ್ರ-ಕಲಾಭಿರುಚಿಯ ಪ್ರತೀಕವಾಗಿವೆ.

ಸಂಸ್ಕೃತಿ, ಇತಿಹಾಸ, ಭಾಷಾಚರಿತ್ರೆ—ಇವುಗಳ ಸಮಗ್ರ ಅರಿವಿಗೆ ಶಾಸ್ತ್ರೀಯವಾಗಿ ಸಂಪಾದಿಸಿದ ಸಾಹಿತ್ಯ ಅತ್ಯಾವಶ್ಯಕ. ಅಷ್ಟೇ ಅಲ್ಲ, ಕೋಶ ಅಥವಾ ನಿಘಂಟುಗಳ ರಚನೆಗೆ, ಅವುಗಳ ಮೂಲ ಘಟಕಗಳಾದ ಶಬ್ದಗಳ ಅರ್ಥನಿರ್ಧಾರಕ್ಕೆ ಶಾಸ್ತ್ರೀಯವಾಗಿ ಸಂಪಾದಿಸಿದ ಸಾಹಿತ್ಯಕೃತಿಗಳು ಅನಿವಾರ್ಯವಾಗುತ್ತವೆ. ಸಾಂಸ್ಕೃತಿಕ ಮತ್ತು ಐತಿಹಾಸಿಕ ಪುನರ್‌ರಚನೆಗೆ ಅಗತ್ಯವಾಗಿ ಬೇಕಾಗಿರುವ ಅನೇಕ ಗ್ರಂಥಗಳು ಇಂದಿಗೂ ಅನುಪಲಬ್ಧವಾಗಿವೆ. ಶಾಸನಗಳಲ್ಲಿ, ಅನ್ಯಕವಿಗಳ ಕೃತಿಗಳಲ್ಲಿ ಉಕ್ತವಾಗಿರುವುದರಿಂದ ಮಾತ್ರ ಹಲವು ಕವಿಗಳ ಮತ್ತು ಗ್ರಂಥಗಳ ಹೆಸರುಗಳು ತಿಳಿದುಬರುತ್ತವೆ. ಕಾವ್ಯಪ್ರಯೋಗ

Sri Vidyabharathi Book Centre, Sringeri

ಪರಿಣತಮತಿಗಳಾಗಿದ್ದ ಕನ್ನಡ ಜನತೆಯ ಒಳ್ಳೆ ಒಂದು ಕಾಲದಲ್ಲಿ ಇವೆಲ್ಲ ಲಭ್ಯವಾಗಿದ್ದಿರ

CC-O. In Public Domain. Digitized by eGangotri

ಬೇಕು. ನಾಡಿನ ಹಲವೆಡೆಗಳಲ್ಲಿ ಓಲೆಗರಿಯ ಸಾಹಿತ್ಯ ಅನೇಕ ಶತಮಾನಗಳವರೆಗೆ ತನ್ನ ವೈಭವವನ್ನು ಮೆರೆದಿತ್ತು. ಕಾವ್ಯಪಾರಾಯಣ ಸಾಂಸ್ಕೃತಿಕ ಜೀವನದ ಅಂಗವಾಗಿ ಪರಿಣಮಿಸಿತ್ತು. ಕಾಲಕ್ರಮದಲ್ಲಿ ದೇಶ ಕಾಲ ಪರಿಸರಗಳ ಪ್ರಭಾವದಿಂದ, ಜನತೆಯ ಅಜ್ಞಾನ, ಅಶ್ರದ್ಧೆ ಮತ್ತು ಔದಾಸೀನ್ಯಗಳ ಫಲವಾಗಿ ಅವು ಮೂಲೆಗುಂಪಾಗುತ್ತ ಬಂದು ಕೀಟಗಳಿಗೆ ಆಹಾರವಾಗತೊಡಗಿದವು. ಅವುಗಳನ್ನು ಸಂರಕ್ಷಿಸಲಾರದೆ ನದಿಯ ಪಾಲೋ ಬೆಂಕಿಯ ಪಾಲೋ ಮಾಡುತ್ತಿದ್ದ ಉದಾಹರಣೆಗಳೂ ಅಸಂಖ್ಯವಾಗಿವೆ. ಮತ್ತೆ ಕೆಲವೆಡೆಗಳಲ್ಲಿ ನವರಾತ್ರಿಯಂದು ಬೆಳಕು ಕಂಡು, ಪೂಜಾರ್ಹವಾಗಿ, ಹಾಲುಂಡು ಮತ್ತೆ ಕತ್ತಲಕೋಣೆಯ ಮೂಲೆ ಸೇರಬೇಕಾದ ದುಸ್ಸ್ಥಿತಿ ಒದಗಿ ಹಲವಾರು ಅಮೂಲ್ಯ ಪ್ರತಿಗಳು ತ್ರುಟಿತವಾಗಿ ಹೋಗಿವೆ. ಇಂಥ ಮೌಢ್ಯವನ್ನು ದೂರಮಾಡಿ ಹಸ್ತಪ್ರತಿಗಳನ್ನು ಹೊರಗೆಳೆದು ಅವುಗಳನ್ನು ಕೊಂಡು ಇಲ್ಲವೆ ಎರವಲಾಗಿ ಪಡೆದು ಪರೀಕ್ಷಿಸಿ, ಸಂಪಾದಿಸುವ ಹೊಣೆಯನ್ನು ಈ ಸಂಸ್ಥೆಯ ಸಂಪಾದನೆ ವಿಭಾಗ ವಹಿಸಿದೆ.

ಅನುಪಲಬ್ಧವಾಗಿರುವ ಸಾಹಿತ್ಯರಾಶಿಯನ್ನು ಹೊರತರಲು, ಉಪಲಬ್ಧ ಸಾಹಿತ್ಯಕ್ಕೆ ಪರಿಷ್ಕಾರ ನೀಡಲು ಹಸ್ತಪ್ರತಿಗಳ ಸಂಗ್ರಹಕಾರ್ಯ ಸತತವಾಗಿ ನಡೆಯಬೇಕಾಗಿದೆ. ಸಾಹಿತ್ಯಿಕ ಚಟುವಟಿಕೆಯ ಕೇಂದ್ರಗಳಾಗಿದ್ದ ಎಡೆಗಳಲ್ಲಿ, ಕವಿಗಳ ಕೀರ್ತಿ ಹರಡಿದ್ದ ಪ್ರದೇಶಗಳಲ್ಲಿ, ಜ್ಞಾನಗಂಗೆಯನ್ನು ಮನೆಮನೆಯ ಬಾಗಿಲಿಗೆ ಕೊಂಡೊಯ್ದ ಶಿವಶರಣರು ಮತ್ತು ದಾಸರುಗಳು ಸಂಚರಿಸುತ್ತಿದ್ದ ಸ್ಥಳಗಳಲ್ಲಿ, ಅವರ ನೆನಪಿಗಾಗಿ ಮಠಗಳು ಸ್ಮಾರಕಗಳು ನಿರ್ಮಿತವಾಗಿರುವ ಕಡೆಗಳಲ್ಲಿ, ಅನುಯಾಯಿಗಳ ಮತ್ತು ಭಕ್ತರ ಮನೆಗಳಲ್ಲಿ, ಸಾಹಿತ್ಯೋಪಾಸಕರ ಬಳಿಯಲ್ಲಿ ಹೇಗೋ ಎಂತೋ ಸಂಗ್ರಹಿತವಾಗಿರುವ ಹಸ್ತಪ್ರತಿಗಳನ್ನು ಸಂಗ್ರಹಿಸಿ ರಕ್ಷಿಸಬೇಕಾಗಿದೆ. ಈ ಸಂಸ್ಥೆಯ ಹಸ್ತಪ್ರತಿಯ ಭಂಡಾರವನ್ನು ಈ ದೃಷ್ಟಿಯಿಂದ ಬೆಳೆಸಿಕೊಂಡು ಬರುವತ್ತ ಆದ್ಯಗಮನ ಕೊಡಲಾಗಿದೆ.

ಸಂಗ್ರಹಿಸಿದ ಪ್ರತಿಗಳನ್ನು ಎಚ್ಚರಿಕೆಯಿಂದ ಕಾಪಾಡಿಕೊಂಡು ಬರುವುದೂ ಅತ್ಯಂತ ಮುಖ್ಯವಾದ ಹೊಣೆ. ಕೀಟಗಳ ಹಾವಳಿಗೆ ಸಿಕ್ಕಿ ಪ್ರತಿಗಳು ಶಿಥಿಲವಾಗದಂತೆ ನೋಡಿಕೊಳ್ಳುವ ದೃಷ್ಟಿಯಿಂದ ಸಾಧ್ಯವಾದಷ್ಟು ಸಲ ಅವುಗಳನ್ನು ಸ್ವಚ್ಛಗೊಳಿಸುವುದು, ಕೀಟನಿರೋಧಕ ತೈಲಲೇಪನಮಾಡುವುದು, ವಾಯುನಿಯಂತ್ರಿತ ಕೊಠಡಿಯಲ್ಲಿಟ್ಟು ಪ್ರಧೂಮನ ಉಪಚಾರ ನೀಡುವುದು (fumigation treatment), ತೀರ ತ್ರುಟಿತವಾದ ಹಸ್ತಪ್ರತಿಗಳನ್ನು ಮೈಕ್ರೊಫಿಲಂಗಳಲ್ಲಿ ಶಾಶ್ವತಗೊಳಿಸುವುದು ಅಗತ್ಯವಾಗುತ್ತದೆ. ಈ ರೀತಿ ಹಸ್ತಪ್ರತಿಗಳನ್ನು ಕಾಪಾಡಿಕೊಂಡು ಬರುವುದು ವ್ಯಕ್ತಿಗಳಿಗೆ ಶ್ರಮಸಾಧ್ಯವಾದ ಹಾಗೂ ಆರ್ಥಿಕವಾಗಿ ಸುಲಭಸಾಧ್ಯವಲ್ಲದ ಕಾರ್ಯ. ಕನ್ನಡ ಅಧ್ಯಯನ ಸಂಸ್ಥೆ ಹಸ್ತಪ್ರತಿಗಳ ಸಂರಕ್ಷಣೆಗೆ ಅಗತ್ಯವಾದ ಎಲ್ಲ ಕ್ರಮಗಳನ್ನೂ ಕೈಗೊಂಡಿದೆ.

ಗ್ರಂಥಸಂಪಾದನೆ ಶ್ರಮಸಾಧ್ಯವಾದ ಕಾರ್ಯ; ವ್ಯುತ್ಪತ್ತಿ, ವಿದ್ವತ್ತು, ಪ್ರತಿಭೆ ಮೇಳವಿಸಿರುವ ಸಮರ್ಥರು ಕೈಗೊಳ್ಳಬೇಕಾದ ಕಾರ್ಯ. ಈ ಕಾರ್ಯದಲ್ಲಿ ಹಲವಾರು ಭಾಷೆಗಳ, ಶಾಸ್ತ್ರಗಳ ಪರಿಚಯವೂ ಅಗತ್ಯವಾಗುತ್ತದೆ. ಹಸ್ತಪ್ರತಿಗಳೂ ಕಾಲ, ದೇಶ

Sri Vidyabharathi Book Centre, Sringeri

CC-O. In Public Domain. Digitized by eGangotri

ಮತ್ತು ಪರಿಸರಗಳ ಪ್ರಭಾವಕ್ಕೆ ಒಳಗಾಗಿರುತ್ತವೆ. ಸಾಹಿತ್ಯಾಭ್ಯಾಸಿಗಳು ಹಸ್ತಪ್ರತಿಗಳ ಮೇಲೆ ಟಿಪ್ಪಣಿಗಳನ್ನು, ತಮ್ಮ ಅನಿಸಿಕೆಗಳನ್ನು ಬರೆದುಬಿಡುತ್ತಿದ್ದುದೂ ಉಂಟು. ಕಾಲ ಕ್ರಮದಲ್ಲಿ ಅವು ಮೂಲದ ಅಂಗವೋ ಎಂಬಂತೆ ಸೇರಿಬಿಡುತ್ತಿದ್ದುದೂ ಸಹಜವೇ. ಪ್ರತಿಭಾವಂತರೂ ವ್ಯುತ್ಪನ್ನಮತಿಗಳೂ ಕಾವ್ಯರಚನಾಸಮರ್ಥರೂ ಮೂಲವನ್ನು ಕೆಲವು ವೇಳೆ ಉತ್ತಮಪಡಿಸಿ, ಕೆಲವು ವೇಳೆ ಕೆಡಿಸಿ, ಅರ್ಥಸೌಲಭ್ಯಕ್ಕಾಗಿ ಅರ್ಥವಾಗುವಂತಹ ಪಾಠಾಂತರಗಳನ್ನು ಕಲ್ಪಿಸಿ ಅಲ್ಲಲ್ಲಿ ಮೂಲಧಾಟಿಗೆ ಭಂಗಬರದಂತೆ ತಮ್ಮ ಸ್ವಂತ ರಚನೆಗಳನ್ನು ಪ್ರಕ್ಷೇಪಿಸಿಬಿಟ್ಟಿರುವುದೂ ಉಂಟು ಇಂತಹ ಪ್ರಕ್ಷೇಪಗಳು ಕೆಲವೊಮ್ಮೆ ಸನ್ನಿವೇಶದ ಪ್ರಭಾವವನ್ನು ಹೆಚ್ಚಿಸಿರುವುದೂ ಉಂಟು; (ಒಂದು ವೇಳೆ ವಾಸ್ತವವಾಗಿ, ಹಾಗಾಗದಿದ್ದರೂ ಪ್ರಕ್ಷೇಪಕರು ಹಾಗೆ ಭಾವಿಸಿಕೊಂಡದ್ದೂ ತಮ್ಮ ಚಪಲವನ್ನು ತೀರಿಸಿಕೊಂಡದ್ದೂ ಸತ್ಯ !) ಒಟ್ಟಿನಲ್ಲಿ ಅನಾವಶ್ಯಕ ವಿಸ್ತರಣಕ್ಕೆ ಕಾರಣವಾಗಿ ಕೃತಿಯ ಗಾತ್ರದ ಹೆಚ್ಚಳಕ್ಕೆ ಮಾತ್ರ ನೆರವಾಗಿರುವುದೂ ಉಂಟು. ಲಿಪಿಕಾರರೂ ಅನೇಕ ವೇಳೆ ತಮಗೆ ಸರಿದೋರಿದಂತೆ ಅಥವಾ ಸೂಕ್ತ ಕಂಡಂತೆ ಶಬ್ದರೂಪಗಳನ್ನು ಬದಲಾಯಿಸಿ ಅಥವಾ ಬೇರೆ ಶಬ್ದವನ್ನು ತಂದು ಗಿಡಿದು, ತಿಳಿದೋ ತಿಳಿಯದೆಯೋ ಮೂಲಕ್ಕೆ ತಿದ್ದುಪಡಿಗಳನ್ನು ತಂದುಬಿಡುತ್ತಿದ್ದುದುಂಟು. ಇಂತಹ ಅನೇಕ ಕಾರಣಗಳಿಂದಾಗಿ ಒಂದೇ ಕೃತಿಯ ಹಲವು ಪ್ರತಿಗಳಲ್ಲಿ ಪಾಠವ್ಯತ್ಯಾಸಗಳು ಕಂಡುಬರುತ್ತವೆ. ಒಂದೊಂದೇ ಪ್ರತಿಗಳು ದೊರಕಿದ್ದು ಅವೂ ತ್ರುಟಿತವಾಗಿರುವಂತಹ ಸಂದರ್ಭಗಳಲ್ಲಿ ಮೂಲಪ್ರತಿಯ ಪಾಠವನ್ನು ಪುನರ್ ರಚಿಸಬೇಕಾಗುತ್ತದೆ. ಇದು ನಿಜಕ್ಕೂ ಪ್ರತಿಭೆಯ ಕೆಲಸವಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಸಂಪಾದಕನ ಪರೀಕ್ಷೆಯೇ ನಡೆದುಹೋಗುತ್ತದೆ. ವಿದ್ವತ್ತಿನ ಹಿನ್ನಲೆಯಲ್ಲಿ ತಾಳ್ಮೆ, ಶ್ರಮ ಸಹಿಷ್ಣುತೆ ಇಲ್ಲವಾದರೆ ಈ ಕ್ಷೇತ್ರದಲ್ಲಿ ಯಶಸ್ಸು ಪಡೆಯುವುದು ಸಾಧ್ಯವಾಗುವುದಿಲ್ಲ. ಗ್ರಂಥಸಂಪಾದನೆ ಇಂದು ವಿಶಿಷ್ಟ ಶಾಸ್ತ್ರವಾಗಿಯೇ ಬೆಳೆದಿದೆ.

'ಸಂಪಾದನ ವಿಭಾಗ' ಹಲವಾರು ಸಾಹಿತ್ಯ ಮತ್ತು ಶಾಸ್ತ್ರಗ್ರಂಥಗಳನ್ನು ವೈಜ್ಞಾನಿಕವಾಗಿ ಸಂಪಾದಿಸಿ, ಪಾಠಗಳನ್ನು ನಿರ್ಧರಿಸಿ, ಪಾಠಾಂತರಗಳನ್ನು ಒದಗಿಸಿ, ವಿಸ್ತಾರವಾದ ಪೀಠಿಕೆಗಳನ್ನು ಬರೆದು, ಕವಿಯ ಕಾಲ, ದೇಶ, ಕೃತಿಗಳ ವಿಚಾರವನ್ನು ಚರ್ಚಿಸಿ, ಅವುಗಳ ಸಾಹಿತ್ಯಿಕ ಮೌಲ್ಯವನ್ನು ಪರಿಶೀಲಿಸಿ, ಅಗತ್ಯವಾದಲ್ಲಿ ಟಿಪ್ಪಣಿ ಮತ್ತು ವ್ಯಾಖ್ಯಾನಗಳನ್ನು ನೀಡಿ, ಕೆಲವು ಸಂದರ್ಭಗಳಲ್ಲಿ ಗದ್ಯಾನುವಾದಗಳನ್ನು ಕೊಟ್ಟು, ಅರ್ಥಕೋಶವನ್ನು ಒದಗಿಸಿ ಬೆಳಕಿಗೆ ತರುತ್ತಿದೆ.

ಇದುವರೆಗೆ ಸಂಪಾದನ ವಿಭಾಗದ ಸಂಶೋಧನ ಸಹಾಯಕರು ಸಿದ್ಧಪಡಿಸಿದ್ದ ಕೃತಿಗಳನ್ನು ಮಾತ್ರ ಪ್ರಕಟಿಸಲಾಗುತ್ತಿತ್ತು. ಈಗ ಈ ವಿಭಾಗದಲ್ಲಿ ಸಂಗ್ರಹಿತವಾಗಿರುವ ಹಸ್ತಪ್ರತಿಗಳನ್ನುಪಯೋಗಿಸಿಕೊಂಡು ಹೊರಗಿನವರೂ ಸಂಪಾದಿಸಬಹುದಾದ ಗ್ರಂಥಗಳನ್ನೂ ಪ್ರಕಟಿಸಲು ಯೋಚಿಸಲಾಗಿದೆ. ಇದರಿಂದ ಪ್ರಕಟಣೆಯ ಕೆಲಸ ತ್ವರಿತಗೊಳ್ಳುತ್ತದೆ. ಹಸ್ತಪ್ರತಿಗಳಲ್ಲೇ ಉಳಿದು ಸಾಮಾನ್ಯರ ಕೈಗೆಟುಕದ ಗ್ರಂಥಗಳನ್ನು ಸರ್ವರ ಸ್ವತ್ತಾಗಿಸುವ ಉದ್ದೇಶವೂ ತೀವ್ರಗೊಳ್ಳುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಪಾದನ ವಿಭಾಗ ಸಂಕಲಿತ ಗ್ರಂಥಗಳನ್ನು ಹೊರತರುವಲ್ಲಿಯೂ ನಮಗೆ ನೆರವಾಗುತ್ತಿದೆ. ಎರಡು ಸಾವಿರ ವರ್ಷಗಳ ಸುದೀರ್ಘ ಪರಂಪರೆಯುಳ್ಳ ಕನ್ನಡಸಾಹಿತ್ಯದ ಸಿಂಹಾವಲೋಕನ ಮಾಡಿಸುವಂತಹ ಪ್ರಾತಿನಿಧಿಕ ಸಂಕಲನ ಗ್ರಂಥಗಳನ್ನು ಸಿದ್ಧಪಡಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ರಚಿಸಲಾಗುತ್ತಿರುವ ಈ ಗ್ರಂಥಗಳು ಆಯಾ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ ಕನ್ನಡ ಸಾಹಿತ್ಯದ ಪರಿಚಯವನ್ನು ಬಯಸುವವರಿಗೂ ಉಪಯುಕ್ತವಾಗುತ್ತವೆ. ಇಂಥ ಸಂಕಲನಗಳನ್ನು ಸಿದ್ಧಪಡಿಸುವುದೂ ಸಂಪಾದನ ವಿಭಾಗದ ಒಂದು ಪ್ರಮುಖ ಹೊಣೆಯಾಗಿದೆ.

ಕೆಳದಿ ನೃಪವಿಜಯಂ ೧೯೨೧ರಲ್ಲಿ ಶ್ರೀ ಆರ್. ಶಾಮಶಾಸ್ತ್ರಿಗಳಿಂದ ಸಂಪಾದಿತವಾಗಿ ಓರಿಯಂಟಲ್ ಲೈಬ್ರರಿಯಿಂದ ಪ್ರಕಟವಾಗಿದ್ದಿತು. ಈ ಗ್ರಂಥದ ಪ್ರತಿಗಳು ಮುಗಿದು ಹೋಗಿ, ಬೇಡಿಕೆಗಳು ಅಧಿಕವಾಗಿದ್ದುದರಿಂದ ಈಗ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಚ್ಯ ಕಾವ್ಯಮಾಲೆಯ ಮೂವತ್ತನೆಯ ಪ್ರಕಟಣೆಯಾಗಿ ಹೊರತರಲಾಗಿದೆ. ಈ ಕಾರ್ಯವನ್ನು ಸಂಪಾದನ ವಿಭಾಗದ ಉಪನಿರ್ದೇಶಕರಾದ ಶ್ರೀ ಎನ್. ಬಸವಾರಾಧ್ಯರ ನೇತೃತ್ವದಲ್ಲಿ ಸಹಾಯಕ ನಿರ್ದೇಶಕರಾದ ಶ್ರೀ ಬಿ. ಎಸ್. ಷಣ್ಣಯ್ಯ ಮತ್ತು ಸಹಾಯಕ ಸಂಶೋಧಕರಾದ ಶ್ರೀ ಎಸ್. ಎನ್. ಕೃಷ್ಣಜೋಯಿಸ್ ಅವರ ನಿರ್ವಹಿಸಿದ್ದಾರೆ. ಇವರಿಗೂ ಈ ಗ್ರಂಥವನ್ನು ಶೀಘ್ರವಾಗಿ ಅಚ್ಚುಮಾಡಿಕೊಟ್ಟಿರುವ ಯು. ಎಸ್. ಪ್ರಿಂಟರ್ಸ್ ಅವರಿಗೂ ನಮ್ಮ ವಂದನೆಗಳು.

ಕನ್ನಡ ಅಧ್ಯಯನ ಸಂಸ್ಥೆ
೨೪-೧೦-೧೯೭೩

ಹಾ. ಮಾ. ನಾಯಕ
ಪ್ರಧಾನ ಸಂಪಾದಕ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಭಾಗ ಸಂಪಾದಕರ ಮಾತು

ಕೆಳದಿನೃಪವಿಜಯದ ಮೊದಲನೆಯ ಮುದ್ರಣದಲ್ಲಿ ನಾಲ್ಕು ಪ್ರತಿಗಳನ್ನು ಉಪಯೋಗಿಸಿಕೊಂಡು ಕೃತಿಯನ್ನು ಸಂಪಾದಿಸಿದಂತೆ ಹೇಳಲಾಗಿದೆ. ಇವುಗಳಲ್ಲಿ ಮದರಾಸು ಪ್ರತಿಗಳನ್ನು ನೋಡಿರುವಂತೆ ತಿಳಿಸಲಾಗಿದೆ. ಆದರೆ ಈ ಯಾವ ಪ್ರತಿಗಳ ವಿವರಗಳನ್ನೂ ಕೊಟ್ಟಿಲ್ಲ. ಸಂಪಾದನೆಗೆ ಉಪಯೋಗಿಸಿಕೊಂಡಿರುವ ನಾಲ್ಕು ಪ್ರತಿಗಳಲ್ಲಿ 'ಬ' ಮತ್ತು 'ಕ' ಪ್ರತಿಗಳ ಪಾಠಾಂತರಗಳು ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ಓಲೆ (ಕೆ.೨೬) ಮತ್ತು ಕಾಗದ (ಕೆ.ಎ.೧೧೬) ಪ್ರತಿಗಳೆಂದು ಪರಿಶೀಲನೆಯಿಂದ ಕಂಡುಬಂದಿದೆ. ಈ ಗ್ರಂಥದ ಮೊದಲನೆಯ ಮುದ್ರಣದ ಬಗೆಗೆ ಮಾಡಲಾದ ಟೀಕೆಗಳನ್ನು ಗಮನಿಸಿ ಮದರಾಸಿನಿಂದ ಉಳಿದ ಎರಡು ಪ್ರತಿಗಳ ಮೈಕ್ರೊಫಿಲಂ ಪ್ರತಿಗಳನ್ನು ತರಿಸಲಾಯಿತು. ಇವುಗಳಲ್ಲಿ ಈಗಾಗಲೇ ಕೊಟ್ಟಿರುವ ಪಾಠಾಂತರಗಳಿಗಿಂತ ಅಧಿಕವಾದ ಪಾಠಾಂತರಗಳು ದೊರೆತುದರಿಂದ ಅವುಗಳನ್ನು ಈ ಮುದ್ರಣದಲ್ಲಿ ಕೊಡಲಾಗಿದೆ. ಇವುಗಳಿಗೆ ಕ್ರಮವಾಗಿ 'ಗ', 'ಮ' ಎಂದು ಹೆಸರಿಸಲಾಗಿದೆ. 'ಗ' ಓಲೆಯ ಪ್ರತಿ, 'ಮ' ಕಡತದ ಪ್ರತಿ. ಹಿಂದಣ ಮುದ್ರಣದ ಅಡಿಟಿಪ್ಪಣಿಯಲ್ಲಿ ಅದರಲ್ಲೂ ವಿಶೇಷವಾಗಿ ಆಶ್ವಾಸಾಂತ್ಯಗಳಲ್ಲಿ ಬರುವ ಅಧಿಕ ಪಾಠಗಳು ಮೂಲಕೃತಿಗೆ ಸೇರಿದುವೇ ಎಂಬುದು ಸಂಶಯಾಸ್ಪದವಾದುದು. ಉಪಲಬ್ಧ ವಿಶ್ವಾಸಾರ್ಹ ಪ್ರತಿಗಳಲ್ಲಿ ಈ ಭಾಗಗಳು ಕಂಡುಬಾರದಿರುವುದರಿಂದ ಅವನ್ನು ಅಡಿಟಿಪ್ಪಣಿಯಲ್ಲಿಯೇ ಉಳಿಸಲಾಗಿದೆ. 'ಕ' ಪ್ರತಿಯ ಆಶ್ವಾಸಾಂತ್ಯಗಳಲ್ಲಿ ದೊರೆಯುವ ಅಧಿಕಪಾಠಗಳು 'ಗ' ಪ್ರತಿಯಲ್ಲಿ ಕೆಲವು ಕಡೆ ಮಾತ್ರ ದೊರೆಯುತ್ತವೆ. ಈ ಅಧಿಕ ಪಾಠಗಳು ಮೊದಲಿನಿಂದ ಕಡೆಯ ತನಕ ಒಂದೇ ತೆರನಾಗಿಲ್ಲ. 'ಗ' ಪ್ರತಿಯಲ್ಲಿ ದ್ವಿತೀಯಾಶ್ವಾಸದಿಂದ ಪ್ರಾರಂಭವಾಗಿದ್ದರೂ ಅದು ಈಗ ಅಚ್ಚಾಗಿರುವ ಪ್ರಥಮಾಶ್ವಾಸವೇ ಆಗಿದೆ. 'ಮ' ಪ್ರತಿಯಲ್ಲಿ ಅನೇಕ ಕಡೆಗಳಲ್ಲಿ ಗ್ರಂಥದ ಭಾಗಗಳು ಲುಪ್ತವಾಗಿವೆ. ಪ್ರಕೃತ ಮುದ್ರಣದಲ್ಲಿ ಮಾಡಿರುವ ಕೆಲವು ಬದಲಾವಣೆಗಳು ಈರೀತಿ ಇವೆ.

1. ವಚನಗಳಿಗೆ ಕ್ರಮಾಂಕವನ್ನು ಕೊಟ್ಟಿಲ್ಲ.
2. ದೊರೆತ ಅಧಿಕ ಪಾಠಗಳನ್ನು ಕೊಡಲಾಗಿದೆ.
3. ವೃತ್ತಗಳ ಹೆಸರುಗಳನ್ನು ಸೂಚಿಸಲಾಗಿದೆ.

ಈಗ ದೊರಕಿರುವುದಕ್ಕಿಂತ ಉತ್ತಮ ಪ್ರತಿಗಳು ಸಿಕ್ಕಿದರೆ ಆಗ ಅಧಿಕ ಪಾಠಾಂತರಗಳ ಬಗೆಗೆ ಖಚಿತವಾದ ನಿರ್ಧಾರವನ್ನು ಕೈಕೊಳ್ಳಬಹುದು.

ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು

ಎನ್. ಬಸವಾರಾಧ್ಯ
ವಿಭಾಗ ಸಂಪಾದಕ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಷಯ ಸೂಚಿ

ಮುನ್ನುಡಿ	v
ವಿಭಾಗ ಸಂಪಾದಕರ ಮಾತು	ix
ಉಪೋದ್ಘಾತ	xiii
ವಿದ್ಯಾರಣ್ಯ ಕಾಲಜ್ಞಾನದ ಶ್ಲೋಕಗಳು	xxvi
ಕೆಳದಿ ಅರಸರ ವಂಶವೃಕ್ಷ	
ಪ್ರಥಮಾಶ್ವಾಸಂ	೩
1 ಚೌಡಪ್ಪನಾಯಕ (ಶಕ 1422—1436)	
ದ್ವಿತೀಯಾಶ್ವಾಸಂ	೨೭
2 ಸದಾಶಿವರಾಯನಾಯಕ (ಶಕ 1436—1468)	
ತೃತೀಯಾಶ್ವಾಸಂ	೩೯
3 ದೊಡ್ಡಸಂಕಣ್ಣನಾಯಕ (ಶಕ 1468—1481)	
ಚತುರ್ಥಾಶ್ವಾಸಂ	೫೮
4 ಚಿಕ್ಕಸಂಕಣ್ಣನಾಯಕ (ಶಕ 1481—1493)	
5 ರಾಮರಾಜನಾಯಕ (ಶಕ 1493—1505)	
ಪಂಚಮಾಶ್ವಾಸಂ	೬೨
6 ಹಿರಿಯವೆಂಕಟಪ್ಪನಾಯಕ (ಶಕ 1505—1552)	
ಷಷ್ಠಾಶ್ವಾಸಂ	೮೦
7 ವೀರಭದ್ರನಾಯಕ (ಶಕ 1552—1568)	
ಸಪ್ತಮಾಶ್ವಾಸಂ	೯೩
8 ಶಿವಪ್ಪನಾಯಕ (ಶಕ 1568—1583)	
9 ವೆಂಕಟಪ್ಪನಾಯಕ (1583—1584)	
ಅಷ್ಟಮಾಶ್ವಾಸಂ	೧೦೫
10 ಭದ್ರಪ್ಪನಾಯಕ (ಶಕ 1584—1586)	
11 ಹಿರಿಯಸೋಮಶೇಖರನಾಯಕ (ಶಕ 1586—1594)	
12 ಕುತ್ಸಿತಶಿವಪ್ಪನಾಯಕ	

Sri Vidyabharathi Book Centre, Sringeri

CC-O. In Public Domain. Digitized by eGangotri

ನವಮಾಶ್ವಾಸಂ ೧೧೬

13 ಚನ್ನಮ್ಮಾಜಿ (ಶಕ 1594—1620)

ದಶಮಾಶ್ವಾಸಂ ೧೪೮

14 ಹಿರಿಯಬಸವಪ್ಪನಾಯಕ (ಶಕ 1620—1637)

15 ಸೋಮಶೇಖರನಾಯಕ (ಶಕ 1637—1662)

ಏಕಾದಶಾಶ್ವಾಸಂ ೧೭೧

16 ಬಸಪ್ಪನಾಯಕ (ಶಕ 1662—1677)

17 ಚನ್ನಬಸಪ್ಪನಾಯಕ (ಶಕ 1677—1680)

ದ್ವಾದಶಾಶ್ವಾಸಂ ೧೮೮–೧೯೩

(ವೀರಮ್ಮಾಜಿ ಮತ್ತು)

18 ಸೋಮಶೇಖರನಾಯಕ (ಶಕ 1680—1685)

Sri Vidyabharathi Book Centre, Sringeri

CC-O. In Public Domain. Digitized by eGangotri

ಉಪೋದ್ಘಾತ

"ಕೆಳದಿನೃಪವಿಜಯ" ದಲ್ಲಿ ಕೆಳದಿಯ ಅರಸರ ಚರಿತ್ರೆಯು ಹೇಳಿದೆ. ಈ ಅರಸರು ಕೆಳದಿಯನ್ನು ಬಿಟ್ಟು ಮೊದಲು ಇಕ್ಕೇರಿಯಲ್ಲಿಯೂ ಅನಂತರ ಬಿದುರೂರಿನಲ್ಲಿಯೂ ಅಧಿಕಾರ ಮಾಡುತ್ತಿದ್ದುದರಿಂದ ಇವರಿಗೆ ಇಕ್ಕೇರಿಯ ಅರಸರು ಅಥವಾ ನಾಯಕರು, ಬಿದುರೂರಿನ ಅರಸರು ಎಂಬ ಹೆಸರೂ ಉಂಟು.[1]

ಈ ಗ್ರಂಥಕ್ಕೆ ಪೀಠಿಕೆ ಇಲ್ಲದಿರುವುದರಿಂದ ಇದನ್ನು ಬರೆದ ಕವಿಯ ಹೆಸರು ಮುಂತಾದುವುಗಳ ವಿಚಾರವಾಗಿ ಈ ಕಾವ್ಯದಿಂದ ಏನೂ ಗೊತ್ತಾಗುವುದಿಲ್ಲ. ಕವಿಚರಿತ್ರಕಾರರೂ[2] ವಿಲ್ಸನ್‌ಸಾಹೇಬರೂ[3] "ಕೆಳದಿಅರಸರ ಪೂರ್ವೋತ್ತರಂ" ಎಂಬ ಗ್ರಂಥವನ್ನು ಚಿನ್ನಭಂಡಾರದ ಪುರುಷೋತ್ತಮಯ್ಯನು ಬರೆದನೆಂದು ಹೇಳುತ್ತಾರೆ. ಆದರೆ ಇವರು ಹೇಳುವುದು ಈ ಚಂಪೂಗ್ರಂಥವಾಗಿ ತೋರುವುದಿಲ್ಲ[4]. ಗದ್ಯಗ್ರಂಥವಾಗಲಿ, ಚಂಪೂಗ್ರಂಥವಾಗಲಿ, ಅದನ್ನು ಚಿನ್ನಭಂಡಾರದ ಪುರುಷೋತ್ತಮಯ್ಯನು ಬರೆದನೆಂದು ಹೇಳುವುದಕ್ಕೆ

---

[1] ಕೆಳದಿ ಇಕ್ಕೇರಿ ಬಿದುರೂರು ಇವು ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿರುವ ಗ್ರಾಮಗಳು. ಬಿದುರೂರಿಗೆ ವೇಣುಪುರವೆಂಬ (ಸಂಸ್ಕೃತ) ಹೆಸರೂ ಈ ಗ್ರಂಥದಲ್ಲಿ ಉಪಯೋಗಿಸಲ್ಪಟ್ಟಿದೆ. ಹೈದರನು ೧೭೬೩ರಲ್ಲಿ ಈ ಪಟ್ಟಣವನ್ನು ಜಯಿಸಿ ಅದಕ್ಕೆ 'ಹೈದರ್‌ನಗರ' ಎಂಬ ಹೆಸರಿಟ್ಟನು. ಅಲ್ಲಿಂದ ಅದಕ್ಕೆ ನಗರವೆಂಬ ಹೆಸರು ಬಳಕೆಯಲ್ಲಿದೆ.

[2] ಕರ್ಣಾಟಕ ಕವಿಚರಿತ್ರೆ, ಪ್ರಥಮಸಂಪುಟ, ಅನುಬಂಧ; ಪುಟ. ೩೨.

[3] A descriptive catalogue of the Oriental Manuscripts etc., collected by Col., Mackenzie—by H. H. Wilson; p. 332.

[4] ಇದರಂತೆ 'ಕೆಳದಿ ಅರಸರ ವಂಶಾವಳಿ' 'ಇಕ್ಕೇರಿ ಅರಸರ ವಂಶಾವಳಿ' 'ಇಕ್ಕೇರಿ ಅರಸರ ಪೀಳಿಗೆ' ಮುಂತಾದ ಕೆಲವು ಗದ್ಯಗ್ರಂಥಗಳಿವೆ. ಇವುಗಳಲ್ಲಿರುವುದೆಲ್ಲಾ ಸ್ವಲ್ಪ ಹೆಚ್ಚು ಕಡಮೆ ಒಂದೇ ವಿಷಯ; ಈ ಗ್ರಂಥಗಳನ್ನು ಯಾರುಬರೆದರೋ ತಿಳಿಯುವುದಿಲ್ಲ. "ಕೆಳದಿ ಸಂಸ್ಥಾನದ ಚರಿತ್ರೆ" ಎಂಬ ಸಂಕ್ಷೇಪವಾದ ಗದ್ಯಾನುವಾದವು ೧೯೧೮-೧೯೧೯ನೆಯ ವರ್ಷಗಳ "ಮಲೆನಾಡು ಸಮಾಚಾರ"ದಲ್ಲಿ ಪ್ರಕಟಿತವಾಗಿದೆ. ಇದು "ಹಿಂದೆ ಆಸ್ಥಾನಕವಿಗಳಾದ ಮ॥ ಕವಿ ಕೃಷ್ಣಪ್ಪನವರಿಂದ ಬರೆಯಲ್ಪಟ್ಟದ್ದು" ಎಂದು ಆ ಪತ್ರಿಕೆಯ ಸಂಪಾದಕರು ತಿಳಿಸುತ್ತಾರೆ. "ಕೆಳದಿರಾಯ ಪದ್ಧತಿ" (?) ಎಂಬ ಒಂದು ಪದ್ಯಗ್ರಂಥವೂ ಇದ್ದ ಹಾಗೆ ಬುಕನನ್ ಸಾಹೇಬರ ಹೇಳಿಕೆಯಿಂದ ತಿಳಿಯುತ್ತದೆ:—

Sri Vidyabharathi Book Centre, Sringeri

CC-O. In Public Domain. Digitized by eGangotri

ಆಧಾರವೇನಿದೆಯೋ ತಿಳಿಯದು[1]. ಆದರೆ ಮದರಾಸಿನ ಓರಿಯಂಟಲ್ ಲೈಬ್ರರಿಯಲ್ಲಿರುವ ಕೆಳದಿನೃಪವಿಜಯ ಚಂಪೂಗ್ರಂಥದ ಒಂದು ಕಡತದ ಪ್ರತಿಯ ಕೊನೆಯಲ್ಲಿ—

ಮೆರೆವೀ ಸತ್ಕೃತಿಯಂ ತಾಂ
ವಿರಚಿಸಿದಂ ಸಕಲನೃಪಶಿರೋಮಣಿ ಕೆಳದೀ
ವರ ಬಸವೇಂದ್ರಾಶ್ರಿತ ಭೂ
ಸುರಕುಲಮಣಿ ವೆಂಕಪಾತ್ಮಜಂ ಲಿಂಗಬುಧಂ

ತೊದಳೊಂದಿದ ಬಾಲಕರೊಳ್
ಮಿದುವಾತಂ ಕೇಳ್ದು ಸಂತಸಂದಳೆಯರೆ ದಿ
ಮ್ಮಿದರಂತಾಂ ನಿಮ್ಮಯ ಪಸು
ಳೆ ದಲೆಂದಾಲಿಪುದು ಸುಜನರೆಸೆವೀ ಕೃತಿಯಂ

"I here found a Brahman named Bayluru Deweuppa (ಬೇಲೂರು ದೇವಪ್ಪ?)whose ancestors have been the hereditary writers of the chronicles of the Kilidi (ಕೆಳದಿ) family. He engaged to give me the family book, called Kilidi Raya Paditti (ಕೆಳದಿರಾಯ ಪದ್ಧತಿ?). It is in the old dialect and character of Karnata and contains 400 slokas or distichs; for, like all other works of any note among the Hindus it is poetical. He afterwards forwarded a copy of the work to Purnea (ಪೂರ್ಣಯ್ಯ) who was so good as to add a translation into the modern language and character and both of them have been delivered to the Bengal Government The family of the historiographer enjoyed an Enam or free land, to the amount of sixty pagodas a year" —- *A Journey from Madras through the Countries of Mysore Canara and Malabar* by Francis Buchanan Vol II. P. 378.

ಇಲ್ಲಿ ಹೇಳಿರುವ ಬೇಲೂರು ದೇವಪ್ಪನೂ ಲಿಂಗಣ್ಣನೂ ಸಂಬಂಧಿಗಳೋ ಅಲ್ಲವೋ ತಿಳಿಯದು.

[1] ತಾಳೀಕೋಟೆ ಯುದ್ಧವಾದ ಮೇಲೆ ರಾಮರಾಯನ ಮನೆವಾರ್ತೆ ಬೊಕ್ಕಸದ ಸೇನಬೋವ ಚಿನ್ನಭಂಡಾರದ ನಾರಣಪ್ಪಯ್ಯನೆಂಬಾತನು ಇಕ್ಕೇರಿಗೆ ಬಂದು ಚಿಕ್ಕಸಂಕಣ್ಣನಾಯಕನನ್ನು ಸೇರಿ ದೊಡ್ಡ ಅಧಿಕಾರವನ್ನು ಪಡೆದಂತೆ ಗೊತ್ತಾಗುತ್ತದೆ. ಚಿನ್ನಭಂಡಾರದ ಮನೆತನದವರು ಈಗಲೂ ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಕೆಲವರಿದ್ದಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂಬ ಕಂದಗಳೂ ಅನಂತರ ಕೆಳದಿಯ ಅರಸರ ವಂಶಾವಳಿಯನ್ನು ತಿಳಿಸುವ "ವರಕೆಳದಿಯ ಚೌಡಮಹೀಶ್ವರ" ಮುಂತಾದ ಹದಿಮೂರು ಕಂದಗಳೂ[1] ಕಂಡುಬರುತ್ತವೆ. ಈ ಕಡತದ ಪ್ರತಿಯು ಬಹಳ ಹಳೆಯದೆಂದು ತೋರಿಬಂದುದರಿಂದ ಅದನ್ನು ಪ್ರಮಾಣವಾಗಿಟ್ಟುಕೊಂಡು ಗ್ರಂಥಕರ್ತನು ಲಿಂಗಬುಧ ಅಥವಾ 'ಲಿಂಗಣ್ಣ' ಎಂದು ನಿಶ್ಚಯಿಸಿದ್ದೇವೆ. ಆತನ ವಂಶಸ್ಥರಾದ (ಮತ್ತು ಅದೇ ಹೆಸರುಳ್ಳ) ಮ||ರಾ|| ಕವಿ ಲಿಂಗಣ್ಣಯ್ಯನವರು ತಮ್ಮ ವಂಶದಲ್ಲಿ ಎಲ್ಲರೂ ಕವಿಗಳಾಗಿದ್ದರೆಂದು ಹೇಳಿದುದಲ್ಲದೆ ಅದಕ್ಕೆ ಆಧಾರವಾಗಿ ಅವರ ಪೂರ್ವಿಕರು ಬರೆದ ಕೆಲವು ಗ್ರಂಥಗಳನ್ನು ತೋರಿಸಿದರು. ಇವುಗಳಲ್ಲಿ ಶಿವಕಲ್ಯಾಣವೆಂಬ ಒಂದು ಯಕ್ಷಗಾನವಿದೆ.[2] ಇತರ ಯಾವ ಯಕ್ಷಗಾನವೂ ಇಷ್ಟು ದೊಡ್ಡದಾಗಿಯಾಗಲಿ ಪ್ರೌಢವಾಗಿಯಾಗಲಿ ಇಲ್ಲ. ಅದರ ಪ್ರತಿಯೊಂದು ಆಶ್ವಾಸದ ಕೊನೆಯಲ್ಲಿಯೂ "ಇದಖಿಲ ಸುರನರೋರಗಮುಕುಟತಟ ಘಟಿತ ಶ್ರೀಮತ್ಸಾಂಬಸದಾಶಿವಚರಣಾರವಿಂದ ದ್ವಂದ್ವ ಭಕ್ತಿ ರಸ ನವೀನಮಕರಂದಮತ್ತಮಧುಕರಾಯಮಾಣಮಾನಸ ಹರಿತಸಗೋತ್ರೋದ್ಭವಭೂಸುರ ವರ್ಯ ಲಿಂಗಣಸೂರಿ ವಿರಚಿತ ಶಿವಕಲ್ಯಾಣ ಪುಣ್ಯಕಥಾಸಮನ್ವಿತ ಯಕ್ಷಗಾನ ಮಹಾ ಪ್ರಬಂಧದೊಳ್........" ಎಂಬ ಗದ್ಯವಿದೆ. ಇದರಿಂದ ಈ ಗ್ರಂಥಕರ್ತೃವು ಹರಿತಸ ಗೋತ್ರೋದ್ಭವನಾದ ಲಿಂಗಣ್ಣನೆಂಬ ಬ್ರಾಹ್ಮಣನೆಂದೂ ಹಿಂದಿನ ಕಂದಪದ್ಯದಿಂದ ಆತನ ತಂದೆಯ ಹೆಸರು ವೆಂಕಪ್ಪನೆಂದೂ ಗೊತ್ತಾಗುತ್ತದೆ. ಈತನು ಇವೆರಡು ಗ್ರಂಥಗಳಲ್ಲದೆ ಮತ್ತಾವ ಗ್ರಂಥಗಳನ್ನು ಬರೆದಿದ್ದಾನೆಯೋ ತಿಳಿಯದು; ಈತನ ಮಗನಾದ ವೆಂಕಪ್ಪನು "ಪಾರ್ವತೀ ವಲ್ಲಭ ಶತಕ"ವನ್ನೂ ಭಾಮಿನೀ ಷಟ್ಪದಿಯಲ್ಲಿ "ನರಹರಿವಿಜಯ"ವನ್ನೂ ಬರೆದಿದ್ದಾನೆ.

---

1 ೮೦ನೆಯ ಪುಟವನ್ನು ನೋಡಿ.

2 ಇದರಲ್ಲಿ ಹತ್ತು ಆಶ್ವಾಸಗಳಿವೆ. ಅವುಗಳ ಸಾರಾಂಶ :—
(೧) ಪೀಠಿಕಾರಚನ (೨) ಪರ್ವತರಾಜವರ್ಣನ, ಅಂಬಿಕಾವರಪ್ರಸಾದವರ್ಣನ (೩) ಮೇನಾದೇವೀಗರ್ಭವರ್ಣನ, ಪಾರ್ವತೀಜನನ, ಬಾಲಲೀಲಾವಿವರಣ, ಯೌವನವರ್ಣನ, ಶಿವಸೇವಾಪರಿಚರ್ಯಾದಿವರ್ಣನ (೪) ಮಾಯೋತ್ಪತ್ತಿ, ಶೂರಪದ್ಮಾದಿ ಜನನ, ತಾರಕಕೃತ ದಿಗ್ವಿಜಯಾದಿವರ್ಣನ (೫) ಇಲ್ವಲವಾತಾಪಿಜನನ, ಅಗಸ್ತ್ಯಾಗಮನ, ತದಲ್ವಲವಾತಾಪಿಮರಣ, ಶಚೀದೇವೀಗ್ರಹಣ, ಅಜಮುಖಾ ಬಾಹುಖಂಡನ, ಜಯಂತಗ್ರಹಣ, ತಾರಕಾಸುರಸಂಗ್ರಾಮಾಭಿವರ್ಣನ (೬) ಶೂರಪದ್ಮಾದಿನಿಧನ, ಮಂತ್ರಾಲೋಚನ, ಮದನಪ್ರಯಾಣವರ್ಣನ, ತದ್ದಹನ, ರತೀದೇವಿ ಪ್ರಲಾಪ, ಪಾರ್ವತಿದೇವೀ ಪ್ರಸನ್ನತೆ, ತತ್ತಪೋವರ್ಣನ (೭) ಪಾರ್ವತೀತಪಃಪ್ರಭಾವವರ್ಣನ, ಪರಮೇಶ್ವರಪ್ರಸನ್ನತೆ, ಮನ್ಮಥೋಜ್ಜೀವನ, ಪಾರ್ವತೀಪುರಪ್ರವೇಶ, ಸರ್ವಪ್ಸ್ವಾಗಮನ, ಹಿಮಾಚಲ ಪ್ರವೇಶ, ಉಮಾವಿಹಾರೋತ್ಸವ ಪ್ರಸಂಗ, ಓಷಧಿಪ್ರಸ್ಥ ಪುರವರಾಲಂಕಾರವರ್ಣನ, ಪಾರ್ವತೀಪರಿಣಯೋಚಿತವಿಭವಾಲಂಕಾರಾದಿವರ್ಣನ (೮) ಶಿವಕೃತ ಕಲ್ಯಾಣಯಾತ್ರಾ ಮಹೋತ್ಸವ ವರ್ಣನ (೯) ಪಾರ್ವತೀಪರಮೇಶ್ವರಕಲ್ಯಾಣ ವಿವರಣ ವರ್ಣನ (೧೦) ಪಾರ್ವತೀ ಪರಮೇಶ್ವರವಿರಚಿತ ಚೂರ್ಣೋತ್ಸವವಿಲಾಸ, ರಜತಾಚಲ ಶಿಖರಮಂದಿರ ಪ್ರವೇಶ, ಷಣ್ಮುಖೋತ್ಪತ್ತಿ, ಶೂರಪದ್ಮ[illegible]ಶಕ್ರೇಂದ್ರಾದಿದೇವತಾಸ್ವಸ್ಥಪದ ಪ್ರೇಕ್ಷಣಾದಿವರ್ಣನ.

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಕವಿಯು "ಕೆಳದೀ ವರಬಸವೇಂದ್ರಾಶ್ರಿತ"ನೆಂದು ಹೇಳಿಕೊಂಡಿದ್ದಾನೆಯಷ್ಟೆ. ಬಸವಪ್ಪನಾಯಕನೆಂಬ ಹೆಸರಿನವರು ಇಬ್ಬರಿದ್ದಾರೆ. ಇವರಲ್ಲಿ ಮೊದಲನೆಯವನು ಶಕ ೧೬೨೦ ರಿಂದ ೧೬೩೭ ರವರೆಗೆ ಆಳಿದನು. ಇವನಿಗೆ ಹಿರಿಯ ಬಸವಪ್ಪನಾಯಕನೆಂದು ಹೆಸರು (ಪುಟ ೧೪೮). ಎರಡನೆಯವನು ಶಕ ೧೬೬೨ ರಿಂದ ೧೬೭೭ ರವರೆಗೆ ಆಳಿದನು (ಪುಟ ೧೭೧). ಹಿರಿಯ ಬಸವಪ್ಪನಾಯಕನು ಪಂಡಿತರಿಗೆ ಆಶ್ರಯನಾಗಿದ್ದನೆಂದು ಅವನ ಕಾಲದಲ್ಲಿ ಹುಟ್ಟಿದ ಗ್ರಂಥಗಳಿಂದ ಗೊತ್ತಾಗುತ್ತದೆ[1]. ಇದರಿಂದ ಅವನ ಕಾಲದಲ್ಲಿಯೇ ಲಿಂಗಣ್ಣನೂ ಇದ್ದನೆಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಈ ಗ್ರಂಥದಲ್ಲಿ ಶಕ ೧೬೮೫ ರವರೆಗೂ ನಡೆದ ಚರಿತ್ರೆಯು ಹೇಳಿದೆ. ಆದ್ದರಿಂದ ಈತನು ಎರಡನೆಯ ಬಸವಪ್ಪನ ಕಾಲದಲ್ಲಿ ಎಂದರೆ ಕ್ರಿ.ಶ. ೧೭೫೦ ರ ಸುಮಾರಿನಲ್ಲಿದ್ದನೆಂದು ಹೇಳಬಹುದು. ಈತನು ಜೀವಿಸಿದ್ದ ಕಾಲವನ್ನು ಖಂಡಿತವಾಗಿ ಗೊತ್ತುಮಾಡುವುದಕ್ಕೆ ಸದ್ಯದಲ್ಲಿ ಯಾವಸಾಧನಗಳೂ ದೊರೆತಿಲ್ಲ.

ಈ ಗ್ರಂಥದ ಒಂದು ನಕಲನ್ನು ಶಕವರ್ಷ ೧೭೨೬ ನೆಯ ಕ್ರೋಧನ ಸಂವತ್ಸರದ ಆಷಾಢಮಾಸದಲ್ಲಿ ಮೇಜರ್ ಮೆಕಂಜ್ಜಿಸಾಹೇಬರ ಕಡೆಯ ಮುತ್ಸದ್ದಿ ನಾರಾಯಣ ರಾಯರು ಒರೆಸಿಕೊಂಡು ಹೋದರೆಂದು ಒಂದು ಪ್ರತಿಯ ಕೊನೆಯಲ್ಲಿ ಬರೆದಿದೆ. ಇದರಿಂದ ಈ ಕಾವ್ಯವು ಶಕ ೧೬೮೫ ರ ಮೇಲೆ ಮತ್ತು ಶಕ ೧೭೨೬ ರ ಒಳಗೆ ಎಂದರೆ ಕ್ರಿ.ಶ. ೧೭೬೩ ರ ಮೇಲೆ ೧೮೦೪ ರ ಒಳಗೆ ಹುಟ್ಟಿತೆಂದು ಹೇಳಬಹುದು.

ಹಳಗನ್ನಡದಲ್ಲಿ ಚರಿತ್ರೆಯನ್ನು ಇದ್ದದ್ದಿದ್ದಹಾಗೆ ಬರೆದ ಗ್ರಂಥಗಳೇ ಇಲ್ಲ. ಆದಿಪಂಪನನ್ನು ಮೊದಲುಮಾಡಿಕೊಂಡು ಅನೇಕ ಕವಿಗಳು ತಮಗೆ ಆಶ್ರಯದಾತರಾದ ರಾಜರಮೇಲೆ ತಮಗೆ ಇದ್ದ ಕೃತಜ್ಞತೆಯನ್ನು ತೋರಿಸುವ ಉದ್ದೇಶದಿಂದ ಚರಿತ್ರಾಂಶಗಳನ್ನು ಗರ್ಭೀಕರಿಸಿ ಕಾವ್ಯಗಳನ್ನೇನೋ ಮಾಡಿದ್ದಾರೆ. ಆದರೆ ಮೊದಲಿನಿಂದ ಕೊನೆಯವರೆಗೂ ರಾಮಾಯಣಭಾರತಾದಿ ಪುರಾಣ ಕಥೆಯನ್ನು ಅವಲಂಬನವಾಗಿಟ್ಟುಕೊಳ್ಳದೆ, ಕವಿಯ ಹಕ್ಕೆಂದು ಅತಿಶಯೋಕ್ತ್ಯಾದ್ಯಲಂಕಾರಗಳನ್ನು ತುಂಬದೆ, ರಾಜನ ಸಂಬಂಧವಾಗಿ ತಾವು ತಿಳಿದ ವಿಷಯಗಳನ್ನು ಯಥಾರ್ಥವಾಗಿ ಬರೆದಿಡಬೇಕೆಂಬ ಉದ್ದೇಶದಿಂದಲೇ ಬರೆದುವುಗಳಲ್ಲ. ಅವರು ಕವಿಗಳು; ಚರಿತ್ರಕಾರರಲ್ಲ. ಆದಕ್ಕೋಸ್ಕರವೇ ಅವರ ಗ್ರಂಥಗಳು ಒಟ್ಟಿನಮೇಲೆ ಕಾವ್ಯಗಳೇ ಹೊರತು ಚರಿತ್ರೆಗಳಲ್ಲ. ಕನ್ನಡ ಸಾಹಿತ್ಯಕ್ಕೆ ಮಾತೃಸ್ವರೂಪವಾದ ಸಂಸ್ಕೃತದಲ್ಲಿಯೂ, ನಡೆದುದನ್ನು ನಡೆದ ಹಾಗೆ ತಿಳಿಸತಕ್ಕ ಚರಿತ್ರಗ್ರಂಥಗಳು ಒಂದೆರಡು ಮಾತ್ರ. ಇದಕ್ಕೆ ಕಾರಣವನ್ನು ಇಲ್ಲಿ ವಿಚಾರಮಾಡಬೇಕಾದುದಿಲ್ಲ. ಒಟ್ಟನಲ್ಲಿ ಹಿಂದೆ ನಮ್ಮವರು ಧಾರ್ಮಿಕ ವಿಷಯಗಳಿಲ್ಲದ ಕಾವ್ಯವನ್ನು ರಚಿಸುತ್ತಿದ್ದುದು ಕೇವಲ ಅಪರೂಪ[2]

---

[1] ೧೫೩ ಮತ್ತು ೧೫೪ನೆಯ ಪುಟಗಳನ್ನು ನೋಡಿ.

[2] ಮನುಷ್ಯಮಾತ್ರ Sri Vidyabharathi Book Centre, Sringeri ರಾಘವಾಂಕನನ್ನು ಅವನ ಮಾವನಾದ ಹರಿಹರನು ಶಿಕ್ಷೆ ಮಾಡಿದನೆಂದು ಹೇಳುತ್ತಾರೆ.

CC-O. In Public Domain. Digitized by eGangotri

ವೆಂದು ಹೇಳಬಹುದು. ಆದುದರಿಂದ ಒಂದು ಕಡೆ ಚರಿತ್ರೆಯ ಬಣ್ಣವುಳ್ಳ 'ವಿಕ್ರಮಾರ್ಜುನ ವಿಜಯ' 'ಸಾಹಸಭೀಮವಿಜಯ' ಮುಂತಾದ ಪೌರಾಣಿಕ ಚಂಪೂಕಾವ್ಯಗಳೂ ಮತ್ತೊಂದು ಕಡೆ 'ಚಿಕ್ಕದೇವರಾಯ ವಂಶಾವಳಿ' ಮುಂತಾದ ಗೌಡಶೈಲಿಭೂಯಿಷ್ಠ ವಾಗಿಯೂ ಶಬ್ದಾಲಂಕಾರಾರ್ಥಾಲಂಕಾರ ಪರಿಪೂರ್ಣವಾಗಿಯೂ ಇರುವ ಗದ್ಯಗ್ರಂಥಗಳೂ ಹುಟ್ಟಿದುವು. ಇವುಗಳಿಂದ ಕೆಲವು ಸ್ಥೂಲವಾದ ಐತಿಹಾಸಿಕ ಸಂಗತಿಗಳು ತಿಳಿದುಬರುತ್ತವೇ ವಿನಾ ಆಯಾ ಕಾಲದ ಚರಿತ್ರೆಯು ಪೂರ್ಣವಾಗಿ ಗೊತ್ತಾಗುವುದಿಲ್ಲ.

ಕೆಳದಿನೃಪವಿಜಯವೂ ಇಂತಹ ಗ್ರಂಥವೇ ಆದರೂ ಇದರಲ್ಲಿ ಕಾವ್ಯಾಂಶಕ್ಕಿಂತಲೂ ಚರಿತ್ರಾಂಶವೇ ಹೆಚ್ಚಾಗಿದೆ. ಮೊದಲಿನಿಂದ ಕೊನೆಯವರೆಗೆ ಮುಖ್ಯವಾಗಿ ಕೆಳದಿಯ ಅರಸರ ಚರಿತ್ರೆಯೂ ಪ್ರಾಸಂಗಿಕವಾಗಿ ಚಿತ್ರದುರ್ಗದ ನಾಯಕರು, ಬೇಲೂರ ಅರಸರು, ವಿಜಯನಗರದ ಅರಸರು, ಷಾಹಿರಾಜರು, ಮರಾಟೆರಾಜರು, ಡಿಳ್ಳಿಯ ಸುಲ್ತಾನರು ಇವರ ವಿಷಯವೂ ಹೇಳಿದೆ. ಶಾಸನಗಳನ್ನು ನೋಡಿದರೆ ಇಲ್ಲಿ ಹೇಳಿರುವ ಕೆಳದಿಯ ಅರಸರ ಕಾಲಕಾರ್ಯಾದಿಗಳು ಸತ್ಯವೆಂದು ಹೇಳಬೇಕಾಗುತ್ತದೆ[1]. ರೈಸ್ ಮುಂತಾದ ಪಂಡಿತರೂ ಹಾಗೆಯೇ ಒಪ್ಪಿಕೊಂಡಿದ್ದಾರೆ. ಆದರೆ ಈ ಗ್ರಂಥದ ಮಧ್ಯದಲ್ಲಿ ಅಲ್ಲಲ್ಲಿ ಬರುವ ಇತರ ರಾಜರ ಚರಿತ್ರೆಗಳು ಮಾತ್ರ ತುಂಡುತುಂಡಾಗಿದ್ದು ಜನರ ಹೇಳಿಕೆಯ ಮಾತಿನ ಮೇಲೆ ಬರೆದ ಹಾಗೆ ಕಾಣುತ್ತವೆ. ಆದುದರಿಂದ ಅವುಗಳಲ್ಲಿ ಯಾವುದಕ್ಕೂ ಗಮನಕೊಡಬೇಕಾದುದಿಲ್ಲ. ಆದರೆ ಇಲ್ಲಿ ಹೇಳಿರುವ ವಿಜಯನಗರದ ಚರಿತ್ರೆ ಮಾತ್ರ ಸ್ವಲ್ಪ ವಿಚಾರಾರ್ಹವಾಗಿದೆ. ಈ ಹೇಳಿಕೆಗೆ ಎಷ್ಟರಮಟ್ಟಿಗೆ ಪ್ರಾಮಾಣ್ಯವನ್ನು ಕೊಡಬೇಕೆಂದು ತಿಳಿಯಬೇಕಾದರೆ ಕೆಳದಿ ನೃಪವಿಜಯಕ್ಕೆ ಮೂಲಗ್ರಂಥವಾವುದು, ಆದರಲ್ಲಿಯೂ ಈ ವಿಜಯನಗರದ ಚರಿತ್ರೆಯನ್ನು ಗ್ರಂಥಕರ್ತನು ಎಲ್ಲಿಂದ ಸಂಗ್ರಹಿಸಿದನು ಎಂಬುದನ್ನು ತಿಳಿದುಕೊಳ್ಳಬೇಕು.

ಶಕ ೧೬೨೦ ರಿಂದ ೧೬೩೭ರವರೆಗೆ ಆಳಿದ ಹಿರಿಯ ಬಸಪ್ಪನಾಯಕನು "ಶಿವ ತತ್ವರತ್ನಾಕರ" ಎಂಬ ಸಂಸ್ಕೃತ ಗ್ರಂಥವನ್ನು [ಕ್ರಿ. ಶ.1709ರಲ್ಲಿ] ಬರೆದಿದ್ದಾನೆ. ಇದು ನಾನಾ ಶಾಸ್ತ್ರಾರ್ಥಸಾರವನ್ನು ಒಳಗೊಂಡಿದೆ. ಇದರ ನಾಲ್ಕನೆಯ ಕಲ್ಲೋಲದ ಹನ್ನೆರಡನೆಯ ತರಂಗದಲ್ಲಿ ವಿಜಯನಗರದ ರಾಜ್ಯಸ್ಥಾಪನೆಯಾದ ಸಂದರ್ಭ, ಅಲ್ಲಿಂದ ಮುಂದೆ ಆಳಿದ ರಾಜರ ಪರಂಪರೆ ಕಾಲ ಮುಂತಾದುವುಗಳು ಹೇಳಲ್ಪಟ್ಟಿವೆ. ಐದರಿಂದ ಎಂಟು ಕಲ್ಲೋಲಗಳವರೆಗೂ ಅಲ್ಲಲ್ಲೆ ಸುಮಾರು ಇಪ್ಪತ್ತು ತರಂಗಗಳಲ್ಲಿ ಕೆಳದಿಯ ರಾಜರ

1 ಆದರೆ ಚೌಡಪ್ಪನಿಗೆ ಹಾವು ನಿಧಿಯನ್ನು ತೋರಿಸಿಕೊಟ್ಟುದು, ದೊಡ್ಡಸಂಕಣ್ಣ ನಾಯಕನು ಡಿಳ್ಳಿಗೆಹೋಗಿ ಅಂಕುಶಖಾನನೊಡನೆ ಹೋರಾಡಿ ಅವನನ್ನು ಗೆದ್ದುದು, ಮುಂತಾದ ಕೆಲವು ಸಂಗತಿಗಳು ಕೇವಲ ಜನಜನಿತವಾದ ಕಥೆಗಳೆಂದು ತೋರುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಚರಿತ್ರೆಯೂ ಬರುತ್ತದೆ[1]. ಕೆಳದಿನೃಪವಿಜಯವು ಈ ಸಂಸ್ಕೃತಗ್ರಂಥದ ಆಧಾರದ ಮೇಲೆ ಬರೆದುದೋ ಅಥವಾ ಇವೆರಡಕ್ಕೂ ಮೂಲವಾಗಿ ಮತ್ತಾವುದಾದರೂ ಗ್ರಂಥವಿದ್ದಿತೋ ಗೊತ್ತಾಗುವುದಿಲ್ಲ. ಅಂತು ನಾಲ್ಕನೆಯ ಕಲ್ಲೋಲದ ಹನ್ನೆರಡನೆಯ ತರಂಗದಲ್ಲಿ ನೃಪತಿ ಸಿಂಹಾಸನ ವೃತ್ತಾಂತವನ್ನು ಹೇಳುವಾಗ 'ಹ ಬು ಹೋ ವಿ ಬು ದೇ ರಾ ವಿ ದೇ ವಿ ಮಾ ರಾ ವಿ ಸಂಜ್ಞಿತಾಃ | ತ್ರಯೋದಶಮಹೀಪಾಲಾಃ ರತ್ನಸಿಂಹಾಸನಾಧಿಪಾಃ'[2] ಎಂಬ ಶ್ಲೋಕವು ಮಧ್ಯದಲ್ಲಿ ಬರುತ್ತದೆ. ಈ ಕಲ್ಲೋಲಕ್ಕೆ ವಿದ್ಯಾರಣ್ಯಕೃತಿ[3] (ವಿದ್ಯಾರಣ್ಯರ ಕಾಲಜ್ಞಾನ) ಪಿತಾಮಹ ಸಂಹಿತೆ ಇವು ಮೂಲವೆಂದು ಗೊತ್ತಾಗುತ್ತದೆ[4]. ಈ ಗ್ರಂಥಗಳಲ್ಲಿ ವಿಜಯನಗರದ ಚರಿತ್ರೆಗೆ ಸಂಬಂಧ ಪಡುವ ಕೆಲವು ಶ್ಲೋಕಗಳಿವೆ[5]. ಇವುಗಳಿಂದ ತಿಳಿಯ ಬಹುದಾದ ಅಂಶಗಳೇನೆಂದರೆ:—ಹಕ್ಕಬುಕ್ಕರು ಮೊದಲು [ಓರಗಲ್ಲಿನ ರಾಜನಾದ] ವೀರ ರುದ್ರನಲ್ಲಿ ಕೋಶಾಧಿಕಾರಿಗಳಾಗಿದ್ದರು. ಯವನರು (1323ರಲ್ಲಿ) ಓರಗಲ್ಲಿಗೆ ಮುತ್ತಿಗೆ ಹಾಕಲು ಅಲ್ಲಿಂದ ಹೊರಟು ಶಿಲಾಪುರಿಗೆ[6] ಬಂದು ಅದರ ರಾಜನಾದ ರಾಮನಾಥನಲ್ಲಿ ಕೋಶಾಧಿಕಾರಿಗಳಾಗಿ ನಿಂತರು. ಇಲ್ಲಿ ಸುಲ್ತಾನನ (ಮಹಮದ್ ಬಿನ್ ತೊಗಲಕ್ಕನ) ಕೈಗೆ

---

[1] ಮಾ॥ರಾ॥ ಎಸ್. ಕೃಷ್ಣಸ್ವಾಮಯ್ಯಂಗಾರ್ಯರ "Sources of Vijayanagar History" ಎಂಬ ಗ್ರಂಥದ ೧೯೪-೨೦೨, ೩೩೭-೩೬೪ ಪುಟಗಳನ್ನು ನೋಡಿ. ಆದರೆ ಮೈಸೂರು ಓರಿಯಂಟಲ್ ಲೈಬ್ರರಿಯಲ್ಲಿರುವ ಶಿವತತ್ವ ರತ್ನಾಕರದ ಪ್ರತಿಯಲ್ಲಿ ಕೆಳದಿಯ ಅರಸರಿಗೆ ಸಂಬಂಧಪಟ್ಟ ವಿಷಯಗಳೆಲ್ಲಾ ಸಂಪೂರ್ಣವಾಗಿ ಬಿಟ್ಟುಹೋಗಿವೆ. ಏನು ಕಾರಣವೋ ತಿಳಿಯದು.

[2] ೧೭ನೆಯ ಪುಟವನ್ನು ನೋಡಿ.

[3] ಈ ಗ್ರಂಥವನ್ನು ಭಾರತೀಕೃಷ್ಣಯತಿಯು ಮಾಡಿದನೆಂದು ಹೇಳಿದೆ. ಯಾವ ಭಾರತೀ ಕೃಷ್ಣಯತಿಯೆಂದು ಗೊತ್ತಾಗುವುದಿಲ್ಲ. ವಿದ್ಯಾರಣ್ಯರಿಗೆ ಭೋಗನಾಥನೆಂಬ ಒಬ್ಬ ಸಹೋದರರಿದ್ದಂತೆಯೂ ಆತನಿಗೆ ಆಶ್ರಮವನ್ನು ತೆಗೆದುಕೊಂಡಮೇಲೆ ಭಾರತೀ ಕೃಷ್ಣನೆಂಬ ಹೆಸರು ಬಂದಂತೆಯೂ ಗೊತ್ತಾಗುತ್ತದೆ.

[4] ಪುರಾಣಸ್ಮೃತಿಸಿದ್ಧಾಂತಾನಿತಿಹಾಸವಿಮಿಶ್ರಿತಾನ್
ವಿದ್ಯಾರಣ್ಯಕೃತಿಂ ಚೈವ ಪಿತಾಮಹಸುಸಂಹಿತಾಂ
ವಿಲೋಕ್ಯಾಯಂ ವಿರಚಿತಃ ಕಲ್ಲೋಲೋಭೂಚ್ಚತುರ್ಥಕಃ

[5] ಅವುಗಳನ್ನು ಈ ಉಪೋದ್ಘಾತದ ಕೊನೆಯಲ್ಲಿ ಕೊಟ್ಟಿದ್ದೇವೆ.

[6] ಇದನ್ನೇ ಫಿರಿಷ್ಟನು 'Stronghold among the mountains' ಎಂದು ಕರೆದಿರಬಹುದು :—ಸ್ಯೂಯೆಲ್ ಸಾಹೇಬರ 'A Forgotten Empire' ಎಂಬ ಗ್ರಂಥದ ೧೭ನೆಯ ಪುಟವನ್ನು ನೋಡಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸೆರೆಸಿಕ್ಕಿ ಅವನ ಆಜ್ಞೆಯಂತೆ ಕೃಷ್ಣವೇಣೀನದಿಯನ್ನು ದಾಟಿ ಬಲ್ಲಾಳ ರಾಯನೊಡನೆ ಯುದ್ಧಮಾಡಿ ಸೋತುಹೋದರು. ಆಮೇಲೆ ವಿದಾರಣ್ಯರನ್ನು ಕಂಡು ಅವರ ಅನುಗ್ರಹ ದಿಂದ ಚದರಿಹೋದ ಸೈನ್ಯವನ್ನು ಕೂಡಿಸಿಕೊಂಡು ಪುನಃ ದಂಡೆತ್ತಿಹೋಗಿ ಬಲ್ಲಾಳರಾಜ ನನ್ನು ಸೋಲಿಸಿ ರಾಜ್ಯಸಂಪಾದನೆ ಮಾಡಿ ಆನೆಗೊಂದಿಯಲ್ಲಿ [ಹಸ್ತಿಕೋಣ] ಆಳುತ್ತಿದ್ದರು. ಒಂದುದಿನ ಇವರು ತುಂಗಭದ್ರಾನದಿಯನ್ನು ದಾಟಿ ಆಚೆಯ ದಡದಲ್ಲಿ ಬೇಟೆಯಾಡುತ್ತಿರು ವಾಗ ತಾವು ಅಟ್ಟಿಸಿಕೊಂಡು ಹೋಗುತ್ತಿದ್ದ ಮೊಲವು ಬೇಟೆಯ ನಾಯಿಗಳನ್ನು ಕಚ್ಚಿ ಅದೃಶ್ಯವಾಯಿತು. ಈ ಸ್ಥಳವು ರಾಜಧಾನಿಯನ್ನು ಕಟ್ಟುವುದಕ್ಕೆ ಸರ್ವೋತ್ತಮವಾದು ದೆಂದು ತಿಳಿದು ವಿದ್ಯಾರಣ್ಯರು ಅಲ್ಲಿ ವಿಜಯನಗರವನ್ನು ಕಟ್ಟಿಸಿ ಹಕ್ಕನಿಗೆ ಪಟ್ಟಾಭಿಷೇಕ ಮಾಡಿದರು. ಇದು ಶಾ. ಶಕ ೧೨೫೮ರಲ್ಲಿ ಎಂದರೆ ಕ್ರಿ. ಶ. ೧೩೩೬ರಲ್ಲಿ ನಡೆಯಿತು.

ಇಲ್ಲಿ 'ಹ ಬು ಹೋ ೯ ವಿ ಬು ದೇ ೯ ರಾ ವಿ ದೇ ೯ ವಿ ಬು ಮಾ ರಾ ವಿ' ಎಂಬ ಹದಿಮೂರು ಜನ ರಾಜರು ಆಳುವರು[1]; ಇವರಲ್ಲಿ ಒಂಬತ್ತನೆಯವನು ಆಳಿದ ಮೇಲೆ ರಾಷ್ಟ್ರಕ್ಷೋಭಾದಿಗಳು ಬಹಳವಾಗುವುವು. ಕೊನೆಯವನು ದೇಶಭ್ರಷ್ಟನಾಗಿ ಶತ್ರುದೇಶದಲ್ಲಿ ಮೃತಿಯನ್ನೈ ದುವನು. ನೂರೈವತ್ತುವರ್ಷಗಳಲ್ಲಿ ಈ ವಂಶವು ಕೊನೆಗಾಣುತ್ತದೆ. ಇತ್ಯಾದಿ.

ವಿಜಯನಗರರಾಜ್ಯಸ್ಥಾಪನೆಯಾದ ಸಂದರ್ಭವನ್ನು ನ್ಯೂನಿಸ್ ಎಂಬ ಪೋರ್ಚು ಗೀಸ್ ಚರಿತ್ರಕಾರನೂ ಸ್ವಲ್ಪ ಹೆಚ್ಚು ಕಡಿಮೆ ಇದೇ ರೀತಿಯಲ್ಲಿ ಹೇಳಿದ್ದಾನೆ. ಇದು ನಿಜವೆಂದು ಕೆಲವರು ಒಪ್ಪುತ್ತಾರೆ. ಕೆಲವರು ಒಪ್ಪುವುದಿಲ್ಲ; ಇದರಲ್ಲಿ ಕೆಲವುಭಾಗ ನಿಜವೆಂದು ಸ್ಯೂಯಲ್ ಸಾಹೇಬರ ಅಭಿಪ್ರಾಯವಿರುವಂತೆ ಕಾಣುತ್ತದೆ. ಕ್ರಿ.ಶ. ೧೩೩೬ರಲ್ಲಿ ವಿಜಯನಗರವು ಸ್ಥಾಪನೆಯಾಯಿತೆಂದು ಇದುವರೆಗಿನ ಚರಿತ್ರಲೇಖಕರೆಲ್ಲರೂ ಒಪ್ಪಿ ಕೊಂಡಿದ್ದಾರೆ. ಇಲ್ಲಿಂದ ನೂರೈವತ್ತು ವರ್ಷಗಳಿಗೆ ಸರಿಯಾಗಿ "ವಂಶಪೂರ್ತಿ" ಯಾಯಿತೆಂದೂ ಹೇಳಬಹುದು. ಏಕೆಂದರೆ ಎರಡನೆಯ ವಂಶವು ಆರಂಭವಾದದ್ದು ಸಾಳ್ವನರ ಸಿಂಗನಿಂದ. ಈತನು ೧೪೮೬ರಲ್ಲಿ ಪಟ್ಟಕ್ಕೆ ಬಂದನು. ಆದರೆ 'ಹ ಬು ಹೋ ೯ ವಿ ಬು ದೇ ...' ಎಂಬ ಶ್ಲೋಕಗಳಲ್ಲಿ ಹೇಳಿರುವ ರಾಜಪರಂಪರೆಯೂ ಆಳಿಕೆಯ ಕಾಲವೂ ಚರ್ಚಾಸ್ಪದ ವಾಗಿವೆ. ಇವುಗಳಲ್ಲಿ ಅಚ್ಯುತರಾಯನಾದಮೇಲೆ ಕೃಷ್ಣರಾಯನು ೪೦ವರ್ಷ ಆಳಿದನೆಂದೂ ವೀರನರಸಿಂಹನಾದಮೇಲೆ ಸಾಳ್ವನರಸಿಂಹನಾಳಿದನೆಂದೂ ಯಾವ ಚರಿತ್ರಕಾರರೂ ಹೇಳುವು ದಿಲ್ಲ. ಆದರೂ ನರಸರಾಜನು ತನ್ನ ಅವಸಾನಕಾಲದಲ್ಲಿ ತನ್ನ ಪಟ್ಟದ ಹೆಂಡತಿಯ ಮಗ ನಾದ ಅಚ್ಯುತರಾಯನಿಗೆ ಪಟ್ಟವನ್ನು ಕಟ್ಟಿ ಭಂಗಾರದವಳ ಮಗನಾದ ಕೃಷ್ಣರಾಯನು ಯುವರಾಜನಾಗಿದ್ದುಕೊಂಡು ರಾಜ್ಯವಾಳಬೇಕೆಂದು ನೇಮಿಸಿದುದಾಗಿ ಒಂದು ಕಥೆಯು

---

[1] ಈ ಗ್ರಂಥವು "ಕಾಲಜ್ಞಾನ" ವಾದುದರಿಂದ ಭವಿಷ್ಯದ್ರೂಪವು ಉಪಯೋಗಿಸಲ್ಪಟ್ಟಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಚಾರದಲ್ಲಿದೆ.[1] ಮೊದಲನೆಯ ಹರಿಹರರಾಯನಿಂದ ಸಾಳ್ವನರಸಿಂಗನ ವರೆಗೆ ಹದಿಮೂರು ಜನ ರಾಜರು ಆಳಿದಂತೆ ಯಾರೂ ಹೇಳುವುದಿಲ್ಲ. ಸಾಮಾನ್ಯವಾಗಿ ಏಳುಜನರು ಪಟ್ಟಕ್ಕೆ ಬಂದಂತೆ ತಿಳಿಸುತ್ತಾರೆ. ಈ ಶ್ಲೋಕದಲ್ಲಿ ಹೇಳಿರುವಂತೆ ಹದಿಮೂರು ಜನರೇ ಆಳಿದ್ದರೆ ಕೆಲವರು ಬಹು ಸ್ವಲ್ಪಕಾಲ ಆಳಿರಬೇಕು[2]. ಇನ್ನು ಕೆಲವರ ಕಾಲದಲ್ಲಿ ಶಾಸನಗಳೇ ಇಲ್ಲದಿರಬಹುದು; ಒಬ್ಬನು ರಾಜನಾಗಿ ಆಳುತ್ತಿದ್ದಾಗ ಆತನ ತಮ್ಮ ಅಥವಾ ಮಗನ ಹೆಸರಿನಲ್ಲಿಯೂ ಕೆಲವುವೇಳೆ ಶಾಸನಗಳು ಹುಟ್ಟಿರಬಹುದು[3]; ಇವೇ ಮೊದಲಾದ ಕಾರಣಗಳಿಂದ ವಿಜಯನಗರದ ರಾಜ್ಯವನ್ನು ಆಳಿದ ಅರಸರ ಪರಂಪರೆಯು ಇದುವರೆಗೂ ಸರಿಯಾಗಿ ವ್ಯವಸ್ಥಿತವಾಗಿಲ್ಲ. ಅದು ಹೇಗಾದರೂ ಇರಲಿ, ಮೇಲಿನ ಶ್ಲೋಕದಲ್ಲಿ ಬರತಕ್ಕ ಹದಿಮೂರು ಅಕ್ಷರಗಳಿಗೂ ಹರಿಹರ I, ಬುಕ್ಕ I, ಹರಿಹರ II. ವಿರೂಪಣ್ಣ (ವಿರೂಪಾಕ್ಷ?)[4] ಬುಕ್ಕ II, ದೇವರಾಯ I, ರಾಮಚಂದ್ರ, ವಿಜಯ, ದೇವರಾಯ II, ವಿರೂಪಾಕ್ಷ[5] ಮಲ್ಲಿಕಾರ್ಜುನ, ರಾಜಶೇಖರ[6], ವಿರೂಪಾಕ್ಷ ಎಂದು ಅರ್ಥಮಾಡಿದರೆ ಸಂಗತವಾಗುವಂತೆ ತೋರುತ್ತದೆ.

ವಿಜಯನಗರದ ಅರಸರಿಗೂ ಕೆಳದಿಯ ನಾಯಕರಿಗೂ ಬಹುಕಾಲ ಸಂಬಂಧವಿತ್ತು. ಕೃಷ್ಣರಾಯರು[7] ಪ್ರಬಲನಾಗುತ್ತಿದ್ದ ಚೌಡಪ್ಪನಾಯಕನನ್ನು ಕರೆಸಿ ಅವನಿಂದ ಆದ ಸಹಾಯಕ್ಕೆ ಪ್ರತಿಫಲವಾಗಿ ಕೆಳದಿ ಮುಂತಾದ ಗಣಿಗಳ ಮೇಲೆ ಅಧಿಕಾರವನ್ನು ಕೊಟ್ಟನೆಂದೂ ಆಮೇಲೆ ಚೌಡಪ್ಪನಾಯಕನಿಗೆ ಶಕ ೧೪೨೨ರಲ್ಲಿ ಎಂದರೆ ಕ್ರಿ.ಶ. ೧೫೦೦ರಲ್ಲಿ ಪಟ್ಟ

---

[1] 'ನೀತಿಚಿಂತಾಮಣಿ' ಯನ್ನು ನೋಡಿ.

[2] ಹೀಗೆ 1404ರಲ್ಲಿ ಸ್ವಲ್ಪಕಾಲ ವಿರೂಪಾಕ್ಷನು ಆಳಿದಂತೆ ತೋರುತ್ತದೆ.

[3] ಈ ಪದ್ಧತಿಗೆ ಕೆಳದಿನೃಪವಿಜಯದಲ್ಲಿಯೇ ಒಂದು ಉದಾಹರಣೆ ಇದೆ. ಪುಟ ೫೩

[4] ವಿರೂಪಣ್ಣನಾದರೆ ಎರಡನೆಯ ಹರಿಹರನ ತಮ್ಮನಾಗಬಹುದು. ವಿರೂಪಾಕ್ಷನಾದರೆ ಆವನ ಜ್ಯೇಷ್ಠಪುತ್ರನಾಗಬಹುದು (ಎರಡನೆಯವನಲ್ಲ).

[5] ಈತನು ಎರಡನೆಯ ದೇವರಾಯನ ಹಿರಿಯಮಗನಾಗಬಹುದೇ ? ಈತನು ಬಹಳ ಸ್ವಲ್ಪಕಾಲವಾಳಿರಬಹುದು.

[6] "There are inscriptions which indicate unmistakably that Mallikarjuna's son Raja Sekhara succeeded followed probably by Virupaksha II"—*A Little known chapter of Vijaya Nagar History* by Prof. S. Krishnaswami Iyengar p. 21.

[7] ಈ ಗ್ರಂಥದಲ್ಲಿ Sri Vidyabharathi Book Centre, Sringeri ಕೃಷ್ಣರಾಯನೆಂದೂ ಹೇಳಿದೆ. ಪುಟ ೧೯–೨೦

CC-O. In Public Domain. Digitized by eGangotri

ವಾಯಿತೆಂದೂ ಗೊತಾಗುತ್ತದೆ. ಶಿವಪ್ಪನಾಯಕನ ಕಾಲಕ್ಕೆ ವಿಜಯನಗರದ ರಾಜ್ಯವು ಕ್ಷೀಣದೆಸೆಗೆ ಬಂದು ಶ್ರೀರಂಗರಾಯನು ಅಸಹಾಯನಾಗಿರಲು, ಶಿವಪ್ಪನಾಯಕನು 'ಬೇಲೂರಂ ತೆಗೆದುಕೊಂಡು ಶ್ರೀರಂಗರಾಯರ್ಗಿತ್ತು ರಾಯಸಂಸ್ಥಾನಮಂ ನೆಲೆಗೊಳಿ' ಸಿದನು. ಈ ಶಿವಪ್ಪನಾಯಕನೇ ಇಕ್ಕೇರಿಯ ಅರಸರಲ್ಲೆಲ್ಲ ಪ್ರಸಿದ್ಧನು. ಈತನ ಸುಪ್ರಸಿದ್ಧವಾದ ಸಿಸ್ತಿನ ವಿಚಾರವಾಗಿ ಈ ಗ್ರಂಥದಿಂದ ಯಾವುದೂ ಸ್ಪಷ್ಟವಾಗಿ ತಿಳಿದುಬರುವುದಿಲ್ಲ. ಆದರೆ ವ್ಯವಸಾಯವನ್ನು ಹೆಚ್ಚಿಸಿ ಒಂದು ಗೋಷ್ಪಾದದಷ್ಟು ಭೂಮಿಯನ್ನು ಕೂಡ ಪಾಳು ಬೀಳಿಸದಂತೆ ರೈತರಿಗೆ ಬೇಕಾದಷ್ಟು ಸಹಾಯವನ್ನು ಕಲ್ಪಿಸಿಕೊಟ್ಟು "ನೆರೆವರಿವರಾಡ" ಮುಂತಾದ ದಂಡಗಳನ್ನೂ ಅನ್ಯಾಯವಾದ ತೆರಿಗೆಗಳನ್ನೂ ತಪ್ಪಿಸಿ, "ಸೀಮೆಯಂ ರಕ್ಷಿಸಿದಂ" ಎಂದೂ ಇವನ ಕಾಲದಲ್ಲಿ ಕಳ್ಳಕಾಕರ ಕಾಟವಿರಲಿಲ್ಲವೆಂದೂ ಕಳವುಮಾಡಿದ ಒಂದು ನರಿಯನ್ನೂ ಹಿಡಿತರಿಸಿ ಶಾಸ್ತಿಯಂ ಮಾಡಿಸಿದನೆಂದೂ ಗೊತ್ತಾಗುತ್ತದೆ. ಇಕ್ಕೇರಿಯ ಅರಸರಿಗೆ "ಎಡವಮುರಾರಿ, ಕೋಂಟೆಕೋಲಾಹಲ, ಏಕಾಂಗವೀರ, ದೋನೇಜ, ದೋಃಖಂಡೆರಾಯ, ವೈರಿಸಪ್ತಾಂಗಹರಣ, ಪಶ್ಚಿಮಸಮುದ್ರಾಧೀಶ್ವರ, ವಿಶಿಷ್ಟಾದ್ವೈದಿಕಾದ್ವೈತ ಸಿದ್ಧಾಂತಪ್ರತಿಷ್ಠಾಪನಾಚಾರ್ಯ" ಎಂಬ ಬಿರುದುಗಳು ಇದ್ದುವು.[2]

ಇವರಿಗೂ ಮೈಸೂರಿನವರಿಗೂ ಪದೇಪದೇ ಯುದ್ಧವಾಗುತ್ತಲೇ ಇತ್ತು. ಇವರುಗಳು ಎಂದೂ ಪರಸ್ಪರ ಮೈತ್ರಿಯಿಂದ ಇದ್ದ ಹಾಗೆ ಕಾಣುವುದಿಲ್ಲ. ಅದಕ್ಕೋಸ್ಕರವೇ ಮೈಸೂರಿನ ರಾಜರ ಪ್ರಸ್ತಾಪ ಬಂದಾಗಲೆಲ್ಲಾ 'ಮಾಯಾವಿಗಳು' ಅಥವಾ 'ಮಾಯಾವಾದಿಗಳು' ಎಂಬ ಪದವು ಪರ್ಯಾಯವಾಗಿ ಉಪಯೋಗಿಸಲ್ಪಟ್ಟಿದೆ. ಮತ್ತು ಅವರ "ಮದೋದ್ರೇಕವನ್ನು ಮುಗ್ಗಿಸಿದ" ನೆಂದು ಮುಂತಾಗಿ ಹೇಳಲ್ಪಟ್ಟಿದೆ.[3]

ಈ ನಾಯಕರು ವೀರಶೈವಮತಾವಲಂಬಿಗಳು. ಇವರು ಜನಸಾಮಾನ್ಯರಿಗೂ ಉಪಯೋಗವಾಗುವಂತೆ ತಟಾಕಾರಾಮಾಗ್ರಹಾರಾದಿಗಳನ್ನು ಕಲ್ಪಿಸಿಕೊಟ್ಟರು. ಶೃಂಗೇರಿಯ ಮಠ, ಕೃಷ್ಣಾನಂದಸ್ವಾಮಿಗಳ ಮಠ ಇವುಗಳಿಗೆ ಬೆಂಬಲವಾಗಿ ನಿಂತು ಸಹಾಯ ಮಾಡಿದರು. ಇದರಂತೆ ಶೈವ ವೈಷ್ಣವ ದೇವಾಲಯಗಳಿಗೂ ಜೈನರ ಬಸದಿಗಳಿಗೂ ಮಹಮ್ಮದೀಯರ ಮಸೀದಿಗಳಿಗೂ ಅಗ್ರಹಾರಕ್ಷೇತ್ರಾರಾಮಗಳನ್ನು ಕೊಟ್ಟಂತೆ ತಿಳಿಯ ಬರುತ್ತದೆ.

---

1 ಕೃಷ್ಣರಾಯನು ೧೫೦೯ರಲ್ಲಿ ಪಟ್ಟಕ್ಕೆ ಬಂದನೆಂದು ಚರಿತ್ರಕಾರರು ಅಭಿಪ್ರಾಯ ಪಡುತ್ತಾರೆ. ಆದುದರಿಂದ ಇದಕ್ಕೆ ಸಾಂಗತ್ಯವನ್ನು ಹೇಳುವುದು ಕಷ್ಟವಾಗಿದೆ.

2 ೩೦; ೩೫, ೬೫, ೬೬, ೭೮, ಪುಟಗಳನ್ನು ನೋಡಿ. ರೈಸ್‌ಸಾಹೇಬರು "ಎಡವಮುರಾರಿ" ಎಂಬ ಬಿರುದಿಗೆ ಬೇರೆ ಕಾರಣವನ್ನು ಹೇಳುತ್ತಾರೆ.

3 ಪುಟ, ೮೭, ೧೦೨, ೧೦೫, ೧೦೬, ೧೧೧, ೧೧೮, ೧೧೯, ೧೫೧, ೧೫೬, ೧೫೭, ೧೬೩, ೧೬೪, ೧೭೮

Sri Vidyabharathi Book Centre, Sringeri

CC-O. In Public Domain. Digitized by eGangotri

ಇವರ ಕಾಲದಲ್ಲಿ ರಾಮೇಶ್ವರದೇವಸ್ಥಾನ, ವೀರಭದ್ರದೇವಸ್ಥಾನ, ಅಘೋರೇಶ್ವರ ದೇವಸ್ಥಾನ ಮುಂತಾದ ವಿಚಿತ್ರತರವಾದ ಶಿಲ್ಪಕೆಲಸಗಳಿಂದ ಕೂಡಿದ ಕಟ್ಟಡಗಳು ಕಟ್ಟಲ್ಪಟ್ಟುವು. ಹಿರಿಯ ವೆಂಕಟಪ್ಪನಾಯಕನು "ಇಕ್ಕೇರಿಯ ಅರಮನೆಯೊಳ್ ವಿಚಿತ್ರತರರಚನಾ ಕೌಶಲ್ಯದಿಂ ನಾಟಕಶಾಲೆಯಂ ನಿರ್ಮಾಣಂಗೈಸಿ"ದನು. ಆತನು ವಿದ್ವಾಂಸರಿಗೆ ಕೊಟ್ಟ ಆಶ್ರಯದಿಂದ ತಿರುಮಲಭಟ್ಟರ ಕರ್ಣಾಟ ಶಿವಗೀತೆ, ಶಿವಾಷ್ಟಪದಿ, ಗೀತಗೌರೀವರ, ರಂಗನಾಥ ದೀಕ್ಷಿತನ ತಂತ್ರಸಾರವ್ಯಾಖ್ಯಾನ ಮುಂತಾದ ಗ್ರಂಥಗಳು ಹುಟ್ಟಿದುವು. ಆಮೇಲೆ "ಸೂರಿನಿಕರಕಲ್ಪದ್ರುಮ" ನೆಂದು ಹೊಗಳಿಸಿಕೊಂಡ ಹಿರಿಯ ಬಸಪ್ಪನಾಯಕನು ಕೊಟ್ಟ ಪ್ರೋತ್ಸಾಹದಿಂದ ಮಂತ್ರಿಷಡಕ್ಷರಯ್ಯನ ವೀರಶೈವಧರ್ಮ ಶಿರೋಮಣಿ, ಸಂಗಮೇಶ್ವರನ ಶಿವಸಹಸ್ರನಾಮವ್ಯಾಖ್ಯಾ, ಮರಿತೋಂಟದಾರ್ಯನ ವೀರಶೈವಾನಂದಚಂದ್ರಿಕೆ ಮುಂತಾದ ಗ್ರಂಥಗಳು ಹುಟ್ಟಿದುವು. ಹಿರಿಯ ಬಸಪ್ಪನಾಯಕನ ಹೆಸರಿನಲ್ಲಿಯೇ ಶಿವತತ್ವರತ್ನಾಕರ, ವೀರಶೈವಸಂಜೀವಿನೀ, ಸುಭಾಷಿತಸುರದ್ರುಮ, ಸೂಕ್ತಿಸುಧಾಕರ ಎಂಬ ನಾಲ್ಕು ಸಂಸ್ಕೃತ ಗ್ರಂಥಗಳಿವೆ. ಇವಲ್ಲದೆ ಇವರ ಕಾಲದಲ್ಲಿ ಇನ್ನೂ ಹಲವುಗ್ರಂಥಗಳು ಹುಟ್ಟಿದುವೆಂದು ಊಹಿಸುವುದಕ್ಕೆ ಕಾರಣವಿದೆ.

ಕೆಳದಿನೃಪವಿಜಯವು ಚಂಪೂಗ್ರಂಥ; ನಾವು ನೋಡಿದ ನಾಲ್ಕು ಪ್ರತಿಗಳಲ್ಲಿ ಒಂದರಲ್ಲಿಯೂ ಇದರ ಪೀಠಿಕಾಪ್ರಕರಣವು ಕಂಡುಬರುವುದಿಲ್ಲ. ಈ ಪ್ರತಿಗಳಿಗೆಲ್ಲ ಮೂಲವಾಗಿದ್ದಿರಬಹುದಾದ ಮಾತೃಕೆಯಲ್ಲಿಯೇ ಗ್ರಂಥಪಾತವಾಗಿ ಈ ಭಾಗವು ಬಿಟ್ಟುಹೋಗಿತ್ತೋ ಅಥವಾ ಕವಿಯು ಬರೆಯಲೇ ಇಲ್ಲವೋ ತಿಳಿಯದು. ಅಂತು ಇತರ ಚಂಪೂಗ್ರಂಥಗಳಲ್ಲಿರುವ ಹಾಗೆ ಕವಿಸಂಪ್ರದಾಯವನ್ನನುಸರಿಸಿ ಸಮುದ್ರವರ್ಣನೆ, ಮೇರುಪರ್ವತದ ವರ್ಣನೆ, ಜಂಬೂದ್ವೀಪದ ವರ್ಣನೆ, ಕರ್ಣಾಟಕದೇಶದ ವರ್ಣನೆ ಮುಂತಾದವುಗಳು ಕ್ರಮವಾಗಿ ಬರುತ್ತವೆ.

ಆದಿಭಾಗದಲ್ಲಿ ವಿಶೇಷವಾಗಿಯೂ ಮುಂದೆ ಅಲ್ಪಸ್ವಲ್ಪವಾಗಿಯೂ ಶಬ್ದಾಲಂಕಾರ ಅರ್ಥಾಲಂಕಾರ ಮುಂತಾದ ಕಾವ್ಯಚಮತ್ಕಾರಗಳು ಕಂಡುಬರುತ್ತವೆ. ಇಷ್ಟಪಟ್ಟರೆ ಕವಿಯು ಪ್ರೌಢವಾಗಿಯೂ ಮನೋಹರವಾಗಿಯೂ ಬರೆಯಬಲ್ಲನು[1]. ಸಂಕಣನಾಯಕನು ಅಂಕುಶಖಾನನೊಡನೆ ಮಾಡಿದ ಕಾಳಗವು ಬಹು ಸ್ವಾರಸ್ಯವಾಗಿ ವರ್ಣಿಸಲ್ಪಟ್ಟಿದೆ. ಆದರೆ ಒಟ್ಟಿನಮೇಲೆ ನೋಡಿದರೆ ಚರಿತ್ರಕಥನಕ್ಕೇ ಹೆಚ್ಚು ಪ್ರಾಶಸ್ತ್ಯ ಕೊಟ್ಟಿರುವಹಾಗೂ ಪ್ರೌಢಕಾವ್ಯರಚನೆಯನ್ನೇ ಮುಖ್ಯೋದ್ದೇಶ್ಯವನ್ನಾಗಿಟ್ಟುಕೊಳ್ಳದಿದ್ದಂತೆಯೂ ಕಾಣು

---

1 ಇದಕ್ಕೆ ಉದಾಹರಣೆಯಾಗಿ II ೨೯, ೪೭; III ೫೮; ೫೯; V ೪೧, ೧೧, ೧೨, ೨೯; ಈ ಪದ್ಯಗಳನ್ನು ಹೇಳಬಹುದು.

Sri Vidyabharathi Book Centre, Sringeri

CC-O. In Public Domain.,Digitized by eGangotri

ತ್ತದೆ. ಆದ್ದರಿಂದಲೇ ಇದರಲ್ಲಿ ದೊಡ್ಡ ದೊಡ್ಡ ವೃತ್ತಗಳು ಕಡಿಮೆ; ಕಂದಗಳು[1] ಮತ್ತು ಗದ್ಯವೇ ಹೆಚ್ಚಾಗಿ ಉಪಯೋಗಿಸಲ್ಪಟ್ಟಿವೆ. ಭಾಷೆಯು ಸುಲಭವಾಗಿದೆ. ಹಳಗನ್ನಡವಾದರೂ ಅದರ ಬಿಗಿಯಿಲ್ಲ; ಹೊಸಗನ್ನಡರೂಪಗಳೂ ಪ್ರಯೋಗಗಳೂ ಹೇರಳವಾಗಿವೆ; ಮರಾಟಿ ಅಥವಾ ಹಿಂದೂಸ್ಥಾನಿಯ ಪದಗಳು ಅಲ್ಲಲ್ಲೇ ಉಪಯೋಗಿಸಲ್ಪಟ್ಟಿವೆ. ಉದಾ:—ಗನೀಮು, ಜಿಲೆಯು, ತಕತ್, ಬಕತರ, ಬೊಕ್ಕಸೀಸ, ಮೇರುಮಾಸಿ, ಸಲಾಮು, ಹುಕುಂ ಇತ್ಯಾದಿ. ಈತನು 'ಅನಂತರ' ಎಂಬ ಅರ್ಥದಲ್ಲಿ 'ನಂತರ' ಎಂಬ ಪದವನ್ನು ಉಪಯೋಗಿಸುತ್ತಾನೆ. ಇದನ್ನು ಸಾಧುವೆಂದು ಹೇಳುವುದಕ್ಕಾಗುವುದಿಲ್ಲ. ಆದರೂ ಮರಾಟಿಯಲ್ಲಿ ಈ ರೂಪವುಂಟು. ಆದುದರಿಂದ ಇದು ತದ್ಭವರೂಪವೆಂದು ಕವಿಯ ಅಭಿಪ್ರಾಯವಿರಬಹುದು. ಆದರೆ ಇದರಂತೆ, ವಡ್ಡಿ, ಪ್ರತಿದಿನಂಗಳ್, ಪೆಣ್ಮಣಿಗಳಂ ವಿವಾಹಮಂ ರಚಿಸಿ, ದೇವಾಲಯಮಂ ನಿರ್ಮಾಣಮಂ ರಚಿಸಿ, ಇತ್ಯಾದಿ ಪ್ರಯೋಗಗಳಿಗೆ ಸಾಧುತ್ವವನ್ನು ಕಲ್ಪಿಸುವುದು ಸುಲಭವಲ್ಲ.

ಗ್ರಂಥವು ಆರಂಭವಾದುದು ಹೇಗೋ ಮುಗಿಯುವುದೂ ಹಾಗೆಯೇ. ಕೊನೆಯಲ್ಲಿಯೂ ಮಂಗಳಶ್ಲೋಕಾದಿಗಳು ಇಲ್ಲ.

ಎ. ಆರ್. ಕೃಷ್ಣಶಾಸ್ತ್ರಿ

---

1 ಈ ಕವಿಯು ಕಂದದ ಮೊದಲನೆಯ ಮತ್ತು ಮೂರನೆಯ ಪಾದಗಳಲ್ಲಿ ನಾಲ್ಕು ನಾಲ್ಕು ಮಾತ್ರೆಗಳ ಮೂರುಮೂರು ಗಣಗಳಿರಬೇಕೆಂಬ ನಿಯಮವನ್ನಿಟ್ಟುಕೊಂಡಂತಿಲ್ಲ. ಒಟ್ಟು ಹನ್ನೆರಡುಮಾತ್ರೆಗಳಾದರೆ ಸರಿಯೆಂದು ಭಾವಿಸಿದ ಹಾಗೆ ತೋರುತ್ತದೆ. ಆದುದರಿಂದ ಅಲ್ಲಲ್ಲೇ ಮೂರುಮಾತ್ರೆಯ ಒಂದು ಗಣ ಐದು ಮಾತ್ರೆಯ ಒಂದುಗಣ ಆಮೇಲೆ ನಾಲ್ಕು ಮಾತ್ರೆಯ ಒಂದು ಗಣ ಈ ರೀತಿ ಹನ್ನೆರಡು ಮಾತ್ರೆಗಳುಳ್ಳ ಎಷ್ಟೋ ಕಂದಪಾದಗಳು ಕಂಡುಬರುತ್ತವೆ. ಅಂಥ ಪಾದಗಳನ್ನು ನಕ್ಷತ್ರಚಿಹ್ನೆಯಿಂದ ಗುರುತುಮಾಡಿದ್ದೇವೆ. ಹೀಗೆಯೇ 'ಜಗಣಂ ವಿಷಮದೊಳಾಗದು, ಜಗಣಂ ಮೇಣ್ ನಗಣಮಕ್ಕೆಯಾರನೆಯಡಿಯೊಳ್' ಎಂಬ ಸೂತ್ರಕ್ಕೂ ವಿರೋಧವಾಗಿ ಬರೆದ ಕೆಲವು ಕಂದಗಳಿವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ವಿದ್ಯಾರಣ್ಯ ಕಾಲಜ್ಞಾನದ ಶ್ಲೋಕಗಳು

I

ಏತಸ್ಮಿನ್ನಂತರೇ ಕಾಲೇ ಕುರುವಂಶಪ್ರಸೂತಿಜೌ
ಕೋಶಾಗಾರಪ್ರತೀಹಾರೌ ವೀರರುದ್ರಮಹೀಪತೇಃ
ಆಗತೌ ಯವನಾಕ್ರಾಂತಾವಸಹಾಯೌ ಶಿಲಾಪುರೀಂ
ರಾಮನಾಥಂ ನಿಷೇವಾತೇ ರಾಜಾನಂ ಕೋಶಪಾಲನೇ

ಸಾಮ್ರಾಜ್ಯಲಕ್ಷಣೋಪೇತೌ ಮಹೋರಸ್ಕೌ ಮಹಾಭುಜೌ
ಉಡುಸೇನ ಸಮುತ್ತೀರ್ಯ ಕೃಷ್ಣವೇಣೀಂ ಸಮಾಗತೌ
ಬಲ್ಲಾಳಕ್ಷಿತಿಪಾಲೇನ ಯುದ್ಧಂ ಕೃತ್ವಾ ಪರಾಜಿತೌ
....

ಅನುಜ್ಞಪ್ತೌ ತತೋ ಗತ್ವಾ ಬಲ್ಲಾಳಕ್ಷಿತಿಪಂ ಪುನಃ
ವಿಜಿತ್ಯ ರಾಜ್ಯಮಾಕ್ರಮ್ಯ ಹಸ್ತಿಕೋಣಾಹ್ವಯೇ ಪುರೇ
....

II

ಪುರಾ ದ್ವೌ ಪುರುಕ್ಷೌವೀರೌ ಭ್ರಾತರೌ ತು ಯಶಸ್ವಿನೌ
ಗೃಹೀತೌ ತೌ ಸುರತ್ರಾಣಭಟೈರ್ನಿರ್ಗತ್ಯ ಸಂಸ್ಥಿತೌ
ಸುರತ್ರಾಣಗೃಹೀತೌ ತೌ ತತ್ರೈಕದಿವಸಾತ್ಯಯೇ
ರಾತ್ರ್ರಾವಶನಿಪಾತಾಂಬುಮೇಘಘೋಷನಿರಾಕುಲೌ

ದ್ವಾರಭಿತ್ತ್ಯಾಸ್ಸಮಾಪಸ್ಥೌ ಸುರತ್ರಾಣೇಪಿ ನಿದ್ರಿತೇ
ಬಹಿರ್ನಿರ್ಗತ್ಯ ತೌ ಪೃಷ್ಟೌ ಕಾವೇತಾವತ್ರ ಸಂಸ್ಥಿತೌ
ಗೃಹೀತೌ ಭ್ರಾತರೌ ಮತ್ವಾ ಸತ್ಯಸಂಧೌ ತತಸ್ಸುಧೀಃ
ತಯೋರ್ದತ್ವಾದೇಶಮಾದೌ ಕರ್ಣಾಟಂ ತು ವಿಸೃಷ್ಟವಾನ್

Sri Vidyabharathi Book Centre, Sringeri

CC-O. In Public Domain. Digitized by eGangotri

XXV

ತೇನಾಜ್ಞಪ್ತೌ ತು ತೌ ವೀರೌ ಶೀಘ್ರಮಾಗತ್ಯ ತೌ ನದೀಂ
ಉಡುಪೇನ ಸಮುತ್ತೀರ್ಯ ಕೃಷ್ಣವೇಣೀಂ ಸಮಾಗತೌ
ಬಲ್ಲಾಳಕ್ಷಿತಿಪಾಲೇನ ಯುದ್ಧಂ ಕೃತ್ವಾ ಪರಾಜಿತೌ
ವನಮಧ್ಯೇ ಪರಿಶ್ರಾಂತೌ ವೃಕ್ಷಮೂಲಮುಪಾಶ್ರಿತೌ

....

ತಸ್ಮಿನ್ನೇವ ಕ್ಷಣೇ ಪೂರ್ವಂ ಭಗ್ನಂ ಸೈನ್ಯಂ ಸಮಾಗತಂ
ಕ್ರೋಡೀಕೃತ್ಯ ತದಾ ಸರ್ವಂ ವಿದ್ಯಾರಣ್ಯಮುನೀಶ್ವರಂ
ದದರ್ಶತುರ್ವದಾನ್ಯೌ ತೌ ತೇನಾಶೀರ್ವಚನಾದಿಭಿಃ
ಅನುಜ್ಞಾತೌ ತದಾ ವೀರಬಲ್ಲಾಳನೃಪತಿಂ ಪುನಃ

ನಿರ್ಜಿತ್ಯ ರಾಜ್ಯಮಾಕ್ರಮ್ಯ ಶಾಸತುರ್ಬಾಹುಶಾಲಿನೌ
ತದಾ ಹಿ ಕ್ಷೇತ್ರನಿಕ್ಷಿಪ್ತಂ ಸಿಂಹಪೀಠಂ ಪ್ರಲೇಭತುಃ
ಲಬ್ಧ್ವಾ ತು ಸಿಂಹಪೀಠಂ ಚ ಸಮಾಗತ್ಯ ಸಮಾಶ್ರಿತೌ
ತುಂಗಭದ್ರಾನದೀತೀರೇ ಹಸ್ತಿಕೋಣಾಹ್ವಯೇ ಪುರೇ

ತಸ್ಮಿನ್ನೇವ ತು ಕಾಲೇ ಚ ಮೃಗಯಾಂ ಗಂತುಮುದ್ಯತೌ
ತುಂಗಭದ್ರಾನದೀಂ ತೀರ್ತ್ವಾ ದಕ್ಷಿಣೇ ದಿಗ್ವಿಭಾಗಕೇ

....

ತಚ್ಛ್ರುತ್ವಾ ವಚನಂ ಯೋಗೀ ಸಮಯಾತಸ್ತದನ್ವಿತಃ
ತಾಂ ಸ್ಥಳೀಂ ಸ ಸಮಾಕ್ರಮ್ಯಾಥ ರಾಜಧಾನೀಂ ಮಹೀಕ್ಷಿತಾಂ
ತದ್ವಂಶಜಾನಾಮನ್ಯೇಷಾಂ ಕರ್ತುಮೇವೋಪಚಕ್ರಮೇ
ದಿಕ್ಸಂಖ್ಯಾಬಾಣಯುಕ್ತದ್ವಿಚಂದ್ರಯುಕ್ತಶಕಾ(೧೨೫೮) ನ್ವಿತೆ

ಧಾತ್ರಬ್ದೇ ಸಿತಸಪ್ತಮ್ಯಾಂ ವೈಶಾಖೇ ಮಾಸಿ ಭಾಸ್ಕರೇ
ಸುಲಗ್ನೇ ಶುಭನಕ್ಷತ್ರೇ ಮಾಘಾಖ್ಯೇ ಚ ವಿಶೇಷತಃ
ರಚಿತಾ ನಗರೀ ರಮ್ಯಾ ಪುರುಷಾಕೃತಿಶಾಲಿನೀ

....

ತಸ್ಯಾಂ ಪುರ್ಯಾಂ ಚ ರಾಜಾನಸ್ತ್ರಯೋದಶ ಯಥಾಕ್ರಮಂ
ಹ ಬು ಹೋ ವಿ ಬು ದೇ ರಾ ವಿ ದೇ ವಿ ಮಾ ರಾ ವಿ ಸಂಜ್ಞಿತಾಃ
ಭವಿಷ್ಯಂತಿ ಮಹೀಪಾಲಾಃ [illegible]

Sri Vidyabharathi Book Centre, Sringeri

....

CC-O. In Public Domain. Digitized by eGangotri

ಭೂಪಾಲೇ ನವಮೇ ಯಾತೇ ರಾಷ್ಟ್ರಕ್ಷೋಭಾದಿಕಂ ಬಹು
ಭವಿಷ್ಯತಿ ತತೋ ರಾಜ್ಯಂ ತ್ರಿಭಿರೇವ ಹಿ ಪಾಲ್ಯತೇ
ತತೋ ವೈ ನಗರೀ ಸಾ ತು ಪಾಲ್ಯತೇ ಕೃಚ್ಛ್ರತೋ ನೃಪೈಃ
ತದ್ವಂಶಪ್ರಭವೋಂತ್ಯಸ್ತು ಶತ್ರುಭಿಃ ಪರಿಪೀಡಿತಃ

ಪ್ರಪಲಾಯ್ಯ ನದೀಂ ತೀರ್ತ್ವಾಹ್ಯನ್ಯದೇಶಂ ಸಮಾಶ್ರಿತಃ
ಮರಿಷ್ಯತಿ ನ ಸಂದೇಹಃ........... ....

....

ಪಂಚಾಶದುತ್ತರಶತೇ ವಂಶಪೂರ್ತಿರ್ಭವಿಷ್ಯತಿ

....

...........ಇತಿ ಸಂಪ್ರೋಕ್ತಂ ಪುರಾ ಪೃಷ್ಟೇನ ಧೀಮತಾ

....

ವಿದ್ಯಾರಣ್ಯೇನ ಯತಿನಾ ರಾಜ್ಞೇ ಹರಿಹರಾಯ ಚ

ತತ್ಸರ್ವಂ ತನ್ಮುಖಾಚ್ಛ್ರುತ್ವಾ ವಿದ್ಯಾರಣ್ಯಸಕಾಶತಃ
ಭಾರತೀಕೃಷ್ಣಯತಿನಾ ನೃಪಾಣಾಮಾವಳಿಸ್ತಥಾ
ಕಾಲಸಂಖ್ಯಾ ಚ ಕರ್ಣಾಟಕ್ಷಿತಿದೇಶೇ ಯಥಾಕ್ರಮಂ
ಆಖ್ಯಾತೋ ಗ್ರಂಥರೂಪೇಣ ವಿದ್ಯಾರಣ್ಯಸ್ಯಚಾಜ್ಞಯಾ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-0. In Public Domain. Digitized by eGangotri

ಕೆಳದಿಯ ಅರಸರ ವಂಶವೃಕ್ಷ

ಬಸವಪ್ಪ (ಪ) ಬಸವಮಾಂಬೆ

೧ ಚೌಡಪ್ಪನಾಯಕ — ಭದ್ರಪ್ಪನಾಯಕ

೨ ಸದಾಶಿವರಾಯ ನಾಯಕ

೩ ದೊಡ್ಡ ಸಂಕಣ್ಣನಾಯಕ — ೪ ಚಿಕ್ಕ ಸಂಕಣ್ಣನಾಯಕ (ಎರಡನೆಯ ಹೆಂಡತಿಯಿಂದ)

೫ ರಾಮರಾಜನಾಯಕ — ೬ (ಹಿರಿಯ) ವೆಂಕಟಪ್ಪನಾಯಕ

ಸಿದ್ದಪ್ಪನಾಯಕ

ವೀರವೊಡೆಯರು — ಬಸವಲಿಂಗನಾಯಕ — ಭದ್ರಪ್ಪನಾಯಕ (ಪ) ಬಂಗಾರಮ್ಮ — ಹಿರಿಯಮ್ಮ (ಪ) ಜಂ. ವಿರುಪಣ ಒಡೆಯರು

(ಮೊದಲನೆಯ ಹೆಂಡತಿಯಿಂದ) — (ಎರಡನೆಯ ಹೆಂಡತಿಯಿಂದ)

೯ ವೆಂಕಟಪ್ಪನಾಯಕ (ಪ. ಮಲ್ಲಮ್ಮಾಜಿ

ರಾಮಲಿಂಗನಾಯಕ — ೭ ವೀರಭದ್ರನಾಯಕ — (ಮಗಳು)–(ಪ) ಸದಾಶಿವನಾಯಕ

೮ ಶಿವಪ್ಪನಾಯಕ — ಪರಮೇಶ್ವರಮ್ಮ — ನಾಗಾಜಮ್ಮ — ಚನ್ನಮ್ಮ (ಪ) ಕೆಂಚಣ್ಣ

ಅಳಿಯ ಶಿವಲಿಂಗನಾಯಕ

ಈತನಿಗೆ ಐದುಜನ ಪತ್ನಿಯರು

(ಅಂಧಕ) ವೆಂಕಟಯ್ಯ — ಭದ್ರಯ್ಯ

೧೨ ಕುತ್ಸಿತ ಶಿವಪ್ಪನಾಯಕ

ಸಿದ್ದಯ್ಯ — ಭದ್ರಪ್ಪ (ಪ) ಸಿದ್ದಮ್ಮ — ಗೌರಮ್ಮ (ಪ) ಮರಿಯಪ್ಪ

1 ದು. ಪ. ಲಿಂಗಮ್ಮಾಜಿ — 2 ಶಾಂತಮ್ಮಾಜಿ — 3 ಭದ್ರಮ್ಮಾಜಿ — 4 ನಾಗಾಜಮ್ಮಾಜಿ — 5 ಬಸವಲಿಂಗಮ್ಮಾಜಿ

ಸಿದ್ದಮ್ಮಾಜಿ (ಪ) ಸರಭೆಲ ಮಲ್ಲಿಕಾರ್ಜುನಯ್ಯ

೧೦ ಭದ್ರಪ್ಪನಾಯಕ (ಪ) ಬೊಮ್ಮಮ್ಮಾಜಿ, ಸಿದ್ದಮ್ಮಾಜಿ

ಬಸವಲಿಂಗಮ್ಮಾಜಿ (ಪ) ಬಸವಲಿಂಗಯ್ಯ

೧೧ (ಹಿರಿಯ) ಸೋಮಶೇಖರ ನಾಯಕ

೧೩ (ಪ) ಚನ್ನಮ್ಮಾಜಿ

ಸೋಮಮ್ಮ (ಪ) ಚನ್ನವೀರ ಒಡೆಯರು

(ದತ್ತ)

೧೪ (ಹಿರಿಯ) ಬಸಪ್ಪನಾಯಕ, (ಪ) 1 ಹೆ. ಮ. ಚನ್ನಮ್ಮಾಜಿ, ...2 ಚನ್ನ ಬಸವಮ್ಮಾಜಿ, ...3 ಚನ್ನಮ್ಮಾಜಿ, ... 4 ವೀರಮ್ಮಾಜಿ.

೧೫ ಸೋಮಶೇಖರನಾಯಕ (ಪ) ವೀರಮ್ಮಾಜಿ, ಬಸವಮ್ಮಾಜಿ, ನೀಲಮ್ಮಾಜಿ

ವೀರಭದ್ರನಾಯಕ (ಪ) 1 ಚನ್ನಮ್ಮಾಜಿ, 2 ಮಲ್ಲಮ್ಮಾಜಿ

೧೬ ಬಸಪ್ಪನಾಯಕ (ಪ) ಚನ್ನಮ್ಮಾಜಿ, 2 ಚನ್ನವೀರಮ್ಮಾಜಿ

(ದತ್ತ) ೧೭ ಚನ್ನಬಸಪ್ಪನಾಯಕ — (ದತ್ತ) ೧೮ ಸೋಮಶೇಖರನಾಯಕ

Sri Vidyabharathi Book Centre, Sringeri

☞ (ಪ) ಎಂಬುದಕ್ಕೆ ಮೇಲಣ ವಂಶವೃಕ್ಷದಲ್ಲಿ ಸಂದರ್ಭಾನುಸಾರವಾಗಿ "ಪತಿ" ಅಥವಾ "ಪತ್ನಿ" ಎಂದು ಅರ್ಥ

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಕೆಳದಿನೃಪವಿಜಯಂ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಕೆಳದಿನೃಪವಿಜಯಂ

ಪ್ರಥಮಾಶ್ವಾಸಂ

* ಈಕೃತಿಗಾದಿಯಾವುದೆನಲುಜ್ಜ್ವಲತುಂಗತರಂಗಸಂಚರ
ದ್ಭೀಕರಮೀನಕರ್ಕಟಕಕೂರ್ಮ ಕನತ್ಸಲಿಲೇಭನಕ್ರದ
ರ್ವೀಕರಶಿಂಶುಮಾರಮುಖವಾಶ್ಚರಸಂಚಯಚಾಲನೋಚ್ಚಲ
ಚ್ಛೀಕರಫೇನಕಂಬುಕುಲರತ್ನಗಳಿಂದೆಸೆದತ್ತು ಸಾಗರಂ ೧

ಹರನ ನಿಷಂಗವಚ್ಯುತನ ಪಾಸು ಜಲೇಶನ ರಾಜಮಂದಿರಂ
ನಿರುಪಮಮಪ್ಪ ಲಕ್ಷ್ಮಿಯ ತವರ್ಮನೆ ಚಂದ್ರನ ಜನ್ಮಭೂಮಿ ಭೂ
ಧರವರಪುತ್ರನುದ್ಘ ಕವಚಂ ಬಡಬಾನಲಪಾನಪಾತ್ರಮು
ತ್ತ್ಯುರುತರಮಪ್ಪ ಸನ್ಮಣಿಗಳಾಗರಮೊಪ್ಪಿದುದ್ದೈದೆ ಸಾಗರಂ ೨

ವಳಿ ತೋಳ್ ಸುಳಿ ಚಕ್ರಂ ನೊರೆ
ಯೆಳನಗೆ ಬೊಬ್ಬುಳಿಗಳುದರದೊಳಗಣಜಾಂಡಾ
ವಳಿ ನೀರ್ತನುರುಚಿ ಬಡಬಾ
ನಲನಂಬರಮಾಗಲಬುಧಿ ಹರಿಯವೊಲೆಸೆಗುಂ ೩

ವ. ಮತ್ತಮದಲ್ಲದಾ ಮಹಾರ್ಣವಂ ಸಾರ್ವಭೌಮವಿಭವದಂತಪರಿಮಿತವಾಹಿನೀ ಸಂಗತಮುಂ, ನಂದಗೋಕುಲದಂತೆ ಕಂಸಾರಾತಿರಮಣೀಯಮುಂ, ವೈನತೇಯನಂತೆ ವಿಲಸದ್ವಿಷ್ಣು ಪದಾವಲಂಬಿಯುಂ, ವಸಂತಸಮಯದಂತುಜ್ಜ್ವಲತ್ಕಳಿಕಾಪ್ರತಾನ ಪ್ರಶೋಭಿತಮುಂ, ಜ್ಯೋತಿಶ್ಚಕ್ರದಂತೆ ಮನೋಹರಮೀನಮಿಥುನಕರ್ಕಾಟಕರಾಶಿಸಮಾ

---

* ನಮ್ಮಲ್ಲಿರುವ ಎರಡು ಪ್ರತಿಗಳಲ್ಲಿಯೂ ಗ್ರಂಥವು ಹೀಗೆಯೇ ಆರಂಭವಾಗಿದೆ. ಮಂಗಳಶ್ಲೋಕಾದಿಗಳು ಹೋಗಿದ್ದರೂ ಹೋಗಿರಬಹುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ವೃತಮುಂ, ಮಾರ್ತಾಂಡನಂತುಜ್ಜ್ವಲಾಬ್ಜಕದಂಬಸಮುಚ್ಛ್ರಯಕಾರಿಯುಂ, ಯೋಗಿಜನದಂತೆ ಮುಕ್ತಾಮಯಮುಂ, ಕಂದರ್ಪನಂತನವರತಮನುಪಮಾಗಣ್ಯಲಾವಣ್ಯಸ್ವಭಾವಮುಂ, ಶಶಾಂಕೋದಯದಂತೆ ಕುವಲಯೋತ್ಸವಕಾರಿಯುಮೆನಿಸಿ ವಿಭ್ರಾಜಿಸುತ್ತಿರ್ದುದಂತುಮಲ್ಲದೆಯುಂ

ತಿಳಿಯಲ್ಕತಿಚಂಚಲೆ ಮಗ
ಳಳಿಯಂ ಪೂಗಣ್ಣನಾತ್ಮಜಂ ಕ್ಷಯಿ ಮೊಮ್ಮಂ
ಒಡಲಿಲಿಯೆನುತಂ ಚಿಂತಿಸಿ
ಸಲೆ ಸುಯ್ಯುವೊಲಾದುದಬ್ಧಿಯದ್ಭುತರಾವಂ ೪

ಅಮರರ್ಗಮೃತಾಶನರೆಂ
ದುಮೆಯಾಣ್ಮಗೆ ನೀಲಕಂಠನೆಂದಚ್ಯುತಗಂ
ಕ್ರಮದಿಂ ಕಮಲಾಪತಿಯೆಂ
ದನುದಿ೯ರೆ ಪೆಸರಿತ್ತ ಜಲಧಿಯೇಂ ರಂಜಿಸಿತೋ ೫

ಇಂತೆಸೆವಂಬುಧಿಮಧ್ಯದೊ
ಳಂ ತವೆ ಕಂಗೊಳಿಸುತಿರ್ಪ ಜಂಬೂದ್ವೀಪಾ
ಬ್ಜಾಂತರದ ಚಾರುಕರ್ಣಿಕೆ
ಯಂತಿರೆ ಕನಕಾಚಲಂ ವಿರಾಜಿಸುತಿರ್ಕುಂ ೬

ಜಲಜಜವಿಷ್ಣುವಿವಾದವ
ನಿಲಿಸಲ್ ಕಲ್ಪಾಂತದೆಡೆಯೊಳೊಗೆದತಿ ತೇಜೋ
ಜ್ಜ್ವಲ ದಿವ್ಯಮಹಾಲಿಂಗದ
ನಿಲವೆನೆ ಚಲ್ವಾಯ್ತು ಕಣ್ಗೆ ಕಾಂಚನಶೈಲಂ ೭

ಮಿಸುಪಾ ಮೇರುವ ತೆಂಕಣ
ದೆಸೆಯೊಳ್ಪೂರ್ವಾಪರಾಂಬುನಿಧಿಗಳನವಗಾ
ಹಿಸಿ ನಭಮುಂ ತುಡುಕುತೆ ಕ
ಣ್ಗೆಸೆದುದು ಹಿಮವನ್ನಗೇಂದ್ರಮುರುಗುಣಸಾಂದ್ರಂ ೮

Sri Vidyabharathi Book Centre, Sringeri

CC-O. In Public Domain. Digitized by eGangotri

ಮೇನಾಧಾರಂ ವಿನತಾ
ಸೂನುವಿನೊಲ್ಸತ್ಪಥಾಶ್ರಯಂ ಸುಜನನೊಲಾ
ಯ್ತಾನಗಮುಸ್ತ್ರೀಕೃತಜಿತ
ದಾನವನೊಲನಂತಕಟಕಭೂಷಿತಪಾದಂ ೯

ವ. ಇಂತು ಹಿಮಾಚಲಂ ವಿರಾಜಿಸುತ್ತುಮಿರಲ್

ಆ ಗಿರಿಯ ದಕ್ಷಿಣಾಶಾ
ಭಾಗದೊಳುರೆ ಕರ್ಮಭೂಮಿಸಂಜ್ಞೆಯಿನಧಿಕ
ಶ್ರೀಗೆಡೆಯೆನಿಸಿ ಮನೋಹರ
ಮಾಗಿರ್ಪುದು ಭರತಖಂಡಮನಘಕರಂಡಂ ೧೦

ವ. ಇಂತೆಸೆವ ಭರತಖಂಡದ ತೆಂಕಣಾಶಾಭಾಗದೊಳ್ ನಾನಾವಿಧವರ್ಣಾಶ್ರಮ
ಸುಖ ಸಂಪತ್ಸಮಾಜಕಾಸ್ಪದಮೆನಿಸಿ ಮೆರೆವ ಕನ್ಯಾಖಂಡಪ್ರದೇಶದೊಳ್

ಅಗಣಿತತೀರ್ಥನದೀನದ
ನಗಪುಣ್ಯಾರಣ್ಯವಿಷಯಸುಕ್ಷೇತ್ರಸಮೂ
ಹಗಳಿಗೆಡೆಯೆನಿಸಿ ಮಿಗೆ ಝಗ
ಝಗಿಪುದು ಸಹ್ಯಾಚಲಂ ಮಹಾಸುಖಮೂಲಂ ೧೧

ಆ ಸಹ್ಯಾದ್ರಿಯೊಳೊಪ್ಪುವ
ದೇಶಂಗಳೊಳಧಿಕಮೆನಿಸಿ ನಿರುಪಮಲಕ್ಷ್ಮೀ
ಕೋಶಂ ವಿಲಸತ್ಪುಣ್ಯನಿ
ವೇಶಂ ಕರ್ಣಾಟದೇಶಮುರೆ ರಂಜಿಸುಗುಂ ೧೨

ಕೆರೆಯಿಂ ಕಾಳ್ಪುರದಿಂ ಕನತ್ಕುವಲಯಾಂಭೋಜಂಗಳಿಂ ಶೋಭಿಪ್ರೋ
ಕ್ಷರದಿಂ ಪುಷ್ಪಲತಾಪ್ರತಾನಲಸದಾರಾಮಪ್ರದೇಶಂಗಳಿಂ
ತೊರೆಯಿಂ ರಾಜಿಪ ಗಂಧಶಾಲಿವನದಿಂ ಕ್ರೀಡಾದ್ರಿಯಿಂ ಕಣ್ಗೆ ಭಾ
ಸುರಮಾಗಿರ್ದುದು ದೇಶಮುನ್ನತಸುಖಾವಾಸಂ ದಲೇಂ ವರ್ಣಿಪೆಂ ೧೩

Sri Vidyabharathi Book Centre, Sringeri

CC-O. In Public Domain. Digitized by eGangotri

ವ. ಮತ್ತಮದಲ್ಲದಾಪೇಶಂ ಸ್ವರ್ಲೋಕದಂತೆ ಸುರಚಿರಸುರಭಿಸುಮನೋವೃಕ್ಷ ಪರಿಶೋಭಿತಮುಂ, ಸುತ್ರಾಮನೋಲಗಶಾಲೆಯಂತೆ ಸುಧರ್ಮಾನ್ವಿತಮುಂ, ವಧೂಪಯೋಧರದಂತಗ್ರಹಾರಮಾಲಾಲಂಕೃತಮುಂ, ಗಗನಮಂಡಲದಂತೆ ಭಾಸ್ವದ್ದ್ವಿಜರಾಜಾಭಿರಾಮಮುಂ, ಅಳಕಾನಗರದಂತಗಣ್ಯಪುಣ್ಯಜನಾಧಿಷ್ಠಿತಮುಂ, ಸಮಾಸಚಕ್ರದಂತೆ ಬಹುವ್ರೀಹಿಸಮಾವೃತಮುಂ, ಪದ್ಮಪೀಠನಂತನಂತಸಿಗಮಾಶ್ರಯಮುಂ, ನಾರಾಯಣನಂತೆ ಸುದರ್ಶನೋಪಸೇವ್ಯಮುಂ, ಮಹಾದೇವನಂತಚಲಿತದುರ್ಗಾಸ್ಪದಮುಮೆನಿಸಿ ವಿರಾಜಿಸುತಿರ್ದುದಂತುಮಲ್ಲದೆಯುಂ

ಪುಸಿ ಕಳವು ಪಾದರಂ ಬೇ
ವಸಮುಟ್ಟುಳಿ ದಾಳಿ ಕೌಳಿಯಪಹೃತಿ ಮೋಸಂ
ಪಿಸುಣನ್ಯಾಯಮೆಸಿಪ್ಪೀ
ಪೆಸರ್ಗಳ್ ಪೆಸರ್ಗೊಂಬೊಡಿಲ್ಲನಂತಾ ನಾಡೊಳ್ ೧೪

ವ. ಮತ್ತಮಂತುಮಲ್ಲದೆ

ಪೊಡೆಯೆಂಬರ್ಶಾಲಿಯನಾ
ರಡಿಯೆಂಬರ್ಷಟ್ಪದಾಳಿಯಂ ಕರಿಣಿಯುಮಂ
ಪಿಡಿಯೆಂಬರಲ್ಲದೀಪರಿ
ನುಡಿಯಾಲಿಪೊಡಿಲ್ಲ ಜನರೊಳಂತಾ ನಾಡೊಳ್ ೧೫

ಕಡೆಯೆಂಬರ್ದಧಿಮಥನಮೊ
ಳೊಡೆಯೆಂಬರ್ಭಕ್ಷ್ಯಭೇದದೊಳ್ ಕಬರಿಗಳೊಳ್
ಮುಡಿಯೆಂಬರಲ್ಲದೀ ಬಿರು
ನುಡಿ ಕನಸಿನೊಳಾದೊಡಂ ವಿಚಾರಿಪೊಡಿಲ್ಲಂ ೧೬

ಅಳಿಯಿಲ್ಲದಬ್ಜಮಬ್ಜಾ
ವಳಿಯಿಲ್ಲದ ಸರಸಿ ಸರಸಿಯಿಲ್ಲದ ಸಸ್ಯಂ
ಜಾಳನಂದನಮುರುನಂದನ
ಕುಳಮಿಲ್ಲದ ಪೊಳಲ್ಗಳಿಲ್ಲನಂತಾ ನಾಡೊಳ್ ೧೭

ವ. ಮತ್ತಮದಲ್ಲದೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಎಳಎಲರಿಂದೊಡೆವೊಸವುರ್
ಜ್ಜ್ವಲಧವಳೇಕ್ಷುಗಳ [1]ಪಾಳಿ[1] ಕಾಲ್ಗಳಿನೆತ್ತಂ
ಬೆಳದಾ ಶಾಲಿವನಂ ಕಂ
ಗೊಳಿಪುದು ಭೂವನಿತೆಯುಟ್ಟ ಪೊಂಬಟ್ಟೆಯವೋಲ್ ೧೮

ನೆರೆ ತಿಳಿದು ನಿಂದ ನೀರೊಳ್
ತರದಿಂ ಮಾರ್ಪೊಳೆವ ಶಾಲಿಮಂಜರಿನಿಕರಂ
ವರಭೂಸಾರತ್ವೆಯಿಂ ತಾ
ನುರೆ ಬೇರೊಳ್ ಬೇರೆ ಫಲಿಸಿತೆಂಬವೊಲೆಸೆಗುಂ ೧೯

ವ. ಮತ್ತಮದಲ್ಲದೆ

ಜಲಜಜನಮರ್ದಂ ಬೆಳ್ಳಿಯ
ಕೊಳವಿಗಳೊಳ್ ತುಂಬಿ ಗಂಟನೊಂದಿಸಿ ಗರುಡಂ
ತಿಳಿಯದೊಲನಿಳೆಯೊಳ್ನಿಲೆ
ಗೊಳಿಸಿದನೆನೆ ಮೆರೆದುದನುಳಪುಂಡ್ರೇಕ್ಷುವನಂ ೨೦

ಹರಿಯೊರ್ಮೆಯಮರ್ದನಮರ
ರ್ಗೆರೆದೊಡೆ ನವಸುಧೆಯನೆರೆದಪೆವು ನಿಮಗನಿಶಂ
ನರರಿತ್ತ ಬನ್ನಿಮೆನುತುಂ
ಕರೆನಂತಿರೆ ಮೊರೆವುವಿಕ್ಷುಯಂತ್ರಪ್ರಚಯಂ ೨೧

ವ. ಮತ್ತಮದಲ್ಲದೆ

ಮಿಂಚುವ ಪೊಸನೆಲ್ದೆನೆಗಳ
ಗೊಂಚಲ್ಗಳನಡಸಿ ಬಾಯ್ಗಳೊಳ್ ನಲಿಯುತ್ತುಂ
ಚಂಚುಗಳಿನಲೆವ ಗಿಳಿಗಳ
ಸಂಚಯಮುಂ ಸೋವುತಿರ್ಪರುರೆ ಪಾಮರಿಯರ್ ೨೨

ಸಲೆ ಸೋವ ಪಾಮರಿಯರು
ಜ್ಜ್ವಲಾಧರಮನೀಕ್ಷಿಸುತ್ತೆ ಪಣ್ತುರುಬಿಂಬೀ
ಫಲವೆಂದು ಕರ್ದುಕಬಗೆದವ
ರ್ಗಳ ಸಿರಿಮೊಗಕೆರಪುವಲ್ಲಿ ಗಿಳಿಗಳ ಬಳಗಂ ೨೩

---

[1] ಸಾಲು (ಕ)

Sri Vidyabharathi Book Centre, Sringeri

CC-O. In Public Domain. Digitized by eGangotri

ನೋಡಿ [1][ನಗು][1]ವಬಲೆಯರ ಪ
ಲ್ಗಾಡಿಯನಭಿವೀಕ್ಷಿಸುತ್ತೆ ಪರಿಪಕ್ವಲಸ
ದ್ದಾಡಿಮಿಯ ಬೀಜಮೆನುತೆಡೆ
ಯಾಡುತೆ ಕಾಲ್ದೆಗೆಯುತಿರ್ಪುವಾ ಕೀರಂಗಳ್ ೨೪

ವ. ಮತ್ತಮದಲ್ಲದಾ ದೇಶದೊಳ್

ಪೊಸ ಪೂಗಳ ರಸದಿಕ್ಷು
ಪ್ರಸರದ ಪಾಲ್ಗಳ ಸುನಾರಿಕೇಳಫಲಾಂಭೋ
ವಿಸರದ ಪರಿಕಾಲ್ಗಳನುಡು
ಪಸಮೂಹದೆ ಪಾಯ್ವುದಲ್ಲಿ ಪಾಂಥಸಮಾಜಂ ೨೫

ಬಾಳೆಯ ಬಟ್ಟಗಂಬಗಳನಿಕ್ಷುಗಳೊಳ್ತೊಲೆಯಿಂದಮುಂಬುರು
ಣ್ಣಾಳದ ಜಂತೆಯಿಂ ಪೊಸತಳಿರ್ವಸೆಯಿಂ ಹಿಮವಾರಿಪೂರ್ಣಕುಂ
ಭಾಳಿಯಿನಚ್ಚಮಲ್ಲಿಗೆಯ ಕುಚ್ಚದೆ ಬಾಳದ ಪಂದಲಿಂ ಪ್ರಪಾ
ಶಾಲೆಗಳಧ್ವದೊಳ್ ಸ್ಮರವಿವಾಹಗೃಹಂಗಳೊಲಾ ವಿರಾಜಿಕುಂ ೨೬

ವ. ಮತ್ತಮಲ್ಲಿ

ನೀರೆರೆವಳ ತೋಳ್ಕೊಡಲಿಂ
ಗೇರಿರೆ ಕುಡಿವರಿದು ದಿಟ್ಟಿ ಸರಿಸದ ಪೊಯ್ನೀ
ರ್ದಾರೆ ಪೊರಸೂಸೆ ಪಾಂಥ
ನೀರೆಯರಂ ಬಾಂಗೆ ಬಾಯಬಿಟ್ಟಿರೆ ನಗಿಪರ್ ೨೭

ಕುಂದವೆ ನೀರೆರೆವಳ ಸು
ಯ್ಮಂದಸ್ಮಿತರೋಚಿ ಮುಸುಕಿ ಪರಿಮಳಿಸುತೆ ಬೆ
ಳ್ಪೊಂದಿರೆ ಕುಡಿನೀರ್ ತನುಗಿದು
ಚಂದನರಸಮೆಂದು ಪೂಸಬಗೆವರ್ ಪಾಂಥರ್ ೨೮

ವ. ಇಂತನವರತಮಶೇಷಸುಖಸಂಪತ್ಸಮಾಜದಿಂದಾ ದೇಶಂ ವಿರಾಜಿಸುತ್ತುಮಿರಲ್

---

1 ಸೋ (ಒ ಕ)

Sri Vidyabharathi Book Centre, Sringeri

CC-O. In Public Domain. Digitized by eGangotri

ಅದರೊಳ್ ಪ್ಪೆಸೆಯಿನೆಸೆವಾ
ತ್ರಿದಶತರಂಗಿಣಿಗಮಧಿಕಮೆನಿಸುವ ವರದಾ
ನದಿಮೂಲಮೊಪ್ಪುಗುಂ ತ
ನ್ನದಿಯುತ್ತರತಟದೊಳರ್ಧಯೋಜನದೆಡೆಯೊಳ್ ೧೯

ಆ ಕರ್ಣಾಟಕದೇಶದ
ಭೂಕಾಂತೆಯ ವಕ್ತ್ರಪದ್ಮಮೆನೆ ರಾಜಿಸುಗುಂ
ಶ್ರೀಕರಮೆನಿಸಿಯಜಸ್ರಂ
ನಾಕವನಿಳಿಕ್ಕೈದ ಕೆಳದಿಯೆಂದೆನಿಪ ಪುರಂ ೨೦

ಶ್ರೀಮತ್ಕೆಳದಿಯ ಪೊಳಲೊಳ್
ಕ್ಕೈಮುವತೀರಮಣನೆಸೆವ ಲಿಂಗಾಕೃತಿಯಿಂ
ರಾಮೇಶ್ವರಾಖ್ಯೆಯಂ ತಳೆ
ದಾ ಮಹಿಯೊಳ್ ಪುತ್ತದಲ್ಲಿ ನೆಲೆಸಿರುತಿರ್ದಂ ೨೧

ಆ ಪುರದ ಮುಂತಣೆಳೆಯ ಸ
ಮೀಪದೊಳೊತ್ತಾಗಿ ಚೆಲ್ವ ಪಳ್ಳಿಯ ಬಯಲಿಂ
ಬಾ ಪಳ್ಳಿ ಕೃಷಿಕಜನಸ
ದ್ವ್ಯಾಪಾರನಿಳಿಂಪವಲ್ಲಿಯಾರಾಜಿಸುಗುಂ ೨೨

ಮಿನುಪಾ ಪಳ್ಳಿಯ ಬಯಲಿಂ
ದೆನಿಪೂರಿನ ಮೂಲಿ ಬಸವಪಂ ಕೃಷಿಕರ್ಮಾ
ಭ್ಯನುಪಗತಜೀವನಂ ತಾ
ನೆನಿಸಿ ವಿರಾಜಿಸುತುಮಿರ್ದನದರೊಳಜಸ್ರಂ ೨೩

ವ. ಮತ್ತಮದಲ್ಲದಾ ಬಸವಪಂ ಪರಶಿವಮೂರ್ತಿಸ್ವರೂಪ ಬಸವೇಶ್ವರಾಂಶೀಭೂತನಪ್ಪ ಕಾರಣಪುರುಷನುಂ ಲಿಂಗಾಂಗಸಂಬಂಧಿಷಟ್ಸ್ಥಲಜ್ಞಾನಾನುಸಂಧಾನ ಮಹಾನುಭವಪ್ರಾಜ್ಞನುಂ, ನಿರುಪಮ ನಿರಾಭಾರಿ ವೀರಶೈವಸದಾಚಾರಾಚರಣಸಂಪನ್ನನುಂ, ಶ್ರೀಗುರುಲಿಂಗಜಂಗಮಪದಾಂಬುಜಸೇವಾತತ್ಪರಾಮಲಚಿತ್ತನುಮೆನಿಸಿ ವಿರಾಜಿಸುತಿರ್ದನಂತುಮಲ್ಲದೆಯುಂ

Sri Vidyabharathi Book Centre, Sringeri

CC-O. In Public Domain. Digitized by eGangotri

ಹರಪದಪಯೋಜಭೃಂಗಂ
ಸುರುಚಿರ ಶಿವಶರಣಸಂಗಮುಪಗತಭಂಗಂ
ದುರಿತಧ್ವಾಂತಚಯಾಹ
ಸ್ಕರನೆಂದಿಳೆ ಪೊಗಳೆ ಬಸವಪಂ ರಾಜಿಸಿದಂ ೩೪

ಅನುಪಮತದ್ಬಸವಪನಂ
ಗನೆ ವಿಲಸಿತ ಬಸವಮಾಂಬೆ ವಿಶ್ರುತ ಸೀಮಂ
ತಿನಿಯರಧಿದೇವಿಯತಿಪಾ
ವನತರ ಸಚ್ಚರಿತೆಯೆನಿಸಿ ರಾರಾಜಿಸಿದಳ್ ೩೫

ರತಿ ರೂಪಿನೊಳೊಪ್ಪುವರುಂ
ಧತಿ ಪತಿಭಕ್ತಿಯೊಳೆ ಜಾಹ್ನವಿಯೊಳ್ನುತನಭಾ
ರತಿ ನಿರ್ಮಲಮತಿ ಶೋಭಾ
ವತಿಯೆಂದಿಳೆ ಪೊಗಳೆ ತದ್ನೃಪತಿ ಕರಮೆಸೆದಳ್ ೩೬

ಆ ಪುಣ್ಯಸ್ತ್ರೀಯುದರ
ಶ್ರೀಪಾರಾವಾರದೊಳ್ಸುಧಾಕರನೆನೆ ಸ
ದ್ರೂಪಂ ನಿರುಪಮಸುಗುಣಕ
ಲಾಪಂ ಚೌಡಪನೆನಿಪ್ಪ ಸುತನುದಯಿಸಿದಂ ೩೭

ಇಂದುವಿನೊಡನುಜ್ಜ್ವಲಿಸುವ
ಮಂದಾರಂ ಜನಿಸಿದಂತೆ ತಚ್ಚೌಡಪಭೂ
ಚಂದಿರನೊಡನುರುಭದ್ರಪ
ನೆಂದೆಂಬ ಕುಮಾರನೊಗೆದು ರಾರಾಜಿಸಿದಂ ೩೮

ಆ ಪರತರ ಬಸವಪಕುಲ
ದೀಪರ್ಭೂಮಹಿತ ಚೌಡಪಂ ಭದ್ರಪನೆಂ
ಬಾ ಪುಣ್ಯಪುರುಷರುಜ್ಜ್ವಲ
ರೂಪಾನ್ವಿತರೆನಿಸಿ ಮೆರೆದರಿನಶಶಿಗಳವೋಲ್ ೩೯

Sri Vidyabharathi Book Centre, Sringeri

CC-O. In Public Domain. Digitized by eGangotri

ಅವರೀಶನಾಜ್ಞೆಯಿಂ ಜನ
ನಿವಹವನುದ್ಧರಿಸೆ ಬುವಿಯೊಳೊಗೆದತಿಸುಹಿನಾ
ರ್ಣವರತಿ ಕಾರಣಪುರುಷ
ಶಿವಸುತತತ್ತ್ವಜ್ಞರೆಂದು ಬಲ್ಲವರುಸಿರ್ವರ್ ೪೦

ವ. ಇಂತೆಸೆವ ಕುಮಾರರೊಗೆದನಂತರಮಾ ಬಸವಸಂ ಭಾಗ್ಯಾಭಿವೃದ್ಧಿಯಂ ಪಡೆದು ಸಂತಸವಡುತ್ತೆ ಕುಮಾರರ್ಗೆ ಯೌವನೋದಯಮಾಗಲೊಡನೆ ಸತ್ಕುಲಸಂಭವೆಯರಪ್ಪ ಕನ್ಯಾರತ್ನಂಗಳಂ ವಿವಾಹಮಂ ರಚಿಸಿ ಕತಿಪಯದಿನಸಮಿರ್ದು ಶಿವಸಾಯುಜ್ಯಮನೈದ ಲೊಡನೆ ತತ್ಪತ್ನಿಯಪ್ಪ ಬಸವಮಾಂಬಿಕೆಯಾ ಪುತ್ರರಿರ್ವರಂ ಪೋಷಿಸಲಿವರ್ಗಳ್ ದಿನ ದಿನದೊಳ್ ವರ್ಧಿಷ್ಣುಗಳಾಗಿ ಪಳ್ಳಿವಯಲ ಗ್ರಾಮದೊಳ್ ಸ್ವಪಿತ್ರಾರ್ಜಿತಕೃಷ್ಯಾರಂ ಭಾದಿವ್ಯಾಪಾರದ್ವಾರದಿಂ ಪರಮಾಭಿವೃದ್ಧಿಯಂ ಪಡೆದು ಪಟುತರಭುಜಬಲಶಾಲಿಗಳೆನಿಸಿ ವಿರಾಜಿಸುತಿರ್ದನಂತರದೊಳ್

ವರವೀರಶೈವಕುಲಶೇ
ಖರ ಬಸವಪುತ್ರ ಚೌಡಪಂ ಶ್ರೀರಾಮೇ
ಶ್ವರಕೃಪೆಯಿಂ ಶತ್ಕೆಳದಿಯ
ಪುರವರ ಸಿಂಹಾಸನಕ್ಕಧೀಶ್ವರನಾದಂ ೪೧

ವ. ಅದೆಂತೆಂದೊಡಿಂತು ವಿರಾಜಿಸುತ್ತುಮಿರ್ಪ ಭದ್ರಪಾಗ್ರಜನಪ್ಪ ಚೌಡಪನ ಸ್ವಪ್ನ ದೊಳ್ ಶ್ರೀಮತ್ಪರಮೇಶ್ವರಂ ಮನಂಗೊಳಿಪ್ಪ ವೃದ್ಧ ಜಂಗಮಸ್ವರೂಪದಿಂ ಪ್ರಸನ್ನನಾಗಿ ಕೆಳದಿಪುರವರಪಡೆಯೊಳ್ ಸೀಗೆವಳ್ಳಿಯೆಂಬ ತಾಣದೊಳ್ ತರುಗುಲ್ಮಲತಾಪ್ರತಾ ನಾವೃತಮಾದ ಸೀಗೆವೆಳೆಯ ಮಧ್ಯದೊಳ್ ರಾಮೇಶ್ವರನೆಂಬ ಮಹಾದಿವ್ಯಲಿಂಗಂ ನೆಲೆಸಿರ್ಪುದಾಲಿಂಗಂ ಬಹುಕಾಲಮಾರಭ್ಯ ವಲ್ಮೀಕಾಚ್ಛಾದಿತಮಾಗಿರ್ಪುದಲ್ಲಿ ತಲ್ಲಿಂ ಗಮಿರ್ಪುದರ್ಕೆ ಕುರುಹೇನೆಂದೊಡೆ ನಿನ್ನ ಮನೆಯೊಳೆಸವ ಕಪಿಲೆವಣ್ಣದ ಪಸು ಕರು ವೆರಸಾತಾಣಮನೈದಿ ನಿಂದಾ ಪುತ್ತದ ಮೇಗಡೆಯೊಳ್ ಪ್ರತಿದಿನಂ ಪಾಲ್ಗರೆದು ಬರು ತಿರ್ಪುದೆ ಕುರುಹಾಲಿಂಗಮುಂ ಜನರ ಕಣ್ಮನಕ್ಕೆ ಗೋಚರಮಪ್ಪಂತು ನಿಮಿರ್ಚಿಸಿ ತದ್ರಾಮೇಶ್ವರಲಿಂಗಮಂ ಸದ್ಭಕ್ತಿಯಿಂದರ್ಚಿಸಲ್ ನಿನಗಖಂಡಪೃಥ್ವೀಪತಿತ್ವಂ ಕೈಸಾರ್ಪು ದೆಂದುಸಿರ್ದಾ ಜಂಗಮಮೂರ್ತಿಯಂತರ್ಧಾನಮನೈದಲೆಚ್ಚೆತ್ತು ಪರಮಹರ್ಷಿತನಾಗಿ ನಿಜಮಾತೃವಪ್ಪ ಬಸವಾಂಬಿಕೆಯೊಳಿಂತು ಕಂಡ ಸ್ವಪ್ನವನುಸಿರಲದಂ ಕೇಳ್ದಂತು

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ವಪ್ನದೊಳ್ ನಿರೂಪಿಸಿ ಪೋದ ಜಂಗಮಮೂರ್ತಿ ಸಾಕ್ಷಾತ್ಪರಮೇಶ್ವರನೆಂಬುದೆ ನಿಶ್ಚಯಮಾ ರಾಮೇಶ್ವರಲಿಂಗಕ್ಕೆ ಭಕ್ತಿಯೊಳ್ ನಡೆಕೊಂಡೊಡೆ ಮುಂದೆ ನಿನಗೆ ಮಹಾಭಿವೃದ್ಧಿಯುಂಟದರ್ಕೆ ಸಂದೆಗಮಿಲ್ಲೆಂದುಸಿರಲಂತಾ ಮಾತಂ ಕೇಳ್ದು ಮರುದೆವಸಂ ಬೇಹಚರರಂ ಕಾಯ್ಪಿಕ್ಕಿ ನಿಜಮಂದಿರದೊಳಿರ್ಪ ಕಪಿಲೆವಣ್ಣದ ಪಸುವಾ ಪುತ್ತದೆಡೆಗೈದಿ ಸುರಭಿಯಂ ಕರೆದು ಬರ್ಪುದಂ ಗೋರಕ್ಷಕರ ಮುಖದಿಂದರಿದಲ್ಲಿಗೈದಿಯಾ ಪುತ್ತವನಗುಳಿಸಿ ನೋಡಲದರೊಳ್ ಕಂಗೊಳಿಸುತಿರ್ಪ ಮಂಗಲಮೂರ್ತಿಯಪ್ಪ ಶ್ರೀರಾಮೇಶ್ವರಲಿಂಗಮಿರಲ್ಕಂಡು ವಿಸ್ಮಿತನಾಗಿ ಕರಸರೋಜಮಂ ಮುಗಿದು ಭಯಭರಿತಭಕ್ತಿಯಿಂ ಪೊಡಮಟ್ಟು ನುತಿಸಿ ಬಳಿಕಾತರುಗುಲ್ಮಲತಾನನೀಕಾಕುಂಜಂಗಳಂ ಸವರ್ದಾ ತಾಣಮಂ ಮನೋಹರಮಪ್ಪಂತು ಸೈತುಗೊಳಿಸಿ ತತ್ಕಾಲೋಚಿತಮಾದ ತೃಣಕುಟಿಯುಂ ನಿರ್ಮಿಸಿ ನಿತ್ಯಮಾ ಲಿಂಗಕ್ಕಂ ಧೂಪದೀಪನೈವೇದ್ಯಂ ನಡೆವಂತು ಕಟ್ಟಲೆಯುಂ ರಚಿಸಿ ಪ್ರತಿದಿನಂಗಳೊಳ್ ತಾಂ ಪಳ್ಳಿವಯಲಿಂದೆಳ್ತಂದಾ ಲಿಂಗಮಂ ಭಜಿಸಿ ಪೋಪ ನಿಯಮಮುಮಂ ಮಾಡಿಕೊಂಡಿಂತು ವರ್ತಿಸುತ್ತುಮಿರ್ದು ಕತಿಪಯದಿನಂಗಳ್ ಪೋಗಲೊಡನಾ ಚೌಡಪನೊಂದುದಿನಮೊಳೆಂದಿನಂತೆ ನಿಜಾಲಯದಿಂ ಪೊರಮಟ್ಟು ತಾಂ ಕೃಷ್ಯಾರಂಭಮಂ ರಚಿ[1]ಯಿಪ[1] ಶಾಲೀಕ್ಷೇತ್ರದೆಡೆಗೈದುತ್ತುಮಿರಲಾ [2]ಪ್ರಸ್ಥಾನ[2]ದೊಳ್

ಸರಟಂ ಚೌಡಪನೈದುತಿರ್ಪ ಪಥಕಂ ತಾನೈದಿ ಕಾಣ್ಬಂದದಿಂ
ಸಿರಮಂ ಪಾಯ್ಕಲಭೀಕ್ಷಿಸುತ್ತುಮದನೆಳ್ಚಟ್ಟಲ್ಕೆಲಕ್ಕೈದಿ ಮಾ
ಮರನಂ ಶೀಘ್ರದೊಳೇರ್ದುಮಲ್ಲಿ ಸಿರಮಂ ಪಾಯ್ಕುತ್ತಿರಲ್ ನೋಡುತ
ಚ್ಚರಿವಟ್ಟುಜ್ಜ್ವಲಿಸುತ್ತುಮಿರ್ಪ ವರಶಾಲೀಕ್ಷೇತ್ರಮಂ ಪೊರ್ದಿದಂ ೪೨

ಬಳಿಕಾ ಚೌಡಪನೊಪ್ಪುವ
ಕಳಮಕ್ಷೇತ್ರಮನಭೀಕ್ಷಿಸುತೆ ತತ್ಪ್ರತ್ಯಂ
ಗಳನಾರಯ್ದು ಬಳಲ್ದು
ಜ್ಜ್ವಲಿಸುವ ಮಾಮರನ ತಣ್ಣೆಳಲನುರೆ ಸಾರ್ದಂ ೪೩

ಆ ಗರುವಂ ವಿಗತಶ್ರಮ
ನಾಗಿ ತದುರ್ವೀಜಮೂಲದೊಳ್ಸುಳಿವೆಲರ್ಗಂ
ಮೈಗೊಟ್ಟು ಗಾಢನಿದ್ರಾ
ಯೋಗದೆ ಮರೆದೊರಗಿರಲ್ತದಂಬಿಕೆಯಿತ್ತಂ ೪೪

---

[1] ಸಲು (ಕ) [2] ಸ್ಥಾನ (ಬ)

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಸುತನನುಣಬರ ತಳುವಿದ
ಪರಿಯೇಂ ಕಾರಣಮೊ ನೋೞ್ಪೆನೆನುತಾಲಯದಿಂ
ಪೊರಮಟ್ಟು ಗರ್ದೆಯುಂ ಸಾ
ರ್ದರಸುತೆ ಮಾಮರನ ಮೂಲಮಂ ನೆರೆ ಸಾರ್ದಳ್ ೪೫

ಆ ಮಾಮರದಡಿಯೊಳ್ನಿ
ದ್ರಾಮುದ್ರಿತನೇತ್ರನಾಗಿ ಮಲಗಿಹ ಸುತನಂ
ಪ್ರೇಮದೊಳೀಕ್ಷಿಸುತಿರಲು
ದ್ದಾಮಾಹಿಯದೊಂದು ಚೌಡಪನ ಶಿರವೆಡೆಯೊಳ್ ೪೬

ಪೆಡೆಯಾಡುತ್ತಿರಲೀಕ್ಷಿಸಿ
ಕಡುಚೋದ್ಯಂಬಟ್ಟು ಮಗನನೆಬ್ಬಿಸೆ ಮುಳಿಸಿಂ
ಕಡಿದಪ್ಪುದೆಂಬತಿಭಯದಿಂ
ಮಿಡುಕುತೆ ಸಿಂದೆಮೆಯನಿಕ್ಕದೀಕ್ಷಿಸುತಿರ್ದಳ್ ೪೭

ವ. ಇಂತು ನಿಂದು ನಿಟ್ಟಿಸುತಿರಲ್ ಚೌಡಪನ ಶಿರದ ಮೇಗಡೆಯೊಳ್ ನಲಿನಲಿದು ಪೆಡೆಯಾಡಿ ೞಲವುಂ ಪೊಳ್ತು ಪೋಗಲೊಡನಾ ಸರ್ಪಂ ಮೆಲ್ಲಸಿಳಿದು ತಾನೇ ಪರಿದು ಪೋಗುತ್ತುಮಿರಲಾ ಬಸವಮಾಂಬಿಕೆಯೆಯ್ತಂದು ಮರೆಮೊರಗಿರ್ಪ ಸುತನನೆೞ್ಚರಿಸಿ ಕುಳ್ಳಿರಿಸಿ ತನ್ಮಸ್ತಕದ ಮೇಗಡೆಯೊಳ್ ಸರ್ಪಂ ನಲಿನಲಿದು ಪೆಡೆಯಾಡಿದ ವೃತ್ತಾಂತಮನುಸಿರ್ದು ಪುಣ್ಯಾಪಶದಿಂ ಬರ್ದುಕಿದೆಯೆಂದತಿವ್ಯಾಮೋಹದಿಂ ಮಗನಂ ಮುದ್ದಿಸಿ ಗಾಢಾಲಿಂಗನಂಗೆಯ್ದೊಡನೆ ಪರಿದು ಪೋಪ ಪಾವಂ ತೋರಲಾಗಳಾ ಸರ್ಪಂ ತನ್ನ ಪೆಡೆಯನೆತ್ತಿಕೊಂಡಿವರಂ ತಿರಿತಿರಿಗಿ ನೋಡುತ್ತುಂ ಮೆಲ್ಲಮೆಲ್ಲನೆಯ್ದುತ್ತುಂ ಸನ್ನೆದೋರಿ ಕರೆದ ಭಾವಮಂ ತೋರುತ್ತುಂ ಪರಿಯುತ್ತಿರಲಿವರದರ ಪಿಂಗಡೆಯೊಳ್ಬೆಂಬಳಿವಿಡಿದೆಯ್ದಿ ನೋಡುತ್ತುಮಿರಲಾ ಸರ್ಪಂ ನಿಕ್ಷೇಪಮಿರ್ದ ಶಾಲೀಕ್ಷೇತ್ರನೆಡೆಗಿೞಿದಲ್ಲಿ ನಿಲ್ತಿವರ್ಗಳಂ ನೋಡಿ ತನ್ನ ಪೆಡೆಯನೆತ್ತಿ ಪೆಡೆಯಗ್ರದಿಂದಾ ತಾಣಮಂ ಮುಟ್ಟಿ ಮುಟ್ಟಿ ತೋರಿಸಿಯದೃಶ್ಯಮಾಗಲಿವರಿದ್ದು ಕಾರಣ ಸರ್ಪ ಮಹುದೇನಾದೊಡಮೀ ತಾಣಮಂ ಪರೀಕ್ಷಿಸಿ ನೋಡಲ್ವೇೞ್ಕುಂದು ನಿಶ್ಚಯಿಸಿಯಾ ತಾಣಮಂ ಕುರುಪಿಟ್ಟು ಮನೆಗೆಯ್ದಿ ನಿಜಾನುಜನೊಡನೀ ವೃತ್ತಾಂತಮನುಸಿರ್ದೊಡನಿರ್ವರ್ ಸಂತಸದಿಂ ಮಜ್ಜನಶಿವಾರ್ಚನಭೋಜನಾದಿಗಳಂ ರಚಿಸಿ ಬಳಿಕಂ ಪರಿಮಿತರಾದಾಪ್ತ ಜನರ್ವೆರಸು ಕಳಮಕ್ಷೇತ್ರಮಂ ಸಾರ್ದು ಕುರುಪಿಟ್ಟ ತಾಣದೆಡೆಗೆಯ್ದಿ ಹಲಮಂ ಕಟ್ಟಿಸಿ ಪೂಡಿಸಲಾಗಳಾ ನೇಗಿಲಮೊನೆಗೆ ನಿಕ್ಷೇಪಕಟಾಹದ ಬಳೆಗಳ್ ಸಿಲುಂಕಿ ಘಣಘಣರೆಂಬ ದನಿಯಾಗಲಾಗಳಾ ಸ್ಥಳಮನಗುಳಿಸಿ ನೋಡಲಲ್ಲಿ ಭೂರಿನಿಕ್ಷೇಪಕಟಾಹಂ

Sri Vidyabharathi Book Centre, Sringeri

CC-O. In Public Domain. Digitized by eGangotri

ನಾಗರಮರಿಯೆಂಬ ಕತ್ತಿಸಹಿತಮಿರಲಾ ನಿಕ್ಷೇಪಮಂ ವಶಂಮಾಡಿ ಮರೆಯಾಗಿ ಬೈತಿರಿಸಿ ಕೊಂಡಾ ತಾಣದೊಳ್ ತತ್ಕಾಲೋಚಿತಮಾದ ಗೃಹಮಂ ನಿರ್ಮಿಸಿ ಕುಟುಂಬಸಹಿತಂ ತಾವಲ್ಲಿ ನಿಲ್ವಾವುದರಲ್ಲಿಯುಂ ಬಲಶಾಲಿಗಳೆನಿಸಿ ವರ್ತಿಸುತ್ತುಮಿರುತಿರ್ದು ಕತಿಪಯ ದಿನಂಗಳ್ ಪೋಗಲೊಡನೆ

ಮೆರೆವಾ ಚೌಡಪಮನ್ನೆಯಂಗೆ ಶುಭಯುಕ್ಕೇಂದ್ರತ್ರಿಕೋಣಂಗಳಿಂ
ಪರಮೋಚ್ಚಸ್ಥಿತಸದ್ಗ್ರಹತ್ರಯಗಳಿಂ ಕ್ರೂರಾರಿದುಶ್ಚಿಕ್ಯದಿಂ
ಬೆರೆದುತ್ಕೃಷ್ಟಸುಲಗ್ನದೊಳ್ಪ್ರಬಲಚಂದ್ರಾವಸ್ಥೆಯೊಳ್ಪುಟ್ಟಿದಂ
ಸ್ಫುರದತ್ಯುನ್ನತರಾಜಯೋಗದೊಳೆ ಲೋಕಾನಂದನಂ ನಂದನಂ ೪೮

ಆ ಸುತನೊಗೆದ ಮುಹೂರ್ತದ
ಭಾಸುರತರರಾಜಯೋಗಮುಖಫಲಗಳುಮಂ
ಜೋಸಿಗರ ಮುಖದೆ ಕೇಳ್ದು ಮ
ಹಾಸಂತೋಷಾಂಬುಧಿಯೊಳೋಲಾಡುತ್ತುಂ ೪೯

ಬಗೆಬಗೆಯ ದಾನಧರ್ಮಾ
ದಿಗಳಂ ವಿರಚಿಸಿ ಸದಾಶಿವಯ್ಯನೆನುತ್ತುಂ
ಸೊಗಯಿಸುವಭಿಧಾನವನಿ
ಟ್ಟಗಣಿತಹರ್ಷದೊಳೆ ಚೌಡಪಂ ಪೋಷಿಸಿದಂ ೫೦

ವ. ಇಂತು ಪೋಷಿಸುತ್ತುಮಿರಲಾ ಬಾಲಕಂ ಬಾಲೇಂದುವಿನಂತೆ ಪ್ರತಿದಿನಂಗಳೊಳ್ ಪರಮಾಭಿವೃದ್ಧಿಯಂ ಪಡೆದು ವಿರಾಜಿಸುತ್ತುಮಿರಲಾ ಸುತನಂ ನಿಟ್ಟಿಸಿ ನಲಿಯುತ್ತುಂ ಮತ್ತಮಾ ಕುಮಾರಂಗೆ ಯೌವನೋದಯಮಾಗಲೊಡನೆ ಸತ್ಕುಲಸಂಭವೆಯರಪ್ಪ ವೀರಮಾಂಬೆ ಭದ್ರಮಾಂಬೆಯೆಂಬಿರ್ವರ್ ಕನ್ಯಾರತ್ನಂಗಳನತಿವಿಭವದಿಂ ವಿವಾಹಮಂ ರಚಿಸಿ ಕೆಳದಿ ರಾಮೇಶ್ವರಗೃಹಮಂ ದಾರುಮಯವನಾಗಿಸಿ ಸದ್ಭಕ್ತಿಯಿಂದರ್ಚಿಸುತ್ತುಂ ತತ್ಕೃಪಾಕಟಾಕ್ಷಮೂಲದಿಂ ದಿನದಿನದೊಳ್ ಭಾಗ್ಯಾಭಿವೃದ್ಧಿಯಂ ಪಡೆದು ನಾಲ್ದೆಸೆಯೊಳ್ ಪರಮಪ್ರಖ್ಯಾತಿವೆತ್ತು ವರ್ತಿಸುತ್ತುಮಿರ್ದನಂತುಮಲ್ಲದೆಯುಂ

ಒತ್ತಿ ಪೊಡೆಪೆಡವಲಂಗಳ
ಒತ್ತರಮಾದಿಳೆಗಳಂ ಪರಗ್ರಾಮಗಳಂ
ಗುತ್ತಿಗೆಯನೆಸಗಿ ಮಿಗೆ ಪೆಸೆ
ವೆತ್ತಾತಂ ದಿನದಿನಗಳೊಳಭಿವರ್ಧಿಸಿದಂ ೫೧

Sri Vidyabharathi Book Centre, Sringeri

CC-O. In Public Domain. Digitized by eGangotri

ಚರರನನುಚರರನದಟರ,
ನುರುತರ ಪರಿಜನರನಂಗರಕ್ಷಕಸಾಮಂ
ತರ ನೆರಹಿ ಭುಜಬಲಾಢ್ಯರೊ
ಳುರೆ ಬಲ್ಲಿದನೆನಿಸಿ ಚೌಡಪಂ ರೂಢಿಸಿದಂ ೫೨

ಗುರುಲಿಂಗಜಂಗಮಾರ್ಚನ
ನಿರತಂ ವರವೀರಶೈವಮಾರ್ಗಾನುಗ ಸ
ಚ್ಚರಿತನುರುದಾನಧರ್ಮಾ
ಚರಣೈಕಪ್ರಥಿತನೆನಿಸಿ ರಾರಾಜಿಸಿದಂ ೫೩

ವ. ಇಂತು ಚೌಡಪಂ ರಾರಾಜಿಪುತಿರ್ದನೀ ಕಥಾಸಂದರ್ಭಕೋಸುಗಂ ವಿದ್ಯಾನಗರೀ ರತ್ನಸಿಂಹಾಸನಾಧೀಶ್ವರರಾದ ಹರಿಹರರಾಯ ಬುಕ್ಕರಾಯ ಮುಂತಾದ ರಾಯರ ವಂಶ ಪರಂಪರಾವಿವರಣಮಂ ಸಂಕ್ಷೇಪದಿಂ ಪೇಳ್ವೆನದೆಂತೆಂದೊಡೆ, ಶಿವಾಂಶೀಭೂತರೆನಿಸಿ ಕಾರಣಪುರುಷರಾಗಿ ಜನಿಸಿ ಬ್ರಹ್ಮಾಂಶೀಭೂತನಾದ ಮಂಡನಮಿಶ್ರನ ಕೂಡೆ ವಾದಮಂ ಮಾಡಿ ಜಯಿಸಿ ಅಮರುಕವೆಂಬ ಗ್ರಂಥಮಂ ಮಾಡಿ ಶಾರದಾಂಬೆಯಂ ಶೃಂಗಪುರದ ಪೀಠಕ್ಕೆ ತಂದು ನಿಲಿಸಿ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯಷಡ್ದರ್ಶನಸ್ಥಾಪನಾಚಾರ್ಯರಾದ ಜಗದ್ಗುರುಗಳೆಂದು ಪರಮ ಪ್ರಖ್ಯಾತಿಯಂ ಪಡೆದ ಶಂಕರಾಚಾರ್ಯರ್ ಪಾದಪದ್ಮಾಚಾರ್ಯರ್, ತೋಟಕಾಚಾರ್ಯರ್ ಹಸ್ತಾಮಲಕಾಚಾರ್ಯರ್ ಸುರೇಶ್ವರಾಚಾರ್ಯರ್ ಇಂತು ನಾಲ್ವರ್ ಶಿಷ್ಯರಂ ಮಾಡಿಕೊಂಡು ಪೂರ್ವಪಶ್ಚಿಮ ದಕ್ಷಿಣೋತ್ತರ ಸಮುದ್ರಾಂತಮಾಗಿ ಸ್ವಸಂಕೇತನಾಮದಲ್ಲಿ ಮಠಂಗಳಂ ಕಟ್ಟಿಸಿ ತತ್ತತ್ಸ್ಥಲಂಗಳಲ್ಲಿ ಸ್ವಶಿಷ್ಯರಂ ನೆಲೆಗೊಳಿಸಿ ತಾಂ ವಿದ್ಯಾಶಂಕರನೆಂಬೊಬ್ಬ ಶಿಷ್ಯನಂ ಮಾಡಿಕೊಂಡಿರುತಿರ್ದು ಮುಕ್ತರಾಗಲಾಗಿಯಾಮೇಲೆಯುತ್ತರದಿಕ್ಕಿನ ಕೃಷ್ಣಾವೇಣೀನದೀತೀರದಲ್ಲಿ ಗೃಹಸ್ಥಾಶ್ರಮದಲ್ಲಿರುತಿರ್ದ ಮಾಧವಭಟ್ಟನೆಂಬಾತಂ ದಕ್ಷಿಣದೇಶಕ್ಕೆ ಬಂದು ಕುಂತಳದೇಶದೊಳಗಣ ಪಂಪಾಕ್ಷೇತ್ರದಲ್ಲಿ ನಿಂದು ಭಾಗ್ಯಾಪೇಕ್ಷೆಯಾಗಿ ಶ್ರೀಚಕ್ರಯಂತ್ರಪುರಶ್ಚರಣಮಂ ಮಾಡುತ್ತುಮಿರಲಾಗಿ ಅಮ್ಮನವರು ಪ್ರಸನ್ನರಾಗಿ ನಿನಗಿಹಜನ್ಮದಲ್ಲಿ ಭಾಗ್ಯಪ್ರಾಪ್ತಿಯಿಲ್ಲಮುತ್ತರ ಜನ್ಮದಲ್ಲಿ ಕೊಟ್ಟೆನೆನಲಾಗಿಯಾವಾತಂ ಮನದೆಗೊಂಡು ಆ ಮಾಧವಭಟ್ಟಂ ಶಂಕರಾಚಾರ್ಯರ ಶಿಷ್ಯರಾದ ವಿದ್ಯಾಶಂಕರರಿಂದೆ ಸಂನ್ಯಾಸಾಶ್ರಮಮನಂಗೀಕರಿಸಿ ವಿದ್ಯಾರಣ್ಯರೆಂದು ಪ್ರಸಿದ್ಧನಾಮಾಂಕಿತರಾಗಿರುತುಮಿರಲಾಗಿ, “ಈ ದೇಶಮಂ ಜೈನರ್ ಕಿರಾತರ್ ಮುಂತಾದವರ್ಕಳಾಕ್ರಮಿಸಿ ತಮ್ಮ ತಮ್ಮ ಇಚ್ಛಾನುಕೂಲಮಿರ್ದ ರೀತಿಯೊಳ್ ನಡೆಕೊಳ್ಳರ್, ಈ ಮಂಡಲದೊಳೊಂದು ಪಟ್ಟಣಮಂ ನಿರ್ಮಾಣಂಗೈಸಿ

Sri Vidyabharathi Book Centre, Sringeri

CC-O. In Public Domain. Digitized by eGangotri

ದುಷ್ಟನಿಗ್ರಹ ಶಿಷ್ಟಪರಿಪಾಲನವಂ ಮಾಡಿ ನಡೆಕೊಳ್ವಂತು ರಾಯಪಟ್ಟವಂ ಕಟ್ಟುವುದು” ಎಂದು ಅಮ್ಮನವರಿಂ ಸ್ವಪ್ನವಾಗಲಾಗಿ ಆ ಸ್ವಪ್ನಾರ್ಥವಂ ಮನದೊಳಿಟ್ಟು ಕತಿಪಯ ದಿನಸಂ ವರ್ತಿಸುತ್ತುಮಿರಲಾಗಿಯುತ್ತರದೇಶದಿಂದೆ ಸಹೋದರರಾದ ಹರಿಹರ ಬುಕ್ಕರೆಂಬ ಬಡಕ್ಷತ್ರಿಯರುಂ ಈ ದಕ್ಷಿಣರಾಜ್ಯಕ್ಕೈತಂದು ಕುರುಬರಲ್ಲಿ ನಂಟತನವಂ ಮಾಡಿ ಹೆಣ್ಣು ತಂದು ಮದುವೆಯಾಗಿ ಸುಖವಾಸಿಗಳಾಗಿರುತ್ತುಮಿರಲಾಗಿ ಅವರೊಳ್ ಪಿರಿಯನಾದ ಹರಿಹರಗೆ ನೀನುಂ ಬುಕ್ಕನುಂ ಸಹ ವಿದ್ಯಾರಣ್ಯರ ಬಳಿಗೆ ಹೋಗಿ ಆಶ್ರಯಿಸಲಾಗಿ ಮಹದೈಶ್ವರ್ಯಂ ಬಂದೀತೆಂದು ಸ್ವಪ್ನವಾಗಲಾಗಿ ಆ ಮೇಲೆ ಆ ಹರಿಹರಬುಕ್ಕರ್ ಹಂಪೆಗೆ ಬಂದು ವಿದ್ಯಾರಣ್ಯರಂ ಕಂಡು ಸಂಧಿಸಿ ಸ್ವಪ್ನಾಭಿಪ್ರಾಯವನುಸಿರಲಾಗಿ ಆಗ ವಿದ್ಯಾರಣ್ಯರ್ ಹಂಪೆಯ ಸ್ಥಳದವರಂ ಕರೆಯಿಸಿ ವಿಚಾರವಂ ಮಾಡಲಾಗಿ ಅವರ್ಪೇಳಿದುದು :—

ಪೂರ್ವದೊಳ್ ಸೂರ್ಯವಂಶಜನಾದ ತ್ರಿಶಂಕು ಮಹಾರಾಯಂ ಪಂಪಾಕ್ಷೇತ್ರಕ್ಕೆ ಬಂದು ಈ ವಿರೂಪಾಕ್ಷಲಿಂಗಂ ಪ್ರಾದುರ್ಭವಲಿಂಗವೋ ಪ್ರತಿಷ್ಠಾಲಿಂಗವೋ ಯೆಂದು ಕೇಳಿದಲ್ಲಿ ಈ ಲಿಂಗಂ ಜ್ಯೋತಿರ್ಮಯವಾದ ಲಿಂಗಂ, ಈ ಲಿಂಗದ ಮಹಿಮೆಯಂ ಪೇಳ್ವುದಕ್ಕೆ ಬ್ರಹ್ಮದೇವರಿಗಾದರೂ ಅಸಾಧ್ಯವೆಮ್ಮಪಾಡೇನೆನಲಾಗಿ ಆ ಮಾತಂ ಕೇಳ್ದು ಆ ತ್ರಿಶಂಕು ಮಹಾರಾಯಂ ಪ್ರತಿಷ್ಠಾಲಿಂಗವೋ ಯೆಂದು ಕೇಳ್ದ ದೋಷನಿವೃತ್ತಿಗೋಸುಗಂ ಕೃಷ್ಣವೇಣೀನದೀತೀರಮಾರಭ್ಯ ಸೇತುಪರ್ಯಂತಂ ಮೂರುವರೆಕೋಟಿರಾಜ್ಯವನೀ ವಿರೂಪಾಕ್ಷದೇವರ್ಗೆ ಧಾರೆಯನೆರೆದನೆಂದು ಸ್ಥಳದವರ್ಪೇಳಲ್ ಆ ಮಾತಂ ಕೇಳ್ದಾ ವಿದ್ಯಾರಣ್ಯರ್ ಹರಹರಬುಕ್ಕರಂ ಕರೆದು ಈ ರಾಜ್ಯಕ್ಕೆಲ್ಲಂ ವಿರೂಪಾಕ್ಷಸ್ವಾಮಿಯೆ ಕರ್ತಂ, ನೀಂ ಆ ದೇವರ ಭಕ್ತರಾಗಿ ವರ್ತಿಸುತ್ತುಂ ಶ್ರೀ ವಿರೂಪಾಕ್ಷನೆಂದೊಪ್ಪವಂ ಹಾಕಿ ನಡೆಕೊಂಡು ಸದ್ಧರ್ಮದಿಂ ರಾಜ್ಯವನಾಳಿಕೊಂಡಿರ್ಪುದೆಂದು ಕಟ್ಟಳೆಯಂ ರಚಿಸಿ ಆ ಹರಿಹರಗೆ ಹರಿಹರರಾಯನೆಂದು ಪೆಸರಿಟ್ಟು ವಿದ್ಯಾನಗರಮೆಂಬ ಪಟ್ಟಣಮಂ ನಿರ್ಮಾಣಂ ಮಾಡಿಸುವ ಕಾಲದಲ್ಲಿಯಾ ಪಟ್ಟಣದ ಕೆಸರ್ಗಲ್ಲಮುಹೂರ್ತಕಾಲದಲ್ಲಿ ವಿಧಿವಶದಿಂದೊರ್ವ ದಾಸನೂದಿದ ಶಂಖಧ್ವನಿಯಿಂ ವಿದ್ಯಾರಣ್ಯರ್ ನಿಯಾಮಕಂಗೈದ ಲಗ್ನಂ ವ್ಯತ್ಯಾಸವಾಗಲಾಗಿ ಈ ಪಟ್ಟಣಂ ಕೆಲವು ವರ್ಷದ ಮೇಲೆ ತುರುಷ್ಕಾಧೀನವಾದೀತೆಂದು ವಿದ್ಯಾರಣ್ಯಾತ್ಮಕ ಕಾಲಜ್ಞಾನವೆಂದು ಕೆಲವು ಕಾಲಜ್ಞಾನಗ್ರಂಥಮಂ ಬರೆಸಿ, ಆ ವಿದ್ಯಾರಣ್ಯರ್ ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನಶಕ ೧೨೫೮ನೆಯ ಸಂವತ್ಸರದಲ್ಲಿ ಆ ವಿದ್ಯಾನಗರೀರತ್ನಸಿಂಹಾಸನದಲ್ಲಿ ಹರಿಹರರಾಯಂಗೆ ಪಟ್ಟಮಂಕಟ್ಟಿ ನಿಲಿಸಿದರ್; ಹೀಗಿರಲಾಗಿ ಕೆಲವು ದಿವಸದ ಮೇಲೆ ರೇವಣಸಿದ್ಧನೆಂಬೊಬ್ಬ ಜಂಗಮಸ್ವರೂಪಗಣಾಧೀಶ್ವರರು ಒಂದು ದಿವ್ಯಲಿಂಗಮಂ ವಿದ್ಯಾರಣ್ಯರ ವಶಕ್ಕೆ ತಂದುಕೊಟ್ಟು ಈ ಲಿಂಗಂ ಚಂದ್ರಮೌಳೀಶ್ವರಂ ಈ ಲಿಂಗಮಂ ನಿತ್ಯಂ ಪೂಜೆಗೈವುದೆಂದುಸಿರ್ದಂತರ್ಧಾನನಾಗಿ ಪೋಗಲೊಡನಾ ವಿದ್ಯಾರಣ್ಯರ್ ಶೃಂಗಪುರಕ್ಕೈತಂದು ಶೃಂಗೇರೀಮೂಲಸಂಸ್ಥಾನದ

Sri Vidyabharathi Book Centre, Sringeri

ಮಠದ[1]ಲ್ಲಿ[1] ಆ ಚಂದ್ರಮೌಳೀಶ್ವರನ ಪೂಜೆಯಂ ಮಾಡಿಕೊಂಡಿ[2]ರ್ದು[2] ಶಿಷ್ಯಪರಂಪರೆಯ[3]ಲ್ಲಿಯುಂ[3] ನಡೆಕೊಂಡು ಬಾಹಂತು ಕಟ್ಟಲೆಯಂ ಮಾಡಿಸಿದರ್ ಶೃಂಗಪು[4]ರದ[4] ಸಂಸ್ಥಾನದೊಳವ[5]ರಂ[5]ತು ವರ್ತಿಸುತ್ತುಮಿರಲಿತ್ತಂ ವಿದ್ಯಾನಗರಿ[6]ಯುಂ[6] ರಾಯಸಂಸ್ಥಾನವೆಂದು ಜಗತ್ಪ್ರಖ್ಯಾತ[7]ವಾ[7]ಯ್ತು ಆ ರತ್ನಸಿಂಹಾಸನವನಾ[8]ಳ್ದ[8] ರಾಯರ ವಂಶ ಪರಂಪರಾವಿವರಣಂ

ಶ್ಲೋ|| ಹ ಬು ಹೋ ವಿ ಬು ದೇ ರಾ ವಿ ದೇ ವಿ ಮಾ ರಾ ವಿ ಸಂಜ್ಞಿತಾಃ |
ತ್ರಯೋದಶ ಮಹೀಪಾಲಾ ರತ್ನಸಿಂಹಾಸನಾಧಿಪಾಃ ||
ದ್ವಾತ್ರಿಂಶದುತ್ತರಾನೇತೇ ದ್ವಿಶತಾಬ್ದಾನ್ ಕ್ಷಿತೌ ಸ್ಥಿತಾಃ * ||

ವ|| ತದನಂತರಂ

ಶ್ಲೋ|| ಪ್ರೌಢೋ ದ್ವಾದಶ ವರ್ಷಾಣಿ ದಶ ವೀರನೃಸಿಂಹರಾಟ್ |
ತತಸ್ಸಾಳ್ವನೃಸಿಂಹಾಖ್ಯೋ ದ್ವಾದಶ ತ್ರೀಂಸ್ತತೋಽಚ್ಯುತಃ ||

---

1 ಲ್ಲು (ಕಗಬಮ) 2 ರ್ಪುದಂತು (ಬ) 3 ಲ್ಲು (ಒಕಗ) 4 ರ (ಒ) 5 ರಿಂ (ಒಕಗ) 6 ಯು (ಒಕಗ) 7 ಮಾ (ಒಕಗ) 8 ಳ್ವ (ಒಕಗ)

* ಮೇಲೆ ಬರೆದ ಶ್ಲೋಕಸಂಜ್ಞಾರ್ಥಪ್ರಕಾರ ವಿದ್ಯಾನಗರೀ ರತ್ನಸಿಂಹಾಸನವನಾಳ್ವ ರಾಯರ ವಿವರಣ ; ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರುಷ ೧ ನೆಯ ಸಂವತ್ಸರದ ದಿವಸದಾರಭ್ಯ

ಹರಿಹರರಾಯ ವರುಷ	ಬುಕ್ಕರಾಯ ವ|	ಹರಿಹರರಾಯ ವ|
ವಿರೂಪಾಕ್ಷರಾಯ ವರುಷ	ಬುಕ್ಕರಾಯ ವ|	ದೇವರಾಯ ವ|
ರಾಮರಾಯ ವರುಷ	ವಿರೂಪಾಕ್ಷರಾಯ ವ|	ದೇವರಾಯ ವ|
ವಿಠಲರಾಯ ವರುಷ	ಮಲ್ಲಿಕಾರ್ಜುನರಾಯ ವ|	ರಾಮರಾಯ ವ||

ವಿರೂಪಾಕ್ಷರಾಯ ವ| ಅಂತು ಹರಿಹರರಾಯರಾರಭ್ಯ ಕಲುವು ೧೩ಕ್ಕೆ ಆಳಿದ ವರು ತದನಂತರವಾಳ್ದ ಕುರುಬರು ಕಲು ೩ಕ್ಕೆ ವರುಷ ತದನಂತರಂ ತುಳುವರಾಯ ವರುಷ ತದನಂತರ ಚೋಳೆಯಿರುವರು ಅಂತು ಆಳಿದ ರಾಯರ ಬಗೆ ೩ಕ್ಕೆ ವರುಷ (ಕಗಮ)

ಈಗ ಪ್ರಸಿದ್ಧವಾಗಿರುವ ವಿಜಯನಗರದ ಚರಿತ್ರೆಗಳಲ್ಲಿ ವಿಜಯನಗರದ ರಾಜರ ಪರಂಪರೆಯೂ ಅವರು ಆಳಿದ ಕಾಲವೂ ಇಲ್ಲಿ ಹೇಳಿದಂತಿಲ್ಲ. ಕೆಲವು ವಿಷಯಗಳಲ್ಲಿ ವ್ಯತ್ಯಾಸವಿದೆ. ಈ ಸಂಗತಿಯನ್ನು ಉಪೋದ್ಘಾತದಲ್ಲಿ ಸ್ವಲ್ಪಮಟ್ಟಿಗೆ ವಿಚಾರಮಾಡಿದ್ದೇವೆ.

CC-O. In Public Domain. Digitized by eGangotri

ಚತ್ವಾರಿಂಶತ್ತತಃ ಕೃಷ್ಣಸ್ತತೋ ದ್ವೇ ಚ ಸದಾಶಿವಃ ।
ಚತುರ್ವಿಂಶತಿ ವರ್ಷಾಣಿ ರಾಮರಾಜೋ ಮಹೀಪತಿಃ ।
ಏತೇ ಸಪ್ತ ಮಹೀಪಾಲಾಃ ರತ್ನಸಿಂಹಾಸನೇಶ್ವರಾಃ ॥†

ವ॥ ಈ ರಾಮರಾಯರ್ ರಾಜ್ಯವಾಳುತ್ತಿದ್ದ ಕಾಲದಲ್ಲಿ ಶಾಲಿವಾಹನ ಶಕ ವರ್ಷಂ ೧೪೮೭ನೆಯ ರಕ್ತಾಕ್ಷಿ ಸಂವತ್ಸರದ ಮಾಘಬಹುಳದಲ್ಲಿ ಈ ರಾಮರಾಯರಂ ವಿಜಾಪುರಂ ಭಾಗಾನಗರಂ ಅಮದಾನಗರಂ ಈ ಮೂರು (ರಾಜ್ಯಗಳ) ಪಾದುಶಾಹರೊಂದಾಗಿ ಮೋಸದ ಮೇಲೆ ಘಾತಸಂ ಮಾಡಲಾಗಿ ವಿದ್ಯಾನಗರಿ ವಿಸ್ಖಲಿತವಾಗಿ ಹೋಯಿತು ಆಮೇಲೆ ಸಂಕ್ಷೇಪದಲ್ಲಿ ಆಳಿದವರ ವಿವರಂ ಈ ರಾಮರಾಯರ ತರುವಾಯಂ ಅಲ್ಪಭೂಮಿ ಸ್ವಲ್ಪಗಜಾಶ್ವಪದಾತಿವೆರಸು ವೆಂಕಟಪತಿರಾಯಂ ವರ್ಷಂ ೩ [1]ಶ್ರೀ[1]ರಂಗರಾಯಂ ವರ್ಷಂ ೫ ಆಮೇಲೆ ಅಲ್ಲಿ ನಿಸ್ತರಿಸಲಾರದೆ ಆ ರಾಮರಾಯನ ಮಕ್ಕಳ್ ವೆಂಕಟಪತಿರಾಯಂ ಶ್ರೀರಂಗರಾಯಂ ಸಹ ಪೆನುಗೊಂಡೆಯಲ್ಲಿ ನಿಂದು ಆಳಿದುದು ಇದೆ ಶ್ರೀರಂಗರಾಯಂ ವರ್ಷಂ ೫ ವೆಂಕಟಪತಿರಾಯಂ ವರ್ಷಂ ೭ ರಾಮದೇವರಾಯಂ ವರ್ಷಂ ೬ ಮುದ್ದ ವೆಂಕಟಪತಿರಾಯಂ ವರ್ಷಂ ೫ ಶ್ರೀರಂಗರಾಯಂ ವರ್ಷಂ ೨೭ ಈ ಪೀಳಿಗೆ ಇಲ್ಲಿಗೆ ಸಮಾಪ್ತಂ

ಆನೆಗೊಂದಿಯಲ್ಲಿ ನಿಂದು ಆಳಿದವರ್ ಕೃಷ್ಣರಾಯನ ಅಳಿಯ ರಾಮರಾಯನ ದಾಯಾದಿಗಳ್ ಮರಿತಿಮ್ಮರಾಯನ ಮಕ್ಕಳ್ ರಾಯಲ್ಲಯ್ಯರಾಯಂ *ಈತನ ಮಕ್ಕಳ್ ಪೆದ್ದವೆಂಕಟಪತಿರಾಯಂ ಚಿಕ್ಕವೆಂಕಟಪತಿರಾಯಂ ಇವರ ಮಗಂ ರಾಮಪ್ಪರಾಯಂ ಇದು ವಿದ್ಯಾನಗರೀ ರತ್ನಸಿಂಹಾಸನಾಧೀಶ್ವರರಾದ ಹರಿಹರಬುಕ್ಕಾದಿರಾಯರ ವಂಶಪರಂಪರಾವಿವರಣಂ

ಇನ್ನು ಪ್ರಕೃತಕಥಾಸಂದರ್ಭಕ್ಕೆ ಸಂಗತಿಯೆಂತೆಂದೊಡೆ ಮುನ್ನೊರೆದ ಪಳ್ಳಿಯಲ ಬಸವಪ್ಪನ ಪುತ್ರನಾದ ಚೌಡಪಂ ಮುನ್ನುಸಿರ್ದಂತು ಭುಜಬಲಪರಾಕ್ರಮದಿಂ ವರ್ತಿಸುತ್ತುಮಿರಲಾಕಾಲದೊಳ್

ಕಂ॥ ಇಂತೆಸೆವ ಚೌಡಪನ ವೃ
ತ್ತಾಂತಂ ನಾಲ್ದೆಸೆಗೆ ಪರ್ಬೆ ವಿದ್ಯಾನಗರೀ

---

1 ತತ್ಪುತ್ರ ಶ್ರೀ (ಕ)

† ಈ ಶ್ಲೋಕ ಸುಜ್ಞಾನವಚನ ಪ್ರೌಢರಾಯ ವರ್ಷ ೧೨ ವೀರನೃಸಿಂಹರಾಯ ವರ್ಷ ೧೦ ಸಾಳ್ವನೃಸಿಂಹರಾಯ ವರ್ಷ ೧೨ ಅಚ್ಯುತರಾಯ ವ ೩ ಕೃಷ್ಣರಾಯ ವ ೪೦ ಸದಾಶಿವರಾಯ ವ ೨ ರಾಮರಾಯ ವ ೨೪ ಕಲುವು ೭ಕ್ಕೆ ವರ್ಷ ೧೨೩ (ಈ ಭಾಗ ಮ ಪ್ರತಿಯಲ್ಲಿ ಅಧಿಕವಾಗಿದೆ)

* ಈತನ ಮಕ್ಕಳು ಹಿರೇಮಗ ತಿಮ್ಮಪ್ಪರಾಯ ರಾಮರಾಯರು ಆ (ಕ) ಪ್ರತಿಯಲ್ಲಿ ಈ ಭಾಗ ಅಧಿಕವಾಗಿದೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಂತಾಚ್ಯುತರಾಯಂ ಗುಣ
ವಂತನಸೂಯಕರ ಮುಖದಿ ಕೇಳ್ದೀಕಥೆಯಂ ೫೪

ಪೊಡವಿಗಧೀಶರ್ ಪಿಸುಣರ
ನುಡಿಯಂ ಕೇಳ್ದರ್ಥದಾಸೆಯಿಂದುತ್ತಮರಂ
ಕಿಡಿಪುದಮಾರ್ಗಂ ಸಂತಸ
ಪಡುವುದೆ ಸನ್ಮಾರ್ಗವೆಂದು ಬಗೆದಿಂತೆಂದಂ ೫೫

ವ|| ಎಮಗೆ ತುರುಷ್ಕರುಂ ಶಬರರುಂ ಬಲವದ್ದ್ವಿಷರೆಂದೆನಿಪ್ಪರೀ ಸಮಯದೊಳಿಂತು ವರ್ತಿಪ ಪರಾಕ್ರಮಶಾಲಿಗಳಪ್ಪ ಶರ್ವಗಂ ಮಮತೆಯ ಭಕ್ತರಪ್ಪ ದೆಸೆವಂತರೆನಿಪ್ಪುರುಭಾಗಧೇಯರಪ್ಪಮಲಿನವೃತ್ತರಪ್ಪಿವರನಾದರದಿಂ ಬಸಗೈದನಂತರಂ

ಕಂ|| ಇವರ್ಗಳ ಮುಖದಿಂ ಮಾರ್ಮಲೆ
ತವರ್ಗಳನಂಕದೊಳೆ ನಿಗ್ರಹಂಗೈಸಿ ಮಹೋ
ತ್ಸವದಿಂದೆಲ್ಲರ್ ಪೊಗಳ್ವಂ
ತವನೀಮಂಡಲವನಾಳ್ವದಿಂತಿದು ಸುಮತಂ ೫೬

ವ|| ಇಂತೆಂದು ನಿಶ್ಚಯಂಗೈದನಂತರಂ ಸ್ವಸ್ತಿಶ್ರೀ ಸಮಸ್ತಭುವನಾಶ್ರಯ ಪೃಥ್ವೀವಲ್ಲಭ* ಶ್ರೀಮನ್ಮಹಾರಾಜಾಧಿರಾಜ ರಾಜಪರಮೇಶ್ವರಭಕ್ತ ಪರಮಭಟ್ಟಾರಕ ಸತ್ಯಾಶ್ರಯ ಪದವಾಕ್ಯಪ್ರಮಾಣಪಾರಾವಾರಪಾರೀಣ ಶ್ರೀಮನ್ಮಹಾಮಂಡಲೇಶ್ವರ ಪ್ರತ್ಯರ್ಥಿರಾಜವಿಭಾಡ* ಶ್ರೀವಿರೂಪಾಕ್ಷ ಪಾದಪದ್ಮಾರಾಧಕ‡ ಶ್ರೀವೀರಪ್ರತಾಪ ದಕ್ಷಿಣಸಮುದ್ರಾದಿ ನರ್ಮದಾನದ್ಯಂತಭೂಮಂಡಲೈಕಚ್ಛತ್ರಾಧಿಪ ಸಕಲವರ್ಣಾಶ್ರಮಾಚಾರಧರ್ಮಪ್ರತಿಪಾಲಕ‡ ಶ್ರೀವಿದ್ಯಾನಗರರಾಜಧಾನೀರತ್ನಸಿಂಹಾಸನಾಧೀಶ್ವರನಪ್ಪ ಕೃಷ್ಣರಾಯಂ ನಿಜಾಪ್ತ ಸಚಿವ ನಿಯೋಗಿಗಳೊಡನೀವೃತ್ತಾಂತಮಂ ಬಿತ್ತರಿಸಿ ಮಂತ್ರಾಲೋಚನೆಯಂ ರಚಿಸಿ ಸ್ವಮನೋಭಿಪ್ರಾಯಮನುಸಿರ್ದು ರಾಯಸಮಂ ಬರೆಸಿಯುಡುಗೊರೆವೆರಸು ತದುಚಿತನಿಯೋಗಿಜನರಂ ಪಳ್ಳಿವಯಲ್ಗೆ ಕಳುಪಿ ತುರಗಾಂದೋಳಿಕಾರೋಹಣಂಗೈಸಿ ಬಸವಪಾತ್ಮಜನಂ ಕರೆಸಿಯುಲುಪೆ ಪಡಿಬಿಡಾರಂಗಳಂ ಕೊಡಿಸಿಯುತ್ಸವಂಬಡಿಸಿ ಅನಂತರಮೊಂದು ಸಮಯದೊಳ್ ಪರಿಮಿತಜನರ್ವೆರಸೋಲಗವಿತ್ತು ಕುಳ್ಳಿರ್ದು ಚೌಡಪಭದ್ರಪರಂ ಮಿಾಪಕ್ಕೆ ಬರಿಸಿಯವರಿತ್ತುಪಹಾರಾರ್ಥಂಗಳಂ ಕೈಕೊಂಡುಚಿತಾಸನದೊಳ್ ಕುಳ್ಳಿರಲ್ವೇಳ್ದು ಯೋಗಕ್ಷೇಮಂಗಳಂ ಬೆಸಗೊಂಡೊಡನೆ ನಸುನಗುತ್ತುಂ ನಿಜರಾಜ್ಯಭಾರವಿಚಾರರಾಜಸಪ್ರಕಟೀಕರಣಾರ್ಥಮಾ ಪ್ರಸ್ತಾವದೊಳ್

---

* ‡ ಈ ಭಾಗಗಳು (ಮ) ಪ್ರತಿಯಲ್ಲಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ॥ ವರಚೌಡಪಭದ್ರೇಂದ್ರರ
ಸಿರಿಮೊಗನುಂ ನೋಡಿ ಬಡವರಾಗಿಹ ನಿಮಗೀ
ಪರಿಯತಿಶಯಸೌಭಾಗ್ಯಂ
ದೊರಕಿದುದೆಂತೆಂದು ನೃಪವರಂ ಬೆಸಗೊಂಡಂ ೪೭

ಒದವಿದ ಬಹು[1]ವಿಧನಿಧಿ[1] ಸಾ
ರ್ದುದು ಗಡ ನಿಮಗೆಂದು ಬಹುಮುಖಂಗಳೊಳೀ ಮಾ
ತುದಿಸಿಹುದಾ ವೃತ್ತಾಂತದ
ಹದನೇನುಸಿರೆಂದು ಕೃಷ್ಣರಾಯಂ ಕೇಳ್ದಂ ೪೮

ಭೂಪರ್ಗೆ ಸಲ್ವ ಬಹುನಿ
ಕ್ಷೇಪವನಧಿಕಾರಿಗಳ್ಗ ಮರುಪದೆ ಶೌರ್ಯ
ವ್ಯಾಪಾರದಿನದನೀಕ್ಷ್ದತಿ
ಗೋಪನಮಪ್ಪಂತು ಬೈತುಕೊಂಡಿರಿ ಗಡ ದಲ್ ೪೯

ಇಂತಪ್ಪ ಕಜ್ಜಮಂ ಭೂ
ಕಾಂತರ ಭಯಮಿಲ್ಲದೆಸಗಿ ಸಾಧುಗಳೊಲ್ ನಿ
ಶ್ಚಿಂತೆಯೊಳೆ ಕೆಮ್ಮನಿರ್ಪಿರ
ದಂ ತಂದಿತ್ತುಳುಹಿಕೊಂಬುದೊಳ್ಳಿತು ಜಸನುಂ ೫೦

ವ॥ ಇಂತೆಂದು ಬೆಸಗೊಂಡ ಕೃಷ್ಣರಾಯನ ವಾಕ್ಯಂಗಳಂ ಚೌಡಪ ಭದ್ರಪರ್ ಕೇಳ್ದು ತಾಂ ಪೂರ್ವದಾರಭ್ಯ ಕೃಷಿವ್ಯಾಪಾರೋಪಜೀವಿಗಳಾಗಿ ಬಡವರಾಗಿರ್ದುದನಂತರದೊಳ್ ಕಂಡ ಸ್ವಪ್ನಾಭಿಪ್ರಾಯಮುಂ ಕಪಿಲಗೋಚರಿತ್ರಮುಂ ತದನಂತರದೊಳ್ ಶ್ರೀಮತ್ಕೆಳದಿಪುರಿ ರಾಮೇಶ್ವರಲಿಂಗಂ ಪ್ರಸನ್ನಮಾದುದಂ ತತ್ಕೃಪಾಕಟಾಕ್ಷಮೂಲದಿಂದಿತ್ತಲ್ ತಾಂ ಬಲ್ಲಿದರಾದ ವೃತ್ತಾಂತಮೆಲ್ಲಮುಂ ಬಿತ್ತರಿಸಲ್ ಕೇಳ್ದು ಚೋದ್ಯಂಬಟ್ಟವರ ಭದ್ರಾಕಾರಪ್ರಸನ್ನಮುಖಮಂಡಲತೇಜೋವಾಕ್ಪಟುತ್ವಂಗಳುಮಂ ನೆರೆಗೊಂಡು ಸಂತಸಂದಳೆದಿವರ್ ಶಿವಾಂಶೀಭೂತರಪ್ಪ ಕಾರಣಪುರುಷರಹುದೆಂದು ನಿಶ್ಚಯಂಗೈದು ತನ್ನೊಳಿಂತೆಂದಂ

ಕಂ॥ ಖಳರುಕ್ತಿಮೂಲದಿಂ ದೆಸೆ
ವಳರಹ ಧನಿಕರನಸೂಯೆಯಿಂ ನೋಯಿಸದು
ಜ್ಜ್ವಳಘನಕಾರ್ಯಂಗಳನವ
ರ್ಗಳ ಮುಖದಿಂ ಕೊಂಡು ಪೊರೆವುದರಸರ್ಗುಚಿತಂ ೫೧

1 ನಿಧಿಕ್ಕೆ (ಮು)

Sri Vidyabharathi Book Centre, Sringeri

CC-O. In Public Domain. Digitized by eGangotri

ವ॥ ಇಂತೆಂದು ಬಗೆದಾ ಚೌಡಪಭದ್ರಪರಂ ಹತ್ತೆಕರೆದು ನೀಂ ಶಿವಾಂಶೀಭೂತರಪ್ಪ ಕಾರಣಪುರುಷರಹುದೆಮ್ಮನೀಸಮಯದೊಳವಿದ್ಧಕರ್ಣರುಂ ಶಬರರುಂ ಮತ್ತಂ ಕೆಲಂಬರ್ ತುಂಡುಮನ್ನೆಯರ್ಕಳುಂ ಕಂಡುನಡೆಯದೆ ಬಲವದ್ವಿರೋಧಿಗಳಾಗಿ [1]ಕ್ಷುದ್ರೋ[1]ಪದ್ರವಂಗಳನೆಸಗುತಿರ್ಪರ್ ಆವುದರಲ್ಲಿಯುಂ ನೀವೆಮ್ಮ ಕಜ್ಜಂಗಳಿಗನುಕೂಲಿಗಳಾಗಿ ಸಮೀಪದೊಳಿರಲ್ವೇಳ್ಕೆಂದೊಡವಡಿಸಿ ತುರಗಾಂದೋಳಿಕಾ ಛತ್ರಚಾಮರಾದಿವಿಭವಂಗಳುಮನುಚಿತಮಾದುಡುಗೊರೆ ತೊಡವುತಾಂಬೂಲಂಗಳುಮನಿತ್ತು ಮನ್ನಿಸಿ ಕೆಲವಶ್ವಪದಾತಿಗಳಧೀನದೊಳಿರ್ದು [2]ಸಂಗಡ[2]ಮೆಡೆಯಾಡಲೆಂದು ನಿಯಾಮಿಸಲಂತಾಗಲೆಂದೊಡಂಬಟ್ಟವರ್ಗಳ್ ರೂಢಿನೆತ್ತು ಕತಿಪಯದಿವಸಮಾ ರಾಯರ ಸಮೀಪದೊಳತಿಪ್ರೀತಿಪಾತ್ರರೆನಿಸಿ ವರ್ತಿಸುತ್ತುಮಿರಲಾ ಕಾಲದೊಳ್ ಮೂಡದಿಕ್ಕಿನೊಳ್ ಶಬರರುಂ ಮತ್ತಂ ಕೆಲಂಬರ್ ತುಂಡುಮನ್ನೆಯರುಮೊಂದಾಗಿ [3]ಪುಂಡೆದ್ದು[3] ದಾಳಿವರಿದಾರುಮಂ ಬಗೆಯದೆ ರಾಜ್ಯಮಂ ಬಾಧಿಸುತ್ತುಮಿರಲೀ ವೃತ್ತಾಂತಮಂ ಕೃಷ್ಣರಾಯಂ ಕೇಳ್ದು ಚೌಡಪಭದ್ರಪರೊಡನೆ [4]ಸೈನ್ಯಮಂ[4] ಕೂಡಿಸಿಕೊಟ್ಟವರ್ಗಳಂ ನಿಗ್ರಹಿಸಿಬರ್ಪುದೆಂದು ನಿಯಾಮಿಸಿ ತಾಂಬೂಲವಿತ್ತು ತೆರಳ್ಚಲ್ಕೆ [5]ದಿದು[5]ಭಯಸೈನ್ಯಕ್ಕಂ ಕೈಗಲಸಿ ತುಮುಲಯುದ್ಧಂ ಪಣ್ಣಲಾಗಳಾರಾಯಸೈನ್ಯದಾಕೆವಾಳರ್ ನೊಂದುನುಗ್ಗಾಗಿ ಮೊಗಮಿಕ್ಕಲಮ್ಮದೆ ಮುರಿದು ಪಿಂದೆಗೆಯುತ್ತುಮಿರಲ್ ಚೌಡಪನಭಿವೀಕ್ಷಿಸಿ ಧೈರ್ಯಂಗುಂದದೆ ಶ್ರೀಮದ್ರಾಮೇಶ್ವರನ ಪಾದಾರವಿಂದಮಂ ನೆನೆಯುತ್ತತಿಶೀಘ್ರದೊಳ್ ತುರಗಾರೂಢನಾಗಿ ಶತ್ರುಸೈನ್ಯಕ್ಕಿದಿರ್ಚಿನಿಂದು ವೀರರ[6]ಸದಿಂ[6] ಪೊರೆಯೇರುತ್ತುಮಿರಲಾ ಪ್ರಸ್ತಾವದೊಳ್

ಕಂ॥ ಕುಂತವನಾಂತರಿಸಂತತಿ
ಯಂ ತಗುಳುತ್ತಾಂತ ಸುಭಟರಂ ತಿವಿತಿವಿಮೋ
ರಂತಂತಕನಂ ತೋರಿಸು
ತಿಂತಾ ಚೌಡೇಂದ್ರನಂಕದೊಳ್ ಸೈವರಿದಂ ೬೨

ಅಸಮಬಲಂ ಭದ್ರಪನೊಂ
ದೆಸೆಯೊಳ್ ಕೂರಸಿಯನಾಂತು ಮುಸುಕಿದರಾತಿ
ಪ್ರಸರದ ಸುವಿಸರಮಂ ತೊಲ
ಗಿಸುತುಂ ರಣರಸನನಿಳೆಗೆ ಪಸರಿಸುತೆಸೆದಂ ೬೩

---

1 ದುರಾಳೋಚನೆಯಂ ರಚಿಸಿ ಕ್ಷುದ್ರೋ.... (ಕಮು) 2 ನಿಚ್ಚಂಹವಾಳಿಯೊಳ್ಸಂಗಡ. (ಕಮು) 3 ಮಾರ್ಮಲೆತು ಪುಂಡೆದ್ದು (ಕಮು) 4 ತದುಪಯುಕ್ತಮಾದ ಸೈನ್ಯಮಂ (ಕಮು) 5 ಪಲು (ಒಕಮು) 6 ಸಂ (ಕಮು)

Sri Vidyabharathi Book Centre, Sringeri

CC-O. In Public Domain. Digitized by eGangotri

ಚಂ॥ ಸುರಪತಿಯಂ ನರಳ್ಚ ಮಿಗೆ ಗೋಂಟುಗೊಳಿಪ್ಪುರುಕಾಳಿಕೇಯಭೀ
ಕರಬಲನುಂ ನಿವಾತಕವಚರ್ಕಳನಂದು ಕಿರೀಟಿ ಗೆಲ್ದವೊಲ್
ತರುಬಿದ ಭಿಲ್ಲರಂ ಸದೆದು ರಾಯರ ಕಜ್ಜವನ್ಯೆದೆ ವಿೂಂಟುಗ್ಗೆ
ದುರತರವುಪ್ಪ ಬಾಹುಬಲವುಂ ಮೆರೆದಂ ಧುರಧೀರಚೌಡಪಂ ೬೪

ವ॥ ಮತ್ತ[1]ಮು[1]ದಲ್ಲದಾ ಚೌಡಪಂ

ಕಂ॥ ನೆರೆದಹಿತರ ನೆರವಿಗಳೊಳ್
ತುರಗವನೆಣ್ದೆಸೆಯೊಳ್ಗೈದೆ ದುವ್ವಾಳಿಸುತುಂ
ಶರಕುಂತಖಡ್ಗದಂಡದೆ
ತಂದಿರಿದರಿದರೆದು ಶಬರರಂ ಬರಿಕೈದಂ ೬೫

*ಅರಿವೊಡಾ ರಾಯರಿಂ ಗೆಲ
ಲರಿದೆನಿಸಿರ್ಪರಿನಿಕಾಯಮಂ ಕೂರಸಿಯಿಂ
ದರಿದರಿದು ಚೌಡಪಂ ಜವ
ನರಿತದ ದೂತರ್ಕಳಿಂಗೆ ಕೈನೆರ್ತಿಸಿದಂ ೬೬

ವ॥ ಇಂತಪ್ಪ ಚೌಡಪನದಟನಾಂಪೊಡಶಕ್ಯನಾಗಿ

ಕಂ॥ ಅತುಲಭುಜಬಲಪರಾಕ್ರಮ
ಯುತರರ್ಥವನಿತ್ತು ಕಂಡರರಿನೃಪವನಿತಾ
ತತಿಗೈಧವ್ಯದಿ ದೀಕ್ಷೆಯ
ನಾಂತುರು ತಚ್ಚೌಡಧೀರನಸಿಗಳ್ಕದರಾರ್ ೬೭

ವ॥ ಮತ್ತಮದಲ್ಲದೆ

ಕಂ॥ ಕಡುಹಿಂ ರಾಯರನೆಣಿಸದೆ
ನಡೆವದಟರ್ಕಳನೆ ಪಿಡಿದು ನಿಗಳವನಡಿಯೊಳ್
ತೊಡರಿಸಿ ಕೆಲಂಬರಂ ಹೆಡ
ಗುಡಿಗೊಳಗಾಗಿಸಿ ಮರಳ್ದನಾ ಚೌಡೇಂದ್ರಂ ೬೮

---

[1] ಮಂತು (ಕ)

*ಇಲ್ಲಿ ಕವಿಯು ಗಣನಿಯಮವನ್ನು ವಿೂರಿದ್ದಾನೆ. (ಈ ವಿಚಾರವಾಗಿ ಉಪೋದ್ಘಾತದಲ್ಲಿ ಬರೆದಿರುವುದನ್ನು ನೋಡಿ) ಮುಂದೆ ಹೀಗೆ ಗಣನಿಯಮವನ್ನು ವಿೂರಿದ ಪದ್ಯಗಳನ್ನು ನಕ್ಷತ್ರ ಚಿಹ್ನೆಯಿಂದ ಗುರುತು ಮಾಡಿದ್ದೇವೆ. ಈ ಪದ್ಯ(ಮ,ನಲ್ಲಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಇಂತಾ ಚೌಡಪನಹಿತಕ್ಕ
ತಾಂತಂ ಕರಮೆಸೆವ ಭದ್ರಪಾನುಜಸಹಿತಂ
ಸಂತಸಪಡೆ ಮರಳ್ದು ಸೇನಾ
ಸಂತತಿವೆರಸೈದಿ ರಾಯರಂ ಮಿಗೆ ಕಂಡಂ ೬೯

ವ|| ಇಂತು ಕೃಷ್ಣರಾಯನಂ ಕಂಡು ನಿಗಳಹೆಡೆಗುಡಿಗಳಿಂಗೊಳಗಾಗಿಸಿ ತಂದ ಪ್ರತ್ಯರ್ಥಿಮನ್ನೆಯರಂ ತತ್ಪಾದಾರವಿಂದದೊಳ್ ಕೆಡಹಿಸಿ ಸಂಧಾನಮುಖದಿಂದೊಡನೈದಿದ ಕೆಲಂಬರ್ ತಂಡುಮನ್ನೆಯರ್ಕಳಂ ಕಾಣಿಸಿ ಮತ್ತಂ ಕೆಲಂಬರಗಿದಿತ್ತರ್ಥಾಭರಣವಸ್ತ್ರವಸ್ತುವಾಹನಚಯಂಗಳುಮಂ ಮುಂಗಡೆಯೊಳಿರಿಸಿ ಸಂದರ್ಶನಂಗೆಯ್ಯಲ್ ತತ್ಕೃಷ್ಣರಾಯನಭಿವೀಕ್ಷಿಸುತ್ತತ್ಯಂತಪ್ರಮುದಿತಮಾನಸನಾಗಿ ಚೌಡಪಭದ್ರಪರನಾಲಿಂಗನಂ[1]ಗೈದು[1] ಮನ್ನಿಸಿ ಹತ್ತೆಕುಳ್ಳಿರಿಸಿಕೊಂಡು ಸಂಗ್ರಾಮವೃತ್ತಾಂತಮಂ ಮರಳ್ದು ಮರಳ್ದು ಕೇಳ್ದು *ಪೊಂಪುಳಿಯ*ಪಟುತರಪರಾಕ್ರಮಶಾಲಿಗಳಪ್ಪಿವರನಿನ್ನುಂ [2]ಪೆರ್ಚಿಸಿ[2] ತುರುಷ್ಕರ್ಗಲಗಣಸಾಗಿ ನಿಲಿಸಲ್ವೇಳ್ಕೆಂದು ಮನದಂದು ತದುಚಿತಮಾದ ತೊಡವುಡುಗೊರೆತಾಂಬೂಲಂಗಳುಮನಿತ್ತಾದರಿಸಿ ಚಾಮೀಕರಲಾಂಛನಲಾಂಛಿತಮಾದ ನೆಗಳ್ವಾಯಿಗಳಿಂ ವಿರಾಜಿಸುತ್ತಿರ್ಪ ಪೊಸಪಲ್ಲಕ್ಕಿಯಿಕ್ಕಿ ನಿಜನಿವಾಸಕ್ಕೆ ಕಳುಪಿ ಬಳಿಕ್ಕಂದಿನದಿನದೊಳತಿಪ್ರೀತಿಯಿಂ ನಡೆದುಕೊಳ್ಳುತ್ತುಮಿರುತ್ತಿರಲತ್ತಮುತ್ತರದಿಕ್ಕಿನೊಳಿರ್ಪವಿದ್ಧಕರ್ಣರ್ ದಾಳಿವರಿಯಲ್ವೇಳ್ಕೆಂದು ದುರ್ಮಂತ್ರಾಲೋಚನೆಯಂ ರಚಿಸುತಿರ್ದಪರೆಂಬ ವರ್ತಮಾನಮಂ ಬೇಹಚರರ ಮುಖದಿಂ ಕೇಳ್ದು ತುರಷ್ಕರ್ಗಾಸ್ಪದಮಾಗದಂತು ಚೌಡಪಭದ್ರಪರಂ ಗಡಿಮುಖದೊಳ್ ನಿಲಿಸಿದೊಡೆಮ್ಮ ಕಜ್ಜಂ ಮುಂದೆ ಶೇಖರಮಪ್ಪುದೆಂದು ನಿಶ್ಚಯಿಸಿ ತತ್ಕಾಲೋಚಿತಮಾಗಿ ಪರಿಮಿತಾಪ್ತಮಂತ್ರಿನಿಯೋಗಿಜನರ್ವೆರಸೊಡ್ಡೋಲಗಂಗೊಟ್ಟು ಚೌಡಪಭದ್ರಪರಂ ಬರಿಸಿ ಹತ್ತೆಕರೆದು ಸಮೀಪದೊಳ್ ಕುಳ್ಳಿರಿಸಿಕೊಂಡಾ ಕೃಷ್ಣರಾಯಂ ಮಂದಸ್ಮಿತವದನಾರವಿಂದನಾಗುತ್ತುಮಾ ಚೌಡಪಭದ್ರಪರೊಡನಿಂತೆಂದಂ

ಕಂ|| ಅರಿಚಯಮೆಡೆಯಾಡದವೊಲ್
ಕೆರಮೊಪ್ಪುವ ಚಂದ್ರಗುತ್ತಿ ಕೆಳದಿಯ ಮುಖದೊಳ್
ಹೊರಪಾಳ್ಯವಾಗಿ ವರ್ತಿಪ
ಸುರುಚಿರಪರಮಾಧಿಕಾರಮಂ ನಿಮಗೀವೆಂ ೭೦

---

[1] ಗೈದು ಸಂಗ್ರಾಮವೃತ್ತಾಂತಮಂ (ಬ) [2] ಪೆರ್ಚಿಸಿನಿಲಿಸಲ್ವೇಳ್ಕೆಂದು(ಬ)

* ಈ ಭಾಗ (ಮ)ಸಲ್ಲಿಲ್ಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಹೆಮ್ಮೆಯೊಳೀಯಧಿಕಾರದ
ಬಿಮ್ಮಳಿಯದ ತೆರದೆ ರೂಢಿನೆತ್ತಿಳಿಗೆ ಕರಂ
ದಿಮ್ಮಿದರಾಗಿ ದಿಟಂ ನೀ
ವೆಮ್ಮವರೆಂದೆನಿಸಿ ವರ್ತಿಸುತ್ತಿರ್ಪವೊಲುಂ ೭೧

*ಕೆಳದಿಯಿಕ್ಕೇರಿ ಪೆರ್ಬಯ
ಲೆಲಗಳಲೆ................ಯೊಪ್ಪುವ ಮೋದೂ
*ರ್ಕಲಿಸೆ ಲಾತವಡಿಯೆಂಬೀ
ವಿಲಸನ್ಮಾಗಣಿಗಳೆಂಟುಮಂ ನಿಮಗೀವೆಂ ೭೨

ಮಿನುಪೆಂಟುಮಾಗಣಿಗಳುಮ
ನನುನಯದಿಂ ನಿಮ್ಮ ವಂಶಪಾರಂಪರೆಯಿಂ
ದನುಭವಿಪುದೆಂದು ವರಶಾ
ಸನಮಂ ತತ್ಕೃಷ್ಣರಾಯನುರೆ ಬರೆಸಿತ್ತಂ ೭೩

ಈಯೆಂಟು ಮಾಗಣಿಗಳಿಗೆ
ರಾಯರ್ ನೀವೆನಿಸಿ ಸುಖದೊಳಾಚಂದ್ರಾರ್ಕಂ
ಸ್ಥಾಯಿಗಳಾಗಿರ್ದೆಮಗೆ ಸ
ಹಾಯಿಗಳೆಂದೆನಿಸಿ ಬಾಳ್ವುದತಿಮುದದಿಂದಂ ೭೪

ಎಂದುರುಮುದೇಭಘೋಟಕ
ವೃಂದಪದಾತಿಪ್ರತಾನಮಂ ನೃಪವರನೊ
*ಲ್ದಂದು ಕೈಗೊಳಿಸಿ ಪೊಸಪೊ
ನ್ನಂದಣಮಂ ವಿಲಸದಾತಪತ್ರವನಿತ್ತಂ ೭೫

ಅರಿದಲೆ ಸುಶಂಖ ಚಕ್ರಂ
ಕರವೊಪ್ಪುವ ಕನಕಚೌರಿ ಸೀಗುರಿ ಶೋಭಾ
ಕರವಿಲಸದುಭಯಚಮರಂ
ಸರನೇಜಮೆನಿಪ್ಪ ಬಿರುದುಗಳನೊಸೆದಿತ್ತಂ ೭೬

ವ॥ ಇಂತಪ್ಪ ರಾಜಲಾಂಛನೋಪಯುಕ್ತಮಾದ ಬಿರುದುಗಳುಮನಿತ್ತು ಮನ್ನಿಸಿ ತದಾರಭ್ಯ ಕೆಳದಿಮೂಲಸಂಸ್ಥಾನದ ಮನ್ನೆಯ ಚೌಡಪ್ಪನಾಯಕನೆಂದು ಕರೆವುದೆಂದು ನಿಯಾಮಿಸಿ ಪ್ರಖ್ಯಾತಮಪ್ಪಂತು ನಾಲ್ಕ ಡೆಯೊಳಿರ್ಪ ಮನ್ನೆಯರ್ಗಂ ರಾಯಸಮಂ ಬರೆಸಿ ಸಂಗಡ

Sri Vidyabharathi Book Centre, Sringeri

CC-O. In Public Domain. Digitized by eGangotri

ಮುಚಿತಮಪ್ಪ ಗುರಿಮಾನಿಸರಂ ಪ್ರಯಾಣವನೊಡರ್ಚಿಸಿ ನೀವುಂ ನಿಮ್ಮ ಮೂಲಸಂಸ್ಥಾನಮುಂ ಸಾರ್ದೆಂಟುಮಾಗಣಿಯ ಪ್ರಜೆಪರಿವಾರಮುಂ ಕಾಣಿಸಿಕೊಂಡು ರಾಜಮುದ್ರಾಧಿಕಾರದ ಬಿಣ್ಪುಗುಂದದಂತಾಣೆಘೋಷಣೆಯುಂಕೆರ್ಷುಂಕೆನಾಣ್ಯರಾಯಸಮುಂತಾದುವಂ ನಡೆಸಿಕೊಂಡೆಮಗುಂಟಾದೆಮ್ಮ ಕಾರ್ಯಂಗಳೆಲ್ಲಂ ನಿಮ್ಮ ಕಾರ್ಯಂಗಳೆ ಸರಿಯೆಂದು ಬಗೆದೀ ಪ್ರಕಾರಮೊಳ್ ನಿರ್ಭೇದಮಾಗಿ ವರ್ತಿಸುತ್ತುಂ ಸುಖಮಿರ್ಪುದೆಂದೊರೆದವರಿರ್ವರ್ಗಮುಚಿತಮಪ್ಪ ದಿವ್ಯತರನವರತ್ನಖಚಿತಸ್ವರ್ಣಾಭರಣಾಂಬರತಾಂಬೂಲಂಗಳನಿತ್ತಾದರಿಸಿ ತೆರಳ್ಚಲತ್ಯಂ[1]ತ[1] ಹರ್ಷಿತರಾಗಿ ತೆರಳ್ದೈತಂದು ಕೆಳದಿಪುರನರಮುಂ ಸಾರ್ದೊಡನೆ ತತ್ಕಾಲೋಚಿತಮಾದರಮನೆಯುಂ ನಿರ್ಮಾಣಂಗೈಸಿ ಕುಟುಂಬಸಹಿತಮಲ್ಲಿರ್ದಾ ಪುರದ ತೆಂಕಮುಖದೊಳ್ ಹೊಡೆ[2]ಯುಂ[2] ಬಲಿಯಿಸಿ ಕಾಯ್ಪು ಕಟ್ಟಲೆಗಳಂ ರಚಿಯಿಸಿ *ಶಕವರ್ಷಂ ೧೪೨೨ನೆಯ ಸಿದ್ಧಾರ್ಥಿ ಸಂವತ್ಸರದ ಮಾಘ ಶುದ್ಧ ೩ಯಲ್ಲಿ ಈ ಚೌಡಪ್ಪನಾಯಕರ್ಗಾ ಕೆಳದಿ ಪುರದರಮನೆಯೊಳ್ ರಾಜಪಟ್ಟಮಾಗಲೊಡನೆ ಕೆಳದಿ ಇಕ್ಕೇರಿಮೊದಲಾದಷ್ಟಮಾಗಣಿಗಳ ಪ್ರಜೆಪರಿವಾರ ನೆರೆಸಾಮಂತರಿಂ ಕಾಣ್ಕೆಗೊಂಡು ಸಂದರ್ಶನಂಗಳನಿತ್ತವರ್ಗಳಂ ಬೀಳ್ಕೊಟ್ಟನಂತರಂ ನಾಲ್ಗಡೆಯ ಮನ್ನೆಯರ್ಗಂ ರಾಯಸಮಂ ಬರೆಸಿ ತದುಚಿತಮಾದುಡುಗೊರೆಗಳಂ ಕಳುಪಿ ರಾಜ್ಯಭಾರವಿಚಾರತತ್ಪರನಾಗಿ ವರ್ತಿಸುತ್ತುಮಿರ್ದು ತತ್ಪುರೀರಾಮೇಶ್ವರದೇವರ [3]ಗರ್ಭ[3]ಗೃಹಮುಂ ಶಿಲಾಮಯವನಾಗಿಸಿ ತತ್ಪೂಜಾರ್ಥಂ ಪಳ್ಳಿವಯಲ ಗ್ರಾಮಮುಮಂ ಮತ್ತಂ ಕೆಲವು ಮಿಾಂಟಾದ ಗ್ರಾಮಂಗಳುಮಂ ಶಿವಾರ್ಪಣಂಗೈದು ಲೋಪಮಾಗದಂತು ತತ್ಪೂಜಾದಿವಿಭವಂಗಳಂ ನಡೆಯಿಸುತ್ತುಂ ಗುರುಲಿಂಗಜಂಗಮಾರ್ಚನತತ್ಪರನೆನಿಸಿ ಬಹುವಿಧದಾನಧರ್ಮಂಗಳಂ ರಚಿಸುತ್ತುಮೆಡೆಯೆಡೆಗೆ ರಾಯಸಮುಖದಿಂದೊದವಿದ ರಾಯರ ಜಯಕಜ್ಜಂಗಳನಾಗಿಸುತ್ತುಂ ದೆಸೆದೆಸೆಯೊಳತಿಪ್ರಖ್ಯಾತಿಯುಂ ಪಡೆದು ಕೆಳದಿ ಇಕ್ಕೇರಿ ಚಂದ್ರಗುತ್ತಿ ಮುಂತಾದ ಮುಖಂಗಳೊಳ್ ವೈಹಾಳಿಗಳಂ ರಚಿಸುತ್ತತ್ಯಂತ ವಿಭವೋಪೇತನಾಗಿ ವರ್ತಿಸುತ್ತಿಂತು ಕತಿಪಯದಿವಸಂಗಳ್ ಪೋಗಲೊಂದವಸರದೊಳ್

ಕಂ॥ ಸುತಸಹಿತಂ ಚೌಡಪಭೂ
ಪತಿ ತಾನಿಕ್ಕೇರಿಗೈದಿರಲ್ ಮೊಲಮೊಂದು
ನ್ನತಮಾದ ಶುನಕನಂ ತ
ತ್ಕ್ಷಿತಿಯೊಳ್ ಬೆಂಬತ್ತಿ ಪರಿಯುತಿರಲೀಕ್ಷಿಸುತುಂ ೭೭

---

[1] ತವಿಭವ (ಒ) [2] ಯಮುಂ (ಕ) [3] ದೇವರ (ಒ)

* 'ಸ್ವಸ್ತಿಶ್ರೀ ಶಾಲಿವಾಹನ' (ಈ ಭಾಗ'ಮ'ನಲ್ಲಿ ಅಧಿಕವಾಗಿದೆ)

Sri Vidyabharathi Book Centre, Sringeri

CC-O. In Public Domain. Digitized by eGangotri

ಇದು ತಾಂ ಪುಂಭೂವಿ.ಯೆನಿ
ಪ್ಪುದನರಿದೊಡನಲ್ಲಿ ಕೋಂಟೆಯುಂ ಬಲಿದು ಬಳಿ
ಕ್ಕದರೊಳರಮನೆಯನಿಂದ್ರನ
ಸದನಕ್ಕಧಿಕಮೆನೆ ರಚನೆಗೈಸಿದನನುವಿಂ ೭೮

ವ|| ಇಂತರಮನೆಯಂ ರಚನೆಗೈಸಿ ತದುಪಯುಕ್ತವಾದ ಬೊಕ್ಕಸ ಭಂಡಾರ [1]ಲಾಯ[1] ಗಜಾಶ್ವಶಾಲೆಯುಗ್ರಾಣ ಪಣತ ಮುಂತಾದ ಮಹಲ್ಗಳಂ ನಿರ್ಮಾಣಂಗೈಸಿ ಪುರ ಪೇಟೆ ತಳವಾರಗಟ್ಟೆ ಮುಂತಾದುವಂ ರಚನೆಗೈಸಿ ಪೊರಗುಕ್ಕಡವನೊಡ್ಡುವುಂ ಬಲಿಯಿಸಿ ತತ್ತದುಚಿತಸ್ಥಾನಂಗಳೊಳ್ ಶಸ್ತ್ರಾಸ್ತ್ರ[2]ಪಾಣಿಗಳ ಕಾಯ್ದು[2]ಕಟ್ಟಲೆಗಳಂ ಪರುಠವಿಸಿ ನಿಜಾನುಜ ಭದ್ರಪನಾಯಕ ಸುತ ಸದಾಶಿವನಾಯಕ ಸ್ವಕುಟುಂಬಸಹಿತಂ ಸುಮುಹೂರ್ತದೊಳ್ ಕೆಳದಿಯರಮನೆಯಿಂ ತೆರಳ್ದತ್ಯಂತಸಂಭ್ರಮದಿಂ ಪ್ರಜೋತ್ಪತ್ತಿಸಂವತ್ಸರದ ಮಾಘ ಶುದ್ಧ ೫ ಯಲ್ಲಿಯಿಕ್ಕೇರಿಯರಮನೆಯಂ ಪೊಕ್ಕು ಭದ್ರಸಿಂಹಾಸನಾರೂಢನಾಗಿ ರಾಜಮುದ್ರಾಧಿಕಾರದ ಧರ್ಮಕ್ಕೊಣೆಯನೊಂದದಂತು ಪ್ರಜೆಪರಿವಾರಂಗಳನೋವುತ್ತಾವುದರಲ್ಲಿಯುಂ ತಾಂ ಜಾಗ್ರತ್ಪುರುಷನೆಂದೆನಿಸಿ ನಾಲ್ದೆಸೆಯ ಮನ್ನೆಯರ್ಕಳೊಳ್ ಕೆಳದಿಯ ಚೌಡಪ್ಪನಾಯಕನೆಂದು ಪರಮಪ್ರಸಿದ್ಧಿಯಂ ಪಡೆದಿಂತು ವರ್ತಿಸುತ್ತುಂ

ಕಂ|| [3]ರಾಯರ್ ಬೆಸಸಿದ ಕಾರ್ಯನಿ
ಕಾಯದನಾಗಿಸುತೆ ಚೌಡನೃಪನವನಿಪಥೌ
*ರೇಯನೆಂದೆನಿಸಿ ರಾಜ್ಯ
ಶ್ರೀಯುಂ ಸದ್ಧರ್ಮದಿಂದೆ ಪರಿಪಾಲಿಸಿದಂ ೭೯

ವ|| ಇಂತಾ ಕೆಳದಿಯ ಚೌಡಪನಾಯಕಂ ತನಗೆ ರಾಜಪಟ್ಟಮಾದ ಶಕವರ್ಷ ೧೪೨೨ನೆಯ ಸಿದ್ಧಾರ್ಥಿ ಸಂವತ್ಸರದ ಮಾಘ ಶುದ್ಧ ೩ ಯಾರಭ್ಯ ಶ್ರೀಮುಖ ಸಂವತ್ಸರದ ಶ್ರಾವಣ ಶುದ್ಧ ೨ಯ ನೆಲೆಗೆ ವರ್ಷಂ ೧೩ ತಿಂಗಳು ೬ ಪರ್ಯಂತಂ ಸದ್ಧರ್ಮದಿಂ ರಾಜಪರಿಪಾಲನಂ[4]ಗೈದಂ[4]

ಪ್ರಥಮಾಶ್ವಾಸಂ ಸಂಪೂರ್ಣಂ

---

[1] ಲಾಯಜಾನಸಾಲೆ ಉಗ್ರಾಣ (ಬ) [2] ಶಸ್ತ್ರಾಸ್ತ್ರ ಮೊದಲಾದ ಪಾಣಕಾಯ್ದು (ಕ) [3] ರಾಯರೂಹಿ (ಕಬಮ) [4] ಗೆಯ್ದಂ ಈ ಚೌಡಪನಾಯಕರಿಗೆ ಇಕ್ಕೇರಿಯರ ಮನೆಯ್ಲ ಕೊಪ್ಪಲಲ್ಲಿ ಸಮಾಧಿಯಾಯ್ತು (ಕ)

Sri Vidyabharathi Book Centre, Sringeri

CC-O. In Public Domain. Digitized by eGangotri

ದ್ವಿತೀಯಾಶ್ವಾಸಂ

ವ|| ಆ ಚೌಡಪ್ಪನಾಯಕರ ತರುವಾಯ ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷ ೧೪೩೬ ನೆಯ ಶ್ರೀಮುಖ ಸಂವತ್ಸರದ ಶ್ರಾವಣ ಶುದ್ಧ ೩ಯಲ್ಲಿ ಕೆಳದಿಯ ಚೌಡಪ್ಪ ನಾಯಕರ ಕುಮಾರರಾದ ಸದಾಶಿವರಾಯ ನಾಯಕರಿಗೆ ಇಕ್ಕೇರಿಯ ಅರಮನೆಯಲ್ಲಿ ರಾಜ್ಯಪಟ್ಟಂ

ಕಂ|| ವರಚೌಡಪನೃಪತಿಯನಂ
ತರದೊಳ್ ತನುಜನಹ ಸದಾಶಿವಧರಣೀ
ಶ್ವರನರಿಕುಲಮದತಿಮಿರೋ
ತ್ಕರದಿನಕರನಾಳ್ದನೊಪ್ಪುವವನೀತಳಮಂ ೧

ಉ|| ಆ ನರನಾಥಪುಂಗವನರಾತಿಮದೇಭವಿದಾರಣೋಗ್ರಪಂ
ಚಾನನನಾನತಾಮರಮಹೀಜನಶೇಷಕಲಾಪ್ರವೀಣನೀ
ಶಾನಕೃಪಾಕಟಾಕ್ಷಪರಿಲಬ್ಧಮಹೋನ್ನತಭೂರಿವೈಭವಂ
ತಾನೆಸೆದಂ ಮಹಾಧಿಕಸದಾಶಿವನಾಯಕನುಗ್ರಸಾಯಕಂ ೨

ವ|| ಇಂತು ವಿರಾಜಿಸುತ್ತುಮಿರಲ್ ಕತಿಪಯದಿನಂಗಳ್ ಪೋಗಲೊಡನೆ

ಉ|| ಶಂಕರಪಾದಪದ್ಮಮದಭೃಂಗಸದಾಶಿವರಾಯನಾಯಕಂ
ಗಂ ಕಡುಚೆಲ್ವ ಪುತ್ರನೊಗೆದಂ ಸದಶೇಷಸುಖಪ್ರದಾಯಕಂ
ಅಂಕದೊಳ್ಕಿದೆ ಮಾರ್ಮಲೆವರಾತಿಗಳುರ್ವ ನಿವಾರಿಪುಜ್ಜ್ವಲ
ತ್ಸಂಕಣನಾಯಕಂ ಶುಭವಿಧಾಯಕನಾತ್ತಜಯೋಗ್ರಸಾಯಕಂ ೩

ಕಂ|| ಮಗುಳಾ ಸದಾಶಿವೇಂದ್ರಂ
ಗೊಗೆದಂ ಸತ್ಪುತ್ರನೊರ್ವನನುಪಮರೂಪಂ
ಮಿಗೆ ಸತ್ಕೀರ್ತಿಕಲಾಪಂ
ಜಗತೀಸುಮಚಾಪಚಿಕ್ಕಸಂಕಣಭೂಪಂ ೪

ವ|| ಇಂತೊಗೆದು ವಿರಾಜಿಸುತಿರ್ಪ ಸತ್ಪುತ್ರರಿರ್ವರ್ಗಂ ನವಯೌವನೋದಯ ಮಾಗಲೊಡನೋರೊರ್ವನ... ಕನ್ಯಕಾ... ವಿಭವದಿಂ ವಿವಾಹಮಂ

Sri Vidyabharathi Book Centre, Sringeri

CC-O. In Public Domain. Digitized by eGangotri

ರಚಿಸಿ ತತ್ಸ್ವತರ್ಕಳ್ವೆರಸತಿಸಂಭ್ರಮಸುಖಸಂಕಥಾವಿನೋದದಿಂ ರಾಜ್ಯಂಗೈಯುತ್ತುಮಿರ್ಪಲಾ ಪ್ರಸ್ತಾವದೊಳ್

ಚಂ॥ ಮಿಸುಗುವರಾತಿಜಾಲವದಟಂ ಮಿಗೆ ಮುಗ್ಗಿಸೆ ಕೃಷ್ಣರಾಯರೀ
ದೆಸೆಗೆ ಚಮೂಸಮೂಹವೆರಸೈದಿರೆ ಚೌಡಪಸೂನುವೈದಿ ಸಂ
ಧಿಸೆ ಮಿಗೆ ಮನ್ನಿಸುತ್ತೆಮಗೆ ಮಾರ್ಮಲೆತಿರ್ಪಹಿತಾವನೀಶ್ವರ
ಪ್ರಸರದ ಗರ್ವಮಂ ತವಿಸಿ ನೀಂ ಬಹುದೆಂದು ತೆರಳ್ಚಲೊಲ್ದೆಯಿಂ ೫

ವ॥ ಇಂತೆಂದು ನಿಯಾಮಿಸಿಯುಚಿತಮಾದುಡುಗೊರೆಯನಿತ್ತು ನಾಂ ಬರ್ಪನಿತರೊಳ್ ನೀಂ ಮುಂತೈದಿ ಕಲ್ಯಾಣ ಕಲುಬುರಗಿ ಕೋಂಟೆಗಳಂ ಕೊಂಬುದೆಂದೊರೆದು ಕೂಡೆ ಕೆಲವಶ್ವಗಜಪದಾತಿಗಳಂ ಕೂಡಿಸಿ ಬೀಳ್ಕೊಡಲೊಡನೆ ಸೈನ್ಯಸಮೇತಂ ತೆರಳ್ದು ದಾಳಿವರಿಯಲೀವಾರ್ತೆಯಂ ಕೇಳ್ದು ತಾವ್ರತುಂಡಾಗ್ರೇಸರನಪ್ಪ ಅಮದಾನಗರದ ಭೈರೀ ನಿಜಾಮಪಾತುಶಾಹನನುಮತಿಯಿಂ ಫೇರೋಜಿಖಾನ ತಾಲೀತಖಾನ ಸಂಜರ್ಖಾನ ಶಾತೇಖಾನ ಮುನಿಲಖಾನ ದಸ್ತುರಖಾನ ವಜ್ರಖಾನ ರಾವುತಖಾನ ಬೊಕ್ಕ ಸಿಂಗರೆಂಬ[1]ತ್ಯದ್ಭುತಪರಾಕ್ರಮಶಾಲಿಗಳಪ್ಪ ವಜೀರರ್ಕಳೊಂದಾಗಿಯಪರಿಮಿತ ಸೈನ್ಯಸಮೂಹಸಹಿತಂ ತೆರಳ್ದೆಲ್ತಂದು ಜಂಬುಖಂಡಿಯೆಂಬ ಸ್ಥಳದೊಳ್ ಬಾಹ ಮಾರ್ಗಮಂ ಕಟ್ಟಿ ರಣರಂಗಕ್ಕಿದಿರ್ಚಿನಿಲಲವರ್ಗಂ ಕೈಗಲಸಿ ಮಹಾಯುದ್ಧಂ ಪಣ್ಣಿ ರಾಯಸೈನ್ಯಂ ನಿಂದು ನಿತ್ತರಿಸಲಮ್ಮದೆ ಮುರಿದು ಪಿಂದೆಗೆಯುತ್ತುಮಿರಲಭೀಕ್ಷಿಸಿ ಸದಾಶಿವರಾಯನಾಯಕಂ ತಾನೆ ತೆರಳ್ದು ಮೇಲ್ವಾಯ್ದು ಕೈಗೆಯ್ಯುತ್ತುಮಿರ್ಪಲ್ ಸಂಗಡಮೆಳ್ತಂದ ವಜೀರರ್ಕಳ್ವೆರಸು ಬೊಕ್ಕಸಿಂಗೆ ನಿದಿರ್ಚಿನಿಂದು ಕೈಗೆಯ್ಯಲಾ ಬೊಕ್ಕಸಿಂಗನ ಕ್ರೂರಾಸಿವಿಘಾತಿಯಿಂ ಸದಾಶಿವನಾಯಕಂ ತೊಟ್ಟಿರ್ದಜಿಲೆಯುಂ ಪರಿದು ಪೆಗಲ್ವಿಡಿದು ನಡುಬೆನ್ನುಂಬರಂ ಮುರಿಸಾದ ಮಸೆದೋರಲಾಗಳಾ ಗಾಯಮುಂ ಸೈರಿಸಿ ಮಹಾಧೈರ್ಯಪರನಾಗುತ್ತಾತ್ಮಸೈನ್ಯಂವೆರಸತ್ಯಂತಕೋಪಾಟೋಪದಿಂ [2]ಕಗ್ಗೊಲೆಯಂಬಿಳ್ದು ಕೈ[2]ಗೆಯ್ಯುತ್ತುಮಿರಲಾ ಪ್ರಸ್ತಾವದೊಳ್

ಮ॥ ಎಸೆವಾ ತಾಲಿತಖಾನನೊಂದು[3]ಕಡೆ[3]ಯೊಳ್ ಫೇರೋಜಖಾನಂ ದಲೊಂ
ದೆಸೆಯೊಳ್ ದಸ್ತುರಖಾನನೊಂದುಮೊಗದೊಳ್ ಶಾತೇಯನೊಂದಿಕ್ಕಿನೊಳ್
ಮಿಸುಪಾ ಸಂಜನಖಾನನೊನ್ಮೊಗದೆ ವಜ್ರಾ[4]ಖ್ಯಂ[4] ಮುನಿಲ್ಖಾನಬೊ
ಕ್ಕಸಿಗಂ ರಾವುತಖಾನರೌಂಕೆ ಖತಿಯಿಂ ಕೈಗೆಯ್ದುರಂದಾಜಿಯೊಳ್ ೬

---

[1] ತ್ಯಂ (ಮ) [2] ಕೈ (ಬ) [3] ದೆಸೆ (ಮ) [4] ಖಾನ್ (ಕ)

Sri Vidyabharathi Book Centre, Sringeri

CC-O. In Public Domain. Digitized by eGangotri

ವ|| ಇಂತಪ್ಪ ವಜೀರರ್ಕಳೆಣ್ದೆಸೆಗಳೊಳಾತ್ಮಸೈನ್ಯಂವೆರಸೂರ್ವೆ ಮುತ್ತಿ ಮುಸುಂಕಿ ಕೈಗೆಯ್ಯುತ್ತುಮಿರಲಾಗಳಾ ಸದಾಶಿವನಾಯಕಂ ಧೈರ್ಯಂಗುಂದದೆ ಸಿತ್ತರಿಸಿ ನಿಂದು ಮಹಾಯುದ್ಧಮಂ ರಚಿಸಿ

ಕಂ|| ತಾಲಿತಖಾನನ ಸನುರದ
ಲೀಲೆಯನುರೆ ನಿಲಿಸಿ ಕುಂತದಿಂ ದಸ್ತುರಸಂ
ಕೀಲಿಸಿ ಫೇರೋಜನ ಕ
ಣ್ಣಾಲಿಗೆ ನೀರ್ವರಿಸಿ ಕೆಡಪಿದಂ ಶಾತೆಯಸಂ ೭

* ಔಂಕಿದ ಸಂಜನಖಾನನ
ಬಿಂಕವನುರೆಮುರಿದು ವಜ್ರಖಾನನನಾದಂ
ತೇಂಕಿಸಿ ರಾವುತಖಾನನ
ನಂಕವೆ ಗೆಲ್ದೆಸೆವ ಮುನಿಲಖಾನನ ಮುರಿದಂ ೮

ಮುರಿದ ವಜೀರರನೀಕ್ಷಿಸು
ತುರುತರಕೋಪದೊಳಿದಿರ್ಚಿ ಸೈನ್ಯಸಮೇತಂ
* ತರುಬಿ ಮೂರ್ಮಲೆತು ಕೈಗೆ
ಯ್ದುರುಬುವ ಕಲಿಬೊಕ್ಕಸಿಂಗನಂ ನೋಯಿಸಿದಂ ೯

ಮಿಕ್ಕುರುಬುವ ಭಟರಂ ಖ
ಡ್ಗಕ್ಕಾಹುತಿಯಿತ್ತು ಕುಂತದಿಂ ಕೆಲಕೆಲರಂ
[1]ಸೆಕ್ಕಿ[1] ಶರಹತಿಯಿನನಿಬರ
ಡೊಕ್ಕೆಗಳಂ ಡೋರುಗಳೆದನಾ ನೃಪತಿಲಕಂ ೧೦

ವ|| ಇಂತೀ ಪ್ರಕಾರದೊಳ್ ಮಹಾಯುದ್ಧಮಂ ರಚಿಸಿ

ಕಂ|| ವರಜಂಬುಖಂಡಿಯೆಡೆಯೊಳ್
ತರುಬಿದ ತೌರುಷ್ಕಪತಿಯ ಖಾನರನೆಲ್ಲಂ
ಕುರಿದರಿದು ಬೊಕ್ಕಸಿಂಗನ
ಸೆರೆವಿಡಿದೆಳ್ತಂದು ರಾಯರಿಂಗೊಪ್ಪಿಸಿದಂ ೧೧

---

[1] ಸಿಕ್ಕಿ (ಓ)
* (ಮ) ಪ್ರತಿಯಲ್ಲಿ ಪೂರ್ವೋಕ್ತ ಪಾದಗಳು ಅದಲು ಬದಲಾಗಿವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ವ|| ಇಂತೆಸೆವ ಪರಾಕ್ರಮಶಾಲಿಯಪ್ಪ ಚೊಕ್ಕಸಿಂಗನಂ ಕೈಸೆರೆವಿಡಿದೊಪ್ಪಿಸಿ ರಾಯರಂ ಪರಮಸಂತೋಷಂಬಡಿಸಿ ಬಹುಳಸನ್ಮಾನವನಾಂತು ಮನ್ನೆಯರ್ಕಳೊಳ್ ಪರಮಪ್ರಸಿದ್ಧಿಯಂ ಪಡೆದನಂತುಮಲ್ಲದೆಯುಂ

ಕಂ|| ಆ ತರುವಾಯಿಯೊಳಂ ಪ್ರೊ
ಕ್ಕಾತಂ ರಾಯರ್ಗೆ ಮಲೆತ ಕಲ್ಯಾಣದ ವಿ
ಖ್ಯಾತಸುದುರ್ಗವರಾತಿ
ವ್ರಾತವನುರೆ ಪೊಯ್ದು ಲಗ್ಗೆಯೊಳ್ ಸಾಧಿಸಿದಂ ೧೨

ನೆರೆವಾ ದುರ್ಗವನಾ ನೃಪ
ನುರೆ ಕೊಂಡಿಮ್ಮಡಿಸದಾಶಿವೇಂದ್ರನೆನಿಪ್ಪೀ
ಬಿರುದಿನಭಿಧಾನಮಂ ಮಿ
ಕ್ಕರಸರ್ ತಲೆದೂಗೆ ರಾಯರಿಂ ಪಡೆದೆಸೆದಂ ೧೩

ವ|| ಮತ್ತಮಾ ಕಲ್ಯಾಣದುರ್ಗಮಂ ಕೊಂಡು ಬರ್ಪವಸರದೊಳ್ ಕಲುಬುರುಗಿಯವರ್ ಮಾರ್ಮಲೆತಿರಲ್ ಕೃಷ್ಣರಾಯರಲ್ಲಿ ನಿಂತು ತಮ್ಮ ಕರಕಮಲದೊಳ್ ಪಿಡಿದಿರ್ಪ ಜಮವಾಡನ ಕೋಂಟೆಗಂ [1]ಪರಿದು[1] ತಮ್ಮ ಸಮೀಪದೊಳಿರ್ಪ ಮನ್ನೆಯರ್ಕಳಂ ಕರೆದೀ ಕೋಂಟೆಯಂ ತೆಗೆದುಕೊಂಬುದೆಂದು ನಿಯಾಮಿಸಲವರ್ಗಳಿದೆಮಗಶಕ್ಯವಾದ ಕಜ್ಜಮೆಂದು ಮುಂಪೋಗಲಮ್ಮದಾಲೋಚಿಸುತ್ತುಮಿರಲಾ ಪ್ರಸ್ತಾವದೊಳ್

ಕಂ|| ಭೀಕರತರರಿಪುಸೇನಾ
ನೀಕವನಸಿಯರೆಯುತಧಿಕಶೌರ್ಯದೊಳೊಳಬಿ
ಳ್ದಾ ಕಲುಬುರುಗಿಯ ದುರ್ಗವ
ನೇಕಮುಹೂರ್ತದೊಳೆ ತನ್ನೃಪಂ ಸಾಧಿಸಿದಂ ೧೪

ಕಲುಬುರುಗಿಯ ದುರ್ಗವನಿಂ
ತಳವಿಯೊಳಂ ಕೊಂಡು ರಾಯರಂ ಮೆಚ್ಚಿಸಿಯ
ಗ್ಗಳನೆನಿಸಿ ಕೋಂಟೆಕೋಲಾ
ಹಲನೆನಿಪೀ ಬಿರುದನಾಂತು ರಾರಾಜಿಸಿದಂ ೧೫

---

[1] ಪಣಿದು (ಒಕಮ)

Sri Vidyabharathi Book Centre, Sringeri

CC-O. In Public Domain. Digitized by eGangotri

ವ|| ಇಂತು ಕಲುಬುರುಗಿಯ ದುರ್ಗಮುಂ ಘೂಳಿಗೋಂಟೆಯುಂ ಕೊಂಡನಂತರಂ

ಚಂ|| ಕಡುಗಲಿಕೃಷ್ಣರಾಯರುರಿ ಜಾಲೆಯು ಪಾಳಿಡೆಗೈದೆ ಬಂದು ಮೆ
ಲ್ಲಡಿಗಳನೈದೆ ಸಂಧಿಸದಹಂಕೃತಿಯಿಂ ಕರಮುಂದಿದಿರ್ಚೆ ನಿಂ
ದೆಡನಮುರಾರಿಯೆಂಬದಟರಂ ಮುರಿದೇರ್ದವರಿರ್ಪ ಕೋಂಟೆಗೊಂ
ಡೆಡವಮುರಾರಿಯೆಂಬ ಬಿರುದಂ ಪಡೆದೊಪ್ಪಿದನಾ ನರಾಧಿಪಂ ೧೬

ವ|| ಮತ್ತಮದಲ್ಲದಾ ಕೃಷ್ಣರಾಯಂ ಸದಾಶಿವನಾಯಕನಂ ಕರೆದು ತನಗೆ ಮಾರ್ಮುಲೆತಿರ್ಪ ಬರೀದಪಾತುಶಾಹನ ಮದೋದ್ರೇಕಮಂ ಮುಗ್ಗಿಸಿ ಬರ್ಪುದೆಂದು ನಿಯಮಿಸಿ ಕಳುಪಲ್ ದಾಳಿವರಿಯುತ್ತೈತರ್ಪ ವಾರ್ತೆಯಂ ಬರೀದಪಾತುಶಾಹಂ ಕೇಳ್ದತ್ಯಂತ ಕೋಪಾಟೋಪದಿಂದತ್ಯದ್ಭುತಪರಾಕ್ರಮಶಾಲಿಗಳಪ್ಪ ವಜೀರರ್ಕಳ್ವೆರಸಪರಿಮಿತಹಸ್ತ್ಯಶ್ವಪದಾತಿಸಮೂಹಸಮೇತನಾಗಿ ತೆರಳ್ದೈತಂದು ರಣಕ್ಕಿದಿರ್ಚೆ ನಿಲಲುಭಯಸೈನ್ಯಕ್ಕಂ ಕೈಗಲಸಿ ಮಹಾದ್ಭುತಮಾದ ತುಮುಲಯುದ್ಧಂ ಪಣ್ಣಲಾ ಪ್ರಸ್ತಾವದೊಳ್

ಕಂ|| * ದಂತದ ಸೂನಗೆ ಸೊಂಡಿಲೊ
ಳಾಂತಸಿ ವೈಗಮುರ್ದ[1]ಜಿಲೆಯ[1] ಬಕತರ ಚೂಡಾ
ಲಂ ತೊಳಪಾನೆಯನೇರ್ದಿದಿ
ರಾಂತಂ ಧುರಕಾ ಬರೀದ ಯವನಾಧೀಶಂ ೧೭

ವ|| ಮತ್ತಮಾವೇಳೆಯೊಳ್

ಕಂ|| ಭರಿಕೈಗಳೊಳಾಂತಸಿ ಬಕ
ತರ ದಂತಂಗಳೊಳಮುರ್ದ ಸೂನಗೆಯೆಸೆಯಲ್
ಕರಪದಮೊಗೆದೆಡೆಯಾಡುವ
ಗಿರಿಕುಲಮೆನೆ ಕವಿದುವಾನೆವಿಂಡೆಣ್ದೆಸೆಯೊಳ್ * ೧೮

ಉ|| ಕುಂತಚಲನ್ಮಹಾಸಿವರಕಾರ್ಮುಕಸಾಯಕಸ್ಯಂದನಮುಂ ದಲಂ
ದಾಂತು ಕರಂಗಳೊಳ್ ಲಸದಯೋಮಯಚಾರುತನುತ್ರಮೊಪ್ಪೆ ಕ
ಲ್ಪಾಂತಸಮುತ್ಥಮೇಘಚಯದಂತಿರೆ ರಾವುತರಾಜಿಯಶ್ವಜಾ
ಲಂ ತವೆ ಸುತ್ತಲುಂ ಕವಿದುವಾ ಲಯವಾರ್ಧಿಯ ವೀಚಿಯಂದದಿಂ ೧೯

1 ಶಿಲೆಯ (ಒಕ)

* ಈ ಭಾಗ (ಮ) ಪ್ರತಿಯಲ್ಲಿಲ್ಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ॥ ಪೊಸಮಸೆವೆತ್ತ ಸರಳ್ ಝಳ
ಪಿಸುವಸಿ ಗಲ್ಲಿಸುವ ಕುಂತಮುಗಿಮೊರೆಯಿಂ ಚೂ
ರಿಸುವ ಕಠಾರಿಕುಲಂ ಕರ
ಮೆಸೆಯಲ್ ಮುಸುಕಿದುದು ಪತ್ತಿಚಯಮೆಣ್ದೆಸೆಯೊಳ್ ೨೦

ಆ ಸದಾಶಿವನರೇಂದ್ರನ
ಸಾಸವನೇನೆಂಬೆನಿಂತು ಮುಸುಕಿದ ರಿಪುಸೇ
ನಾಸಮುದಯಮೆಂಬಟವೀ
ದೇಶವನುರೆ ಸವರತೊಡಗಿದಂ ಖತಿಯಿಂದಂ ೨೧

ಕುರಿವಿಂಡಿನ ಮಧ್ಯದೆ ಪೊ
ಕ್ಕುರುಬುವ ಪೆರ್ಬುಲಿಯೊಲಾ ಸದಾಶಿವರಾಯಂ
ಶರಕುಂತಖಡ್ಗ ಹತಿಯಿಂ
ತರುಬಿದ ತೌರುಷ್ಕಸೈನ್ಯಮಂ ಬರಿಕೈದಂ ೨೨

ವ॥ ಇಂತೊಳಪೊಕ್ಕು ಕೈಗೆಯ್ವ ಸದಾಶಿವ[1]ರಾಯ[1]ನದಟನಾಂಪೊಡಶಕ್ಯಮಾಗಿ ನಿತ್ತರಿಸಲಮ್ಮದೆ

ಕಂ॥ ನೊಂದು ನುಗ್ಗಾಗಿ ಭಂಗಕೆ
ಬಂದುರೆ ಕೈದುಗಳನಿಕ್ಕಿ ಕೈಮುಗಿದು ಪೊಗ
ರ್ಗುಂದಿ ಪಾಡಳಿದು ಮಡಮುರಿ
ದಂದಿರದೆಣ್ದೆಸೆಗೆ ಪರಿದುದರಿಬಲದದಟರ್ ೨೩

ಚಂ॥ ಮುರಿವಡೆದಾತ್ಮಸೈನ್ಯವನಭೀಕ್ಷಿಸಿ ಪಲ್ಮೊರೆದಾ ಬರೀದನ
ತ್ಯರತರಕೋಪದಿಂದುಳಿದಿಭಾಶ್ವಪದಾತಿಸಮೇತನಾಗಿ ಸಂ
ಗರಮೊಳಿದಿರ್ಚಿ ನಿಂದುರೆ ಸದಾಶಿವರಾಯನ ಸಂಮುಖಕ್ಕೆ ಭಾ
ಸುರಮದದಂತಿಯಂ ಭರದೆ ನೂಂಕುತೆ ತುಳ್ಕಿದನಂಬಿನಬ್ಧಿಯಂ ೨೪

ಕಂ॥ ಮದದಂತಿಯೆಂಬ ಬೆಟ್ಟದ
ತುದಿಯೊಳಗಿರ್ದಾ ಬರೀದನೆನಿಸುವ ವಿಲಯಾಂ
ಬುದನುಂಬಿನ ಮಳೆಯಂ ಕರೆ
ದುದು ಧರೆಯೊಳ್ ಶೋಣಿತಾಂಬು ನೆರೆ ಪರಿವಿನೆಗಂ ೨೫

---

[1] ನಾಯಕ (ಮು)

Sri Vidyabharathi Book Centre, Sringeri

CC-O. In Public Domain. Digitized by eGangotri

[1]ಇ[1]ಸುವಂಬಿನುರುಬೆಯಂ ಸ್ಯೈ
ರಿಸುತಶ್ವವನ್ನೈದೆ ಮಿಾಂಟ ಕೊರಸಿಯಿಂ ಚೂ
ರಿಸುತೊಳಪೊಕ್ಕುರುಬುವ ಯವ
ನಸಮೂಹಾಧೀಶನುರುಬೆಗಂದಿದಿರಾಂತಂ ೨೬

ವ॥ ಇಂತಾ ಬರೀದಪಾತುಶಾಹಂಗಿದಿರ್ಚಿ ನಿಂದಿರ್ಪಕ್ಕಂಗಳೊಳುರುಬಿ ತರುಬಿ ಮುಸುಂಕಿ ಕೈಗೆಯ್ವದಟರ್ಕಳನಾತ್ಮಕರಾಸಿಕುಂತಯನುದಂಷ್ಟ್ರಾನಿಶಾತಸಾಯಕಮುಖ ವಿಘಾತಿಯಿಂ ಪಿಂದೆಗೆಸಿ [2]ಬರೀದಪಾತುಶಾಹನಡರ್ದ ಮದೇಭದ ಸಮ್ಮುಖಕ್ಕಂ ತದೂರ್ಧ್ವ ಮುಖಕ್ಕಂ ತಾನೇರ್ದಶ್ವವನಡಿಗಡಿಗೆ ಮೇಲ್ವಾಯ್ಸಿ ತನ್ಮಹಾಗಜದಂಗೋಪಾಂಗಂಗಳೊಳ್ ತೊಡರ್ಚಿದ ಮಿಳಿ ಪೊರಜೆ ಜೊತ್ತಗಂಗಳುಮಂ ನಿಲುಸಿಲುಂಕಿ ಪೊಯ್ಪೊಯ್ದು ಕತ್ತರಿಸಿ ರೆಂಜೆಯಂ ಸಡಿಲ್ಚಿಸಿ ಪಾಕರಮಂ ಪತನಂಗೈಸಿ ತತ್ಕುಂಜರವನಾತ್ಮವಶಂಗೈವನಿತರೊಳ್ ಬರೀದಪಾತುಶಾಹಂ ಸಾಧನಚಮತ್ಕೃತಿಯಿಂ ಸಮಿಾಪದೊಳಿರ್ಪ ಮಗುಳೊಂದಾನೆಯಂ ಬೆಂಗೆವಾಯ್ದು ಹರಿಹಂಚಾದ ಸೈನ್ಯವನೊಂದುಗೂಡಿಸಿ ಹುರಿಗಟ್ಟಿಸಿ ಮಗುಳ್ದು ಕೋಪಾಟೋಪದಿಂ ಮಾರ್ಮಲೆತು ರಣರಂಗಕ್ಕಿದಿರ್ಚಿ ನಿಂದು ಕೈಗೆಯ್ಯುತ್ತುಮಿರಲಾ ಪ್ರಸ್ತಾವದೊಳ್

ಉತ್ಸವ॥ ಭಾಸುರೇಭವಾಜಿವಾಹಿನೀಸಮೇತನಾಗಿ ತಾಂ
ಸಾಸದಿಂದಿದಿರ್ಚಿದಾ ಬರೀದಪಾತುಶಾಹನಂ
ಗಾಸಿಮಾಡಿ ಗೆಲ್ದು ಯುದ್ಧರಂಗದೊಳ್ ತುರುಷ್ಕಸೇ
ನಾಸಮುದ್ರಮಂ ಕಳಂಕಿದಂ ಸದಾಶಿವೋರ್ವಿಪಂ ೨೭

ವ॥ ಅದೆಂತೆಂದೊಡೆ.

ಚಂ॥ಮಾ॥ ಕೆಲಬರನುಗ್ರಕುಂತಹತಿಯಿಂ ಕೆಲರಂ ನಿಜಖಡ್ಗಧಾರೆಯಿಂ
ಕೆಲಬರನೊಳ್ಕಠಾರಿಯುರುತೀವ್ರಮುಖಾಭಿವಿಘಾತಿಯಿಂ ಕರಂ
ಕೆಲಬರನಾ ಶಿಲೀಮುಖಸಮೂಹಮಹಾದ್ಭುತವೃಷ್ಟಿಪಾತದಿಂ
ಕೆಲಬರುಮಂ ನಿಜಾಶ್ವಖುರಘಾತಿಗಳಿಂ ಪುಡಿಗೈದನಾ ನೃಪಂ ೨೮

ಕಂ॥ ಅರಿದಿರಿದು ಕೊರೆದು ತತ್ತರ
ದರಿದಿರದಸಿಯರೆದು ಪೊಯ್ದು ಸದೆಬಡಿದುರೆ ನಿ
ಟ್ಟೊರಸಿ ಸದಾಶಿವನೃಪನೀ
ಪರಿಯಿಂದೆ ಬರೀದಸೈನ್ಯಮಂ ಬರಿಕೈದಂ ೨೯

---

[1] ಎ (ಮ) [2] ಬಳಿಕ್ಕಬ (ಕ)

Sri Vidyabharathi Book Centre, Sringeri

CC-O. In Public Domain. Digitized by eGangotri

ವ|| ಇಂತು ಕೈಗೆಯ್ದ ಸದಾಶಿವನಾಯಕನ ಘೋರಾಘೋರಿಗಿದಿರ್ಚಿ ನಿಲಲಾಂಪೊಡಶಕ್ಯ ಮಾಗಿ ಪಟುತರಪರಾಕ್ರಮಶಾಲಿಗಳ್ ಪಲಾಯನಂಬಡೆದು

ಕಂ|| ನುತಪುಂಡರೀಕಮಧ್ಯ
ಸ್ಥಿತರಾದರ್ ಬೊಮ್ಮನಂತೆ ಹರಿಯಂತೆ ಸಮು
ನ್ನತಭುವನಾಶ್ರಯರಾದರ್
ಶಿತಿಗಳನೆನೆ ನಾಗಕಟಕಭೂಷಿತರಾದರ್ ೩೦

ವನರುಹವೈರಿಯ ವರನಂ
ದನನೆಂಬಂತಿರೆ ಕುಜಾಗ್ರವರ್ತಿಗಳಾದರ್
ವಿನುಪುಪರಾಗಾಂತದ ಶಶಿ
ದಿನಪರವೊಲ್ ಮುಕ್ತಮಂಡಲಾಗ್ರಗಳಾದರ್ ೩೧

ಖಂಡ ಕರುಳೆಲು ತೊನಲ್ ನರ
ತುಂಡಿಗೆ ಮಿದುಲಡಗು ತೊರಳೆ ನೆಣ ವಸೆ ನೆತ್ತ
ಗೊಂಡ ಕಾಳಿಜಿಗಳಿಂ ಜನ
ನುಂಡೊಗಡಿಸಿದಿಳೆಯ ಪೋಲ್ತುದಾ ರಣದ ಕಳಂ ೩೨

ಪರಿಕಿಪೊಡಂದು ರಣಂ ಜನ
ಹುದಮೆನೆ ರಣಭೂಮಿ ನರಕಬಂಧಮುಯಂ ಸಾ
ಗರಮೆನೆ ಕೀಲಾಲಮುಯಂ
ವರಜಂಬೂದ್ವೀಪದಂತೆ ನವಖಂಡಮುಯಂ ೩೩

ಪೊತ್ತಂತಕನಾಳ್ಗಳ್ ಬೇ
ಸತ್ತುದು ವರಚಿತ್ರಗುಪ್ತರಿಂ ಗಣಿಸಲ್ಕಾ
ದತ್ತಸದಳಮಾ ರಣದೊಳ್
ಸತ್ತವದಿರನಿನಿಬರೆಂದು ಲೆಕ್ಕಿಪನಾವಂ ೩೪

ವ|| ಇಂತು ಪಣ್ಣಿದ ಯುದ್ಧರಂಗದೊಳ್ ಬರೀದಪಾತುಶಾಹಸೈನ್ಯಮಂ ಮುರಿದು ತದೀಯ ಹಸ್ತ್ಯಶ್ವಸಮೂಹಂಗಳುಮನುದಗ್ರಪರಾಕ್ರಮಶಾಲಿಗಳಪ್ಪ ಕೆಲಬರ್ ವಜೀರರ್ಕ ಳುಮನವನ ಡಾಲು ಡಮಾಮಿ ಸತ್ತಿಗೆ ಕೆಂಪಿನ ನಿಶಾನಿಯುಮಂ ಮತ್ತಂ ಮ್ಲೇಂಛಲಿಪಿ ಲಾಂಛನಲಾಂಛಿತಮಾದ ಕಾಂಚನಮುದ್ರಾಂಗುಲೀಯಕ [1]ಕಚ್ಚಳಿ[1] ಸಹಿತಮಡರ್ದಾನೆ

1 ಕಚ್ಚುಕಳಿ (ಒ ಕ ಮ)

Sri Vidyabharathi Book Centre, Sringeri

CC-O. In Public Domain. Digitized by eGangotri

ನೆರಸಾ ಬರೀದಪಾತುಶಾಹನುಮಂ ಕೈಸೆರೆ[1]ತಂದು[1] ರಾಯ[2]ರ್ಗೊ[2]ಪ್ಪಿಸಲ್ ಕೃಷ್ಣರಾಯ[3]ನ[3]ಭಿವೀಕ್ಷಿಸಿ ಮಹಾಹರ್ಷಿತನಾಗಿ [4]ರತ್ನಾಭರಣತಾಂಬೂಲ[4]ಗಳನಿತ್ತಾದರಿಸಿ ತತ್ಸದಾಶಿವನಾಯಕಂಗಮರಿದಲೆ ಮೇಘಡಂಬರ ದಿವಾಪ್ರದೀಪ ಮುಂತಾದ ಬಿರುದುಗಳನಿತ್ತು ಬರೀದಪಾತುಶಾಹನ ಮುದ್ರಾಂಗುಲೀಯಕವಂ ಸದಾಶಿವನಾಯಕನ ಕಿರುವೆರಲಿಂಗಿಕ್ಕಿ ಸದರ್ಬೊಕ್ಕ[5]ಸೀಸಂ[5] ಬಿಟ್ಟು ತದಾರಭ್ಯಂ ಬರೀದಸಪ್ತಾಂಗಹರಣಸದಾಶಿವರಾಯನಾಯಕನೆಂಬ ಬಿಂಕದ ಬಿರುದಿನಭಿಧಾನವನಿತ್ತು ಪಿರಿದು ಮನ್ನಿಸಲ್ ಮನ್ನಣೆಯನಾಂತು ಸಂತಸಂದಳೆದು ತತ್ಸಮೀಪದೊಳತಿಪ್ರೀತಿಪಾತ್ರನೆನಿಸಿ ವರ್ತಿಸುತ್ತುಮಿರ್ದನಂತುಮಲ್ಲದೆಯುಂ

ಕಂ॥ ಆ ರಾಯರನೆಣಿಸದಹಂ
ಕಾರದೆ ವಿಜಯಾಪುರಾಧಿಪನ ಬಲದಿಂ ಕೈ
ದೋರಿದ ಶಾತೆಯನೆಂಬ ವ
ಜೀರನನಂಕದೊಳೆ ಮುರಿದನಾ ನೃಪತಿಲಕಂ ೩೫

ವ॥ ಮತ್ತಮದಲ್ಲದೊಂದವಸರದೊಳ್

ಕಂ॥ ಮಿಗೆ ಗರ್ವೋದ್ರೇಕದೆ ಸಂ
ಯುಗದೊಳ್ರಾಯರ್ಗಿದಿರ್ಚಿ ಕೈಗೆಯ್ದು ಮದಾ
ನಗರದ ನಿಜಾಮುಶಾಹನ
ಮೊಗಮಿಕ್ಕದ ತೆರದೆ ಧುರದೆ ಮುರಿದೋಡಿಸಿದಂ ೩೬

ವ॥ ಇಂತಮರ್ದ ರಣಾಂಕದೊಳಮದಾನಗರದ ನಿಜಾಮುಶಾಹನ ಮದೋದ್ರೇಕಮಂ ಮುರಿದು ಪಲಾಯನಂಗೊಳಿಸಲ್ ಕೃಷ್ಣರಾಯಂ ಪ್ರಮುದಿತಮಾನಸನಾಗಿ ಸದಾಶಿವರಾಯನಾಯಕಂಗೇಕಾಂಗವೀರನೆಂಬ ಬಿಂಕದ ಬಿರುದಿನಭಿಧಾನವನಿತ್ತು ಮತ್ತಂ [6]ಜಿಂಜಿಯ[6] ಕೃಷ್ಣಪ್ಪನಾಯಕಂಗೆ ಬಲವಂತನೆಂಬ ಬಿರುದಿನಭಿ[7]ಧಾ[7]ನಮಿರಲ್ ಬಿಡಿಸಿ ತತ್ಸದಾಶಿವರಾಯನಾಯಕಂಗಂ ಬಲವಂತನೆಂಬ ಬಿರುದಿನಭಿಧಾನಮುಮನನರ್ಘ್ಯರತ್ನಾಭರಣ ದಿವ್ಯಾಂಬರಂ ಮೊದಲಾದುಡುಗೊರೆ ವೀಳ್ಯಂಗಳುಮನಿತ್ತು ಮನ್ನಿಸಿ ಜಯೋತ್ಸವದೊಳ್ ಸಕಲ ಸೈನ್ಯಂಬೆರಸು ನಿಜಪುರಪ್ರವೇಶಂಗೈದು ರತ್ನಸಿಂಹಾಸನಾರೂಢನಾಗಿ ಸದ್ಧರ್ಮದಿಂ ರಾಜ್ಯಪ್ರತಿಪಾಲನಂಗೆಯ್ಯುತ್ತುಮಿರಲ್ ತತ್ಸಮೀಪದೊಳ್ ಪರಮವಿಖ್ಯಾತಿವಡೆದು ವರ್ತಿಸುತ್ತುಮಿರ್ದ[8]ದೊಂ[8]ದವಸರದೊಳ್

---

1 ವಿಡಿದು ತಂದು (ಕ) 2 ರಿಂಗೊ (ಕ) 3 ರ (ಕ) 4 ಮನೋಹರದಿವ್ಯತರನವರತ್ನಾಭರಣಾಂಬರತಾಂಬೂಲಂ (ಕಮ) 5 ಸಿಂಗಂ (ಕ) 6 ಚೆಂಚೀ (ಮ) 7 ಮಾ (ಕ) 8 ನಂತುಮಲ್ಲದೊಂ (ಕಮ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ|| ಲೂಟವರಿದಾಂತ ರಿಪುಸೇ
ನಾಟವಿಯಂ ನಿಜಕರಾಸಿಯಿಂ ತರಿದು ಕರಂ
ಮಿಾಟಾದ ಚಂದ್ರಗುತ್ತಿಯ
ಕೋಟೆಯನಾನೃಪತಿ ಲಗ್ಗೆಯೊಳ್ ಸಾಧಿಸಿದಂ ೩೭

ಚಂ||ಮಾ|| ಬಗೆ[1]ಯದೆ[1] ರಾಯರಟ್ಟಿದ ನಿರೂಪವನದ್ಭುತಸೈನ್ಯಗೂಡಿ ಸಂ
ಯುಗದೊಳಿದಿರ್ಚಿ ನಿಂದೆಸೆವ ಗುತ್ತಿಯ ಸಾಳುವನಾಯಕೇಂದ್ರನಂ
ಜಗುಳಿಸಿ ಯುದ್ಧದೊಳ್ ಪಿಡಿದು ರಾಯರಿಗೊಪ್ಪಿಸಿ ಮನ್ನೆಯರ್ಕಳೊಳ್
ಮಿಗಿಲೆನೆ ಸಾಸಮಂ ಮೆರೆದನೈದೆ ಸದಾಶಿವರಾಯನಾಯಕಂ ೩೮

ವ|| ಮತ್ತಮದಲ್ಲದೊಂದವಸರದೊಳಾ ಸದಾಶಿವರಾಯನಾಯಕಂ

ಕಂ|| ಧರೆಗಧಿಕನೆನಿಪ ಬಂಕಾ
ಪುರದುರುಮಾದಣವೊಡೆಯರುಮಂ ಶಿಕ್ಷಿಸಿ ರಾ
ಯರಿನಷ್ಟಾದಶಕಂಪಣ
ವೆರೆದಾಗರದವನಿಯ ವರಮಂ ನೆರೆ ಪಡೆದಂ ೩೯

ವ|| ಮತ್ತಮದಲ್ಲ[2]ದಾ[2] ಸದಾಶಿವರಾಯನಾಯಕಂ ರಾಯರನುಮತಿಯಿಂ ಬಂಕಾಪುರವ ಮಾದಣವೊಡೆಯರ ಮುಖದಿಂ ಮದಗದ [3]ಕೆ[3]ಲಸಮಂ ಸಂಪೂ[4]ರ್ಣಮನಾಗಿಸಿ[4] ತನ್ಮಹಾತಟಾಕದೆಡೆಯೊಳ್ ಶೃಂಗಪುರದಿಂ ಸ್ವಾಮಿಗಳಂ ತೆರಳ್ಚಿಸಿ ತಂದು ರಾಯರ್ಗಂ ತತ್ಸ್ವಾಮಿಗಳ್ಗಂ ಭೇಟಿಯಂ ಮಾಡಿಸಿ ತದುಭಯಮುಖದಿಂದಧಿಕಸನ್ಮಾನಂಬೆತ್ತನಂ[5]ತು ಮಲ್ಲದೆಯುಂ[5]

ಕಂ|| *ಮತ್ತಮಾ ರಾಯರಿಂಗಂ
ತೆತ್ತಿಗನೆಂದೆನಿಸಿ ನಡೆಯದುರೆ ಮಾರ್ಮಲೆತಾ
ಮುತ್ತಿಯ ತಿಮ್ಮಾಖ್ಯೆಯ ದು
ರ್ವೃತ್ತನ ನಿಗ್ರಹಿಸಿ ರಾಯರಂ ಮೆಚ್ಚಿಸಿದಂ ೪೦

ವ|| ಮತ್ತಮದಲ್ಲದೊಂದವಸರದೊಳಾ ಸದಾಶಿವರಾಯನಾಯಕಂ ಕೃಷ್ಣರಾಯರಿಂ ಬೆಸಂಬಡೆದು ಘಟ್ಟವನಿಳಿದು ಪರಶುರಾಮಕ್ಷೇತ್ರಮಂ ಸಾರ್ದು

---

[1] ಬಗೆ (ಮು) [2] ದೊಂದವಸರದೊಳ್ (ಮು) [3] ಕೆರೆಯಕೆ (ಕ) [4] ರ್ಣಂಗೆಯಿಸಿ (ಮು)
[5] ತರ (ಮು)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ|| *ತುಳುವರಾಜರ್ಕಳೆಲ್ಲಂ
ಮಲೆತಿರೆ ನಿಗ್ರಹಿಸಿ ಮೆರೆವ ಕಾಸರಗೋಡೊಳ್
ತೊಲಗದ ಕಂಬವನಾ ನೃಪ
ತಿಲಕಂ ತಾ ನಿಲಿಸಿ ಮೆರೆದನತಿಸಾಹಸಮಂ ೪೧

ವ|| ಇಂತು ಮಲೆತಿರ್ಪ ತುಳುವಮನ್ನೆಯರ ಮದಮಂ ಮುರಿದು ಸ್ವಾಧೀನಂಗೆಯ್ದು ಕರಮಂ ಕೊಂಡು ಹಣಮಣಿಹಮಂ ತೆತ್ತು ನಡೆವಂತು ಕಟ್ಟಳೆಯಂ ರಚಿಸಿ ಮರಳ್ದೈತಂದು ರಾಯರಿಂದುಚಿತಮಾದುಡುಗೊರೆ ಮುಂತಾದ ಬಹುಮಾನಮಂ ಪಡೆದಾ ರಾಯರಿಂದಪ್ಪಣೆವೆತ್ತು [1]ಸೈನ್ಯಸಮೇತನಾಗತ್ಯಂತಸಂಭ್ರಮದಿಂ ತೆರಳ್ದೈತಂದಿಕ್ಕೇರಿಯ ಪುರವರಮಂ ಪೊಕ್ಕು ಭದ್ರಸಿಂಹಾಸನಾಸೀನನಾಗಿ ಸದ್ಧರ್ಮದಿಂ ರಾಜ್ಯಪ್ರತಿಪಾಲನಂಗೈದನಂತುಮಲ್ಲದೆಯುಂ

ಕಂ|| ಉರುತರ ಕೆಳದಿಯ ರಾಮೇ
ಶ್ವರದೇವರ ನಂದಿಮಂಟಪವನಧಿಕಮನೋ
ಹರಮಾಗೆ ಶಿಲಾಮಯಮಂ
ವಿರಚಿಸಿದಂ ಶಿಲ್ಪಶಾಸ್ತ್ರಕೌಶಲವಿಧಿಯಿಂ ೪೨

ರಾಮೇಶ್ವರಲಿಂಗದ ಸ
ದ್ವಾಮದೊಳುಜ್ಜ್ವಲಿಪ ಪಾರ್ವತೀಮೂರ್ತಿಯನು
ದ್ದಾಮಾಗಮವಿಧಿಯಿಂ ತ
ದ್ಭೂಮಿಪತಿಲಕಂ ಪ್ರತಿಷ್ಠೆಯಂ ವಿರಚಿಸಿದಂ ೪೩

ಮಂಗಲಮಯರಾಮೇಶ್ವರ
ಲಿಂಗದ ನಿತ್ಯಾರ್ಚನಾರ್ಥಮತಿವಿಲಸದ್ಗ್ರಾ
ಮಂಗಳನಾ ನೃಪತಿಕುಲೋ
ತ್ತುಂಗಂ ಸದ್ಭಕ್ತಿಯಿಂದೆ ಧಾರೆಯನೆರೆದಂ ೪೪

ರಾಜಿಪ ತದ್ರಾಮೇಶನ
ಪೂಜೆಯೊಳೊಂದಿನಿತು ಲೋಪಮಾಗದ ತೆರದಿಂ
ರಾಜನಿಭನಾ ಸದಾಶಿವ
ರಾಜಂ ನಡೆಯಿಸಿದನಾಗಮೋಕ್ತಕ್ರಮದಿಂ ೪೫

1 ಕೆ (ಬ)

Sri Vidyabharathi Book Centre, Sringeri

CC-O. In Public Domain. Digitized by eGangotri

*ಮತ್ತಮಾ ಕೆಳದಿಯೊಳ್ ಜಿ
ರ್ಣ್ಣೈತ್ತು ವಿರಾಜಿಸುತುಮಿಹ ಮಹತ್ತಿನ ಮಠಮಂ
*ಬಿತ್ತರಂಗೈಸಿ ಜಂಗಮ
ಕುತ್ತಮತರದಾನಧರ್ಮಗಳನಾಗಿಸಿದಂ ೪೬

ವ|| ಮತ್ತಮದಲ್ಲದಾ ಸದಾಶಿವರಾಯನಾಯಕನಾರಗದ ಕುಶಾವತೀನಗರದ ನದೀತೀರದೊಳ್ ಸದಾಶಿವಪುರವೆಂಬಗ್ರಹಾರಮಂ ಕಟ್ಟಿಸಿ ಭೂಸುರರ್ಗಮತ್ಯುತ್ತಮನಿವೇಶನನ್ಯವೃತ್ತಿಕ್ಷೇತ್ರಂಗಳಂ ಕಲ್ಪಿಸಿ ಶಿವಾರ್ಪಿತಮಾಗಿ ಧಾರೆಯನೆರೆದು ಸ್ಥಿರಶಾಸನಮಂ ಬರೆಸಿತ್ತು ಮತ್ತಂ ತದಗ್ರಹಾರದೊಳ್ ಸ್ವನಾಮಾಂಕಿತಮಾದ ಶಿವಲಿಂಗಮನಾಗಮೋಕ್ತ ವಿಧಾನದಿಂ ಪ್ರತಿಷ್ಠೆಯಂ ವಿರಚಿಸಿ ದೇವಾಲಯಮಂ ನಿರ್ಮಾಣಂಗೈಸಿ ತಲ್ಲಿಂಗಪೂಜಾರ್ಥಮತಿಮನೋಹರಮಾದ ಭೂಸ್ವಾಸ್ಥೆಯಂ ಧಾರೆಯನೆರೆದು ಶಾಶ್ವತಮಾದ ಸುಕೃತಧರ್ಮಕೀರ್ತಿಗಳುಮಂ ಸಂಪಾದಿಸಿದನಂತುಮಲ್ಲದೆಯುಂ

ಕಂ|| ಭೀಮಂ ಸಂಗರದೊಳ್ ಸು
ತ್ರಾಮಂ ಭೋಗದೊಳ್ ಶಾಂತಿಗುಣದೊಳ್ ಸೋಮಂ
ರಾಮಂ ನನ್ನಿಯೊಳೆಂದೀ
ಭೂಮಿಜನಂ ಪೊಗಳೆ ಬಾಳ್ದನಾ ನರನಾಥಂ ೪೭

ವ|| ಮತ್ತಮದಲ್ಲದೆ

ಕಂ|| ಅಪರಿಮಿತಗುಣಗಣಾಲಯ
ನುಪಮಾತೀತಪ್ರತಾಪನೆಂದೆನಿಸಿ ಧರಾ
ಧಿಪರತ್ನನಾ ಸದಾಶಿವ
ನೃಪನತಿಸದ್ಧರ್ಮದಿಂದಮಿಳೆಯಂ ಪೊರೆದ: ೪೮

ವ|| ಈ ಸದಾಶಿವನಾಯಕರ್ ‡ತಮಗೆ ರಾಜ್ಯಪಟ್ಟವಾದ ಶ್ರೀಮುಖ ಸಂವತ್ಸರದ ಶ್ರಾವಣ ಶುದ್ಧ ೩ ಆರಭ್ಯ ‡ವಿಶ್ವಾವಸು ಸಂವತ್ಸರದ ವೈಶಾಖ ಶುದ್ಧ ೪ ನೆಲೆಗೆ ವರ್ಷಂ ೩೧ ತಿಂಗಳ್ ೯ರ ಪರ್ಯಂತಂ ಸದ್ಧರ್ಮದಿಂ ರಾಜ್ಯಪ್ರತಿಪಾಲನಂಗೈ'ದರ್[1]

ದ್ವಿತೀಯಾಶ್ವಾಸಂ ಸಂಪೂರ್ಣಂ

---

[1] ದರ್ ಈ ಸದಾಶಿವನಾಯಕರಿಗೆ ರಾಯರ ರಾಜಕಾರ್ಯದ ಮೇಲೆ ಜಗ್ಗು ಪಾಳ್ಯವೆಂಬಸ್ಥಳದಲ್ಲು ದೇಹಾಯಾಸತೊಡಗಿ ಐಕ್ಯವಾದಲ್ಲಿ ಆ ಸ್ಥಳದಲ್ಲಿಯೇ ಸಮಾಧಿಯಾಯ್ತು (ಕ)

‡ ಈ ಭಾಗ (ಮ) ಪ್ರತಿಯಲ್ಲಿಲ್ಲ

Sri Vidyabharathi Book Centre, Sringeri

CC-O. In Public Domain. Digitized by eGangotri

ತೃತೀಯಾಶ್ವಾಸಂ

ವ|| ಸದಾಶಿವರಾಯ ನಾಯಕರ ತರುವಾಯ ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ೧೪೬೮ನೆಯ ವಿಶ್ವಾವಸು ಸಂವತ್ಸರದ ವೈಶಾಖ ಶುದ್ಧ ೫ಯಲ್ಲಿ ಸದಾಶಿವ ನಾಯಕರ ಜ್ಯೇಷ್ಠಕುಮಾರರಾದ ದೊಡ್ಡ ಸಂಕಣ್ಣನಾಯಕರಿಗೆ ಇಕ್ಕೇರಿಯರಮನೆಯಲ್ಲಿ ರಾಜಪಟ್ಟಂ

ಕಂ|| ಆ ಸದಾಶಿವನರೇಂದ್ರಾ
[1]ಗ್ರೇಸರಾನಂತರಪಾತ[1]ನಾತ್ಮಜನೆನಿಪಾ
ಶ್ರೀ ಸಂಕಣನೃಪನರಿಗಜ
ಕೇಸರಿ ಸದ್ಧರ್ಮದಿಂದಮಿಳೆಯಂ ಪೊರೆದಂ ೧

ಜಂಬೂರ ವಿರುಪಣವೊಡೆಯ
ರೆಂಬವನುಪಟಳವನೆಸಗೆ ಸಂಕಣನೃಪನಾ
ಜಂಬೂರಂ ಕೊಂಡುರೆ ಕ
ಣ್ಗೆಂಬಾದುಡುಗುಣಿಯ ಕೋಂಟೆಯಂ ವಶಗೈದಂ ೨

ವ|| ಇಂತು ಜಂಬೂರುವಿರುಪಣವೊಡೆಯರಂ ಮುರಿಯಲಾತಂ ವಿದ್ಯಾನಗರಿಗೈದಿ ರಾಯರ್ಗೆ ದೂರಲಾ ವರ್ತಮಾನಮಂ ಕೇಳ್ದು ಕರೆಯಲಟ್ಟಲ್ ತಾಂ ಬರ್ಪನ್ನೆಗಂ ಸದ್ಧರ್ಮದಿಂ ರಾಜ್ಯವಿಚಾರಂಗೆಯ್ವುದೆಂದು ತನ್ನನುಜ ಚಿಕ್ಕಸಂಕಣನಾಯಕಂಗೆ ನಿಯಾಮಿಸಿ ಕುಟುಂಬಸಹಿತಮಾ ದೊಡ್ಡಸಂಕಣನಾಯಕಂ ತೆರಳ್ದು ವಿದ್ಯಾನಗರಿಗೈದಿ ರಾಮರಾಯರಂ ಸಂಧಿಸಲ್ ಜಂಬೂರುಡುಗುಣಿಗಳನಾ ವಿರುಪಣವೊಡೆಯರಿಂಗಿತ್ತು ನೀಂ ಹುಜೂರೊಳಿರ್ಪುದೆಂದು ನಿಯಾಮಿಸಲಿಂತು ರಾಯರ ಸಮೀಪದೊಳ್ ತದ್ರಾಜಕಾರ್ಯಾನುಕೂಲಿಯಾಗಿ ಕತಿಪಯವತ್ಸರಂ ವರ್ತಿಸುತ್ತುಮಿರಲಾ ಪ್ರಸ್ತಾವದೊಳ್

---

1 ಗ್ರೇಸರನಂತದೊಳಾತ (ಬ ಕ) ಇದು ಕವಿಯ ಅಜಾಗರೂಕತೆಯಿಂದ ಆದ ತಪ್ಪೆಂದು ತೋರುತ್ತದೆ. ಮೇಲ್ಕಂಡಂತೆ ತಿದ್ದಿದರೂ ಗಣನಿಯಮವನ್ನು ಮೀರಿದಂತಾಗುವುದು. ಗಣನಿಯಮಕ್ಕೆ ಲಕ್ಷ್ಯಕೊಡದೆ ಬರೆದಿರುವ ಅನೇಕ ಕಂದಗಳಿದ್ದರೂ ಎರಡನೆಯ ಪಾದದಲ್ಲಿ ಗಣನಿಯಮವನ್ನು ಈತನು ಮೀರುವುದು ಕೇವಲ ಅಪರೂಪ. ಮೀರಿಯೇ ಇಲ್ಲವೆಂದು ಹೇಳಬಹುದು. ಆದರೂ ಇದ್ದುದರಲ್ಲಿ ಈ ಪಾಠವೇ ಉತ್ತಮವೆಂದು ಕಂಡುಬಂದುದರಿಂದ ಹೀಗೆ ತಿದ್ದಿದ್ದೇವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ|| ಮೆರೆವಾ ಸಂಕಣಭೂಮಿಾ
ಶ್ವರಗಿರ್ವರ್ ಪುತ್ರರೊಗೆದರವರೊಳ್ ಪಿರಿಯಂ
ಧುರಧೀರರಾಮರಾಜಂ
ಕಿರಿಯಂ ವೆಂಕಟನೃಪಾಲನರಿಕುಲಕಾಲಂ ೩

ವ|| ಇಂತೊಗೆದ ಸತ್ಪುತ್ರರಿರ್ವರ್ ದಿನದಿನಂಗಳೊಳಭಿವರ್ಧಿಸಿ ಮನೋಹರಾಕಾರ ಯುಕ್ತರಾಗಿ ಭೂಮಂಡಲಕ್ಕವತರಿಸಿದ ರವಿಚಂದ್ರರೆಂಬಿನಂ ವಿರಾಜಿಸುತ್ತುಂ ಬಾಲ ಲೀಲೆಯಂ ನಟಿಸುತ್ತುಮಿರಲಾ ಪುತ್ರರಿರ್ವರಂ ರಾಯರ್ಗೆ ಕಾಣಿಸಲವರ್ಗಳ ರೂಪರೇಖಾ ಸದಾಶಿವ ವಿಶೇಷಂಗಳಂ ನಿಟ್ಟಿಸಿ ಮುಂತೀ ಬಾಲಕರ್ ಮಹಾವರ್ಧಿಷ್ಣುಗಳಪ್ಪರೆಂದತ್ಯಂತ ಹರ್ಷಿತನಾಗಿ ಪಿಂತೆಮ್ಮ ಸಂಸ್ಥಾನದ ರಾಜಕಾರ್ಯಂಗಳೊಳತಿಸಾಹಸಂಗೈದು ಜಯ ಕಜ್ಜಂ ಗಳನಾಗಿಸಿದ ರಾಯ ನಾಯಕನ ಮೊಮ್ಮಂದಿರೆಂಬ ವಾತ್ಸಲ್ಯದಿಂದಾ ಕುಮಾರರ್ಗೆ ಪಾಲ್ಬೆಣ್ಣೆ ಯುಂಬಳಿಗೆಂದು ನಿಯಾಮಿಸಿ

ಕಂ|| ಮಾಸೂರಂ ಮಲ್ಲೂರಂ
ಭಾಸುರಮೆನಿಸಿರ್ಪ ಪೊಳೆಯ ಪೊನ್ನೂರಂ ಭೂ
ವಾಸವ ಸಂಕಣಭೂಪಂ
ಗಾ ಸಮಯದೊಳಿತ್ತು ಪೆರ್ಮೆಯಿಂ ಮನ್ನಿಸಿದಂ ೪

* ಮತ್ತಮಾ ಬಾಲರಿಂಗ
ತ್ಯುತ್ತಮಹಯದಿವ್ಯಭೂಷಣಾಂಬರಗಳನೊ
ಲ್ದಿತ್ತಣುಗರನೀಕ್ಷಿಸಿ ಪೊರೆ
ಯುತ್ತಿಹುದೆಂದೊರೆದು ಕೂರ್ಮೆಯಿಂ ಬೀಳ್ಕೊಟ್ಟಂ ೫

ವ|| ಇಂತು ರಾಜಯೋಗ್ಯಮಾದುಡುಗೊರೆಗಳನಿತ್ತು ಬೀಳ್ಕೊಡಲ್ ಸಂಕಣನಾಯಕಂ ಸಂತಸಂದಳೆದು ನಿಜಾವಾಸಮಂ ಸಾರ್ದು ಸುಖವಿರುತ್ತುಮಿರಲೊಂದವಸರದೊಳ್ ರಾಮರಾಯರೋಲಗದೊಳ್ ಕುಳ್ಳಿರ್ದೆಲ್ಲಾ ದುರ್ಗಂಗಳೆಮ್ಮಧೀನಮಾದುವವಿದ್ಧಕರ್ಣ ರಾಳುತ್ತಿರ್ಪ ಗೋವೆಯ ಗಡನೊಂದೇನಾದೊಡಂ ಸಾಧ್ಯಮಾದುದಿಲ್ಲೆಂತಾದೊಡಮಾ ಗಡಮಂ ಸಾಧ್ಯಂಗೆಯ್ಯಲ್ವೇಳ್ಕುಮೆಂದು ನಿಜನಿಯೋಗಿಜನರೊಳಾಳೋಚಿಸಿ ಪಿಂತೆಮ್ಮ ಸಂಸ್ಥಾನ ಕ್ಕೊದವಿದ ರಾಜಕಾರ್ಯಂಗಳೊಳತಿಸಾಹಸಂಗೆಯ್ದು ಜಯಕಜ್ಜಂಗಳನಾಗಿಸಿ ಪರಮ ಪ್ರಖ್ಯಾತಿಯಂ ಪಡೆದ ಸದಾಶಿವನಾಯಕನಾತ್ಮಜನಪ್ಪ ಸಂಕಣನಾಯಕನ್ನೈತಂದಿರ್ಪನೀತನ ಮುಖದಿಂದಾದೊಡಮಾಕಾರ್ಯಮಂ ಸಾಧಿಸಲ್ವೇಳ್ಕುಮೆಂದು ಮನಂದಂದು ನಿಜಾನುಜನಪ್ಪ ವಿಟ್ಠಲರಾಯನನಾ ರಣಕಾರ್ಯಕ್ಕೆ ಪ್ರಯಾಣವನೊಡರ್ಚಿಸಿ ಸಂಕಣ

Sri Vidyabharathi Book Centre, Sringeri.

CC-O. In Public Domain. Digitized by eGangotri

ನಾಯಕನಂ ಕರೆಸಿ ಸ್ವಮನೋಭಿಪ್ರಾಯಮನುಸಿರ್ದು [1]ಬೇಗದಿಂ[1] ನಡೆದೆಮ್ಮ ಕಜ್ಜಮಂ ಶೇಖರಂಗೆಯ್ವುದೆಂದೊರೆದು ಸೇನಾಸಮೂಹನುಂ ಕೈವರ್ತಿಸಿ ಬೀಳ್ಕೊಡಲೊಡನಾ ಪ್ರಸ್ತಾವದೊಳ್

ಕಂ|| ಶ್ರೀ ವಿಟ್ಠಲರಾಯರ ಕೊ
ಡಾ ವಿಭುವರನೈದಿ ದಾಳಿವರಿದಂಬುಧಿವ
ರ್ಧ್ಯಾವಷ್ಟಂಭನಮೆನಿಸಿದ
ಗೋವೆಯ ಗಡವಂ ಸಮಿಾಕದೊಳ್ ಸಾಧಿಸಿದಂ ೬

ವ|| ಇಂತು ಗೋವೆಯ ಗಡಮಂ ಕೊಂಡು ಮರಳ್ದೊಡನಾ ಸಂಕಣನಾಯಕಂ ರಾಯರಂ ಕಾಣಲತ್ಯಂತಪ್ರಮುದಿತಮಾನಸರಾಗಿ ಮಾಳೇನಹ[2]ಳ್ಳಿ[2] ಹೋಬಳಿಯನುಚಿತ ಮಾಗಿತ್ತನರ್ಘ್ಯರತ್ನಾಭರಣಾಂಬರತಾಂಬೂ[3]ಲಮಂ[3] ಭುಜಕೀರ್ತಿ ಮುಂತಾದ ಬಿರುದುಗಳುಮಂ ತತ್ಪತ್ರಗ್ರುಚಿತಮಾದುಡುಗೊರೆವೀಳ್ಯಂಗಳುಮನಿತ್ತಾದರಿಸಿ ಬೀಳ್ಕೊಡಲಪ್ಪಣೆಗೊಂಡತ್ಯಂತಹರ್ಷದಿಂ ಸ್ವಕುಟುಂಬಸಹಿತಂ ವಿದ್ಯಾನಗರಿಯಿಂ ತೆರಳ್ದೈತಂದಿಕ್ಕೇರಿಪುರವರಮಂ ಸಾರ್ದನಂತರಂ ಸ್ವಪುತ್ರರಪ್ಪ ರಾಮರಾಜನಾಯಕ ವೆಂಕಟಪ್ಪನಾಯಕರ್ಗಮತ್ಯಂತ ಮನೋಹರಾಕಾರಯುಕ್ತರಾದ ಕನ್ಯಾರತ್ನಂಗಳಂ ಪರಮಸಂಭ್ರಮದಿಂ ವಿವಾಹಮಂ ರಚಿಸಿ ಸುಖಸಂಕಥಾವಿನೋದದಿಂ ರಾಜ್ಯಮನಾಳುತ್ತಿರ್ದು ವಿದ್ವನ್ಮುಖದಿಂ ಸಮಸ್ತಶಾಸ್ತ್ರಂಗಳನಾರೈದು ತಿಳಿದು ಭುವನಕೋಶಾದಿ ವಿವರಣಂಗಳಂ ಕೇಳ್ದು ದೇಶಾಟನಂ ಮಾಡಲ್ವೇಳ್ಕುಮೆಂದು ಮನಂದಂದು ನಿಜರಾಜ್ಯಭಾರಮಂ ತನ್ನನುಜನಹ ಚಿಕ್ಕಸಂಕಣನಾಯಕಂಗೆ ಕೈವರ್ತಿಸಿ ಸ್ವಪುತ್ರರನಾತನ ಸಮಿಾಪದೊಳಿರಿಸಿ ಸಂಗಡಂ ನಾಲ್ವರೂಳಿಗದವರ್ವೆರಸು

ಕಂ|| * ಭಸಿತರುದ್ರಾಕ್ಷಮಾಲಾ
ಪ್ರಸರಂಗಳನಾಂತು ಕಾವಿಕಾಷಾಯಾಂಬರ
ಮೆಸೆಯಲ್ ನಾಗರಮರಿಯೊಂ
ಬಸಿಯಂ ಕೊಂಡಧಿಕಹರುಷದಿಂ ಪೊರಮಟ್ಟಂ ೭

ವ|| ಇಂತತೀತಜಂಗಮವೇಷಮಂ ತಾಳ್ದು ಪೊರಮಟ್ಟು ತೆಂಕಲಭಿಮುಖನಾಗಿ ನಡೆಯುತ್ತುಂ ಸ್ವದೇಶಮಂ ಕಳೆದು ಗ್ರಾಮೈಕರಾತ್ರಿನಿವಾಸಿಯಾಗಿರುತ್ತುಂ ತತ್ತದ್ದೇಶಂಗಳೊಳುಳ್ಳ ಪುಣ್ಯಕ್ಷೇತ್ರತೀರ್ಥಲಿಂಗದೇವತಾವಿಶೇಷಭೇದಾದಿಗಳುಮಂ ತತ್ತದ್ವಿಷಯಜನಂಗಳ ನಡೆ ನುಡಿಯುಡುಗೆ ತೊಡುಗೆ ಮುಂತಾದ ನಾನಾವಿಧ ವಿಚಿತ್ರತರ ರಚನಾಪ್ರೌಢಿಗಳನಾಲೋಕನಂಗೆಯ್ಯು[4]ತ್ತುಂ ತೆರಳ್ದು[4]

---

1 ಬೀಗಿಯಂ ([illegible]) 2 [illegible] ([illegible]) 3 [illegible] ([illegible]) 4 ತ್ತುಂ (ಮ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ॥ [1]ಮೆರೆವ ಶಿವಗಂಗೆಯುಂ ತ
ನ್ನರಪತಿ ನಿಟ್ಟಿಸುತೆ ಕಂಚಿಯುಂ ಪೊರ್ದಿ ಚಿದಂ
ಬರಮಂ ಶ್ರೀಮುಷ್ಣಮನುಳಿ
ದುರುತರಗೌರೀಮಯೂರಮಂ ನೆರೆ ಸಾರ್ದಂ ೮

ಅಮಲಿನ ಮಧ್ಯಾರ್ಜುನ ಸ
ತ್ಕಮಲಾಲಯ ಕುಂಭಕೋಣ ವರಪಂಚನದಂ
ಕ್ರಮದೆ ಮನ್ನಾರ[2]ಪುರುಷೋ[2]
ತ್ತಮ ನವಪಾಷಾಣಮೆಂಬಿವಂ ಮಿಗೆ ಸಾರ್ದಂ ೯

ಬೇತಾಳಪಟ್ಟಣವನಾ
ಭೂತಲಪತಿ ಪೊರ್ದಿ ಸಾರ್ದು ರಾಮೇಶ್ವರಮಂ
ಸೇತು ಮಹೋದಧಿ ಸುಕೃತ
ದ್ಯೋತನ ರತ್ನಾಕರಂಗಳಂ ನಿಟ್ಟಿಸಿದಂ ೧೦

ವ॥ ಇಂತು ಸೇತುದರ್ಶನಂಗೈದನಂತರಮಾ ಸಂಕಣನಾಯಕಂ[1] ರಾಮೇಶ್ವರದಿಂ ತೆರಳ್ದುತ್ತರದಿಶಾಭಿಮುಖನಾಗೈದುತ್ತುಂ

ಕಂ॥ ಬಗೆಬಗೆಯ ದೇಶಕೋಶಾ
ದಿಗಳಂ ನಿಟ್ಟಿಸುತೆ ವಿಜಯಪುರಮಂ ಭಾಗಾ
ನಗರಮುಮಂ ಕಳೆದಮುದಾ
ನಗರವನುಳಿದೆಸೆವ ಡಿಳ್ಳಿಯಂ ನೆರೆ ಪೊಕ್ಕಂ ೧೧

‡ಪರಿಶೋಭಿಸುವಾ ಪೊಳಲ್ಗೆ
ಸಿರಿಯಂ ನೆರೆನೋಡಿ ನೋಡಿ ಸಂತಸವಡುತುಂ
ಕರಮೆಸೆವಾ ಡಿಳ್ಳೀಶ್ವರ
ನು[ರು]ರಾಜದ್ವಾರನಿಕಟಮಂ ಮಿಗೆ ಸಾರ್ದಂ‡ ೧೨

---

1 ಶಿವಗಂಗೆ ಕಂಚಿಮಧ್ಯಾರ್ಜುನ ಕುಂಭಕೋಣ (ಮ) 2 ಪರಮೋ (ಒಕಗ)

‡ ಈ ಪದ್ಯ (ಮ) ದಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಎಸೆವಾ ಪೆರ್ವಾಗಿಲ ಮುಂ
ದೆಸೆಯೊಳ್ ನಿಜಬಿರುದುವೆರ'ಸು[1] ಕಟ್ಟಿಹ ಕಡುಕೂ
ರಸಿಯುಂ ತನ್ನೃಪನರನೀ
ಕ್ಷಿಸಿ ಶಿರಮಂ ತೂಗಿ ತೂಗಿ ಸ್ಮೈವೆರಗಾದಂ ೧೩

ವ॥ ಇಂತಾ ರಾಜದ್ವಾರದೊಳ್ ಬಿರುದುವೆರಸು ಕಟ್ಟಿರ್ದ ಕೂರಸಿಯುಂ ಸಂಕಣ ನಾಯಕನಭಿವೀಕ್ಷಿಸಿ ಬೆರಗಾಗುತ್ತುಂ ದ್ವಾರಪಾಲಕರಂ ಕರೆದಿಂತು ರಾಜದ್ವಾರ[2]ದೊಳ್ ಬಿರುದುವೆರಸು[2] ಖಡ್ಗಮುಂ ಕಟ್ಟಿರ್ಪ ಕಾರಣಮೇನೆಂದು ಬೆಸಗೊಳಲವರ್ಕಳಿಂತೆಂದರ್

ಉ॥ಮಾ॥ ಅಂಕುಶಖಾನನೆಂಬತಿಪರಾಕ್ರಮಶಾಲಿ ವಜೀರವರ್ಯನಾ
ರುಂ ಕರವೊಂಟಿಗತ್ತಿಯ ಸಮೀ[3]ಕ[3]ದೊಳೆನ್ನೊಳಿದಿರ್ಚಿ ನಿಲ್ವರಿ
ಲ್ಲಂಕದೊಳಾಂತು ನಿಲ್ವದಟನುಳ್ಳೊಡೆ ಬಾಳನಿದಂ ಕಳಲ್ಚಲೆಂ
ದಂಕಿತಗೈದು ಕಟ್ಟಿಹನೆನಲ್ ನುಡಿದಂ ನಗುತಾ ನರಾಧಿಪಂ ೧೪

ಕಂ॥ ಅಂತಪ್ಪಧಿಕಪರಾಕ್ರಮ
ವಂತನೆ ನುಡಿದಾ ವಜೀರನೆನಲಹುದೀ ಭೂ
ಕಾಂತನಿಳೆಯೊಳಗವನ ಬಿರು
ದಂ ತಡೆವದಟರ್ಕಳಿಲ್ಲವೆಂದವರುಸಿರ್ದರ್ ೧೫

ಭೂಕಾಂತಂ ದ್ವಾರದೆ ಬಿಗಿ
ದೀ ಕಳ್ತಿಯನೀಕ್ಷ್ಸಿ ತದ್ವಜೀರನ ದರ್ಪೋ
ದ್ರೇಕವನಂಕದೆ ಮುಗ್ಗಿಪ
ಭೀಕರಭಟರಿಲ್ಲವೆಂದು ಚಿಂತಿಸುತಿರ್ಪಂ ೧೬

ವ॥ ಇಂತೆಂದುಸಿರ್ದ ಪಡಿವಳರುಕ್ತಿಯನಾ ಸಂಕಣನಾಯಕಂ ಕೇಳ್ದವನತ್ಯಂತಪರಾಕ್ರಮಶಾಲಿಯಾದೊಡೆನ್ನೊಳ್ ಕಾಳಗಕ್ಕಿದಿರ್ಚಿ ನಿಲಲೆಂದುಸಿರ್ದೊಡನಿರ್ಪೊಳಿಗದವರ್ಕಳಿಂದಾ ಕಳ್ತಿಯಂ ಕಳಲ್ಚಿಸಿ ತೆಗೆಸಲನಿತರೊಳೀ ವೃತ್ತಾಂತಮಂ ಪಡಿಯರರ ಮುಖದಿಂ ಪಾತುಶಾಹಂ ಕೇಳ್ದು ಬೆರಗುವೆತ್ತು ಸಂಕಣನಾಯಕನಂ ಸಮೀಪಕ್ಕೆ ಬರಿಸಿ ನೀನಾರ್ ನೀನಿರ್ಪ ದೇಶ ಮಾವುದೆತ್ತಣಿಂದೆಳ್ತಂದೆಯೆಂದು ಬೆಸಗೊಳಲತಿಥಿಗಳಾಗಿ ಗ್ರಾಮೈಕರಾತ್ರಿ ಸಂಚಾರ ಶೀಲರಾಗಿರ್ಪೆಮಗೆಲ್ಲದೇಶಂಗಳೆಮ್ಮ ದೇಶಂಗಳಾಗಿರ್ಪುವೆನಲಂತಾದೊಡೊಂಟಿ

---

[1] ಸಿ (ಒಕ) [illegible] (ಗ) [3] [illegible] (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳ್ತಿಯ ಕಾಳಗದೊಳವಂಗಿದಿರ್ಚಿ ನಿಲಲಾಪೆಯಾಯೆಂದು ಬೆಸಗೊಳಲ್ ಬಹೂಕ್ತಿಗಳಿಂ ದೇನಾ ವಜೀರನಂ ಬರಿಸಲ್ ಯುದ್ಧರಂಗದೊಳ್ ಕಾಣಲಹುದೆನಲೀ ಮಾತಂ ಪಾತುಶಾಹಂ ಕೇಳ್ದಾ ಸಂಕಣನಾಯಕನ ಮುಖಮಂಡಲ ತೇಜೋವಾಕ್ಪಟುತ್ವಂಗಳಂ ಬಲ್ಪುಮನೆರ್ದೆ ಗೊಂಡಿನಂ ಸಾಧಾರಣಪುರುಷನಲ್ತೆನ್ನ ರಾಜದ್ವಾರದೊಳ್ ಕಟ್ಟಿರ್ದ ಬಿರುದಿನ ಜಂಜಡನ ನೀತನ ಮುಖದಿಂದಾದೊಡಂ ಕಳೆದಪೆನೆಂದು ನಿಶ್ಚಯಂಗೈದು ಸಮಸ್ತಮಂತ್ರಿ ಮನ್ನೆಯ ಮಂಡಲಿಕನಿಯೋಗಿಸಾಮಾಜಿಕ ವಜೀರ [1]ಮುಂತಾದ[1]ವರುಮಂ ಮತ್ತಂ ನಾನಾಯುಧ ಯುದ್ಧಕೌಶಲವಿಶಾರದರಪ್ಪ ಪಟುಭಟರ್ಕಳುಮಂ ಬಿರುದಿನ ಮಾಸಾಳ್ಗಳುಮಂ ಮತ್ತಂ ತನ್ನ ಪೊಳಲೊಳಿರ್ಪ ಸಕಲಕಲಾಪ್ರವೀಣರುಮನಾಬಾಲವೃದ್ಧರ್ ಮುಂತಾದ ನೋಟ ಕರ್ಕಳುಮಂ ಶೀಘ್ರದೊಳೈತರ್ಪುದೆಂದು ನಿಯಾಮಿಸಿ ಬಳಿಕ್ಕೀ ವೃತ್ತಾಂತಮಂ ತಿಳಿಪಿ ಕಾಳಗಕ್ಕಂಕುಶಖಾನನಂ ಕರೆತರ್ಪುದೆಂದಾಳಿಗದವರ್ಗುಸಿರ್ದು ಸಂಕಣನಾಯಕಂಗಂ ಶಾಲಿ ತಂಡುಲ ಶರ್ಕರಾಢಕ ಚಣಕಗೋಧೂಮ ಗುಡ ಘೃತಕುಂಭ ರಂಭಾಫಲ ತಾಂಬೂಲಾದ್ಯ ಶೇಷ ಸೋಪಸ್ಕರಯುಕ್ತಮಾದುಲುಪೆಯಂ ಕೊಡಿಸಲವನೆನಗೇಕೆಂದೆನುತೇನುಮಂ ಕೈಕೊಳದೈದಿ ಮಜ್ಜನಶಿವಾರ್ಚನಭೋಜನಾದಿಗಳಂ ನಿಮಿರ್ಚಿ ಬರ್ಪನಿತರೊಳ್ ಪಾತು ಶಾಹಂ ತಾನೊಳಪೊಕ್ಕು ಭೋಜನಂಗೈದು ಹಜಾರಕ್ಕೈದಿ ಸಭೆಯಂ ನೆರಹಿಸಿ ಸದರೊಳ್ ಕುಳ್ಳಿರ್ಪನಿತರೊಳಂಕುಶಖಾನನೀ ವೃತ್ತಾಂತಮಂ ಕೇಳ್ದು ಭೋಜನಾದಿಗಳಂ ರಚಿಸಿ ವಸ್ತ್ರಾ ಭರಣಾಲಂಕೃತನಾಗಿ ಯುದ್ಧಾಸಿಯಂ ಕೊಂಡು ಭೊಂಕನೆಳ್ತಂದು ಪಾತುಶಾಹನಂ ಕಂಡಾಂ ರಾಜದ್ವಾರದೊಳ್ ಕಟ್ಟಿರ್ದ ಬಿರುದಿನ ಕೂರಸಿಯಂ ಬಿಚ್ಚಿ ತೆಗೆದವನಾವನೆಂದ ತ್ಯಂತ ಕೋಪದಿಂ ಗಜರಿ ಗರ್ಜಿಸಲಾಗಳಾ ಪಾತುಶಾಹಂ ಸಂಕಣನಾಯಕನಂ ಸಮೀಪಕ್ಕೆ ಬರಿಸಿ ತೋರಿ ನಿನ್ನ ಕೂರಸಿಯಂ ಕೊಡಿಸಿದಪೆನಿನ್ನಾದೊಡಂ ಗರ್ವೋದ್ರೇಕಮಂ ಮಾಣ್ದು ಮನೆಗೈದುವುದೆಂದೊಡವಡಿಸಲಾ ಮಾತಂ ಬಗೆಗೊಳದೆ ಯುದ್ಧಮುಖದೊಳೇನಾ [2]ದೊಡದಂ[2] ಕಾಣ್ಬೆನೆನಲಾಗಳಾಪಾತುಶಾಹಂ ಸಭಾಸಮ್ಮತಿಯಿಂದಿರ್ವರ್ಗಂ ಯುದ್ಧವ ನೊಡರ್ಚುವುದೆಂದು ತಾಂಬೂಲವನಿತ್ತಪ್ಪಣೆಗೊಡಲೊಡನವರಿರ್ವರಳವಿಯೊಳಿದಿರಾಂತು ನಿಲಲಾಕಾಲದೊಳ್ ಸಂಕಣನಾಯಕನ ಕರಕಮಲದೊಳ್ ಖಡ್ಗಮಿಲ್ಲದಿರ್ಪುದಂ ಪಾತು ಶಾಹಂ ಕಂಡೊಂದು ಮಿಾಂಟಾದ ಖಡ್ಗಮಂ ತರಿಸಿ ಕೊಡಲಾ ಪ್ರಸ್ತಾವದೊಳ್

ಕಂ॥ ಒಸೆದಾ ಡಿಲ್ಲೀಶ್ವರನಿ
ತ್ತಸಿಯಂ ಕೊಂಡಾ ಸದಾಶಿವೇಂದ್ರಸುತಂ ಚೂ
ರಿಸೆ ಭಿನ್ನಿಸಲದು ಮಗುಳೆಂ
ದಸಿಯಂ ಕುಡೆ ಝಳಪಿಸಲ್ಕದಿಕ್ಕಡಿದೋರಲ್ ೧೭

1 ವಜೀರ ಉ[illegible] ಮಲ್ಲಿಜನಮುಂತಾದ (ಕಮ) 2 ದುದಂ (ಒಕ)

Sri Vidyabharathi Book Centre, Sringeri

CC-O. In Public Domain. Digitized by eGangotri

* ಇಂತೀ ಪರಿಯಿಂ ಬಲ್ಪದ
ನಾಂತುರೆ ಮಿಂಟಾದ ಬಾಳ್ಗಳೀರಾರುಡಿಯ
ಲ್ಕಂತದನಭಿವೀಕ್ಷಿಸಿ ಶಿರ
ಮಂ ತವೆ ತೂಗುತ್ತೆ ಬೆಕ್ಕಸಂಬೆರಗಾದಂ ೧೮

ಪಟ್ಟದ ಕೂರಸಿಯನಿದಂ
ಕೊಟ್ಟಪೆನೆಂದಾ ತುರುಷ್ಕಪತಿ ಕಯ್ಯಿಕ್ಕಲ್
ನಿಟ್ಟಿಸಿ ನಸುನಗುತೀಯಸಿ
ಬೆಟ್ಟಿತ್ತಳವಡದೆನುತ್ತದಂ ಮಾಣಿಸಿದಂ ೧೯

ವ॥ ಇಂತು ಪಾತುಶಾಹಂ ಪಟ್ಟದ ಕೂರಸಿಯನೀಯಲೀ ಖಡ್ಗಮಂ ಭಿನ್ನಂಗೆಯ್ವುದುಚಿತಮಲ್ತೆಂದು ಮಾಣ್ದು ನಿಜಕಟಿಪ್ರದೇಶದೊಳ್ ಬದ್ಧಂಗೆಯ್ದು ದಟ್ಟಿಯೊಳ್ ಸುತ್ತಿರ್ದ ನಾಗರನುರಿಯೆಂಬ ಕೂರಸಿಯಂ ಕೊಂಡು ಪಿಡಿಗೋಲ್ಗೊಳಿಸಿ ಘಲ್ಲಿಸುತ್ತಂಕುಶಖಾನಂಗಿದಿರ್ಚಿ ನಿಲಲಾ ಪ್ರಸ್ತಾವದೊಳ್

ಕಂ॥ ಸಂಕಣನೃಪನನಭೀಕ್ಷಿಸು
ತಂಕುಶಖಾನಂ ಕೆರಳ್ದು ಹೂಣಿಸಿ ಬೆರಲಿಂ
ದಂ ಕುಡಿಮೀಸೆಯ ತಿದ್ದು
ತ್ತಂಕಕ್ಕಿದಿರಾಂತು ಖಡ್ಗಮಂ ಝಳಪಿಸಿದಂ ೨೦

ಇದಿರಾಂತಂಕುಶಖಾನನೆ
ಹದನಂ ನಿಟ್ಟಿಸಿ ಕರಾಸಿಯಂ ಝಳಪಿಸುತುಂ
ತುದಿಮೀಸೆಯ ನೇವರಿಸು
ತ್ತಿದಿರ್ಚಿದಂ ಸಂಕಣೇಂದ್ರನವನಿಪಚಂದ್ರಂ ೨೧

* ಓರೊರ್ವರನೀಕ್ಷಿಸಿ ಖತಿ
ಬಾರದೆ ಗಂಟಿಕ್ಕೆ ಪುರ್ಬುಗಳ್ ಕಂಗಳ್ ಕೆಂ
ಪೇರೆ ಕುಡಿಮೀಸೆ ನರ್ತಿಸೆ
ಚಾರಿಸುತುದ್ಯತ್ಕರಾಸಿಯಂ ವಿಹರಿಸಿದರ್ ೨೨

---

* ಈ ಪದ್ಯ (ಮ) ನಲ್ಲಿಲ್ಲ

Sri Vidyabharathi Book Centre, Sringeri

CC-O. In Public Domain. Digitized by eGangotri

* ಮಸೆಗಂಡೆಕ್ಕಲಗಳೊ ಮಿಗೆ
ಪಸಿದಹಿಗಳೊ ಕಾಯ್ದ ಸಿಂಗನರಿಗಳೊ ಕರೆದೆ
ಬ್ಬಿಸಿದಾ ಪೆಬ್ಬುಲಿಗಳೊ ಎನೆ
ಮಸಗಿ ಪೊಣರ್ಕೆಯೊಳ್ ಕಾದಿದರ್ ಕಡುಹಿಂದಂ ೨೩

ಘುಡುಘುಡಿಸಿ ಸಿಡಿಲ್ಗಳ ಬರ
ಸಿಡಿಲಿದಿರಾಂತುರೆ ಪಳಂಚುವಂತಿರೆ ಕೋಪಂ
ಕಿಡಿಯಿಡೆ ಘಲ್ಲಿಸುತಸಿಗಳ
ನಡಿಮಿಡುಕದೆ ನಿಲ್ತು ಕಾದಿದರ್ ಭಟರಿರ್ವರ್ ೨೪

ಖಣಿಖಟಿಲೆಂದಸಿಯಸಿಯಣ
ದಣದೊರಸೊರಸಿಂದಮೊಗೆಯೆ ಕೇಸುರಿ ಭುಗಿಲೆಂ
ದಣಿಯರಮೊಪ್ಪುವ ನಾನಾ
ಭಣಿತೆ ಬೆಡಂಗಾಗೆ ಕಾದಿದರ್ ಖತಿಯಿಂದಂ ೨೫

ಪೊಗರುಗುವಸಿಝಳಪದಿನುರೆ
ಝುಗಝುಗಿಸುತ್ತುಣ್ಮೆ ವಿಸ್ಫುಲಿಂಗಪ್ರಚಯಂ
ಬಗೆಬಗೆಯ ಹೊಗತೆ ಮಿಗತೆಯ
ಬಗೆಬಗೆ ಚೆಲ್ವಾಗಲೊದಗಿದರ್ ಕೌಶಲದಿಂ ೨೬

ಹೊಂಚಿ ಹುರಿಕಟಿಸಿ ಹೊಕ್ಕು ಪ
ಳಂಚುವ ತದ್ಭಟರ ಬಗೆಯನದನೇನೆಂಬೆಂ
ಚಂಚಲಿಪ ಕಾರ್ಮುಗಿಲ ಕುಡಿ
ಮಿಂಚೆನೆ ತೊಳತೊಳಗಿ ಬೆಳಗಿದುವು ಕೂರಸಿಗಳ್ ೨೭

ಮ॥ವಿ॥ ಝಳಪಂ ಚೂರಣಮಾಂಕೆಯೊಡ್ಡಣೆ ತಿರುಂಪೇರ್ವಾರೆವೊಯ್ಲಡ್ಡವೊ
ಯ್ಲೆಳತಂ ಕಂಡಣೆ ಮಿಾಂಟು ಚಾಲನಮುದಗ್ರೋದ್ಧಾರಣಂ ಚಾರುವೊ
ಯ್ಲಿಳಿತಂ ಸಿಕ್ಕು ಸವರ್ಕೆಯೆಂಬ ಬಹುಬಿನ್ನಾಣಂಗಳಿಂ ಕೂರ್ತು ಕೈ
ಚಳಕಂ ಕೈಮಿಗೆ ಯುದ್ಧರಂಗದೊಳವರ್ ಕೈಗೆಯ್ದರೇಂವಣ್ಣಿಸಂ ೨೮

---

* ಈ ಪದ್ಯ (ಮು) [illegible]

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ॥ ದಂಡೆ ಮುರುಹೊದವು ಪೈಸರ
ಮಂಡಲ ಸಮುಚಾಲಿ ಲಾಗು ಲಂಘನವಮರ್ದೊ
ಳ್ಕಂಡಿಯಭಿಮುಖವೆನಿಪ ಸಮ
ದಂಡಿಯೊಡಂಬಡೆ ಪಳಂಚಿದರ್ ಖತಿಯಿಂದಂ ೨೯

ಉ॥ಮಾ॥ ಪಾಡರಿದೊಪ್ಪದಿಂ ಪೊಗುವ ಪಿಂಗುವ ಪಿಂದೆಗೆವಾಂಪ ನಿಲ್ವ ಕೈ
ಮಾಡುವ ಪೊಯ್ಲ್ಗಳಿಂ ಕಳೆವ ಕಾಯ್ವ ತೆರಳ್ವ ಸಡಿಲ್ವ ಪೆಜ್ಜೆಗೊಂ
ಡೀಡಿರಿದೊತ್ತುತೊತ್ತರಿಪ ಪೊಂಗುವ ಸಾರ್ವ ಮರಳ್ವ ಬಾಳ್ಗೆ ಬಾ
ಳ್ಗೂಡುವ ತೇಲ್ವ ಬಿನ್ನಣಗಳೊಪ್ಪೆ ಪಳಂಚಿದರಾಜಿರಂಗದೊಳ್ ೩೦

ಕಂ॥ ತಟ್ಟುವ ತಡೆವಣೆವಸಿಯಂ
ಮುಟ್ಟುವ ಮಸೆಗೆಯ್ವ ತಾಳ್ವ ತವಕಿಸ ಬಲ್ಪಿಂ
ಮೆಟ್ಟುವ ಬಹುವಿಧಭಣಿತೆಯ
ಪಟ್ಟುಗಳೋರಣಿಸೆ ಪಳಂಚಿದರ್ ಬಿನ್ನಣದಿಂ[1] ೩೧

ತಾಗುವ ತೆವರ್ವ ತೂಳ್ವ ವಿ
ಭಾಗಿಪ ಕೆಲಸಾರ್ವ ನಿಮಿರ್ವ ಕೂಡುವ ಸಡಿಲ್ವಿಂ
ಬಾಗುವ ಕೈಗೆಯ್ದಣಿಯಿಂ
ಬೀಗುವ ಬಗೆಯೊಪ್ಪೆ ಕಾದಿದರ್ ಕೌಶಲದಿಂ ೩೨

ಸೂಡರಿದೀ ಪರಿಯೊಳ್ ಕೈ
ಮಾಡುವ ಬಿನ್ನಣದ ಬಗೆಯನೀಕ್ಷಿಸಿ ನಲಿದಂ
ದಾ ಡಿಲ್ಲೀಶನ ಸಭೆ ಕೊಂ
ಡಾಡಲ್ ಕೈಗೆಯ್ದ ರಾಜಿರಂಗದೊಳಿರ್ವರ್ ೩೩

ವ॥ ಇಂತೊಂದು ಜಾವಂಬರಂ ಪೋರ್ದು ಬಗೆಹರಿಯದಿರ್ಪುದಂ ಕಂಡಂಕುಶಖಾನಂ ಸಂಕಣನಾಯಕನಂ ಕರೆದಾವಿರ್ವರುಮನ್ಯೋನ್ಯಾವಯವಂಗಳೊಳ್ ಕೂರ್ತುಸಿರ್ದ ತಾಣಂಗಳಂ ಮುಟ್ಟಿ ಕೈಗೆಯ್ದು ಮಸೆಕಾಣ್ಬಂತು ಯುದ್ಧಮಂ ರಚಿಸಲ್ವೇಳ್ಕೆಂದು ನುಡಿಯಲ್ ಸಂಕಣನಾಯಕನಂತಾಗಲೆನಲೊಡನಂಕುಶಖಾನನತ್ಯಂತಾಟೋಪದಿಂ ತಾಂ

1 ಳೋರಸೆಪಳಂ (ಬ) ಳೊರಣಿಸೆಪಳಂ (ಕ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊರ್ತು ನುಡಿದನಯುವಸ್ಥಾನಂಗಳೊಳ್ ಮಸೆಗಾಣಿಸಿದಸೆನೆಂದು ಬಹುವಿಧಕೌಶಲ ಯುದ್ಧ ಚಮತ್ಕೃತಿಯಿಂ ಕೈಗೈಯಲ್ ಸಂಕಣನಾಯಕನಂಗದೊಳ್ ಮಸೆದೋರದಂತಾ ಪೊಯ್ಲ್ಗಳಂ ಕಾಯ್ದುವನ ಕೈಚಳಕಮಂ ನಿಲಿಸಿ ಯುದ್ಧರಂಗದೊಳ್ ತತ್ಪ್ರತಿಭಟನ ಕೈವಾಡಕ್ಕಿಂದಮ್ಮೈವಡಿ ಚಮತ್ಕೃತಿದೋರಿ ಬಳಿಕ್ಕವನಂಗಪ್ರದೇಶದೊಳ್ ಕೊರ್ತೆಡೆಗಳಂ ಲಘು ಸಂಧಾನದಿಂ ನಿಜ ಕರಾಸಿಯಗ್ರದಿಂ ಮುಟ್ಟಿ ಮುಟ್ಟಿ ತೋರಿ ನಾನಿನ್ನೆವರಂ ಕೈಗಾಯ್ದು ಯುದ್ಧಮಂ ರಚಿಸಿದೆನಿನ್ನೆಚ್ಚರಿನೊಳ್ ಕಾದುವುದೆಂದವನಂ ಪಚಾರಿಸುತುಂ ಕೈಗೈಯುತುಮಿರಲಾ ಪ್ರಸ್ತಾವದೊಳ್.

ಕಂ॥ ಪೂತು ಮಝು ಖಡ್ಗಯುದ್ಧದ
ಧಾತುರೆ ಚಲ್ವಾದುದೆಂದು ಚೌಡಪನೃಪಸಂ
ಜಾತಜನಂ ಪೊಗಳುತ್ತಿರೆ
ಖಾತಿಯೊಳೊಳಪೊಕ್ಕು ಪೊಯ್ದನಂಕುಶಖಾನಂ ೩೪

ಲಾಗಿಸುತಾ ಪೊಯ್ಲಿಂಗೊಳ
ಗಾಗದೆ ಕೆಲಸಿಡಿದು ಕೂಡೆ ಸಂಕಣಭೂಪಂ
ಜಾಗು ಭಳಿಭಳಿರೆ ಮಗುಳನು
ವಾಗೆನುತೊಳಪೊಕ್ಕು ಪೊಯ್ದನಾ ಪ್ರತಿಭಟನಂ ೩೫

ಪ್ರೌಢನಹ ಖಡ್ಗಯುದ್ಧದ
ಮೋಡಿಯೊಳೆಂದೆನುತಲಸಿಯಿನಣೆದಾ ಪೊಯ್ಲಂ
ನೋಡಿನ್ನೆಸೆವೀ ಪೊಸ ಕೈ
ವಾಡವನೆನುತಾರ್ದು ಪೊಯ್ದನಾ ನೃಪವರನಂ ೩೬

ತಪ್ಪಲ್ಲಸಿಯುದ್ಧದೊಳಿಂ
ತಪ್ಪದಟನ ಕಂಡುದಿಲ್ಲವೆಂದಾ ಪೊಯ್ಲಂ
ತಪ್ಪಿಸಿ ಕೆಲಸಿಡಿದೀ ಪೊ
ಯ್ಲೊಪ್ಪವ ನೋಡೆಂದು ಪೊಯ್ದನಾ ಪ್ರತಿಭಟನಂ ೩೭

ಅಣಮಾ ಪೊಯ್ಲಂ ಖಡ್ಗದಿ
ನಣೆದಂಕುಶಖಾನನಾರ್ದು ತನ್ನೃಪಚೂಡಾ
ಮಣಿಯಂ ಪೊಗಳೀ ಪೊಯ್ಲಿನ
ಭಟ[illegible]ಸಿದಂ ೩೮

Sri Vidyabharathi Book Centre, Sringeri

CC-O. In Public Domain. Digitized by eGangotri

ಒಡನಾ ಪೊಯ್ಲಿಂ ಖಡ್ಗದೆ
ತಡೆದು ಮಗುಳ್ದೊದಗುವನಿತರೊಳ್ ಕೂರಸಿಯಿಂ
ನಡುವಂ ಖಂಡಿಸೆ ಕಣ್ಣವೆ
ಮಿಡುಕದೆ ಬಾಳ್ದಿರಸು ಬರೆದ ಬೊಂಬೆಯೊಲೆಸೆದಂ ೪೭

ಮಿಗೆ ನಿಲ್ತಂಕುಶಖಾನನ
ಬಗೆಯಂ ನಿಟ್ಟಿಸಿ ತುರುಷ್ಕಪತಿ ಪೊಣರ್ದುರೆ ಕಾ
ಳಗದೊಳ್ ಬಳಲ್ದನೆಂದೇ
ಬಗೆದೊಡನಾ ಸಂಕಣೇಂದ್ರನಂ ನಿಟ್ಟಿಸಿದಂ ೪೮

ವ|| ಇಂತಾ ಪಾತುಶಾಹಂ ಸಂಕಣನಾಯಕನಂ ನಿಟ್ಟಿಸಿ ಯುದ್ಧಮಂ ಮಾಣ್ದು ಮೈಮರೆದೇಕೆ ನಿಂದಿರ್ದಪೆಯೆಂದು ಬೆಸಗೊಳಲಾನಿನ್ನಾರೊಳ್ ಕಾದುವೆನೆಂದು ಪೇಳಲ್ ಪ್ರತಿಭಟಂ ನಿನ್ನ ನಿಟ್ಟಿದಿರೊಳಣಿಮಣಿಯಂ ಸಾಧಿಸುತ್ತಿಂ ನಿಂದಿರ್ಪಂ ನೀಂ ಕೈಗೆಯ್ಯದಿಂತು ಸುಮ್ಮನೇಕೆ ನಿಂದಿರ್ದಪೆ ಯುದ್ಧಮಂ ಬಗೆಹರಿಪುದೆಂದುಸಿರಲಾ ಮಾತಂ [1]ಸಂಕಣನಾಯಕಂ ಕೇಳ್ದು ನಸುನಗುತ್ತಂ[1] ಪೆಣನ ಕೂಡೆತ್ತಣ ಕಾಳಗಮೆಂದುಸಿರಲಿದೆತ್ತಣ ಮಾತು ಸಜೀವನಾಗಿ ಯುದ್ಧಕ್ಕೆ ನಿಂತಿರ್ದವನಂ ಪೆಣನೆಂದುಸಿರಲಹುದೇ ಎನಲಂತಾದೊಡವಂ ಮೃತಿವೆತ್ತುದಹುದೊ ಅಲ್ಲವೊ ಯೆಂಬುದಂ ಚನ್ನಾಗಿ ನಿಟ್ಟಿಪುದೆಂದು ತಾಂ ಕೈಯೊಳ್ ಪಿಡಿದಿರ್ದಸಿಯಗ್ರವನವನೆರ್ದೆದಾಣಕ್ಕೆ ಮುಟ್ಟಿಸಲಾಗಳ್ ಕಟಿಯಿಂದಂ ಮೇಗಣ ತುಂಡು ಖಂಡಿ[2]ಸಿದ[2] ದಿಂಡಿನಂತೆ ನೆಲಕ್ಕುರುಳಲಾಗಿ ಬಳಿಕ್ಕದನಾ ಡಿಳ್ಳೀಶ್ವರನುಂ ತತ್ಸಭೆ ಸಹಿತಂ ಸರ್ವರುಂ ಕಂಡತ್ಯಂತಚೋದ್ಯವಡಲೊಡನೆ ಡಿಳ್ಳೀಶ್ವರಂ ಸಂಕಣನಾಯಕನೊಡನಿರ್ಪೂಳಿಗದವರಂ ಸಮೀಪಕ್ಕೆ ಬರಸಿಕೊಂಡೀತನಾರೆಂಬುದಂ ನಿಶ್ಚಯಮಾಗಿ ಪೇಳ್ವುದೆಂದೊಡವಡಿಸಲಾಗಳವರೀತನ ವೃತ್ತಾಂತಮೆಲ್ಲಮಂ ಬಿತ್ತರಿಸಿ ಪೇಳಲ್ ಕೇಳ್ದು ಸದಾಶಿವರಾಯನಾಯಕನ ಕುಮಾರನೆಂಬುದಂ ತಿಳಿದು ಸಂತಸಂದಳೆದು ಸಂಕಣನಾಯಕನಂ ಕರೆದಾಲಿಂಗನಂಗೈದು ಸಮೀಪದೊಳ್ ಕುಳ್ಳಿರಿಸಿಕೊಂಡಿಂತು ಕಪಟವೇಷಮಂ ತಾಳ್ದೈತಂದೆನ್ನೊಳ್ ನಿಜವನುಸಿರದಿಂತು ಮರೆಮಾಜಲಹುದೆಯೆಂದು ಸಭೆ ಕೇಳ್ವಂತು ಸದಾಶಿವರಾಯನಾಯಕನ ಭುಜಬಲಪ್ರತಾಪಮಂ ವಿವರಿಸಿ ತತ್ಪುತ್ರನಾದ ಬಳಿಕಂ ನಿನ್ನ ಪರಾಕ್ರಮಾತಿಶಯಮಂ ಪೇಳ್ವುದೇನೆಂದತ್ಯಂತಸಂತೋಷದಿಂ ಸಂಕಣನಾಯಕಂಗಂ ಸದರ್ಬೋಕ್ಕ [3]ಸೀಸಂ[3] ಬಿಟ್ಟ ಹಸುರು ನಿಶಾನಿಯ ಬಿರುದುಮಂ ಮತ್ತಮನರ್ಘ್ಯರತ್ನಾಭರಣಾಂಬರ ತಾಂಬೂಲಂಗಳುಮನಿತ್ತು ಪಿರಿದು ಮನ್ನಿಸಲೀಶ್ವರಾನುಗ್ರಹದಿಂದೆನಗೀ ಬಗೆಯ ಬಿರುದು ಬಾವುಲಿ ರಾಜ್ಯ ರಾಷ್ಟ್ರಾದಿ ಸೌಭಾಗ್ಯಂಗಳೊಳಾವುದರಲ್ಲಿಯುಂ ಕೊರತೆಯಿಲ್ಲಮೆನ್ನ ಮನೋರಥಂ ಬೇರಿರ್ಪುದದಂ ಶಾಶ್ವತಮಾಗಿ ನಡೆಸಿಕೊಡುವುದು ನಿಶ್ಚಯಮಾದೊಡು

[1] ಕೇಳ್ದು (ಮ) [2] ಸುವ(ಮ) [3] ಸಂ(ಕ)

Sri Vidyabharathi Book Centre, Sringeri

CC-O. In Public Domain. Digitized by eGangotri

ಸಿರ್ವೆನೆನಲ್ ಕೇಳ್ದಿಮ್ಮಿಂದಪ್ಪ ಕಜ್ಜಮೇನುಂಟಾಡೊಡದಂ ದೃಢವಾಗಿ ನಡೆಸಿಕೊಟ್ಟಪೆನೆನಲಂತಾದೊಡಾಂ ಮುಂತೆ ಕಾಶೀಕ್ಷೇತ್ರಕ್ಕೈದಿಯಾ ತಾಣದೊಳ್ ಶಿವಜಂಗಮಧರ್ಮಾರ್ಥಮಾಗಿ ಮಠಮಂ ಕಟ್ಟಿಸಿಯದಕ್ಕೆ ತಕ್ಕ ಭೂಸ್ವಾಸ್ಥ್ಯಮಂ ಬಿಡಿಸಿ ದಾನಧರ್ಮಂಗಳನಾಗಿಸಿ ವಿಶ್ವೇಶ್ವರನ ಪೂಜೆಯುಂ ರಚಿಸಿ ಮತ್ತಂ ನಿನ್ನ ರಾಷ್ಟ್ರದೊಳ್ ಪ್ರಸಿದ್ಧಮಾದ ಸ್ಥಳಂಗಳೊಳ್ ಶಿವಜಂಗಮಧರ್ಮಕ್ಕೋಸುಗಂ ಮಠಮಾನ್ಯಂಗಳನಾಗಿಸಿ ಬಳಿಕೆನ್ನ ಸಂಸ್ಥಾನಕ್ಕೈದುವೆನೆಂದು ಸಂಕಲ್ಪಮಂ ರಚಿಸಿರ್ಪೆನೀ ಸಂಕಲ್ಪಸಿದ್ಧಿಯಂ ಪೂರ್ಣವನಾಗಿಸಲ್ವೇಳ್ಕೆಂದುಸಿರಲಂತಾಗಲೆಂದು ಮನಂದಂದಾಕ್ಷಣದೊಳ್ ತತ್ತತ್ಸ್ಥಾನಪ್ರವಿಷ್ಟರಾದಧಿಕಾರಿಗಳ್ಗೆ ಪರಮಾನು [1]ನಿರೂಪಲೇಖನಮಂ[1] ಬರೆಸಿತ್ತು ತತ್ತದ್ದಾನಧರ್ಮಾರ್ಥಮಾಗಿ [2]ಪನ್ನಿರ್ಛಾಸಿರ[2]ಪೊಂಗಳನಿತ್ತು ತತ್ತತ್ಸ್ಥಾನಂಗಳ್ಗುಚಿತಮಾದ ಮೇಲೂಳಿಗದವರ್ಗಳುಮಂ ಕೂಡೈದಿ ಕಜ್ಜವನೊಡರ್ಚಿಸಿ ಬರ್ಪುದೆಂದು ನಿಯಾಮಿಸಿ ಪರಮಸಂಪ್ರೀತಿಯಿಂ ಬೀಳ್ಕೊಡಲೊಡನಾ ಡಿಳ್ಳಿಯೊಳ್ ಚಾಪಲಿಕೆಮಂಡ್ವೈ ಎಂಬ ಸ್ಥಳದೊಳ್ ಮನೋಹರಮಾದ ಮಠಮಂ ಕಟ್ಟಿಸಿ [3]ಶಿವಜಂಗಮಧರ್ಮಕ್ಕೆ ಶಿವಾರ್ಪಣಂಗೈದನಂತರದೊಳ್[3]

ಕಂ|| ಒಡನೆಸೆವ ಡಿಲ್ಲಿಯಿಂ ಪೊರ
ಟಡಿಯಿಡುತಾಗರವನೈದಿ ರಚಿಯಿಸಿ ಮಠಮಂ
*ಕಡೆಯ ಮಾಣಿಕ್ಯಪುರಮೆಂ
ಬೆಡೆಯಂ ಸಾರ್ದಮಲಗಂಗೆಯಂ ನೆರೆ ಕಂಡಂ ೪೯

ಅಲ್ಲಿಂ ತೆರಳ್ದು ತನ್ನೃಪ
ಮಲ್ಲಂ ಮೆರೆವಾ ಪ್ರಯಾಗಮಂ ಸಾರ್ದು ಬಳಿ
ಕ್ಕಲ್ಲಿ ಸುಜಂಗಮಧರ್ಮ
ಕ್ಕಲ್ಲಸದಿಂದೆಸೆವ ಮಠವನುರೆ ವಿರಚಿಸಿದಂ ೫೦

ವ|| ಇಂತು ಗಂಗಾಯಮುನಾಸರಸ್ವತೀನದೀಸಂಯೋಗದಿಂ ತ್ರಿವೇಣಿಯೆಂಬ ಪೆಸರ್ವಡೆದು ಮಹಾವಟ ಮೂಲೋತ್ಪತ್ತಿ[4]ಸ್ಥಾನಮಾದ ಮು[4]ಕ್ತಿಸ್ಥಾನವೆನಿಸಿ ಮೆರೆವ ಪ್ರಯಾಗಕ್ಷೇತ್ರದೊಳ್ ಜಂಗಮಮೂರ್ತಿಧರ್ಮಕ್ಕಂ ಮಂಗಲಮಯಮಪ್ಪ ಮಠಮಂ ನಿರ್ಮಾಣಂಗೈಸಿ ಶಿವಾರ್ಪಣಂಗೈದನಂತರಂ

[1] ನಿರೂಪಲೇಖನಾನುಲೇಖನೋಪಲೇಖಮಂ (ಕ) [2] ಪಂನಿತ್ಸಾಸರ (ಕ ಒ) [3] ದನಂತರಂ (ಮ) [4] ಯಾದಮು (ಒಕಮ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ|| ಒಸೆದಾ ಪ್ರಯಾಗನುಂ ನಿ
ಟ್ಟಿಸುತುಂ ಸಂತಸವನಡುತ್ತುಮಲ್ಲಿಂ ತೆರಳ್ದಂ
ದಸಮುಬಲಂ ಶ್ರೀ ಸಂಕಣ
ವಸುಧಾಧಿಪನೆಸೆವ ಕಾಶಿಯಂ ನೆರೆ ಪೊಕ್ಕಂ ೩೧

ಚಾರುಪರಬ್ರಹ್ಮಸುತೇ
ಜೋರಾಶಿಯೆ ಪತ್ತನಸ್ವರೂಪವನಾಂತೀ
ಧಾರಿಣಿಯೊಳ್ ನೆಲಸಿತ್ತೆನೆ
ರಾರಾಜಿಸಿದತ್ತು ಕಣ್ಗೆ ಕಾಶೀಕ್ಷೇತ್ರಂ ೩೨

ವ|| ಇಂತು ವಿರಾಜಿಸುತಿರ್ಪ ಕಾಶೀಕ್ಷೇತ್ರದ ಪತ್ತನದ್ವೈಸಿರಿಯನಭಿವೀಕ್ಷಿಸುತ್ತುಂ ಮೆಲ್ಲಮೆಲ್ಲನಡಿಯಿಡುತ್ತೈದುತಿರಲಾವೇಳೆಯೊಳಾ ಪುರವರದ ವೀಧಿಯಿರ್ಕೆಲದ ಭವನಂಗಳ ಸೌಧಂಗಳೊಳ್ ಸೂರಿಜನರ್ ತತ್ಕಾಶೀಕ್ಷೇತ್ರಮಾಹಾತ್ಮ್ಯಯನಭಿವರ್ಣಿಸುತ್ತಿರ್ದರದೆಂತೆನೆ

ಕಂ|| * ಗರುಡತುಂಡಾಗ್ರದಿಂದಂ
ಧರೆಗುರುಳ್ದಸುಗಳೆದ ಪಾವದಾಗಳೆ ಕಿವಿಯೊಳ್
ಮೆರೆಯೆ ಫಣಿಕುಂಡಲಂಗಳ್
ಗರುಡಾಂಕಾರ್ಚಿತಪದಾಬ್ಜಮಾದುವು ಚಿತ್ರಂ ೩೩

ಜನನುರವನೊದೆವರಜನೊ
ಪ್ಪುವ ತಲೆಯುಂ ತರಿವರಿರಿವರಚ್ಯುತನೆದೆಯಂ
ತವೆ ಕಾಶೀಕ್ಷೇತ್ರದಿ ಸಂ
ದವರುರು ವೀರತ್ವದಿರಪನಾರ್ ಬಣ್ಣಿಸುವರ್ ೩೪

ವ|| 'ಇಂತೀ[1] ಪುರಾಣೇತಿಹಾಸಂಗಳನೋದುತ್ತನುವಾದಿಸುತ್ತನ್ವಯಾರ್ಥಂಗಳಂ ಬಿತ್ತರಿಪ ಸೂರಿಜನರುಕ್ತಿಗಳಂ ಕೇಳ್ದು ಪರಮೋತ್ಸವಂಬಡುತ್ತೆ ಮುಂತ್ಯೆದುತ್ತುಂ

ಕಂ|| ರಂಗತ್ಕ[2]ಣಿ[2]ಕಾಕಲಿತೋ
ತ್ತುಂಗತರಂಗಪ್ರಸಂಗೆಯಂ ಸತತ ಸಮಾ
ಲಿಂಗಿತ ಶಿವಮೌಳಿಯನತಿ
ಮಂಗಲಮಯಿಯೆನಿಪ ಗಂಗೆಯಂ ನೆರೆ ಕಂಡಂ ೩೫

---

1 ಮತ್ತಮಾಕ್ಷೇತ್ರದೊಳ್ (ಮ) 2 ಲಿ (ಮ)

Sri Vidyabharathi Book Centre, Sringeri

CC-O. In Public Domain. Digitized by eGangotri

ತೆರೆಯಿಂದಾವರ್ತದೆ ಬೆ
ಳ್ನೊರೆಯಿಂ ಬೊಬ್ಬುಳಿಗಳೋಳಿಯಿಂ ಶೋಭಿಪ ತುಂ
ತುರುದುಂಗಲಿನೆಸೆದುದು ಬಾಂ
ದೊರೆ ವಿಚರದ್ವಾಷ್ಪರಪ್ರಚಯದಿಂ ರಯದಿಂ ೫೬

ನಳನಳಿಸಿ ಬಳೆವ ನೀರ್ವೂ
ಗಳ ಸೌರಭಕೆಳಸಿ ಬಳಸಿ ಬಂಡುಗಳಂ ಕೊ
ಳ್ವಳಿಗಳ ಬಳಗಗಳಿಂ ಮಿಗೆ
ಪೊಳೆದುದು ಮಂಡಳಿಸಿ ಚಳಿಪ ನೀರ್ವಕ್ಕಿಗಳಿಂ ೫೭

ವ॥ ಮತ್ತಮದಲ್ಲದಾ ಮಂದಾಕಿನಿ ತಾನಧೋಗತಿಕಳಾಗಿಯುಮುತ್ಕೃಷ್ಟಸ್ಥಾನ ಮಾರ್ಗಸಹಾಯಿನಿಯುಂ ಭಂಗವಿತಾನವಿಲುಲಿತೆಯಾಗಿಯುಮಭಂಗನಿತ್ಯಪದೈಕ ಸಹಕಾರಿಣಿಯುಂ ಉತ್ಕೃಷ್ಟಪ್ರತಿಕೂಲೆಯಾಗಿಯುಮಾನತಜನಾನುಕೂಲೆಯುಮೆನಿಸಿ ವಿರಾಜಿಸುತುಮಿರ್ದಳಂತುಮಲ್ಲದೆಯುಂ

ಕಂ॥ ಮಿಂದರೆ ಕಣ್ಣುರಿಯಪ್ಪ ಕ
ಚಂ ದಲ್ ಜಡೆಯಪ್ಪ ಕಂಠಮುರುಕಾಳಿಮಮು
ಪ್ಪಂದದೊಡಲ್ ಬೂದಿಯುಮ
ಪ್ಪೊಂದಿರವಹುದೇಂ ವಿಚಿತ್ರಮೋ ಜಾಹ್ನವಿಯೊಳ್ ೫೮

ಉಂ॥ಮಾ॥ ಕಳೆದುರುದೋಷಮಂ ಸಲೆ ಪವಿತ್ರಿತನಾದಪನೆಂದುಮಿಾಯೆ ಪೇ
ರೆಲುದಲೆಮಾಲೆಯಂ ತಳೆದು ಪಂದೊವಲಂ ಪೊದೆದುಟ್ಟು ರುದ್ರಭೂ
ತಳದುರುಭಸ್ಮಮಂ ಧರಿಸಿ ವರ್ತಿಪ ದಂದುಗಬರ್ಪುದೆಂದೊಡಾ
ಪೊಳೆಯ ಮಹಾಮಹತ್ವದಿರವಂ ಮಿಗೆ ಬಣ್ಣಿಪನಾವನುರ್ವಿಯೊಳ್ ೫೯

ವ॥ ಇಂತತ್ಯಂತಮಹಿಮಾಸ್ಪದೆಯಪ್ಪ ಗಂಗೆಯಂ ನಿಟ್ಟಿಸಿ *ನಲಿನಲಿದು ತತ್ಸಂಕಣೇಂದ್ರಂ ತದ್ವಾರಣಸಿಯೊಳ್ ಮಜ್ಜನಂಗೈದನಂತರಂ* ಮಣಿಕರ್ಣಿಕೆಯೊಳ್ ಮಿಂದು ಬಹುವಿಧದಾನಧರ್ಮಂಗಳ'ನಾ[1]ಗಿಸಿ ವಿಶ್ವೇಶ್ವರನಡಿದಾವರೆಯಂ ಭಜಿಸಿ ಮತ್ತಂ ಕಾಶೀಕ್ಷೇತ್ರ ಮಹಿಮಾತಿಶಯಂಗಳಂ †ಕೇಳ್ದು ಸಂತಸಂಬಡುತ್ತುಂ ತತ್ರತ್ಯಲಿಂಗತೀರ್ಥಂಗಳ

---

[1] ಸಪ್ಪ್ರಹ್ಮಮುಖದಿನಾ (ಮ)

*† ಈ ಭಾಗ (ಮ)ದಲ್ಲಿಲ್ಲ

Sri Vidyabharathi Book Centre, Sringeri

CC-O. In Public Domain. Digitized by eGangotri

ನವಲೋಕಿಸುತ್ತುಂ ಪಂಚಕ್ರೋಶಯಾತ್ರೆಯಂ ರಚಿಸಿ ಸಂತಸಂದಳೆಯುತಿಂತು ಕತಿಪಯ ದಿವಸಂ ವರ್ತಿಸುತ್ತುಮಿರ್ದು ಪಿಂತೆ ಬಹುಕಾಲದೊಳ್ ಶ್ರೀಶೈಲದೊಳ್ ನಂದೀಶ್ವರಾಂಶೀಭೂತನಾಗುದಿಸಿದ ವೀರಶೈವಶಿರೋಮಣಿಯಪ್ಪ ಶೀಲವಂತನಾಯಕನೆಂಬ ಕಾರಣಪುರುಷನೈತಂದು ಮೊರನನೆರಂಕೆಗಳಂ ಮಾಡಿಕೊಂಡು ಪಾರಿ ಪವಾಡಂಗಳಂ ಮೆರೆದು ಜಯಚಂದ್ರನರೇಂದ್ರನಂ ಮೆಚ್ಚಿಸಿ ದಶಾಶ್ವಮೇಧದ ಘಟ್ಟದ ಪಶ್ಚಿಮದಿಕ್ಕಿನೊಳೆಸೆವ ಹರಿಕೇಶವಾನಂದ ಕಾನನಮಂ ಪಡೆದಾ ಭೂಮಿಯೊಳ್ ಮಠಮಂ ಕಟ್ಟಿಸಿ [1]ತನ್ಮಠದೊಳ್ ಮಲ್ಲಿಕಾರ್ಜುನ ದೇವರೆಂಬ ಜಂಗ[2]ಮಂಗೆ[2] ಪಟ್ಟಮಂ ಕಟ್ಟಿ ತನ್ನೊಡನೈದಿದ ಶಿಷ್ಯರ್ಕಳನಲ್ಲಿರಿಸಿ ತಾನಾ ಮಠ ಮಧ್ಯಸ್ತಂಭಾಗ್ರದೊಳ್ ಯೋ[1]ಗಾರೂಢನಾಗಿ ಕುಳ್ಳಿರ್ದಂತರ್ಧಾನವನೈದಲ್ ಬಳಿಕಿತ್ತಂ ಪಲವು ವತ್ಸರಂಗಳ್ ಪೋಗಲೊಡನೆ ಜಯಚಂದ್ರನರೇಂದ್ರನ ವಂಶಾಗತರೆಲ್ಲಂ ಧರ್ಮ ಸಂತಾನಮಂ ಪಡೆಯಲಾಗಿ ಬಳಿಕಿತ್ತಂ ಮ್ಲೇಂಛರ್ಕಳ್ ಪೆರ್ಚಿ ತತ್ಸ್ಥಳವನಾಕ್ರಮಿಸಿರಲವರ್ಕಳಂ ವಾರಿದೆಗೆಸಿ ಸಂಕಣನಾಯಕಂ ತಾನಾಸ್ಥಾನಮಂ ಸಂಪಾದಿಸಿ ಚತುರ್ಗಡಿಗಳೊಳ್ ಶಿಲಾಸ್ಥಾಪನಮಂ ರಚಿಸಿ ಜಂಗಮ[3]ಗಾ[3]ಟಿಯೆಂದು ಪೆಸರಿಟ್ಟು ತನ್ಮಧ್ಯದೊಳತಿ ಮನೋಹರಮಾದ ಮಠಮಂ ನಿರ್ಮಾಣಂಗೈಸಿ ತದ್ಧರ್ಮಾರ್ಥಮಾ ಮಠದ ನಿರ್ಋತಿದಿಶಾ ಪ್ರಾಂತದೊಳ್ ಜಂಗಮಪುರವೆಂಬ ಗ್ರಾಮಮಂ ಬಿಡಿಸಿ ಸ್ಥಿರಶಾಸನಮಂ ಬರೆಸಿ ಜಂಗಮ ಮೂರ್ತಿಗಳ್ಗೆ ಶಿವಾರ್ಪಣಂಗೈದು ಮತ್ತಮದಲ್ಲದೆ ಪಂಚಮಠಮಂ ಕಟ್ಟಿಸಿ ಶಿವಜಂಗಮಕ್ಕೆ ಶಿವಾರ್ಪಣಂಗೈದು ಪ್ರೌಢರುಗಳಪ್ಪ ಶಿಲ್ಪಿಗಳಂ ಬರಿಸಿ ತತ್ಕಾಶೀಕ್ಷೇತ್ರದೊಳೊಪ್ಪುವ ಕಪಿಲಾಧಾರಾತೀರ್ಥ ಮಾನಸಸರೋವರ ಗಂಧರ್ವಸಾಗರಮೆಂಬ ತೀರ್ಥಂಗಳಂ ಶಿಲಾಮಯಂಗಳನಾಗಿಸಿ ಜೀರ್ಣೋದ್ಧಾರಮಂ ರಚಿಸಿ ಮತ್ತಮೈಯಪ್ಪನೆಂಬ ಸೇನಬೋವನ ಮುಖದಿಂ ಕರ್ದಮೇಶ್ವರ ನರ್ಮದೇಶ್ವರ ಭೀಮಚಂಡಿಕೆ ವೃಷಭಧ್ವಜೇಶ್ವರದೇವಸ್ಥಾನಂಗಳಂ ಜೀರ್ಣೋದ್ಧಾರಮಂ ರಚಿಸಿ ಸ್ವಪುತ್ರ ವೆಂಕಟಪ್ಪನಾಯಕರ ಹೆಸರಲ್ಲಿ ಶಿಲಾಶಾಸನಂ ಬರೆಸಿ ಶಾಶ್ವತಮಾದ ಧರ್ಮಕೀರ್ತಿಸುಕೃತಂಗಳನಾರ್ಜಿಸಿ ಬಳಿಕ್ಕಾ ವಾರಾಣಸೀಕ್ಷೇತ್ರದೊಳೊಂದತಿಮನೋಹರಮಾದ ಸ್ಥೂಲಲಿಂಗಮಂ ಸಂಪಾದಿಸಿ[4]ಕೊಂಡ[4]ನಂತರದೊಳ್

ಕಂ॥ ವರಕಾಶೀಕ್ಷೇತ್ರದಿನಾ
ಧರಣೀಶಂ ತೆರಳ್ದು ಕೂಡೆ ಗಯೆಯಂ ಸಾರ್ದಾ
ಧರೆಯೊಳ್ ಶಿವಜಂಗಮಕ
ತ್ಯುರುತರಮಠಮಾನ್ಯಧರ್ಮಮಂ ವಿರಚಿಸಿದಂ* ೬೦

---

1 ತಾಂಯೋ (ಮ) 2 ಮಮೂರ್ತಿಗೆ (ಕ) 3 ವಾ (ಬ) 4 ವಶಮಾಡಿಕೊಂಡ (ಕ ಮ)

* (ಮ) ಪ್ರತಿಯಲ್ಲಿ ೬೧, ೬೨, ೬೩, ೬೪, ೬೫ ನೆಯ ಪದ್ಯಗಳಿಲ್ಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಅವಿರಳವಿಕ್ರಮಜಿತರಿಪು
ನಿವಹಂ ಗಯೆಯಿಂ ತೆರಳ್ದು ದಗ್ದಿಕ್ಕಿನೊಳೊ
ಪ್ಪುವ ನೀಲಕಂಠ ನೇಪಾ
ಳವನೊಲವಿಂ ಸಾರ್ದನಾ ನೃಪಾಲಕತಿಲಕಂ ೬೧

ಆ ತಾಣದೊಳುರೆ ಮಠಮಂ
ವೀತಭಯಂ ಸಂಕಣೋರ್ವಿಪಂ ವಿರಚಿಸಿ ಮ
* ತ್ತಾತನಲ್ಲಿಂ ತೆರಳ್ದುರು
ಕೇತಾರವನಘವಿದೂರಮಂ ಮಿಗೆ ಸಾರ್ದಂ ೬೨

ಕರಮೆಸೆವಾ ಕೇತಾರೇ
ಶ್ವರನಡಿದಾವರೆಯನ್ನೈದೆ ಪೂಜಿಸಿ ತದ್ಭೂ
ವರನಾ ಸ್ಥಳದೊಳ್ ಜಂಗಮ
ವರಧರ್ಮಾರ್ಥಂ ಸುಮಠವನಿರದಾಗಿಸಿದಂ ೬೩

ಧುರಧೀರ ಸಂಕಣೋರ್ವೀ
ಶ್ವರನಾ ಕೇತಾರದಿಂ ತೆರಳ್ದೊಡನತಿ ಬಂ
* ಧುರಹರಿದ್ವಾರಮಂ ಶುಭ
ಕರಸುರಗಂಗಾವಿಹಾರನಮಂ ಮಿಗೆ ಸಾರ್ದಂ ೬೪

* ಆ ಹರಿದ್ವಾರದಿಂ ತೆರ
ಳ್ದಾಹವನಿಸ್ಸೀಮ ಸಂಕಣೋರ್ವಿಪನಹಿತ
ವ್ಯೂಹಮದಾಪಹನತ್ಯು
ತ್ಸಾಹದ ಕಾಶ್ಮೀರದೇಶಮಂ ನೆರೆ ಸಾರ್ದಂ ೬೫

ವ|| ಮತ್ತಮಾ ಸಂಕಣನಾಯಕಂ ಕಾಶ್ಮೀರಪುರವಾಸಿನಿಯಾದ ಶಾರದಾದೇವಿಯಂ ಸಂದರ್ಶನಂಗೈದಾ ಕಾಶ್ಮೀರದೇಶದಿಂ ತೆರಳ್ದು ಕುರುಕ್ಷೇತ್ರಮಂ ಸಾರ್ದಲ್ಲಿಂ ತೆರಳ್ದು ಪ್ಯೆಠಣ ದೇಶಮಂ ಪೊಂದಿ ತತ್ಪೈಠಣದೇಶದೊಳ್ ದ್ವಾತ್ರಿಂಶತ್ಕರಕಮಲಶೋಭಿತಮಪ್ಪಘೋರ ಮೂರ್ತಿಯಂ [1]ಕಂಡು ಕಾಗದದೊಳ್ ತದಾಕಾರಮಂ ಚಿತ್ರಿಸಿ ನಿಮಾಸಿನಿಯಂ ಬರೆದು ತೆಗೆದುಕೊಂಡೊಡನೆ ಪಂಪಾಕ್ಷೇತ್ರಮಂ ಸಾರ್ದಲ್ಲಿಂ ತೆರಳ್ದು ಮಾಸೂರ ಸೀಮೆಯೊಳೆಸೆ

[1] ಕಂಡಾಮೂರ್ತಿಯಂಕಾ (ಕ) ಕಾ (ಬ)

Sri Vidyabharathi Book Centre, Sringeri

CC-O. In Public Domain. Digitized by eGangotri

ವಾಲವಳ್ಳಿಯೆಂಬ ಗ್ರಾಮಮಂ ಪೊರ್ದಿ ಮಲಂಗಿರಲಾ ಗ್ರಾಮತಟಾಕದೊಳಿರ್ಪ ವೀರಭದ್ರ ಮೂರ್ತಿಯಾ ಸಂಕಣನಾಯಕನ ಸ್ವಪ್ನದೊಳ್ ಜಂಗಮಮೂರ್ತಿಯಾಕಾರದಿಂದ್ಬೈ ತಂದೆನ್ನಂ ನಿನ್ನ ರಾಷ್ಟ್ರಕ್ಕೆ ತೆಗೆದುಕೊಂಡು ಪೋಗಿ ಪ್ರತಿಷ್ಠೆಯಂ ರಚಿಸಿ ಪೂಜಿಸಲ್ ನಿನಗೆ ಸಮಸ್ತ ಮನೋಭೀಷ್ಟಂಗಳನೀವೆನೆಂದುಸಿರ್ದಂತರ್ಧಾನವನ್ನೈದಲ್ ಎಳ್ಚತ್ತು ಬಳಿಕಾ ತಟಾಕಜಲಮಧ್ಯದೊಳಿರ್ಪ ವೀರಭದ್ರಮೂರ್ತಿಯಂ ಸ್ವಾಧೀನಂಗೈದು

ಕಂ|| ಬಳಿಕಾ ಸಂಕಣಭೂಪಂ
ಘಳಿಲನೆ ಮಾಸೂರದೇಶದಿಂ ಪೊರಟೊಡನು
ಜ್ಜ್ವಲಿಪ ನಿಜರಾಷ್ಟ್ರಮಂ ಸಾ
ರ್ದೊಲವಿಂದೆಳ್ತಂದು ಕೆಳದಿಪುರಮಂ ಪೊಕ್ಕಂ ೬೬

ವ|| ಇಂತಾ ಸಂಕಣನಾಯಕಂ ಕೆಳದಿಪುರವರಮಂ ಪೊಕ್ಕನಂತರಮಾ ಕೆಳದಿಯ ರಾಮೇಶ್ವರಲಿಂಗದ ದಕ್ಷಿಣಪಾರ್ಶ್ವದೊಳ್

ಕಂ|| ಬಲ್ಲಿದ ದಾನವಸುರರೆರ್ದೆ
ದಲ್ಲಣನಹ ವೀರಭದ್ರಮೂರ್ತಿಯನೆಸೆವಂ
ತಲ್ಲಿ ನೆಲೆಗೊಳಿಸಿ ತತ್ಪದ
ಪಲ್ಲವಮಂ ಭಜಿಸಿ ಪಡೆದನತ್ಯುಚ್ಛ್ರಯಮಂ ೬೭

ವ|| ಇಂತಾಗಮೋಕ್ತವಿಧಾನದಿಂ ವೀರಭದ್ರಮೂರ್ತಿಯಂ ಪ್ರತಿಷ್ಠೆಯಂ ರಚಿಸಿ ಶಿಲಾಮಯವಾದ ಗರ್ಭಗೃಹಮಂ ಕಟ್ಟಿಸಿ ತದ್ದೇವತಾ ಪೂಜಾರ್ಥಮತಿಮನೋಹರಮಪ್ಪ ಭೂರಿಭೂಸ್ವಾಸ್ಥೆಯಂ ಬಿಡಿಸಿ ಬಳಿಕ್ಕಂ ಪೈಠಣದೇಶದೊಳ್ ಕಾಗದದೊಳ್ ಚಿತ್ರಿಸಿ [1]ನಿಮಾನಿಮಿಯಂ ಬರೆದು ತಂ[1]ದಘೋರಮೂರ್ತಿಯಾಕಾರದಿಂ ಶಿಲಾಮಯಮಾದಘೋರ ಮೂರ್ತಿಯಂ ರಚನೆಗೈಸಿಯನಂತರದೊಳಾಗಮೋಕ್ತ ವಿಧಾನದಿಂ

ಕಂ|| ಚಾರುಭುಜಬಲವಿದಾರಿತ
ಭೂರಿರಿಪುವ್ರಾತ ಸಂಕಣೋರ್ವಿಪನೆಸೆವಿ
ಕ್ಕೇರಿಪುರವರದೊಳೊಪ್ಪುವ
ಘೋರೇಶ್ವರನಂ ಪ್ರತಿಷ್ಠೆಯಂ ವಿರಚಿಸಿದಂ ೬೮

---

1 ತಂ (ಮು)

Sri Vidyabharathi Book Centre, Sringeri

CC-O. In Public Domain. Digitized by eGangotri

ವ|| ಇಂತಘೋರೇಶ್ವರ[1]ನಂ[1] ಪ್ರತಿಷ್ಠೆಯಂ ರಚಿಸಿ [2]ತತ್ಪೂಜಾರ್ಥಮಪರಿಮಿತಃ ಭೂಸ್ವಾಸ್ಥ್ಯಮಂ ಧಾರೆಯನೆರೆದು ಮಹಾದ್ಭುತಮಾದ ಶಿಲಾಮಯ ದೇವಸ್ಥಾನಮಂ ನಿರ್ಮಾಣಂಗೈಸಿ ತಟಾಕಾರಾಮ ಪುಷ್ಪವಾಟಿಗಳಂ ರಚನೆಗೈಸಿ

ಕಂ|| ರಾಜಿಸುವಘೋರಮೂರ್ತಿಯ
ಪೂಜೆಯನತ್ಯಂತ ವಿಭವದಿಂ ವಿರಚಿಸುತುಂ
* ರಾಜಧರ್ಮದೊಳೆ ಸಂಕಣ
ರಾಜಂ ಸಂತಸದೆ ರಾಜ್ಯಮಂ ರಕ್ಷಿಸಿದಂ ೧೯

ವ|| ಮತ್ತಮದಲ್ಲದಾ ಸಂಕಣನಾಯಕಂ

ಕಂ|| * ರಾಮರಾಯರ್ಗೆ ಮಲೆತತಿ
ತಾಮರಸ ತುರುಷ್ಕರದಟನುಡುಗಿಸಿ ಘನಸಂ
ಗ್ರಾಮದೆ ಭೈರಾದೇವಿಯ
ಸೀಮೆಯನುರೆ ಧೂಳಿಪ[3]ಟ್ಟ[3]ಮಂ ವಿರಚಿಸಿದಂ ೨೦

ವ|| ಮತ್ತಮದಲ್ಲದೆ

ಕಂ|| ಮರಳ್ದಾ ಸಂಕಣಭೂಮೀ
ಶ್ವರನುರುವಿರುಪಣವೊಡೆಯರುಮಂ ಸಂಗರದೊಳ್
ಮುರಿದೊಪ್ಪುವ ಜಂಬೂರಂ
ಕರಮೆಸೆವುಡುಗುಣಿಯ ಕೋಂಟೆಯಂ ವಶಗೈದಂ ೨೧

* ಒಡನೆ ಮಾದೇವಪುರದು
ಗ್ಗಡದ ಪರಿಸ್ತರಣಮಂ ವಶಂಗೈದು ಬಳಿ
ಕ್ಕಡವಲದೊಳುರುಬುವಹಿತರ
ಸೆಡವಂ ಮುರಿದಾ ಧರಿತ್ರಿಯಂ ಸಾಧಿಸಿದಂ ೨೨

ವ|| ಮತ್ತಮದಲ್ಲದಾ *ಸಂಕಣನಾಯಕಂ

ಕಂ|| ತರತರದೊಳ್ಳೈದಿ ಮಾರ್ಮಲೆ
ತುರುಬುವ ಯವನರ್ಕಳದಟನುಡುಗಿಸಿ ಘನಸಂ
ಗರದೊಳ್ ಶರನಿಧಿಯ ಪರಿ
ಸ್ತರಣಮುಮಂ ವಡ್ಡಿಯವನಿಯಂ ಸಾಧಿಸಿದಂ ೨೩

---

[1] ನಮೂರ್ತಿಯಂ (ಮ) [2] ಭೂರಿ (ಮ) [3] ಟಲ (ಮ)
* ಈ ಭಾಗ (ಮ) ದಲ್ಲಿಲ್ಲ

Sri Vidyabharathi Book Centre, Sringeri

CC-O. In Public Domain. Digitized by eGangotri

ವ|| ಮತ್ತಮದಲ್ಲದತ್ಯಂತಗರ್ವೋದ್ರೇಕದಿಂ ಕುಹಕೋಪಾಯಂಗಳನೆಸಗುತಿರ್ಪ *ಕಾರ್ಕಳದ ಭೈರಸವೊಡೆಯರುಮಂ ಪರಿಭವಿಸಿ ಕಪ್ಪಮಂ ಕೊಂಡು ತನ್ಮದೋದ್ರೇಕಮಂ ಮುಗ್ಗಿಸಿದನಂತುಮಲ್ಲದೆಯುಂ

ಕಂ|| ಚಾಳಕತನದಿಂ ಮುಷ್ಟಜ
ನಾಳಿಯನೊಡವೆರಸು ರಾಜ್ಯಮಂ ಬಾಧಿಸುವಾ
ಸಾಳುವತಿಮ್ಮನ ಭುಜಬಲ
ದೂಳಿಗಮಂ ನಿಲಿಸಿ ರಾಷ್ಟ್ರಮಂ ರಕ್ಷಿಸಿದಂ ೭೪

ವ|| * ಇಂತಾ ಸಂಕಣನಾಯಕಂ ಸಾಳುವತಿಮ್ಮನಂ ನಿಗ್ರಹಿಸಿ ಸಂಗ್ರಾಮ ಮುಖದೊಳ್ ತತ್ಸಾಳುವಪಡೆಯನೆಲ್ಲಮಂ ಸಂಹರಿಸಿ ಸ್ವರಾಷ್ಟ್ರದೊಳ್ ನಿಷ್ಕಂಟಕತ್ವಮಂ ರಚಿಸಿ ಸಮಸ್ತ ರಾಜ್ಯರಾಷ್ಟ್ರ ಪ್ರಜೆಪರಿವಾರಮಂ ಪರಿಪಾಲಿಸುತ್ತುಂ ಪರಮ ಪ್ರಖ್ಯಾತಿಯಂ ಪಡೆದು ವಿರಾಜಿಸುತ್ತುಮಿರ್ದನಂತುಮಲ್ಲದೆಯುಂ †

ಕಂ|| ಬಗೆಬಗೆಯ ದಾನಧರ್ಮಾ
ದಿಗಳಂ ಶಾಸ್ತ್ರೋಕ್ತಮಾರ್ಗದಿಂ ವಿರಚಿಸಿ ಮೂ
ಜಗಮ್ಮೆದೆ ಪೊಗಳೆ ತನ್ನೃಪ
ನಗಣಿತ ಸದ್ಧರ್ಮದಿಂದಮಿಳೆಯಂ ಪೊರೆದಂ ೭೫

ವ|| [1]ಈ[1] ದೊಡ್ಡಸಂಕಣನಾಯಕಂ ತನಗೆ [2]ರಾಜಪ[2]ಟ್ಟಮಾದ ವಿಶ್ವಾವಸು ನಾಮಸಂವತ್ಸರದ ವೈಶಾಖ ಶುದ್ಧ ೫ ಯಾರಭ್ಯ ಕಾಳಯುಕ್ತಿ ಸಂವತ್ಸರದ ಆಶ್ವ ಯುಜ ಶುದ್ಧ ೪ ಯಲ್ಲಿಗೆ ವರುಷ ೧೩ ತಿಂಗಳು ೫ ಪರ್ಯಂತಂ ಸದ್ಧರ್ಮದಿಂ ರಾಜ್ಯಪರಿ ಪಾಲನಂಗೈದಂ *

ತೃತೀಯಾಶ್ವಾಸಂ ಸಂಪೂರ್ಣಂ.

---

1 ಇಂತಾ (ಮ) 2 ಪ (ಮ) * ಈ ಭಾಗ (ಮ) ದಲ್ಲಿಲ್ಲ.

† ಈ ದೊಡ್ಡಶಂಕಣನಾಯಕರಿಗೆ ಇಕ್ಕೇರಿಯರಮನೆಯ ಕೊಪ್ಪಲಸ್ಥಳದಲ್ಲೂ ಸಮಾಧಿ ಯಾಯಿತು. ಇವರ ಕಾಲದಲ್ಲಿ ಬದುಕುಗಳ ಮಾಡಿದವರು:– ಪ್ರಧಾನಿ ಅರಗದ ಕಳಸಪ್ಪಯ್ಯ, ಕರಣಿಕ ಅಣ್ಣಾಜಯ್ಯ, ಬಾಳಗಾರ ತಮ್ಮರಸಯ್ಯ, ರಾಯಸದ ಯಲ್ಲಪ್ಪಯ್ಯ, ನಾರಣಪ್ಪಯ್ಯ, ದಳವಾಯಿ ಕಲ್ಲಪ್ಪ. (ಕ)

Sri Vidyabharathi Book Centre, Sringeri

CC-O. In Public Domain. Digitized by eGangotri

ಚತುರ್ಥಾಶ್ವಾಸಂ

ವ॥ ಆ ದೊಡ್ಡಸಂಕಣನಾಯಕರ ತರುವಾಯ ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನಶಕ ವರ್ಷ ೧೪೮೧ನೆಯ ಕಾಳಯುಕ್ತಿ ಸಂವತ್ಸರದ ಆಶ್ವಯುಜ ಶುದ್ಧ ೫ ಯಲ್ಲಿ * ಚಿಕ್ಕಸಂಕಣನಾಯಕರಿಗೆ ಇಕ್ಕೇರಿಯರಮನೆಯಲ್ಲಿ ರಾಜಪಟ್ಟಂ.

ಕಂ॥ ವರಸಂಕಣಾವನೀಶನ
ತರುವಾಯಿಯೊಳೆಸೆವ ತನ್ಮಹೀಶ್ವರನ ಸಹೋ
ದರನೆನಿಪ ಚಿಕ್ಕಸಂಕಣ
ಧರಣೀಶ್ವರನಾಳ್ದನೊಪ್ಪುವವನೀತಳಮಂ ೧

ವ॥ ಇಂತಾ ಚಿಕ್ಕಸಂಕಣನಾಯಕಂ ತನ್ನಗ್ರಜ ಹಿರಿಯ ಸಂಕಣನಾಯಕನ ಪುತ್ರರಾದ ರಾಮರಾಜನಾಯಕ ವೆಂಕಟಪ್ಪನಾಯಕರ್ವೆರಸು ಸುಖದಿಂ ರಾಜ್ಯಂಗೆಯುತ್ತಿರಲ್ ಕತಿಪಯ ವತ್ಸರಂಗಳ್ ಪೋಗಲೊಡನೆ

ಕಂ॥ ಕರಮೆಸೆವ ಚಿಕ್ಕಸಂಕಣ
ಧರಣೀಶಂಗಂ ಕನಿಷ್ಠ ಪತ್ನಿಯ ಬಸಿರೊಳ್
ಮೆರೆವ ಸುಲಗ್ನದೊಳತಿಬಂ
ಧುರತರಶುಭರೂಪನಪ್ಪ ಸುತನುದಯಿಸಿದಂ ೨

ಶುದ್ಧಯಿಸಿದುರುಸುವರ್ಣದ
ಮುದ್ದೆಯೆನಲ್ಕೆಸೆವ ತತ್ಕುಮಾರಂಗೊಲವಿಂ
ಸಿದ್ದಪನಾಯಕನೆನುತುಂ
ಮುದ್ದಿನ ಪೆಸರಿಟ್ಟು ಮೋಹದಿಂ ಪೋಷಿಸಿದಂ ೩

ವ॥ ‡ಇಂತು ವಿರಾಜಿಸುತಿರ್ಪ ಸತ್ಪುತ್ರಂ ಪ್ರತಿದಿನದೊಳಭಿವರ್ಧಿಸಿ ಬಾಲಲೀಲೆಯಂ ನಟಿಸುತ್ತಲ್ ನಿಟ್ಟಿಸಿ ಸಂತಸಂದಳೆಯುತ್ತುಂ ರಾಜ್ಯಂಗೆಯ್ಯುತ್ತಿರಲಾ ಪ್ರಸ್ತಾವದೊಳ್‡

---

* ಸದಾಶಿವನಾಯಕರ ಕನಿಷ್ಠ ಪುತ್ರನಾದ ದೊಡ್ಡಸಂಕಣನಾಯಕರ ಸಹೋದರರಾದ ಚಿಕ್ಕಸಂಕಣ....(ಕ ಮ)

‡ ಭಾಗ (ಮ) ದಲ್ಲಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ॥ ಗರುವಿಕೆಯೊಳ್ ಸೋದೆಯ ಹಿರಿ
ಯರಸಪನಾಯಕ ಸಮೇತವೈದಿದ ವಿಜಯಾ
ಪುರದ ಸಲಾಬಿತಖಾನನ
ವರಸೈನ್ಯವನಾಜಿರಂಗದೊಳ್ ಮಗ್ಗಿಸಿದಂ ೪

ಮತ್ತತಿಚಲದಿಂದಿಭಹಯ
ಪತ್ತಿಚಯಂವೆರಸು ಸರ್ವಸನ್ನಾಹದೆ ದಂ
* ಡೆತ್ತಿ ಬಂದಾ ತುರುಷ್ಕರ
ಮೊತ್ತಮನಂಕದೊಳೆ ಮುರಿದನಾ ನೃಪತಿಲಕಂ ೫

ವ॥ ಮತ್ತಮದಲ್ಲದೆ ಯೆಡೆಯೆಡೆಗೆಳ್ತಂದು ದಾಳಿವರಿಯುತಿರ್ದ ವಿದ್ಧಕರ್ಣರ್ಕಳದಟಂ ಮುರಿದು ಭುಜಬಲಪ್ರತಾಪದಿಂ ರಾಜ್ಯಂಗೆಯುತ್ತಮಿರಲಾ ಕಾಲದೊಳ್ ರಾಮರಾಯರ್ ವಿದ್ಯಾನಗರಿಯಿಂ ತೆರಳ್ದು ತುರುಷ್ಕರ ಮೇಲೆ ದಂಡೆತ್ತಿ ಪೋಗಿರಲ್ ತದ್ರಕ್ತಾಕ್ಷಿ ಸಂವತ್ಸರದ ಮಾಘಮಾಸದೊಳ್ ತುರುಷ್ಕ ಸೈನ್ಯಕ್ಕಂ ರಾಯಸೈನ್ಯಕ್ಕಂ ಮಹಾದ್ಭುತಮಾದ ಯುದ್ಧಂ ಪಣ್ಣೆ ರಾಯಸೈನ್ಯಕ್ಕಿದಿರ್ಚಿ ನಿಲಲಶಕ್ಯಮಾಗಿ ಯವನಸೈನ್ಯಂ ಮುರಿದು ಹರಿಹಂಚಾಗಲ್ ಬಳಿಕ್ಕಂ ಗೋಲುಕೊಂಡೆಯದ ಕುತುಬಶಾಹನುಂ ಅಮದಾನಗರದ ಭೈರಿಪಾತುಶಾಹನೆನಿಪ ನಿಜಾಮಶಾಹನುಂ ಇವರಿರ್ವರುಂ ಯುದ್ಧರಂಗದೊಳ್ ಕೈಗೆಯ್ದು ನಿಂದು ನಿತ್ತರಿಸಲಮ್ಮದೆ ಪಲಾಯನಂಬಡೆದಿಂತು ರಾಯಸೈನ್ಯಮಂ ಮುರಿವುದಸಾಧ್ಯಮೆಂದಿರ್ವರ್ ಪಾತುಶಾಹರೊಂದಾಗಿ ಮಂತ್ರಾಲೋಚನೆಯಂ ರಚಿಸಿ ಮಾಯಾತಂತ್ರದಿಂ ಪೊರತು ಗೆಲ್ವುದಸಾಧ್ಯಮೆಂದು ನಿಶ್ಚಯಂಗೆಯ್ದು ರಾಯರ ಸಮೀಪದೊಳ್ ಮುಖ್ಯಸೇವಕನಾಗಿ ವರ್ತಿಸುತಿರ್ದ ವಿಜಾಪುರದ ಅಲ್ಲಿ[1]ಅದುಲಪಾತುಶಾಹಂಗೆ ಸಂಧಾನಮನೊಡರ್ಚಿಸಿ ಜಾತ್ಯಭಿಮಾನಹೇತುಪಂಥಮಂ ಪುಟ್ಟಿಸಿ ಮಂತ್ರಂ ಭಿನ್ನಿಸದಂತು ಸ್ವಜಾತ್ಯಭಿಮಾನದೇವತಾಸಾಕ್ಷಿಪೂರ್ವಕಮಾಗಿ ಖಡ್ಗಮಂ ಮುಟ್ಟಿಸಿ ಕ್ರಿಯಾಪೂರ್ವಕಮಾಗಿ ತಪ್ಪದಂತು ಭಾಷೆಯಂ ತೆಗೆದುಕೊಂಡೀಪ್ರಕಾರದಿಂ ಅಲ್ಲಿ[1]ಅದುಲ[1]ಶಾಹನನೊಳಗುಮಾಡಿಕೊಂಡು ಗೋಲುಕೊಂಡೆಯದ ಕುತುಬಶಾಹನುಂ ಅಮದಾನಗರದ ಭೈರಿನಿಜಾಮಶಾಹನುಂ ನಂಬುಗೆಯಾದೊಡೆ ಸಂಧಾನಮುಖದಿಂದೈತಂದು ಕಾಣ್ಬೆವೆಂದು ಹುಸಿಯ ವರ್ತಮಾನಮಂ ಪುಟ್ಟಿಸಿ ನಚ್ಚುಗಾಕಿ ರಾಯರಂ ಮೈಮರೆಸಿ ಸಮಯಸಾಧನೆಯಂ ರಚಿಸಿ ಬಳಿಕ್ಕಂ ವಿಜಾಪುರದ ಅಲ್ಲಿ[1]ಅದುಲಶಾಹನ ಸಂಚಿನ ಮೇಲಾ ಪಾತುಶಾಹರೊಂದಾಗಿ ಮೋಸದ ಮೇಲೆ ಶಾಲಿವಾಹನಶಕವರ್ಷ ೧೪೮೬ನೆಯ ರಕ್ತಾಕ್ಷಿ ಸಂವತ್ಸರದ ಮಾಘಬಹುಳದಲ್ಲಿ ರಕ್ಕಸದಂಗಡಿಯೆಂಬ ಸ್ಥಳದಲ್ಲಿ ರಾಮರಾಯರಂ ಪಿಡಿದು ಶಿರಶ್ಛೇದನಂಗೈದು ಆ ಶಿರಮಂ ಕಾಶಿಗೆ ಕಳುಹಿ ತತ್ತತ್ಸ್ಥಾನಂಗಳಿಗೆಲ್ಲಂ ತಾವೇ ಸ್ವತಂತ್ರಕರ್ತೃಗಳಾಗಿರಲಿತ್ತಂ

---

[1] (ಕ) ಪುಸ್ತಕದಲ್ಲಿ "ಅಬ್ದುಲ್ಲ (ಪಾತು) ಶಾಹ"ನೆಂದಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಯಸಂಸ್ಥಾನಂ ವಿಸ್ಫಲಿತಮಾಗಿ ವಿದ್ಯಾನಗರಂ ಪಾಳಾಗಲಾ ರಾಯರ ಮನೆವಾರ್ತೆ ಬೊಕ್ಕಸದ ಸೇನಬೋವ ಚಿನ್ನಭಂಡಾರದ ನಾರಣಪ್ಪಯ್ಯನೆಂಬಾತನಲ್ಲಿ ನಿತ್ತರಿಸಲಸು[1]ಕ್ರದೆ[1] ಕುಟುಂಬಸಹಿತಂ ತೆರಳ್ದೈತಂದು ಚಿಕ್ಕಸಂಕಣನಾಯಕರ ಪಾದಾರವಿಂದನನಾಶ್ರಯಿಸಲವರ್ಗೆ ಪರಮಾಧಿಕಾರಭಾಗ್ಯಂಗಳನಿತ್ತು ಪೋಷಿಸಿದನಂತುಮಲ್ಲದೆಯುಂ

ಕಂ॥ ನೆರಹುತೆಡನಲದ ಮನ್ನೆಯ
ದೊರೆಗಳನಂಕದೊಳಿದಿರ್ಚಿ ಕೈಗೆಯ್ದು ದಟಂ
ಮೆರೆದಾ ಭೈರಾದೇವಿಯ
ಗರುವಿಕೆಯುಂ ಮುರಿದನಾ ನೃಪಾಲಕತಿಲಕಂ ೬

ಇಂತಿದಿರಾಂತರ ದುರ್ಮದ
ಮಂ ಶವಿಸುತೆ ಚಿಕ್ಕಸಂಕಣೋರ್ವೀಪತಿ ತಾಂ
ಸಂತಸವೆ ಸಂತರೊಡಬಡು
ವಂತಿರೆ ಸದ್ಧರ್ಮದಿಂದವಿಳೆಯಂ ಪೊರೆದಂ ೭

ವ॥ ಚಿಕ್ಕಸಂಕಣನಾಯಕಂ ಇಂತು ತನಗೆ ರಾಜಪಟ್ಟಮಾದ ಶಾಲಿವಾಹನಶಕಾಬ್ದ ೧೪೮೧ನೆಯ ಕಾಳಯುಕ್ತಿ ಸಂವತ್ಸರದ ಆಶ್ವಯುಜ ಶುದ್ಧ ೫ ಯಾರಭ್ಯ ಪ್ರಮೋದೂತ ಸಂವತ್ಸರದ ಕಾರ್ತಿಕ ಶುದ್ಧ ೪ ಯ ವರೆಗೆ ವರುಷ ೧೨ ತಿಂಗಳು ೧ ಪರ್ಯಂತ ರಾಜ್ಯಂಗೈದು ಶಿವಸಾಯುಜ್ಯಮಂ ಪಡೆದಂ *

[2]ಅನಂತರಂ[2] ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷ ೧೪೯೩ನೆಯ ಪ್ರಮೋದೂತ ಸಂವತ್ಸರದ ಕಾರ್ತಿಕ ಶುದ್ಧ ೫ಯಲ್ಲಿ ಚಿಕ್ಕ ಸಂಕಣನಾಯಕರ ಅಗ್ರಜನಾದ ದೊಡ್ಡಸಂಕಣನಾಯಕರ ಜ್ಯೇಷ್ಠಪುತ್ರನಾದ ರಾಮರಾಜನಾಯಕಂಗೆ ಇಕ್ಕೇರಿಯರ ಮನೆಯಲ್ಲಿ ರಾಜಪಟ್ಟಂ[3]

ಕಂ॥ ನೆರೆ ಚಿಕ್ಕಸಂಕಣೇಂದ್ರನ
ತರುಣಾಯಿಯೊಳಾ ಮಹೀಶನಗ್ರಜನೆನಿಪಾ
* ಹಿರಿಯಸಂಕಣನರೇಂದ್ರನ
ವರತನುಜಂ ರಾಮರಾಜನಿಳೆಗರಸಾದಂ ೮

---

[1]ನೆ ನಿಜಕಳತ್ರಸಹೋದರರ್ವೆರಸು (ಕ ಮ) [2] ಆ ತರುಣಾಯ ರಾಮರಾಜನಾಯಕಂ (ಮ) [3]ಟ್ಟಮುದೆತೆಂದೊಡೆ (ಮ)

* ಈ ಚಿಕ್ಕಸಂಕಣನಾಯಕರು ರಾಮರಾಜನಾಯಕರ ಶಸ್ತ್ರದಿಂದ ಮೃತಿಯಂ ಪಡೆದರು ; ಇಕ್ಕೇರಿಯರಮನೆಯ ಕೊಪ್ಪಲಸ್ಥಳದಲ್ಲು ಸಮಾಧಿಯಾಯಿತು. (ಕ) ಪ್ರತಿಯಲ್ಲಿ ಈ ಭಾಗ ಅಧಿಕವಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ವ|| † ಆ ರಾಮರಾಜನಾಯಕಂ ತಮ್ಮ ಕಿರಿಯಯ್ಯನಾದ ಚಿಕ್ಕಸಂಕಣನಾಯಕರಾಳಿಬರುತ್ತಿರ್ದ ರಾಜ್ಯ ರಾಷ್ಟ್ರ ದೇಶ ಕೋಶ ಪರಿಸ್ತರಣ ಪ್ರಜೆ ಪರಿವಾರ ಪರಿಜನ ಪುರಜನ ಮಿತ್ರಜನ ಸೇವಕಜನರ್ ಮುಂತಾದ ಸಮಸ್ತಜನರಂ ಪರಿಪಾಲಿಸುತ್ತುಂ ತನ್ನನುಜನಾದ ವೆಂಕಟಪ್ಪನಾಯಕನಂ ಪ್ರೀತಿಯಿಂ ನಡೆಸಿಕೊಡುತ್ತುಂ ತಮ್ಮ ಕುಮಾರರಾದ ವೀರವೊಡೆಯರ್ ಬಸವಲಿಂಗನಾಯಕರುಮಂ ಸಂತೋಷದಿಂ ಪೋಷಿಸುತ್ತುಂ ಅಂಕೆ ಝುಂಕೆ ಆಣೆ ಘೋಷಣೆ ಮುಂತಾದ ರಾಜಧರ್ಮಮೊಳಾವುದರಲ್ಲಿಯುಂ ಕೊರತೆ ಬಾರದಂತು ವರ್ತಿಸುತ್ತುಂ †

ಕಂ|| ಶ್ರೀರಾಮರಾಜನೃಪನರಿ
ವಾರಣಹರ್ಯಕ್ಷನಾನತಾವನದಕ್ಷಂ
ಚಾರುಯಶನೆನಿಸಿ ಧರ್ಮದ
ಸಾರನನುಡುಗಿಸದೆ ಪೊರೆದನವನೀತಳಮಂ ೯

ವ|| ಇಂತಾ ರಾಮರಾಜನಾಯಕರ್ ತಮಗೆ ರಾಜಪಟ್ಟಮಾದ ಶಾಲಿವಾಹನಶಕ ವರ್ಷ ೧೪೯೩ನೆಯ ಪ್ರಮೋದೂತ ಸಂವತ್ಸರದ ಕಾರ್ತಿಕ ಶುದ್ಧ ೫ ಯಾರಭ್ಯ ಚಿತ್ರಭಾನು ಸಂವತ್ಸರದ ಮಾರ್ಗಶಿರ ಶುದ್ಧ ೪ ಯವರೆಗೆ ವರ್ಷ ೧೨ ತಿಂಗಳು ೧ ಪರ್ಯಂತಂ ರಾಜ್ಯಂಗೈ[1]ದು ಶಿವಸಾಯುಜ್ಯಮಂ ಪಡೆದರ್ *[1]

ಚತುರ್ಥಾಶ್ವಾಸಂ ಸಂಪೂರ್ಣಂ.

---

1 ದ ಮತ್ತಮನಲ್ಲದ (ಮ)

† ಈಭಾಗ (ಮ) ದಲ್ಲಿಲ್ಲ.

* ಚಿಕ್ಕಸಂಕಣನಾಯಕರ ಕಾಲದಲ್ಲಿ ಬದುಕುಗಳ ಮಾಡಿದವರು :—ಪ್ರಧಾನಿ ನಾರಣಪ್ಪಯ್ಯ, ಕರಣೀಕ ಅಣ್ಣಾಜಯ್ಯ, ರಾಮಪ್ಪಯ್ಯ, ತಮ್ಮರಸಯ್ಯ, ರಾಯಸದ ರಾಮಚಂದ್ರಯ್ಯ, ಮಲ್ಲಪ್ಪಯ್ಯ, ದಳವಾಯಿ ಕಲ್ಲಪ್ಪ ಮುಂತಾದವರು.

ಈ ರಾಮರಾಜನಾಯಕರು ಗೇರಸಪ್ಪೆಯಲ್ಲೂ ಐಕ್ಯವಾದಲ್ಲಿ ಆ ಸ್ಥಳದಲ್ಲಿಯೇ ಸಮಾಧಿಯಾಯಿತು. ಇವರ ಕಾಲದಲ್ಲು ಬದುಕುಗಳ ಮಾಡಿದವರು :—ಪ್ರಧಾನಿ ಅರಗದ ಕಳಸಪ್ಪಯ್ಯ, ಕರಣಿಕ ಅಣ್ಣಾಜಯ್ಯ, ಜೋಯಿಸರ ತಿಮ್ಮರಸಯ್ಯ, ದಳವಾಯಿ ಚಿಕ್ಕಕಲ್ಲಪ್ಪ ಮುಂತಾದವರು. (ಕ) ಪ್ರತಿಯಲ್ಲಿ ಈ ಭಾಗ ಅಧಿಕವಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪಂಚಮಾಶ್ವಾಸಂ

ವ॥ [1]ಸ್ವಸ್ತಿ[1] ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರ್ಷ ೧೫೦೫ನೆಯ ಚಿತ್ರಭಾನು ನಾಮ ಸಂವತ್ಸರದ ಶುದ್ಧ ೫ಯಲ್ಲಿ ದೊಡ್ಡಸಂಕಣನಾಯಕರ ಜ್ಯೇಷ್ಠಪುತ್ರರಾದ ರಾಮರಾಜನಾಯಕರ್ಗೆ ಸಹೋದರರಾದ [2]ವೆಂ[2]ಕಟಪ್ಪನಾಯಕರ್ಗೆ ಇಕ್ಕೇರಿಪುರವರದರಮನೆಯೊಳ್ ರಾಜಪಟ್ಟಂ‡

ಕಂ॥ † ಆ ರಾಮರಾಜನಾಯಕ
ವೀರನನಂತರವೆ ತತ್ಸಹೋದರನೆನಿಪಾ
* ಧೀರವೆಂಕಟನೃಪಂ ರಿಪು
ಭೈರವನವನೀಶವರ್ಯನಿಳೆಗರಸಾದಂ ೧

ಇರೆ ತದ್ವೆಂಕಟಧರಣೀ
ಶ್ವರಗೊಗೆದಂ ಪುತ್ರನೊರ್ವನತಿಶಯತೇಜಂ
ನಿರುಪಮಸುಗುಣಸಮಾಜಂ
ದೊರೆಗಳೊಳಧಿರಾಜನಿಳೆಗೆ ನೂತ್ನಮನೋಜಂ † ೨

ಅನುಪಮಶಿಶುರೂಪದೊಳೊಗೆ
ದಿನನೆನೆ ಶೋಭಿಸುವ ತತ್ಕುಮಾರಂಗೊಲ್ದಾ
ಜನಪಂ ಭದ್ರಪನಾಯಕ
ನೆಸಿಪೊಳ್ಪೆಸರಿಟ್ಟು ಪೊರೆದನತಿಮುದದಿಂದಂ ೩

ವ॥ ಮತ್ತಮವಲ್ಲದಾ ವೆಂಕಟಪ್ಪನಾಯಕಂಗೊರ್ವ ಪೆಣ್ಮಣಿಯುದಿಸಲಾಕೆಗೆ ಹಿರಿಯಮ್ಮನೆಂದು ಪೆಸರಿಟ್ಟು ಪೋಷಿಸಿ ಕತಿಪಯವತ್ಸರಂಗಳ್ ಪೋಗಲೊಡನಾಕೆಯಂ

---

[1] ಆ ತರುವಾಯ ಹಿರೇವೆಂಕಟಪ್ಪನಾಯಕಂ ಸ್ವಸ್ತಿ (ಮ) [2] ಹಿರೇವೆಂ (ಗಮ)

‡ " ಚಿತ್ರಭಾನುಸಂವತ್ಸರದ ಮಾರ್ಗಶಿರ ಶುದ್ಧ ೫ ಆರಭ್ಯ ಶುಕ್ಲ ಸಂವತ್ಸರದ ಕಾರ್ತಿಕ ಬಹುಳ ೩೦ ವರೆಗೆ ವರ್ಷ ೪೬ ಮಾಸ ೧೧ ದಿನ ೨೫ ಪರ್ಯಂತಂ ಸದ್ಧರ್ಮದಿಂ ರಾಜ್ಯಪ್ರತಿಪಾಲನಂಗೈದನಾದಿ ವಿವರಣಮೆಲ್ಲಮುಂ ಪದ್ಯರೂಪದಿಂ ತಿಳಿವಂತು ವಿಸ್ತಾರಮಾಡಿ ವಿವರಿಸಿ ಪೇಳ್ದಪನದೆಂತೆಂದೊಡೆ ಎಂಬ ಭಾಗ ೧ ನೆಯ ಪದ್ಯಕ್ಕೆ ಮೊದಲು (ಗ) ಪ್ರತಿಯಲ್ಲಿ ಅಧಿಕವಾಗಿದೆ.

† (ಮ) ಪ್ರತಿಯಲ್ಲಿ ೧, ೨ನೆಯ ಪದ್ಯಗಳಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಜಂಬೂರ ವಿರುಪಣವ್ವೊಡೆಯರ್ಗೆ ವಿವಾಹಮಂ ರಚಿಸಲಾ ಪೆಣ್ಮಣಿಯ ಬಸಿರೊಳೊರ್ವ ಪುತ್ರನುದಿಸಲಾತಂಗೆ ಸದಾಶಿವಯ್ಯನೆಂದು ಪೆಸರಿಟ್ಟು ಸಂರಕ್ಷಿಸುತ್ತುಂ ನಿಜಕುಮಾರ ಭದ್ರಪನಾಯಕಂ[1]ಗಂ[1] ರಾಯಸಂಬಂಧಿ[3]ಯ[2]ಪ್ಪ ಬೇಲೂರು ವೆಂಕಟಾದ್ರಿನಾಯಕನ ಕುಮಾರಿ ಬಂಗಾರಮ್ಮನೆಂಬ ಪೆಣ್ಮಣಿಯಂ ದಾನಿವಾಸದ ಸೀಮೆಯ ಮಲಳಹೊಳೆಯೆಂಬ ಸ್ಥಳದೊಳತ್ಯಂತ ಸಂಭ್ರಮದಿಂ ವಿವಾಹಮಂ ರಚಿ[3]ಸಿ[3]ಯವರ್ ಬಳುವಳಿಗಿತ್ತ ಜಾಗರದ ಸೀಮೆ ಕೋಂಟೆಯಂ ಪರಿಗ್ರಹಿಸಿ ತತ್ಕೋಂಟೆಯಂ ಬಲಿಸಿ ಬಳಕ್ಕಿಕ್ಕೇರಿಯ ಪುರವರಕ್ಕೆಳ್ತಂದು ಕುಮಾರಭದ್ರಪನಾಯಕನುಮಂ ತನ್ನಗ್ರಜ ರಾಮರಾಜನಾಯಕನ ಕುಮಾರರಪ್ಪ ವೀರ ವೊಡೆಯರ್ ಬಸವಲಿಂಗನಾಯಕರುಮಂ ತಮ್ಮ ಕಿರಿಯಯ್ಯನಾದ ಚಿಕ್ಕಸಂಕಣ ನಾಯಕ[4]ರ[4] ಕುಮಾರನಾದ ಸಿದ್ದಪ್ಪನಾಯಕನುಮಂ ಪೋಷಿಸು[5]ತ್ತುಂ[5] ಸುಖದಿಂ ರಾಜ್ಯಂಗೆಯ್ಯುತ್ತುಮಿರಲಾ ಪ್ರಸ್ತಾವದೊಳ್

ಚಂ|| ಮಾ|| ಮೆರೆವ ವಿಜಾಪುರಾಧಿಪತಿಯಪ್ಪ ತುರುಷ್ಕಪ ಪಾತುಶಾಹನಂ
ದಿರದೆ ವಜೀರರಂ ನೆರಹಿ ದಕ್ಷಿಣರಾಜ್ಯವನೆಯ್ದೆ ಸಾಧ್ಯಮಂ
ವಿರಚಿಪುದೆಂದವರ್ಗುರೆ ನಿಯಾಮಿಸಿ ವೀಳೆಯವಿತ್ತು ಕೂಡನಂ
ತರುಚಿರ ಮತ್ತಹಸ್ತಿಹಯಸೈನ್ಯವನೆಯ್ದೆ ತೆರಳ್ಚೆ ಖ್ಯಾತಿಯಿಂ ೪

ಕಂ|| ಮಂಜುಳಖಾನಂ ಕರಮಾ
ರಂಜಿಪ ಮಹಮುದ್ದಖಾನ ಬಹಿಲಿಮಖಾನಂ
ಸಂಜರಖಾನಂ ಹಯಮದ
ಕುಂಜರತತಿಪತ್ತಿವೆರಸು ಶಾಕೆಯಖಾನಂ ೫

ಒಡನೆ ಸಲಾಬಿತಖಾನಂ
ಕಡುಹಿಂ ನಿಜಸೈನ್ಯಸಹಿತಮಂಬರಖಾನಂ
ಪಡೆವೆರಸಂಕುಶಖಾನಂ
ಸಡಗರದಿಂ ಸೈನ್ಯಗೂಡಿದಂಮದಖಾನಂ ೬

ಚಂ|| ಮಾ|| ನೆರೆದಿನಿಬರ್ ವಜೀರರುಗಳೆಳ್ತರೆ ಹೈದರಮಲ್ಲಿನಾಯಕಂ
ಬರಿಗಿಯ ದೇವಿನಾಯಕನುಮೆಯ್ದೆ ಸಿಡಿಲ್ಗಳ ಮೊತ್ತದಂತೆ ಭೀ
ಕರತರತಂತ್ರಮಾರ್ಭಟಿಸುತೆಯ್ತರೆ ಸೈನ್ಯಪದೋಚ್ಚಧೂಳಿಯಂ
ಬರವ ಮುಸುಂಕೆ ಬಂದುದು ಮಹೋಗ್ರ ತುರುಷ್ಕರ ದಾಳಿ ತೀವ್ರದಿಂ ೭

1 ಗಂಹಿತೆಯ ಮನ್ನೆಯಮನೆತನದತ್ತಣಿಂ ತಂದು ವಿವಾಹಮಂ ರಚಿಯಿಸಿ ಮತ್ತಮಾ ಭದ್ರಪ್ಪನಾಯಕಂಗಂ (ಗ) 2 ಗಳ (ಗ) 3ಯಿಸಿ (ಗ) 4 ನ (ಗ) 5ತ್ತಂ ಆರೋರುವೆಂಕಟಯ್ಯ ಮುಂತಾದ ನಿಯೋಗಿಗಳ್ ಚಿಕ್ಕಕಲ್ಲಪ್ಪ ಲಿಂಗಣನಾಯಕರೆಂಬ ಚಮೂಪರ್ವೆರಸು (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ ॥ ಕಡೆಗಾಲದಗ್ರದೊಳ್ ಮಿಗೆ
ಕಡಲ್ಗಳ್ ತೀವ್ರದೊಳೆ ಮೇರೆವರಿವಂತಿರೆ ಪೆ
ರ್ವಡೆವೆರಸೈದುತ್ತನಿಬರ್
ಜಡೆಯದ ಕೋಂಟೆಯ ಸಮೀಪಮಂ ಸಾರುತ್ತುಂ ೮

ಮುತ್ತಿಗೆಯನಿಕ್ಕೆ ಕೇಳ್ದು ಸು
ವೃತ್ತಂ ವೆಂಕಟನೃಪಾಲನರಿಕುಲಕಾಲಂ
ಪತ್ತಿಚಯವೆರಸು ತದ್ದು
ರ್ವೃತ್ತರ ಸೇನಾಸಮೂಹಕಂದಿದಿರಾಂತಂ ೯

ವ॥ ಇಂತಾ ವೆಂಕಟಪ್ಪನಾಯಕಂ ಜಡೆಯದ ಕೋಂಟೆಯಂ ವೇಢೈಸಿದ ತುರು[1]ಷ್ಕರ[1] ಸೈನ್ಯಕ್ಕಿದಿರ್ಚಿನಿಂದು ಕೈಗೆಯ್ದಾ ಸಮರಾಂಗಣದೊಳಂಬರಖಾನನಂ ಕುಂಬಿಡಿಸಿ. ಅಂಕುಶಖಾನನ ಬಿಂಕಮಂ ಮುರಿದು ಸಲಾಬತಖಾನನಂ ನಿಲವಿಕೆಗೆಡಿಸಿ ಬಹಿಲಿಮಖಾನನಂ ಬಹಿರ್ಮುಖನೆನಿಸಿ ಮಂಜುಳಖಾನನಂ ರಂಜನೆಗೆಡಿಸಿ ಶಾಠೆಯಖಾನನ ಲೂಟಿಯಂ ನಿಲಿಸಿ ಮಹಮುದಖಾನನಹಮಿಕೆಯಂ ತೀರ್ಚಿ ಅಂಮದಖಾನನ ಹೆಮ್ಮೆಯಂ ಮುರಿದು ಸಂಜರಖಾನನಂ ಭಂಜನೆಗೈದು ಸರ್ಜಾಖಾನನ ಗರ್ಜನೆಯಂ ನಿಲಿಸಿ ಹೈದರಮಲ್ಲಿನಾಯಕನಂ ಕೈದುವನಿಕ್ಕಿಸಿ ಬರಿಗಿಯ ದೇವೀನಾಯಕನಂ ಪರಾಭವಂಗೈದು ಇಂತುರುಬಿ ತರುಬಿದ ತುರುಷ್ಕಸೈನ್ಯಸಾಗರಮಂ ಕಲಂಕಲವರ್ ನಿಂದು ನಿತ್ತರಿಸಲಮ್ಮದೆ ಮುರಿದು ಮುತ್ತಿಗೆದೆಗೆದನಂತರಂ

ಕಂ॥ ಮತ್ತಂ ಹನುಮನರೇಂದ್ರನ
ಪತ್ತಿಚಯಂವೆರಸು ತುಡುಗುಣಿಯ ಕೋಂಟೆಯುಮಂ
ಮುತ್ತಿದ ಯವನರ ಸೈನ್ಯದ
ಮೊತ್ತವನಂಕದೊಳೆ ಸದೆದು ಮುರಿದೋಡಿಸಿದಂ ೧೦

ಮತ್ತೆಸೆವ ಹಾನಗಲ್ಲಂ
ಗುತ್ತಿಯನಾವರಿಸಿದುರುತುರುಷ್ಕರ ಫೌಜಂ
ತತ್ತರದರಿದಂಕದಳೀ
ಮತ್ತಗಜಂ ವೆಂಕಟೇಂದ್ರನಿರಿದೋಡಿಸಿದಂ ೧೧

ವ॥ ಮತ್ತಮದಲ್ಲದಾ ವೆಂಕಟಪ್ಪನಾಯಕಂ ರಾಮರಾಯರ್ ಪಾಳ್ಬೆಣ್ಣೆಯುಂ ಬಳಿಗೆಂದು ಮುನ್ನಿತ್ತ ಮಾಸೂರ ಸೀಮೆಯಂ ಕಟ್ಟಿಕೊಳಲ್ಕೈದಿದ ಮಂಜುಳಖಾನನಂ ಮುರಿದೆಂಜಲಖಾನನೆಂದು ಪೆಸರಿಟ್ಟಂತುಮಲ್ಲದವನಂ ಬೆಂಕೊಂಡು ಬಿಡದೈದಿ

[1] ಷ್ಕ (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ || ಗಡಿಯಂ ದಾಂಟಿಸಿ ತರುಬಿದ
ಪಡೆಯಂ ಸಂಹರಿಸಿ ಹಾನಗಲ್ಲವನಿಯೊಳಂ
ತಡೆಯದೆ ತೊಲಗದ ಕಂಬನ
ನೆಡಿಸಿ ಮಹಾದ್ಭುತಪರಾಕ್ರಮುವನುರೆ ಮೆರೆದಂ ೧೨

ವ|| ಇಂತತ್ಯಂತ ಸಾಹಸಂಗೈದು ಭುಜಬಲಪರಾಕ್ರಮದಿಂ ರಾಜ್ಯಂಗೆಯ್ಯುತಿರ್ಪ ವೆಂಕಟಪ್ಪನಾಯಕರ ಪ್ರತಾಪಾತಿಶಯಮಂ ವಿಜಾಪುರದ ಪಾತುಶಾಹಂ ಕೇಳ್ದು ಕೆರಳ್ದು ತನ್ನೃಪನ ರಾಜ್ಯಮಂ ವಶಂಗೆಯ್ವುದೆಂದು ನಿಯಾಮಿಸಿ ಮುಗುಳ್ದಪರಿಮಿತಸೇನಾ ಸಮುದ್ರಮಂ ತೆರಳ್ಚಲವರ್ ಗಡಿಯಂ ದಾಂಟಿ ಮಿಕ್ಕು ಮೀರಿ ದಾಳಿವರಿಯುತ್ತಿಸಮೀಪ ಕೈತಂದರೆಂಬ ವಾರ್ತೆಯಂ ಕೇಳ್ದತ್ಯಂತ ಕೋಪಾಟೋಪದಿಂದಾ ಪ್ರಸ್ಥಾನದೊಳ್

ಕಂ|| ಏಕಾಂಗದಿ ಪೊಕ್ಕಹಿತಾ
ನೀಕವನಿರ್ಕಯ್ಯ ಖಡ್ಗದಿಂ ಕುರಿದರಿದಾ
ಶ್ರೀಕರ ವೆಂಕಟಭೂಪಂ
ದೋಖಂಡೇರಾಯನೆಂಬ ಬಿರುದಂ ಮೆರೆದಂ ೧೩

ವ|| ಮತ್ತಮಾ ವೇಳೆಯೊಳ್

ಕಂ|| ಅಸಮಬಲ ವೆಂಕಟೋರ್ವಿಪ
ನಸಿಯೆಂಬಸಿತಾಹಿ ಯುದ್ಧರಂಗದೊಳಹಿತ
ಪ್ರಸರನಿಸಿವುಸಿರೆಲರನಸ
ವಸದಿಂ ನುಂಗಿದುದು ನಿಮಿರ್ದು ಪಸಿವಡಗುವಿನಂ ೧೪

ವ|| ಮತ್ತಮದಲ್ಲದೊಂದವಸರದೊಳ್ ತುರುಷ್ಕಯುದ್ಧದೊಳ್

ಕಂ|| ಪುದಿದೆಣ್ದೆದಲೆಯೊಳೇಕಾಂ
ಗದೆ [1]ಚೆ[1]ತ್ತಲೆಗುದರೆಯೇರ್ದು ದುವ್ವಾಳಿಸುತೌ
ಕಿದ ಪಾತುಶಾಹಫೌಜಂ
ಸದೆದೋಡಿಸಿ ಜಯವನಾಂತನಾ ವೆಂಕನೃಪಂ ೧೫

ವ|| ಮತ್ತಮಾ ಕಾಲದೊಳ್

ಕಂ|| ಉರವಣಿಸಿ ಸೈನ್ಯಸಹಿತಂ
ಧುರದೊಳ್ ಮಾರ್ಮಲೆತು ನಿಂದು ಕೈಗೆಯ್ದು ಲಸ
ದ್ಬರಿದಗ ವಜೀರನಂ ಮದ
ಕರಿಸಹಿತಂ ಪಿಡಿದು ಮೆರೆದನತಿವಿಕ್ರಮಮಂ ೧೬

---
1 ಬ (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ವ|| ಮತ್ತಮದಲ್ಲದೊಂದವಸರದೊಳ್

ಕಂ|| ವರಪಾತುಶಾಹಸೈನ್ಯೋ
ತ್ಕರವನೆರಳ್ಕಯ್ಯೊಳಾಂತ ನೇಜಗಳಿಂ ಕೋ
ಡಿರಿದು ಕಾಲ್ದೆಗೆಸಿ ವೆಂಕಟ
ನರಪತಿ ದೋನೇಜನೆಂಬ ಬಿರುದಂ ಮೆರೆದಂ ೧೭

ವ|| ಇಂತೆರಳ್ಕೂರ್ ಸೂಳೆಯ್ದಿದ ಪಾತುಶಾಹನ ಫೌಜಂ ಪುಡಿಗೆಯ್ದು ಪಲಾಯನಂಗೊಳಿಸಿ ಪ್ರಖ್ಯಾತಿಯಂ ಪಡೆದಾ ವೆಂಕಟಪ್ಪನಾಯಕಂ ತನ್ನ ಕಿರಿಯಯ್ಯ ಚಿಕ್ಕಸಂಕಣನಾಯಕರ ಪುತ್ರನಾದ ಸಿದ್ದಪ್ಪನಾಯಕಂಗಿರ್ವರ್ ಕನ್ಯಾಶಿರೋಮಣಿಗಳಂ ವಿವಾಹಮಂ ರಚಿಸಿ ಸ್ವಪುತ್ರಭದ್ರಪನಾಯಕಂಗುಡಿಗೆಯವರಲ್ಲಿ ತಂದ ಪೆಣ್ಮಣಿಯ ಬಸಿರೊಳಿರ್ವರ್ ಪುತ್ರರುದಿಸಲವರ್ಗೆ ರಾಮಲಿಂಗನಾಯಕ ವೀರಭದ್ರನಾಯಕರೆಂದು ನಾಮ[1]ಕರಣಮಂ ರಚಿಸಿ ಸಂತಸದಿಂ ಪೋಷಿಸುತ್ತಿರಲವರಿರ್ವರೊಳ್ ಪಿರಿಯನಾದ ರಾಮಲಿಂಗನಾಯಕಂ ಬಾಲತ್ವದಲ್ಲಿಯೇ ಸಂದನಂತರಮಾ ಭದ್ರಪನಾಯಕಂಗೊರ್ವಳ್ ಪೆಣ್ಮಣಿಯುದಿಸಲಾ ಪೆಣ್ಮಣಿಯನಾ ವೆಂಕಟಪ್ಪನಾಯಕಂ ತನ್ನ ದೌಹಿತ್ರನಾದ ಜಂಬೂರ ವಿರುಪಣವೊಡೆಯರ ಸುತ ಸದಾಶಿವಯ್ಯಂಗೀಯಲಾ ಪೆಣ್ಮಣಿಯ ಬಸಿರೊಳ್ ವೆಂಕಟಯ್ಯ ಭದ್ರಯ್ಯರೆಂಬಿರ್ವರ್ ಪುತ್ರರುದಿಸಲವರ್ಗಳಂ ಸಿಟ್ಟಿಸಿ ಪರಮಸಂತೋಷಂಬಡುತಿಂತು ಮಕ್ಕಳ್ ಮೊಮ್ಮಕ್ಕಳ್ ಮರಿಮಕ್ಕಳ್ವೆರಸು ಸುಖದಿಂ ರಾಜ್ಯಂಗೆಯ್ಯುತಿರಲೊಡನೆ ಸ್ವಪುತ್ರಭದ್ರಪನಾಯಕಂ ತುರುಷ್ಕಕಿರಾತರ ಮೇಲೆ ಕೆಲವು ರಾಜಕಾರ್ಯಂಗಳಂ ಮಾಡಿ ಪ್ರಖ್ಯಾತಿವೆತ್ತು ಕತಿಪಯವತ್ಸರಂ ಸುಖಮಿರ್ದನಂತರಂ ಶಿವಸಾಯುಜ್ಯನನೈದಲ್[2] ವೆಂಕಟಪ್ಪನಾಯಕಂ ಪುತ್ರಶೋಕದಿಂ ಮಹಾವ್ಯಾಕುಲಿತಚಿತ್ತನಾಗಿ ಬಳಿಕಧ್ಯಾತ್ಮಶಾಸ್ತ್ರ ವಿಚಾರಮುಖದಿಂ ಸ್ವಸ್ಥಚಿತ್ತನಾಗಿರುತ್ತುಂ ಮೊಮ್ಮಗ ವೀರಭದ್ರನಾಯಕಂಗಂ ಕೊಲ್ಲೂರನಮ್ಮಾಜಿಯವರ ಮಕ್ಕಳಿರ್ವರ್ ಕನ್ಯಾರತ್ನಂಗಳನತ್ಯಂತ ವಿಭವದಿಂ ವಿವಾಹಮಂ ರಚಿ[3]ಸಿ[3] ಕಿರಿಯಯ್ಯ ಚಿಕ್ಕಸಂಕಣನಾಯಕನ ಪುತ್ರಂ ಸಿದ್ದಪ್ಪನಾಯಕಂಗೆ ಜ್ಯೇಷ್ಠಪತ್ನಿಯೊಳೊರ್ವ ಕುಮಾರನುದಿಸಲಾತಂಗೆ ಶಿವಪ್ಪನಾಯಕನೆಂದು ಪೆಸರಿಟ್ಟು ಮತ್ತಮಾ ಪತ್ನಿಯೊಳ್ ಉದ್ಭವಿಸಿದ ಪೆಣ್ಮಕ್ಕಳ್ಗೆ ಪರಮೇಶ್ವರಮ್ಮ ನಾಗಾಜಮ್ಮ ಚನ್ನಮ್ಮನೆಂದು ಪೆಸರಿಟ್ಟು ಮತ್ತಮಾ ಸಿದ್ದಪ್ಪನಾಯಕಂಗೆ ಕನಿಷ್ಠಪತ್ನಿಯೊಳೊರ್ವಕುಮಾರಂ ಜನಿಸಲಾತಂಗೆ ವೆಂಕಟಪ್ಪನಾಯಕನೆಂದು ನಾಮ[4]ಕರಣಮಂ ರಚಿಸಿ ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತಿರ್ದನಂತುಮಲ್ಲದೆಯುಂ

---

[1] ಗ್ರಹ (ಕ) [2] ಲ್ ಭದ್ರಪನಾಯಕರಿಗೆ ಅವರ ಪತ್ನಿಯರಿಬ್ಬರಿಗೆ ಸಹ ಇಕ್ಕೇರಿಯರಮನೆಯ ಕೊಪ್ಪಲಸ್ಥಳದಲ್ಲಿ ಸಮಾಧಿಯಾಯಿತು ಭದ್ರಪನಾಯಕರ ಸಂಗಡಲೆ ಸಮಾಧಿಯಾಯಿತು. (ಕ) ಲೊಡನೆ (ಗಮ) [3] ಯಿಸಿ (ಗ) [4] ಗ್ರಹ (ಗಮ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ|| ಚಂಡಪರಾಕ್ರಮ ಜಿತದೋ
ರ್ದಂಡಾರ್ಜಿತಭೂರಿವಿಭವ ವೆಂಕಟಭೂಪಂ
* ದಂಡಯಾತ್ರೆಯೊಳೆ ಪರಭೂ
ಮಂಡಲಮಂ ಯುದ್ಧರಂಗದೊಳ್ ಸಾಧಿಸಿದಂ ೧೮

ವ|| ಅದೆಂತೆಂದೊಡೆ

ಕಂ|| ಮೆರೆವ ಕಿರಾತರ ವಶಮಾ
ಗಿರುತಿಹ ಹರ[1]ಕಾ[1]ಳನೆಡೆಯಹಳ್ಳಿಯುಮಂ ಕೊಂ
ಡುರುಕೋಂಟೆಯ ಬಲಿಯಿಸಿ ತ
ದ್ಧರಣಿಪನಾನಂದಪುರಮೆನಿಪ ಪೆಸರಿಟ್ಟಂ ೧೯

ವ|| [2]ಮತ್ತಮದಲ್ಲದಾ ವೆಂಕಟಪ್ಪನಾಯಕನಾ[2]ನಂದಪುರದ ಪರಿಸ್ತರಣದೊಳಾಗ ಮೋಕ್ತವಿಧಾನದಿಂ ತಾಂಡವೇಶ್ವರನೆಂಬ ಮೂರ್ತಿಯಂ ಪ್ರತಿಷ್ಠೆಯಂ ರಚಿಸಿ ಪರಮ ಮನೋಹರಮಾದರಮನೆಯಂ ರಚನೆಗೈಸಿ ವಾಪೀಕೂಪತಟಾಕಾರಾಮಾದಿಗಳಂ ನಿರ್ಮಾಣಂಗೈಸಿ ಮಗುಳ್ದಿಕ್ಕೇರಿಯರಮನೆಯೊಳ್ ವಿಚಿತ್ರತರ ರಚನಾಕೌಶಲ್ಯದಿಂ ನಾಟಕ ಶಾಲೆಯಂ ನಿರ್ಮಾಣಂಗೈಸಿ ತದಿಕ್ಕೇರಿಯಾನಂದಪುರಕ್ಕಂ ನೈಹಾಳಿಯನೆಸಗುತ್ತತ್ಯಂತೋ ತ್ಸಾಹದಿಂ ವಿಹರಿಸುತ್ತುಂ ರಾಜ್ಯಂಗೆಯ್ಯುತಿರ್ದನಂತುಮಲ್ಲದೆಯುಂ

ಕಂ|| ತುರುಕರ ಮೂಲಕದೆ ಕಿರಾ
ತರ ವಶಮಾಗಿರ್ದ ಪೊಳೆಯಪೊನ್ನೂರ ಪರಿ
ಸ್ತರಣವನಾ ಸಂಕಣನೃಪ
ವರನಾತ್ಮಜನಾಜಿರಂಗದೊಳ್ ಸಾಧಿಸಿದಂ ೨೦

ವ|| ಇಂತಾ ವೆಂಕಟಪ್ಪನಾಯಕಂ ಹರಕಾಳಡೆಯಹಳ್ಳಿ ಪೊಳೆಯಪೊನ್ನೂರ ಪರಿಸ್ತರಣ ಸೀಮೆಗಳನಧೀನಮಂ ರಚಿಸಲ್ ತನ್ನ ಸೀಮೆಕೋಂಟೆಗಳನೀಳ್ದನೆಂದತ್ಯಂತ ಕೋಪಾಟೋಪದಿಂ

ಕಂ|| ಪಿಂಗದಡಿಗಡಿಗೆ ನಿಲ್ತೇ
ಕಾಂಗದೆ ಕೈಗೆಯ್ದು ಸಾಸಮಂ ಮೆರೆದ ಲಸತ್
ಕೆಂಗೆಯ ಹನುಮನರೇಂದ್ರೋ
ತ್ತುಂಗನ ಭುಜಬಲವನಂಕದೊಳ್ ಮಗ್ಗಿಸಿದಂ ೨೧

[1] ತಾ (ಗ) [2] ಆ (ಮ)

Sri Vidyabharathi Book Centre, Sringeri

CC-O. In Public Domain. Digitized by eGangotri

ವ|| ಮತ್ತಮದಲ್ಲದಾ ವೆಂಕಟಪ್ಪನಾಯಕಂ

ಕಂ|| ಕುಂಬಸೆಯ ದಾನಿವಾಸದ
ಕುಂಭಿನಿಗಳನಾಳ್ವ ಬೊಮ್ಮಣಂ ವೀರಣರೆಂ
ಬೆಂಬಡೆದರ ಮುರಿದಾ ಧರೆ
ಯಂ ಭುಜಬಲದಿಂದಧೀನನುಂ ವಿರಚಿಸಿದಂ ೨೨

ವ|| ಮತ್ತಮಲ್ಲದೆ

ಕಂ|| ಅಂಡಿಗೆಯುಪ್ರೆಯ ಗುಡುವೆಯ
ಗೆಂಡಲತಲವೂರನೆಸೆವ ಮುಂಚೆಯನಾಳ್ದು
ದ್ದಂಡರನುರೆಮುರಿದಾ ಭೂ
ಮಂಡಲಗಳನಧಿಕಶೌರ್ಯದಿಂ ಸಾಧಿಸಿದಂ ೨೩

ವ|| ಮತ್ತಮದಲ್ಲದಾ ವೆಂಕಟಪ್ಪನಾಯಕಂ[1] ಸಾತಳಬ್ಬೆಳನಂದೂರು ಹೆಬ್ಬೆ ಮಂಡಗದ್ದೆ ಹೊನ್ನೂರು ಹಾನಹಳ್ಳಿ ಸೀಮೆಗಳಂ ಸಾಧಿಸಿ ತತ್ತತ್ಪಟ್ಟಿಯದಾರರ್ಕಳಿಂ ಪಣಮಣಿಹಂಗೊಂಡು ಕುಂಬಸೆ ದಾನಿವಾಸ ಹೆಬ್ಬೆ ಮಂಡಗದ್ದೆ ಮುಂತಾದ ಸ್ಥಳಗಳಲ್ಲಿ ಪರಿಶೋಭಿಪ ಪರಿಸ್ತರಣಂಗಳಂ ರಚನೆಗೈಸಿದನಂತುಮಲ್ಲದೆಯುಂ

ಕಂ|| ಗರುವನರಶಿಂಗನಾಯಕ
ನುರುತರಶೌರ್ಯಾತಿಶಯವನುಡುಗಿಸಿ ಬಂಕೀ
ಪುರದ ಪರಿಸ್ತರಣವನನು
ವರದೊಳ್ ಕೊಂಡಾಳ್ದನೆಸೆವ ತದ್ಭೂತಳಮಂ ೨೪

ಮಿರುಪೇಕಲಕ್ಷ್ಮದೇಶದ
ದೊರೆಮನ್ನೆಯಳೆನಿಸಿ ರೂಢಿವೆತ್ತ ತಿಚಲ[2]ವಮಂ[3]
ಮೆರೆದಾ ಭೈರಾದೇವಿಯ
ಗರುವಿಕೆಯಂ ಮುರಿದು ಧುರದೆ ಕೈಸೆರೆವಿಡಿದಂ ೨೫

ವ|| ಇಂತು ದಳವಾಯಿ ಲಿಂಗಣನಾಯಕನಂ ಕಳುಹಿ ಕೈಸೆರೆವಿಡಿದಾವಿನಹಳ್ಳಿ, ಕರುವೂರು ಮೊರಬಡಿ ಸಾಳನಾಡು ಬಟ್ಟಕಳ ಗೆರಿಸಪ್ಪೆ ಚಂದಾವರ ಗೋವರ್ಧನಗಿರಿ ವಡಿಮೇದಿನಿ ಮುಂತಾದಾಕೆಯಾಳ್ವ ರಾಜ್ಯಪರಿಸ್ತರಣಮಂ[3] ವಶಮಾಡಿಕೊಂಡು ತದೀಯ ವಿಚಿತ್ರತರ ವಸ್ತುವಾಹನಾಂಬರಾರ್ಥಾದಿ ಸರ್ವಸ್ವಮಂ ಸ್ವಾಧೀನಂಗೈದನಂತುಮಲ್ಲದೆಯುಂ

[1] ತ್ರಂ (ಮ) [2] ದಿಂ (ಮ) [3] ಣಂಗಳಂ (ಗಮ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ॥ ಹೊ[1]ನ್ನೆಯ[1] ಕಂಬಳಿವೆಸರಿನ
ಮನ್ನೆಯನಾರ್ನಾಡು ಮುಂಗಿನಾಡೆಡವೂರಾ
ಚಿನ್ನ ಬಿದರೂರ್ ಪೊಸಂಗಡಿ
ಗನ್ನಾಯಕನೆನಿಸಿ ನೆರೆ ವಿರಾಜಿಸುತಿರ್ದಂ ೨೬

ವ॥ ಇಂತು ನೆಗಳ್ತೆವೆತ್ತ ಹೊ[1]ನ್ನೆಯ[1]ಕಂಬಳಿಯೆಂಬ ಮನ್ನೆಯಂ ಹೊಸಂಗಡಿಯೆಂಬೂರೊಳಿರ್ದು ಶಂಕರನಾರಾಯಣಭಟ್ಟನೆಂಬವನಂ ಮಂತ್ರಿಯಂ ಮಾಡಿಕೊಂಡವನ ಮುಖದಿಂ ತನ್ನ ರಾಜ್ಯಭಾರವಿಚಾರಂ ಮುಂತಾದುದೆಲ್ಲ ಕಾರ್ಯಂಗಳಂ ನಡೆಸಿಕೊಳು[2]ತ್ತ[2]ಮಿರಲ್ ದಿನದಿನದೊಳಾ ಶಂಕರನಾರಾಯಣಭಟ್ಟಂ ಕ್ರಮದಿಂ ಪ್ರಖ್ಯಾತನಾಗಿ ಹೊ[1]ನ್ನೆಯ[1]ಕಂಬಳಿಯಂ ಬಗೆಗೊಳದೆ ತಾಂ ಬಿದುರೂರೊಳ್ ನೆಲೆಯಾಗಿ ನಿಂದೆಡವಲದೊಳಿರ್ಪಾರುನಾಡು ಕಬ್ಬುನಾಡು ಮುಂಗಿನಾಡು ಮುಂತಾದ ಸೀಮೆಗ್ರಾಮಗಳ್ಗೆಲ್ಲಂ ತಾನೆ ಸ್ವತಂತ್ರ ಕರ್ತೃವಾಗಿ ವರ್ತಿಸುತ್ತುಮಿರಲಾ ಕಾಲದೊಳ್ ವೆಂಕಟಪ್ಪನಾಯಕಂ ದಳವಾಯಿ ಲಿಂಗಣ್ಣನಾಯಕಂವೆರಸು ಸೈನ್ಯಸಮೇತಂ ತೆರಳ್ದು ದಾಳಿವರಿಯುತ್ತೈದಿ ಬಿದುರೂರಪ್ರಾಂತದೊಳಿಳಿದು ಪ್ರಯತ್ನದಿಂದೊಳಸಾರ್ದು ಬಿದುರೂರ ಪರಿಸ್ತರಣಮುಂ ವೇಷ್ಟಿಸಿ ಜಕೀರಿರಸ್ತು ಮುಸ್ತೈದೆಗಳೊಳ ಪೊಗದಂತು ಕಂಡಿಕಣಿವೆಪಥಂಗಳಂ ಕಟ್ಟಿ ಜೇರುಮುತ್ತಿಗೆಯಂ ರಚಿಸಲಾ ಶಂಕರನಾರಾಯಣಭಟ್ಟಂ ಹೇರಳ ಮಂದಿಮಕ್ಕಳಂ ನೆರಹಿ ನಾರ್ಮಲೆತು ಕೋಂಟೆಯಂ ಕಲಿಯೇರಿಸಿ ನಾಲ್ಕಾರುತಿಂಗಳಪ್ಪನ್ನೆವರಂ ಕಾದಿಸಲಾಗಳಾ ಕೋಂಟೆಯ ನಾಲ್ಗಡೆಯಡೆ ದಿಟ್ಟೆಗಳೊಳ್ ಬುರುಜುಗಳನೆಬ್ಬಿಸಿ ಶತಘ್ನಿಗಳಂ ಪೂಡಿಸಿ ತತ್ಪ್ರಯೋಗಮುಖದಿಂದಾ ಬಿದುರೂರ ಕೋಂಟೆಯಂ ತೆಗೆದುಕೊಂಡು ಶಂಕರನಾರಾಯಣಭಟ್ಟನಂ ಕೈವಶಂಗೆಯ್ದಾ ಕೋಂಟೆಯಂ ಬಲಿ[3]ಸಿ[3] ಯೆಡವೂರ್ಮುಂಗಿನಾಡಾರುನಾಡು ಕಬ್ಬುನಾಡು ಪಟ್ಟಗುಪ್ಪೆ ಮುಂತಾದ ಸೀಮೆಯ ಪ್ರಜೆಪರಿವಾರಂಗಳಂ ಕಾಣಿಸಿಕೊಂಡು ಕಾಣಿಕೆಗೊಂ[4]ಡ[4] ಬಳಿಕ್ಕಂ [5]ಸ್ಕಾಂದಪುರಾಣದೊಳ್ ಸನತ್ಕುಮಾರ ಸಂಹಿತೆಯೊಳ್ ಸಹ್ಯಾದ್ರಿಖಂಡದೊಳುಸಿರ್ದಂತಾ ಬಿದುರೂರೊಳ್ ಸ್ಕಾ[5]ನಮಾತ್ರದೊಳನೇಕ ದುಷ್ಕೃತಂಗಳಂ ನಿವಾರಿಪ ಕಲಾವತಿಯ ನದಿಯ ತೀರದೊಳ್ [7]ವೇಣುವನಮಧ್ಯದೊಳ್ ವಲ್ಮೀಕದೆಡೆಯೊಳ್ ಪ್ರಾದುರ್ಭಾವಮಾಗಿ ಮಹಾಪ್ರಸನ್ನಮೂರ್ತಿಯೆನಿಸಿ ಭಕ್ತಜನರ್ಗೆ ಬೇಡಿದಿಷ್ಟಾರ್ಥಂಗಳನೀ[6]ಯು[6]ತುಂ ವಿರಾಜಿಸುತ್ತಿರ್ಪ ತದ್ಬಿದುರೂರ ನೀಲಕಂಠೇಶ್ವರಲಿಂಗದ ಪೂಜೆ[7] ಲೋಪಮಾಗದೆ ನಡೆವಂತು ಕಟ್ಟಳೆಯಂ ರಚಿಸಿ ಮತ್ತಮಾ ವೆಂಕಟಪ್ಪನಾಯಕಂ ಬಿದುರೂರಿಂ ತೆರಳ್ದು ಘಟ್ಟವನಿಳಿದು ಹೊ[1]ನ್ನೆಯ[1]ಕಂಬಳಿಯೆಂಬ ಮನ್ನೆಯನಂ ಮುಗ್ಗಿಸಿ ಹೊಸಂಗಡಿ ಕಡರಿ ಬಗ್ಗವಾಡಿಯ ಹೋಬಳಿ ಕೊಲ್ಲೂರು ಮುಂತಾದ ಹೊ[1]ನ್ನೆಯ[1]ಕಂಬಳಿಯಾಳ್ವ [8]ಸೀಮೆಯ[8] ಪ್ರಜೆ

---

1 ನ್ನೇ (ಗ) 2 ತ್ತ (ಗ) 3 ಯಿಸಿ (ಮ) 4 ಡು (ಗಮ) 5 ಸ್ನಾ (ಮ) 6 ಪುಂ (ಗ)
7 ನೆಲಸಿರ್ಪ ನೀಲಕಂಠೇಶ್ವರ ಲಿಂಗದ ಪೂಜೆಯಂ ರಚಿಸಿ(ಮ) 8 ಸೀಮೆಗಳುಂ (ಮ)

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಿವಾರಮಂ ಕಾಣಿಸಿಕೊಂಡು ಬಗ್ಗವಾಡಿ ಹೊಸಂಗಡಿಯೆಂಬ ಸ್ಥಳಂಗಳೊಳ್ ಪರಿಸ್ತರಣಮಂ ನಿರ್ಮಾಣಂಗೈಸಿ ಕೊಲ್ಲೂರುಮೂಕಾಂಬಿಕೆಯಮ್ಮನವರ ಪೂಜಾದಿ ವಿಭ[1]ವಂ[1] ಲೋಪಮಾಗದಂತೆ [2]ನಡೆವಂತು ನಿಯಾಮಕಂಗೈ[2]ಸಿದನಂತುಮಲ್ಲದೆಯುಂ

ಕಂ|| ಎಡಬಲದೊಳಿರ್ಪ ಧೂರ್ತರ
ಕಡುಹಂ ಮುಗ್ಗಿಸಿ ಸದಾಶಿವೇಂದ್ರನ ಪೌತ್ರಂ
* ಪಿಡಿದು ಪುಂಡರ್ಕಳಂ ಬಳಿ
ಕಡಿಮಲೆಯ ಧರಿತ್ರಿಯಂ ಕರಂ ವಶಗೈದಂ ೨೭

ಭೈರಸವೊಡೆಯರುಮಂ ತ
ದ್ಧೀರಂ ನಿಗ್ರಹಿಸಿ ಕೊಪ್ಪಮಂ ಬೆಳ್ಳರೆಯಂ
ಕಾರಕಳ ಕಳಸ ಖಾಂಡ್ಯದ
ಚಾರುಪರಿಸ್ತರಣಭೂಮಿಯಂ ವಶಗೈದಂ ೨೮

ವ|| ಇಂತು ಕಾರಕಳದ ಭೈರಸವೊಡೆಯರಂ ನಿಗ್ರಹಿಸಿ ತದ್ರಾಜ್ಯಪರಿಸ್ತರಣಂಗಳಂ ವಶಂಗೈದನಂತರಂ ಮಾಳಕಾಡ ಹೊಳೆಯಬಯಲೂರ ಕೋಂಟೆಗಳಂ ನಿರ್ಮಾಣಂಗೈಸಿದನಂತುಮಲ್ಲದೆಯುಂ

ಕಂ|| ಬಲ್ಲಿದ ಶಿರಾಲಿಯವರಂ
ಘಲ್ಲಿಸಿ ವಶಗೈದು ಕೂಡೆ ತದಭ್ಯಂತರಳಮಂ
ಹಲ್ಲಗೆಡೆಯೆನಿಸದ ಕೇ
ಡಿಲ್ಲದ ವಸುಪುರವನಾ ನೃಪಂ ಸಾಧಿಸಿದಂ ೨೯

ವ|| ಇಂತು ಬಸುರೂರಂ ಸಾಧಿಸಿ ಮಹಾಲಿಂಗೇಶ್ವರದೇವರ ಪೂಜೆ [3]ಲೋಪಮಾಗದಂತು ನಿಯಾಮಕಂಗೆಯ್ದು[3] ತೆರಳ್ದನಂತುಮಲ್ಲದೆಯುಂ

ಕಂ|| ಅವನೀಶಭೂತಪಾಂಡ್ಯೋ
ದ್ಭವವರ್ಗಳ್ ಮುನ್ನಾಳ್ದ ಪರಮವೈಭವದಿಂದೊ
ಪ್ಪುವ ಬಾರಕೂರ ಸಂಸ್ಥಾ
ನವನುರೆ ವಶಗೈದನಾ ನೃಪಾಲಕತಿಲಕಂ ೩೦

ವ|| [4]ಇಂತಾ ವೆಂಕಟಪ್ಪನಾಯಕಂ ಬಾರಕೂರ ಸಂಸ್ಥಾನಮಂ ಸ್ವಾಧೀನಂಗೆಯ್ದು[4]

---

[1] ವಮಂ (ಗ) [2] ರಚಿ (ಮ) [3] ಯಂ ಲೋಪಮಾಗದಂತು ನಿಯಾಮಕಂಗೆಯ್ದು (ಗ) ಯಂ ರಚಿಸಿ (ಮ) [4] ಇಂತು (ಮ)

Sri Vidyabharathi Book Centre, Sringeri

CC-O. In Public Domain. Digitized by eGangotri

ಬಾರಕೂರು ಕಲ್ಯಾಣಪುರ ಮಲ್ಲಿಕಾರ್ಜುನಗಿರಿ ಕಂಡುಲೂರ ಕೋಂಟೆಗಳಂ ನಿರ್ಮಾಣಂ ಗೈಸಿದನಂತುಮಲ್ಲದೆಯುಂ

ಕಂ॥ ಮುರಿದು ಸುರಾಲರ ತೊಳಹರ
ಸಿರಿಯರ ನಾಲ್ವತ್ತುನಾಡು ಕೆಲನಾಡುಂ ಶಂ
ಕರನಾರಾಯಣ ಬೈದೂ
ರ್ವೆರಸಿದ ಹಳ್ಳಿಗೆರೆಯವನಿಯುಂ ಸಾಧಿಸಿದಂ ೩೧

ವ॥ ಇಂತು ಸುರಾಲರ ತೊಳಹರ ಸೀಮೆಗಳಂ ವಶಂಗೈದನಂತರಂ

ಕಂ॥ ಬಂಗಾಜಲ ಸಾವಂತ ಮ
ನಂಗೊಳಿಸುವ ಚೌಟ ಮೂಲ ಕುಂಬಳೆಯಿವರಂ
ಭಂಗಿಸಿ ತದ್ಧರೆಯುಮನು
ತ್ತುಂಗಶ್ರೀಮಂಗಳೂರನುರೆ ಸಾಧಿಸಿದಂ ೩೨

ವ॥ ಇಂತು ಚೌಟ ಬಂಗಾಜಲ ಸಾವಂತ ಮೂಲ ಕುಂಬಳೆ ಕಾಸರಗೋಡ ಮನ್ನೆಯರ ಮುರಿದು ತತ್ತದ್ಧರಿತ್ರಿಯುಂ ವ[1]ಶ[1]ಗೈದು ಮಂಗಳೂರ ಸಂಸ್ಥಾನಮುಂ ಸ್ವಾಧೀನಂಗೈದನಂತರಂ ಮೂಲಿಕೆ ಕೊಡೆಯಾಲ ಮೂಡಬಿದಿರೆ ಉಳ್ಳಾಲ ಕುಂಬಳೆ ಕಾಸರಗೋಡು ಪುದುವೆಟ್ಟು ಬೆಳ್ಳರೆ ಕಾಂತಮಂಗಲ ಬಂದ್ಯಡಕ ಕುಂಡಂಕುಳಿ ಕೊಲ್ಲೂರಬಾಚಿ ಶಿಶಿಲ ಚಂದ್ರಗಿರಿ ಕಿದು[2]ಟು[2] ಮೂಡಗೊಡೆಯಾಲ ಫಣಿಯಾಲ ಮುಂತಾದ ಕೋಂಟೆಗಳಂ ಬಲಿಯಿಸಿದನಂತುಮಲ್ಲದೆಯುಂ

ಕಂ॥ ಕಡುಗಲಿಗಳೆನಿಸುವಗ್ಗದ
ಕೊಡಗರನೊಳಗೆನಿಸಿ ಸಾರ್ದು ಗೋರಾಷ್ಟ್ರದ ನಾ
ಲ್ಗಡೆಯುಂ ಸಾಧಿಸಿ ಪಡುಗಡ
ಲೊಡೆಯಂ ತಾನೆನಿಸಿ ವೆಂಕಟೋರ್ವಿಪನೆಸೆದಂ ೩೩

ವ॥ ಮತ್ತಮದಲ್ಲದೆ

ಕಂ॥ ಚಾರುತುರಂಗಮುಚಯಮುದ
ವಾರಣಬಹುಪತ್ತಿವೆರಸುತಲ್ಲಿಂ ತೆರಳ್ದಾ
ಧೀರವೆಂಕಟನೃಪಾಲಂ
ಕಾಲಿಗ್ರಾಮಪ್ರದೇಶಮುಂ ಮಿಗೆ ಸಾರ್ದಂ ೩೪

1 ಶಂ (ಗ) 2 ವು (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ವ॥ ಇಂತು ಕೌಲಿಗ್ರಾಮಪ್ರದೇಶಮಂ ಸಾರ್ದಾ ಕೌಲಿದುರ್ಗಕ್ಕೆ ಮುತ್ತಿಗೆಯಿ[1]ಕ್ಕಲಾ ಗ್ರಾಮಾಧಿಪತಿಗಳಪ್ಪ[1] ತೊಲೆತಮ್ಮ ಮುಂಡಿಗೆ[2]ತಮ್ಮರೆಂಬತಿಪರಾಕ್ರಮಶಾಲಿಗಳಪ್ಪಿರ್ವರ್ ಸಹೋದರರಸಂಖ್ಯಾತಸೂದ ಮಂದಿಮಕ್ಕಳಂ ನೆರಹಿ ಸೂರ್ಮಲೆತ್ತುಕೋಂಟೆಯಂ ಕಲಿಯೇರಿಸಿ ಪಲವು[2]ಮಾಸಂ ಕಾದಿಸಲ್ ಬಳಿಕ್ಕಂ ಜಕೀರಿರಸ್ತುಮುಸ್ತೈದೆಯೊಳಪುಗದಂತು ಪಥಸ್ಸೈಕಕಂಡಿಕಣಿವೆಗಳಂ ಕಟ್ಟಿ ಕೋಟೆಯಂ ಜೇರುಗೆಯ್ಯಲೊಳಗೆ ನಿತ್ತರಿಸಲಮ್ಮದೆ ಪೊರಗಣ್ಗೈದಿ .

ಕಂ॥ ಛಲಪದಮಂ ಮೆರೆದತಿಭುಜ
ಬಲದಿಂ ಸೂರ್ಮಲೆತು ನಿಂದಿದಿರ್ಚಿದ ಬಲವ
ತ್ತೊಲೆಮುಂಡಿಗೆದಮ್ಮಾಪ್ತೆಯ
ಮಲೆತರಸುರಿಗೆಲ್ದು ಕೋಂಟೆಯಂ ಸಾಧಿಸಿದಂ ೩೫

ವ॥ ಇಂತತ್ಯಂತಸಾಹಸದಿಂದಾ ಕೋಂಟೆಯಂ ಕೊಂಡನಂತರಮಾ ಕೋಂಟೆಯಂ ಬಲಿಸಿಯದಕ್ಕೆ ಭುವನಗಿರಿಯದುರ್ಗಮೆಂದು ನಾಮಾಂಕಿತಮಂ ರಚಿಸಿ ಪಿಂತೆ ತಮ್ಮ ಜನಕದೊಡ್ಡಸಂಕಣನಾಯಕಂ ಕಾಶೀಕ್ಷೇತ್ರದಿಂ ತಂದ ದಿವ್ಯಲಿಂಗಮಂ ವಿಶ್ವೇಶ್ವರಲಿಂಗಮೆಂದಾಗಮವಿಧಾನದಿಂದಾ ಕೋಂಟೆಯೊಳ್ ಪ್ರತಿಷ್ಠೆಯಂ ರಚಿಸಿ [3]ಶಿಲಾಮಯಮಾದ ದೇವಸ್ಥಾನಮಂ ಕಟ್ಟಿಸಿ ಭೂಸ್ವಾಸ್ಥೆಯಂ ಧಾರೆಯನೆರೆದು ತತ್ಪೂಜಾದಿವಿಭವಂಗಳಂ ನಡೆಯಿಸಿಮತ್ತಮಾ ದುರ್ಗದೊಳುಚಿತಸ್ಥಾನಂಗಳೊಳ್ ಪರಿವಾರ ದೇವತೆಗಳಂ ಪ್ರತಿಷ್ಠೆಗೈಸಿ ನಿಚ್ಚಂತದರ್ಚನೆ ನಡೆವಂತು ನಿಯಾಮ[4]ಕಂ[4]ಗೈದು ಮತ್ತಮಾ ಕೋಂಟೆಯೊಳುತ್ಕೃಷ್ಟ[3]ಮಾದರಮನೆಯಂ ಕಟ್ಟಿಸಿ ಭಂಡಾರ ಜಾನಶಾಲೆಯುಗ್ರಾಣ ಪಣತಮಾನೆಯಮಹಲು ಕುದುರೆಯಲಾಯ ಮುಂತಾದ ಮಹಲುಗಳಂ ನಿರ್ಮಾಣಗೈಸಿ ಮತ್ತಮಾ ಕೋಂಟೆಯ ಹೊರ[5]ಗಡೆಯೊಳ್[5] ಕಲ್ಯಾಣಮಹಲೆಂಬ ಚೆಟ್ಟದರಮನೆಯಂ ಕಟ್ಟಿಸಿ ಮತ್ತಮಗ್ರಹಾರ ಮಹತ್ತಿನಮಠ ಶೃಂಗೇರಿಮಠ ಪೇಟೆ ತಲವಾರಗಟ್ಟೆ ಕೆರೆ ತೋಟ ಗದ್ದೆಗಳಂ ನಿರ್ಮಾಣಂಗೈಸಿತತ್ತತ್ಸ್ಥಾನಂಗಳೊಳ್ ಗ್ರಾಮಾಧಿದೇವತೆಗಳಂ ನೆಲೆಗೊಳಿಸಿ ಪೊರಗಣ್ಕಡ[6]ಮ.ನೊ[6]ಡ್ಡುಗಳಂ ಬಲಿಯಿಸಿ ರಚನೆಗೈಸಿದನಂತುಮಲ್ಲದೆಯುಂ

ಕಂ॥ ಹೆಗ್ಗಡೆ ಬಲ್ಲಾಳರ್ಕಳ
ನೊಗ್ಗಳಮಂ ಮುರಿದುಕೊಂಡು ತದ್ಭೂತಳಮಂ
ಬಗ್ಗದ ಮನ್ನೆಯರದಟಂ
ಮುಗ್ಗಿಸಿ ತತ್ತದ್ಧರಿತ್ರಿಯಂ ವಶಗೈದಂ ೩೬

---

[1] ಕ್ಕಿ (ಮ) [2] ಯೆಂಬವರ ನಿಗ್ರಹಿಸಿ (ಮ) [3] ತತ್ಪೂಜಾರ್ಥ ಗ್ರಹಗಳಂ ಶಿವಾರ್ಪಣಂಗೈದು ವಿಚಿತ್ರ (ಮ) [4] [illegible] (ಗ) [illegible] (ಗ) [illegible] (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ವ|| ಮತ್ತಮಲ್ಲದಾಯನೂರಗೌಡಂ ಮೊಸರೂರೊಳ್ ಕೋಂಟೆಯಂ ಮಾಡಿಕೊಂಡಿರಲಾ ಕೋಂಟೆಸೀಮೆಗಳಂ ತೆಗೆದುಕೊಂಡಾ ಕೋಂಟೆಯಂ ಕೆಡಹಿ [1]ಸಿದ್ಧೇ[1]ಶ್ವರದೊಳ್ ನವೀನಪರಿಸ್ತರಣಮಂ ನಿರ್ಮಾಣಂಗೈಸಿದನಂತುಮಲ್ಲದೆಯುಂ

ಕಂ|| ಹಿರಿಯ ಹನುಮೇಂದ್ರಸುತನಂ
ಪೊರೆವೆಡತೊರೆ ಗಾಜನೂರು ಸೀಮೊಗೆಯ ಸುವಿ
ಸ್ತರಮಾದ ಲಕ್ಕವಳ್ಳಿಯ
ವರಕೋಂಟಾತ್ರಯವನಾ ನೃಪಂ ವಶಗೈದಂ ೩೭

ವ|| ಅದೆಂತೆಂದೊಡೆ ತರಿಕೆರೆಯ ಹಿರಿಯ ಹನುಮಪ್ಪನಾಯಕನ ಸುತರಿರ್ವರುಂ ತಂದೆ ಹಸುಗೆಗೆಯ್ದು ಕೊಟ್ಟಂತಿರದೆ ತಮ್ಮೊಳ್ ವಿವಾದಿಸಿ ಪೊಣರ್ದು ಕಿರಿಯಾತಂ ಕಡವೂರಂ ತೆಗೆದುಕೊಳಲ್ ಪಿರಿಯಾತನಿಕ್ಕೇರಿಗೆ ಬಿನ್ನೈಸಿ ಕಳುಪಲ್ ಚಿಕ್ಕಕಲ್ಲಪ್ಪನೆಂಬ ದಳವಾಯ ಸಂಗಡಂ ಸೈನ್ಯಮಂ ಕೂಡಿಸಿ ಕಳುಪಲಾ ಚಿಕ್ಕಕುಮಾರಂ ಬೇಲೂರ ವೆಂಕಟಾದ್ರಿನಾಯಕರ್ ಮೈಸೂರವರ್ ಚಿಕ್ಕನಾಯಕನಹಳ್ಳಿಯವರ್ ಚಿಂತನಕಲ್ಲವರ್ ಸೀರೆದ ರಂಗಪ್ಪನಾಯಕರ್ ಮುಂತಾದವರ ಸೈನ್ಯಮಂ [2]ಬ[2]ರಿಸಿಕೊಂಡು ಹೇರಳಬಲಮಂ ಮಾಡಿಕೊಂಡಿದಿರ್ಚಿ ನಿಲಲ್ ಪಿರಿಯ ಕುಮಾರಂ ನಿತ್ತರಿಸಿ ನಿಲಲಶಕ್ಯಮಾಗಿ ಮತ್ತಮಿಕ್ಕೇರಿಗೆ ಬಿನ್ನೈಸಿ ಕಳುಪಲಾಗಳಾ ವೆಂಕಟಪ್ಪನಾಯಕಂ ಸೈನ್ಯಸಹಿತಂ ಇಕ್ಕೇರಿಯಿಂ ತಾನೆ ತೆರಳ್ದೈತರಲಾಗಳಾ ಪಿರಿಯ ಕುಮಾರನೆಳ್ತಂದು ಗಂಗೂರೆಡೆಯೊಳ್ ಸಂಧಿಸಿ ಸೀಮೊಗೆ ಗಾಜನೂರು ಲಕ್ಕವಳ್ಳಿಯ ಸೀಮೆ ಕೋಂಟೆಗಳಂ ಕಾಣಿಕೆರೂಪಾಗಿತ್ತು ಮರೆ[3]ವು[3]ಗಲಭಯಮಿತ್ತು ತುಂಗಭದ್ರಾನದಿಯನುತ್ತರಿಸಲಾ ವಾರ್ತೆಯಂ ಕೇಳ್ದು ಕಿರಿಯಕುಮಾರನ ಸಹಾಯಕ್ಕೆ ಬಂದವರ್ ಧೈರ್ಯಂಗುಂದಿ ನಿತ್ತರಿಸಲಾರದೆ ಬಾಣಾವರಕ್ಕಾಗಿ ಪಲಾಯನಂಗೆಯ್ಯಲಾಗಳಾ ವೆಂಕಟಪ್ಪನಾಯಕಂ ಹಿ[4]ರಿಯ[4] ಲಿಂಗಣನಾಯಕನೆಂಬ ದಳವಾಯ ಸಂಗಡಂ ಹೇರಳಬಲಮಂ ತೆರಳ್ಚಿ ಕಳುಪಲಾತಂ ಕಡವೂರ ಕೋಂಟೆಯಂ ವೇಷ್ಟೈಸಿ ತಳಸುರಂಗಗಳಂ ನಡೆಸಿ ತತ್ಕೋಂಟೆಯಂ ತೆಗೆದುಕೊಳಲಾ ಕೋಂಟೆಯಂ ಹಿ[4]ರಿಯ[4] ಕುಮಾರಂಗಿತ್ತು ಮನ್ನಿಸಿ ಮತ್ತಂ ಬಾಣಾವರಕ್ಕೈದುತಿರಲಾ ವಾರ್ತೆಯಂ ಕೇಳ್ದತ್ಯಂತಭಯೋದ್ರೇಕದಿಂ ಚಿಕ್ಕಕುಮಾರನೆಳ್ತಂದು ಮರೆವುಗಲಿರ್ವರ ವಿವಾದಮಂ ತೀರ್ಚಿ ಮನಸ್ಸಂಕೋಚಮಂ ಪರಿಹರಿಸಿ ಬುದ್ಧಿಮಾರ್ಗಂಗಳಂ ತಿಳುಪಿ ಬಳಿಕವರ್ಗಳಿಂದನೇಕದ್ರ[5]ವ್ಯಾಭರಣಾಂ[5]ಬರವಸ್ತುವಾಹನಾದಿಗಳಂ ಸಂಗ್ರಹಿಸಿ ಪರಮಪ್ರಖ್ಯಾತಿಯಂ ಪಡೆದು ಮರಳ್ದನಂತುಮಲ್ಲದೆಯುಂ

---

1 ಶಿವೇ (ಕ) 2 [illegible] (ಗ) 3 [illegible] (ಗ) 4 ರೇ (ಗ) 5 ವ್ಯಾಂಬ (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ|| ವರರಾಯದುರ್ಗ ಬೇಲೂ
ರರಸರನೊಳಗೆನಿಸಿ ಹರಪುರಾಧೀಶ್ವರನಂ
ಪೊರೆದುರುತರ ಚಿಂತನಕ
ಲ್ಲರೆಯನನೆರ್ದೆಗೆಡಿಸಿ ಬಾಹುಬಲಮಂ ಮೆರೆದಂ ೩೮

ವ|| ಇಂತಾ ವೆಂಕಟಪ್ಪನಾಯಕಂ ಸೋದೆ ಬಿಳಿಗೆ ತರಿಕೆರೆ ಮುಂತಾದ ಮನ್ನೆಯರ್ಕ ಳೊಳ್ ತಾನತ್ಯಂತ ಪ್ರಖ್ಯಾತಿಯಂ ಪಡೆದು ರಾಜ್ಯಮಂ ಪರಿಪಾಲಿಸುತ್ತಂ ಸ್ವರಾಜ್ಯ ಪರಿಸ್ತರಣಂಗಳೊಳ್ ತತ್ತತ್ಸ್ಥಾನಂಗಳ್ಗುಚಿತಮಾದಧಿಕಾರಿಗಳಂ ನೆಲೆಗೊಳಿಸಿ ಕೋಂಟೆ ಗಳಂ ಬರಿಸಿ ಜಕೀರಿರಸ್ತು ಮುಸ್ತೈದೆಗಳಂ ಪೂರ್ಣವನಾಗಿಸಿ ತತ್ಪರಿಸ್ತರಣಂಗಳ ಯೋಗ್ಯ ತಾನುಸಾರವರಿತು ಪದಾತಿಗಳಂ ನೆಲೆಗೊಳಿಸಿದನಂತುಮಲ್ಲದೆಯುಂ

ಕಂ|| ಕೆರೆ ಕಾಳ್ಪುರಮಾರಾಮಂ
ವರಶಾಲಿ ಸಿತೇಕ್ಷು ಧಾನ್ಯಭೂಮಿಕೆಯೆಸೆವಾ
ಗರ ತೋಂಟಮಿವರ್ಗಳಿಂದೆಡೆ
ದೆರಪಿಲ್ಲದ ತೆರದೆ ಗೆಯ್ಮೆಗೊಳಿಸಿದನಿಳೆಯಂ ೩೯

ಮ||ವಿ|| ತರುವೆಲ್ಲಂ ಸುರಭೂಜಗಳ್ ಲತೆಗಳೆಲ್ಲಂ ದೇವತಾವಲ್ಲಿಗಳ್
ತೊರೆಯೆಲ್ಲಂ ಬರ್ದಿಲೇರುಗಳ್ ಕರಿಗಳೆಲ್ಲಂ ದೇವಮಾತಂಗಗಳ್
ಗಿರಿಯೆಲ್ಲಂ ರಜತಾದ್ರಿಗಳ್ ವನಜಮೆಲ್ಲಂ ಪುಂಡರೀಕಂಗಳಾ
ಗಿರೆ ಪರ್ವಿತ್ತುರೆ ವೆಂಕಟೋರ್ವಿಪಯಶಂ ವಿಶ್ವಂಭರಾಚಕ್ರದೊಳ್ ೪೦

ಕಂ|| ಪಶುಗಳ್ ಮೆಯ್ಗುಂದಿದುವಹಿ
ಝಷಕಪಿಗಳಿಲ್ಲವಾದುದೆಡೆ ಪೂಗಚಯಂ
ನಸಿದುವು ಕೆಳದಿಯ ವೆಂಕಟ
ವಸುಧಾಧಿಪನೊಡನಿದಿರ್ಚಿದರಿಗಳ ದೆಸೆಯಿಂ ೪೧

ವ|| ಇಂತು ಭುವನಜನಂ ನುತಿಸಲ್ ಸದ್ಧರ್ಮದಿಂ ರಾಜ್ಯಪರಿಪಾಲನಂಗೈದನಂತು ಮಲ್ಲದೆಯುಂ

ಕಂ|| ಕಾರಕಳದೊಡೆಯರೆನಿಸಿದ
ಭೈರಸವೊಡೆಯರ್ ವಿರೋಧದಿಂ ವಿಲಸಚ್ಛ್ವಂ
ಗೇರಿಯ ಧರೆಯಂ ಕೊಂಡುರೆ
ಘೇರಿಸಿ ಮಾತ್ಸರ್ಯದಿಂದೆ ತತ್ಪುರವರಮಂ ೪೨

Sri Vidyabharathi Book Centre, Sringeri

CC-O. In Public Domain. Digitized by eGangotri

ಭೈರವನ ಬೆಟ್ಟದೆಡೆಯೊಳ್
ಭೂರಿಶತಘ್ನಿಗಳ ಪೂಡಿ ಬಲ್ಗುಂಡುಗಳಂ
ಪಾರಿಸಿ ಪುರಮಠಗಳೊಳಡಿ
ಯೂರಪೊಲಂಡಲೆದುಪದ್ರವಂಗಳನೆಸಗಲ್ ೪೩

ವ॥ ಇಂ[1]ತೆಸಗಿದ[1] ಭೈರಸವೊಡೆಯ[2]ರ ಮದೋದ್ರೇಕಮಂ[2] [3]ಮುಗ್ಗಿಸಿ ಮುತ್ತಿಗೆದೆಗೆಸಿ ಬಳಿಕ್ಕವನ[3]ತಿರೇಕದಿಂದಾಕ್ರಮಿಸಿದ ಭೂಮಿಯಂ ತೆಗೆದುಕೊಂಡು ಶೃಂಗಪುರದ ಸ್ವಾಮಿಗಳ್ಗಿತ್ತು ತನ್ಮಠದ ಧರ್ಮಕ್ಕೆ ತಾ[4]ನುಂ[4] ಬೇರೆ ಶಿವಾರ್ಪಿತವಾಗಿ ಭೂಸ್ವಾಸ್ಥ್ಯಮಂ ಧಾರೆಯನೆರೆದು ತನ್ಮಠಮಂ ಜೀರ್ಣೋದ್ಧಾರಮಂ ರಚಿ[5]ಸಿ[5] ಇಂತು ಶೃಂಗೇರಿಯ ಧರ್ಮ ಸಂಸ್ಥಾನವನುದ್ಧರಿಸಿ ಪರಮಪ್ರಖ್ಯಾತಿಯಂ ಪಡೆದನಂತುಮಲ್ಲದಿಕ್ಕೇರಿಯ ಪುರವರದ ಸಮೀಪದೊಳ್

ಕಂ॥ ಭದ್ರಗುಣ ವೆಂಕಟೇಂದ್ರಂ
ಭದ್ರಪನಾಯಕನ ಪೆಸರೊಳೊಪ್ಪುವ ವಿಲಸ
ದ್ಭದ್ರಪುರವೆಂಬ ಪೇಟೆಯ
ಭದ್ರಮೆನಲ್ ಬಹಳರಚನೆಗೆಯ್ಸಿದನನುವಿಂ ೪೪

ವ॥ ಇಂತಾ ವೆಂಕಟಪ್ಪನಾಯಕಂ ಭದ್ರರಾಜಪುರನೆಂಬ ಪೇಟೆಯಂ ಕಟ್ಟಿಸಿಯನಂತರಂ ಕೆಳದಿಯಿಕ್ಕೇರಿಪುರವರದ ಮಧ್ಯದೊಳ್ ತನ್ನ ಪಿತಾಮಹನ ಹೆಸರಲ್ಲಿ ಪೇಟೆ ಪಟ್ಟಣಮಂ [6]ಕಟ್ಟಿಸಿ[6]ಯಾ ಪೊಳಲ್ಗೆ ಸದಾಶಿವಸಾಗರನೆಂದು ನಾಮಾಂಕಿತಂಗೈದ[7]ನಂತುಮಲ್ಲದೆಯುಂ[7]

ಕಂ॥ ಸಾಗರದ ಪೊಳಲೊಳೆಸೆವ ಮ
ಹಾಗಣಪತಿಯಂ ಪ್ರತಿಷ್ಠೆಯಂ ವಿರಚಿಸಿ ಚ
ನ್ನಾಗಿರೆ ತಟಾಕಮಂ ತಾ
ನಾಗಿಸಿ ಬಳಿಯೊಳ್ ಸುಸೌಧಮಂ ಕಟ್ಟಿಸಿದಂ ೪೫

1 ತು (ಗ) 2 ರ್ ಗರ್ವೋದ್ರೇಕದಿಂ (ಗ) 3 ಶೃಂಗೇರಿಯ ಪುರವರಮಂ ವೇಢೈಸಿ ಗುರು ವೀರಕುಪದ್ರವಮಂ ರಚಿಸುತ್ತಮಿರಲಾ ವಾರ್ತೆಯಂ ವೆಂಕಟಪ್ಪನಾಯಕಂ ಕೇಳ್ದು ದಳವಾಯಿ ಲಿಂಗಣನಾಯಕನೊಡನೆ ಸೈನ್ಯಮಂ ತೆರಳಿಸಿ ತದ್ಭೈರಸ ಒಡೆಯರ ಮದೋದ್ರೇಕಮಂ ಮುಗ್ಗಿಸಿ ಮುತ್ತಿಗೆ ತೆಗೆಸಿ ಬಳಿಕ್ಕವನ (ಗ) 4 ವು (ಗ) 5 ಯಿಸಿ (ಗ) 6 ನಿರ್ಮಾಣಂಗೈಸಿ (ಮ) 7 ನನಂತರಂ (ಮ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ|| ಚಂದಬನಮೆಂಬ ಪೆಸರಿನ
ನಂದನಮಂ ರಚನೆಗೊಳಿಸಿ ವೆಂಕಟನೃಪನಾ
ನಂದವದೆ ಗಣಪತಿಯರ್ಚನೆ
ಗುಂದುರುತರಮಾದ ಭೂಮಿಯಂ ಕಲ್ಪಿಸಿದಂ ೪೬

ವ|| [1]ಮತ್ತಮುದಲ್ಲದಾ ವೆಂಕಟಪ್ಪನಾಯಕಂ ತನ್ಮಹಾಗಣಪತಿದೇವರ್ಗೆ ಶಿಲಾಮಯಮಾದ ದೇವಸ್ಥಾನಮಂ ನಿರ್ಮಾಣಂಗೈಸಿ ರಥೋತ್ಸವಾದಿ ಕಟ್ಟಲೆಗಳ್ ನಡೆವಂತು ನಿಯಾಮಕಂಗೈಸಿ ಮತ್ತಮಾ ಸದಾಶಿವಸಾಗರದ ಬಳಿಯ ವರದಾನದೀತೀರದೊಳ್ ವಿಶ್ವೇಶ್ವರದೇವರಂ ಪ್ರತಿಷ್ಠೆಯಂ [3]ರಚಿ[2]ಸಿ[1] ದೇವಾಲಯಮಂ ಕಟ್ಟಿಸಿ ಭೂಸ್ವಾಸ್ಥ್ಯಮಂ ಬಿಡಿಸಿ ಮತ್ತಮಾ ನದೀತೀರದೊಳ್ ವಿಶ್ವನಾಥಪುರಮೆಂಬಗ್ರಹಾರಮಂ [2]ರಚಿ[2]ಸಿ ವೃತ್ತಿಕ್ಷೇತ್ರ ನಿವೇಶನಂಗಳಂ ನಿಯಾಮಿಸಿ ಶ್ರೋತ್ರಿಯಬ್ರಾಹ್ಮ[3]ಣರ್ಗೆ[3] ಧಾರೆಯನೆರೆದು ಸ್ಥಿರಶಾಸನಮಂ ಬರೆಸಿತ್ತು ಗಣೇಶದೀಕ್ಷಿತರ ಕಯ್ಯಿಂ ವಾಜಪೇಯಯಾಗನುಂ ರಚಿಯಿಸಿ ಮತ್ತಮಾ ಸದಾಶಿವಸಾಗರದ ಪೊಳಲೊಳ್ ಮನೋಹರಮಾದ ರಾಜಾಲಯಮಂ ನಿರ್ಮಾಣಂಗೈಸಿ ಮತ್ತಮಾ ಸದಾಶಿವಸಾಗರ ಕೆಳದಿಯಪೊಳಲ ಮಧ್ಯದೊಳೆಸೆವ ಸಂಗಮೇಶ್ವರಮೆಂಬ ಗ್ರಾಮದೆಡೆಯೊಳ್ ಲೋಕಹಿತಾರ್ಥಮತ್ಯಂತಮನೋಹರಮಾದ [4]ತ[4]ಟಾಕಮಂ ನಿರ್ಮಾಣಂಗೈಸಿದನಂತುಮಲ್ಲದೆಯುಂ

ಕಂ|| ಆ ಕೆರೆಯ ಬಳಿಯೊಳನುಪಮ
ನಾಕೋದ್ಯಾನಕ್ಕೆ ತೊಣೆಯೆನಿಪ್ಪಾರಾಮಾ
ನೀಕವನರಮನೆಯಂ ಸೌ
ಖ್ಯಾಕರಕೇಳೀಸುಸೌಧಮಂ ರಚಿಯಿಸಿದಂ ೪೭

ವ|| ಮತ್ತಮಾ ಸಂಗಮೇಶ್ವರವೆಡೆಯೊಳ್ ಶಾಲೀಕ್ಷೇತ್ರ ಪುಂಡ್ರೇಕ್ಷುವಾಟಿಗಳಂ ಕಲ್ಪಿಸಿ ಇಕ್ಕೇರಿಯಘೋರೇಶ್ವರದೇವರ ಹೋಬಳಿಯೆಂದಘೋರೇಶ್ವರದೇವರ ಪೂಜಾ[5]ವೈ[5]ಭವಾರ್ಥಮಾರಾಸಿರ ಪೊಂಗಳನೀವ ಸಿಸ್ತಿನ ಸೀಮೆಯುಂ ವಿಂಗಡಿಸಿ ಅದಕ್ಕುಚಿತಮಾದಧಿಕಾರಿಯಂ ನೆಲೆಗೊಳಿಸಿ ಆಗಮೋಕ್ತವಿಧಾನದಿಂ ತದ್ದೇವತಾಪೂಜೆ ಕಾರ್ತಿಕದೀಪಾರಾಧನೆ ಮುಂತಾದ ಪೂಜೆಗಳಂ ನಡೆಸಿ ಕೆಳದಿರಾಮೇಶ್ವರದೇವರ್ಗಂ ವೀರಭದ್ರದೇವರ್ಗಂ ವಿಶೇಷಭೂಸ್ವಾಸ್ಥ್ಯಮಂ ಬಿಟ್ಟು ಪೂಜೆಗಳಂ ನಡೆಸಿ ರಾಮೇಶ್ವರದೇವರ ರಂಗಮಂಟಪಮಂ ಶಿಲಾಮಯಮನಾಗಿಸಿ ಮತ್ತಮಾ ಕೆಳದಿಯರಮನೆಯ ಸಮೀಪದೊಳ್ ಸಂಪೆಕಟ್ಟೆಯೆಂಬ ತಟಾಕಮಂ ಪುಷ್ಪವಾಟಿಗಳುಮಂ ನಿರ್ಮಾಣಂಗೈಸಿದನಂತುಮಲ್ಲದೆಯುಂ

---

1 ಇಂತು (ಗ) 2 ಕಟ್ಟಿಸಿ (ಗ) 3 ರ್ಗೆ (ಗ) 4 ಸುಜಾತ (ಗ) 5 ವಿ (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ|| ಚಾರುತರತುಂಗಭದ್ರಾ
ತೀರಸಮೀಪದೊಳೆ ಮಾತೃನಾಮಾಂಕಿತದೊಳ್
ವೀರಾಂಬಾಪುರಮೆಂಬ ಮ
ಹಾ ರಮ್ಯತರಾಗ್ರಹಾರಮಂ ವಿರಚಿಸಿದಂ ೪೮

ವ|| ಇಂತು ತುಂಗಭದ್ರಾ [1]ನದೀ[1]ತೀರದೊಳ್ ಭೀಮನಕಟ್ಟೆಯೊಳ್ ವೀರಾಂಬಾಪುರಮೆಂಬಗ್ರಹಾರಮಂ ಕಟ್ಟಿಸಿ ಮತ್ತಂ ಭಾರಂಗಿಯೊಳ್ ಶರಾವತೀತೀರದೊಳ್ ಸ್ವಪತ್ನಿಯ ಪೆಸರೊಳಭಿನವವೀರಾಂಬಾಪುರಮೆಂಬಗ್ರಹಾರಮಂ ಕಟ್ಟಿಸಿ ವೃತ್ತಿಕ್ಷೇತ್ರ ನಿವೇಶನಂಗಳಂ ಕಲ್ಪಿಸಿ ಸದ್ಬ್ರಾಹ್ಮಣರ್ಗೆ ಶಿವಾರ್ಪಿತಮಾಗಿ ಧಾರೆಯನೆರೆದು ಸ್ಥಿರಶಾಸನಮಂ ಬರೆಸಿತ್ತನಂತುಮಲ್ಲದೆಯುಂ[2]

ಕಂ|| * ಬಾರಕೂರ್ ಬೆಣ್ಣೆವಳ್ಳಿಯು
ಮಾರಗ ಶಂಕರನಾರಾಯಣ ಸಾಗರ ಬೋ
ಳೂರು ಕೊಡೆಯಾಲಗಳೊಳಮು
ದಾರ ಮಹತ್ತಿನ ಮಠಂಗಳಂ ಕಟ್ಟಿಸಿದಂ ೪೯

ವ|| ಇಂ[3]ತಿವು ಮುಂತಾದ[3] ಸ್ಥಳಂಗಳೊಳ್ ಮಹತ್ತಿನ ಮಠಮಂ ಕಟ್ಟಿಸಿ ಭೂಸ್ವಾಸ್ಥ್ಯಗಳಂ ಬಿಡಿಸಿ ಶಿವಜಂಗಮಾರ್ಥಂ ಶಿವಾರ್ಪಿತಮಾಗಿ ಧಾರೆಯನೆರೆದು ಸ್ಥಿರ ಶಾಸನಮಂ ಬರೆಸಿತ್ತು ಸುಖದಿಂದಿರುತ್ತುಮಿರಲ್ ತನ್ನ ಕಿರಿಯಯ್ಯ ಚಿಕ್ಕಸಂಕಣ್ಣನಾಯಕನ ಪುತ್ರನಾದ ಸಿದ್ದಪ್ಪನಾಯಕಂ ಶಿವಸಾಯುಜ್ಯಮನೈದಲತ್ಯಂತದುಃಖದಿಂ ಚಿತ್ತವಿಹ್ವಲನಾಗಿ ವೈರಾಗ್ಯಂ ಪುಟ್ಟಿ ಬಳಿಕ್ಕಾತ್ಮಜ್ಞಾನಾನುಸಂಧಾನೋಪಯುಕ್ತಮಾದಧ್ಯಾತ್ಮಶಾಸ್ತ್ರಂಗಳಂ ಸಕಲ ನೀತಿಶಾಸ್ತ್ರಂಗಳಂ ಕೇಳ್ದು ಬಳಿಕಂ ಪದ್ಮಪುರಾಣದುತ್ತರಖಂಡದೊಳ್ ಶ್ರೀಮತ್ಪರಮೇಶ್ವರಂ ರಾಮಭದ್ರಂಗುಪದೇಶಂಗೈದ ಪದಿನೆಂಟಧ್ಯಾಯಂಗಳುಳ್ಳ ಶಿವಗೀತೆಯಂ ಲೋಕೋಪಕಾರಾರ್ಥಮಾಗಿ ಕವಿತಿರುಮಲಭಟ್ಟರಿಂ ವಾರ್ಧಿಕಷಟ್ಪದಿಯೊಳ್ [4]ಕರ್ಣಾಟಕಕಾವ್ಯಮನಾಗಿಸಿ ಮತ್ತಮದಲ್ಲದಾ ಕವಿತಿರುಮಲಭಟ್ಟರಿಂ ಗೀರ್ವಾಣದೊಳ್[4] ಶಿವಾಷ್ಟಪದಿಯಂ ರಚನೆಗೈಸಿ ಮತ್ತಮದಲ್ಲದೆ ರಂಗನಾಥದೀಕ್ಷಿತನೆಂಬ ವಿದ್ವಾಂಸನಿಂ ತಂತ್ರಸಾರಮೆಂಬಾಗಮಗ್ರಂಥಕ್ಕೆ ವ್ಯಾಖ್ಯಾನಮಂ ಮಾಡಿಸಿ ದೇವತಾಸ್ವಪ್ನಸೂಚನಾಮೂಲದಿಂ ತನ್ನೆಡೆಗೈದಿದಶ್ವಪಂಡಿತರ ಮುಖದಿಂ ಮಾನಪ್ರಿಯಮೆಂಬ ಪೆಸರುಳ್ಳ ವಿಸ್ತಾರಮಾದಶ್ವಶಾಸ್ತ್ರಮಂ ಸಂಪಾದಿಸಿ ವರ್ತಿಸುತ್ತುಮಿರಲಾ ಕಾಲದೊಳ್ ವಿಶೇಷಬಿರುದನಾಂತು ವರ್ತಿಸು

1 ಮಹಾನದೀ (ಗಮ) 2 ದನಂತರ (ಮ) 3 ತೀ (ಮ) 4 ಶಿವಗೀತೆಯಂ ಮಾಡಿಸಿ (ಮ)

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ತುಮಿರ್ದ ವಿಶಿಷ್ಟಾದ್ವೈತವಾದಸಮರ್ಥ[1]ನಾದ[1] ಚತುಶ್ಶಾಸ್ತ್ರಪಂಡಿತನೆನಿಪ್ಪ ರಾಮಾನುಜ ಶೃಂಗಿ[2]ವರ್ಯನೆಂಬೊರ್ವ ವಿದ್ವಾಂಸಂ ಇಕ್ಕೇರಿಗೆ[2] [3]ಬಂದು ತಮ್ಮಂ ಸಂಧಿಸಿ ಸಮೀಪದಲ್ಲಿ ವರ್ತಿಸುತ್ತುಮಿ[3]ರಲಾ ಕಾಲದೊಳ್ ಕಾಶಿಯಿಂ ಭಟ್ಟೋಜಿದೀಕ್ಷಿತನೆಂಬ ಘಟಕವಿದ್ವಾಂಸನೈದಿರಲಾ ಭಟ್ಟೋಜಿದೀಕ್ಷಿತರ್ಗಂ ಆ ರಾಮಾನುಜಶೃಂಗಿಗಂ ವಿಶಿಷ್ಟಾದ್ವೈತ ಶುದ್ಧಾದ್ವೈತ ಶಾಸ್ತ್ರಂಗಳಲ್ಲಿ ಪ್ರಸಂಗಮಂ ಮಾಡಿಸಿ ಸಕಲವಿದ್ವಜ್ಜನಸಮ್ಮತಿಯಿಂದಾ ವಿಶಿಷ್ಟಾದ್ವೈತವಾದ ಸಮರ್ಥನಾದ ರಾಮಾನುಜಶೃಂಗಿಯ ಕಕ್ಷಿಯಂ ಖಂಡಿಸಿ ಮತ್ತಂ ಕೆಲವುಶಾಸ್ತ್ರಪ್ರಸಂಗ ಮುಖದಿಂದವನಂ ಸೋಲಿಸಿ ಅವನ ವಿಶೇಷಬಿರುದಂ ಕಳಚಿಸಿ ವಶಂಗೈದು ವಿಶಿಷ್ಟವೈದಿಕಾದ್ವೈತಸಿದ್ಧಾಂತಸ್ಥಾಪನಾಚಾರ್ಯನೆಂಬ ಬಿರುದಿನ ಪೊಗಳ್ಕೆಯಭಿಧಾನಮಂ ಸಂಪಾದಿಸಿದ ನಂತರಂ ತಮ್ಮ ಕಿರಿಯಯ್ಯ ಚಿಕ್ಕಸಂಕಣನಾಯಕರ ಪೌತ್ರನಾದ ಶಿವಪ್ಪನಾಯಕಂಗೆ ದುರ್ಗದ ಪಟ್ಟಣಶೆಟ್ಟರ ಮಗಳು ಲಿಂಗಮ್ಮಾಜಿಯವರು ಸೂರಿರಾಯನ ಬಸವಪ್ಪನ ತಂಗಿ ಶಾಂತಮ್ಮಾಜಿಯವರು ಹೀಗೆ ಇರ್ವರ್ ಕನ್ಯಾರತ್ನಂಗಳಂ ವಿವಾಹಮಂ ರಚಿಸಿ ತಚ್ಛಿವಪ್ಪ ನಾಯಕರ ಸಹೋದರನಾದ ಚಿಕ್ಕವೆಂಕಟಪ್ಪನಾಯಕಂಗೆ ವೀರವೊಡೆಯರ ಕುಮಾರಿ ಯಾದ ಮಲ್ಲಮ್ಮಾಜಿಯೆಂಬ ಪೆಣ್ಮಣಿಯನುದ್ವಾಹಮಂ ರಚಿಸಿ

ಕಂ॥ * ಸರಸಸಂಗೀತಲೋಲಂ
ನಿರುಪಮ ಕೌಶಲ್ಯ ವಿವಿಧಸಾಹಿತ್ಯವಿದಂ
ಸುರುಚಿರ ಸಕಲಕಲಾಸ
ತ್ಪರಿಣತನೆಂದೆನಿಸಿ ವೆಂಕಟೋರ್ವಿಪನೆಸೆದಂ ೫೦

ವ॥ ಮತ್ತ[4]ಮದಲ್ಲದಾ[4] ವೆಂಕಟಪ್ಪನಾಯಕ ಕೊಲ್ಲೂರ ಮೂಕಾಂಬಿಕೆಯಮ್ಮನವರ ದೇವಸ್ಥಾನಮಂ ವಿಸ್ತಾರವಾಗಿ ಶಿಲಾಮಯವನಾಗಿಸಿ ವಿಶೇಷಭೂಸ್ವಾಸ್ಥ್ಯಮಂ ಬಿಡಿಸಿ ತತ್ಪೂಜಾವಿಭವಂಗಳಂ ಲೋಪಮಾಗದಂತೆ ನಡೆಸಿ ತಾಂ ಸಾಧಿಸಿದ ಘಟ್ಟದ ಮೇಗಣ ಕೆಳಗಣ ಮಹಾದೇವತಾಸ್ಥಳಂಗಳೊಳ್ ಪ್ರತಿವರ್ಷಶ್ರಾವಣಮಾಸದೊಳ್ ವಿಶೇಷಗಟ್ಟಲೆಯಾಗಿ ಪೂಜೆ ಕಾರ್ತಿಕಮಾಸಮೊಳ್ ಲಕ್ಷದೀಪಾರಾಧನೆ ರಥೋತ್ಸವಾದಿ ಕಟ್ಟಲೆಗಳ್ ನಡೆವಂತು ನಿಯಾ[5]ಮಕಂಗೈಸಿ[5] ಗುರುಲಿಂಗಜಂಗಮಾದಿಪೂ[6]ಜಾನಿರತನಾ[6]ಗಿ ಶೃಂಗೇರಿಯ [7]ಧ[7]ರ್ಮ ಬಾಳೆಹಳ್ಳಿಸಿಂಹಾಸನರ ಧರ್ಮ ಸ್ವರಾಷ್ಟ್ರಗಳೊಳ್ ನಾಲ್ಕಡೆಗಳೊಳುಳ್ಳ ಸನ್ಯಾಸಿಗಳ ಮಠ ಮಹತ್ತಿನಮಠಾಗ್ರಹಾರ ಕೊಡಗಿ ಮಾನ್ಯ ಉಂಬಳಿ ಉತ್ತಾರ ಪಳ್ಳಿ ದಾಸರ ಧರ್ಮ ಮುಂತಾದ ನಾನಾಧರ್ಮಂಗಳಂ ಸಮಗ್ರವಾಗಿ ನಡೆಸಿ ಗಜತುರಗಪತ್ತಿರಾವುತ

---

[1] ನೆಂಬ (ಗ) [2] ನೈಯ್ಯಾನಾಡೊರ್ವವಿದ್ವಾಂಸಂ ಇಕ್ಕೇರಿಗೆ (ಬ) ಯು (ಮ) [3] ಸಮೀಪದಲ್ಲಿಯಿ (ಮ) [4] ಮಾ (ಮ) [5] ಮಿಸಿ (ಮ) [6] ಜನಾರತನುಮಾ (ಗ) [7] ಸಂಸ್ಥಾನದ ಧ (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ಶಾಣ್ಯಪ್ರಜೆಪರಿವಾರನೆರೆಸಾಮಂತಪುರಜನ ಪರಿಜನ ವಿದ್ವಜ್ಜನಾಶ್ರಿ[1]ತ[1] ಸೇವಕಜನಯಾಚಕ ಜನ[2]ರ್ ಮುಂ[2]ತಾದ ಸಮಸ್ತಜನರ್ಕಳಂ ಸಂರಕ್ಷಿಸುತ್ತುಂ ವಿರಾಜಿಸುತ್ತಿರ್ದನಂತು ಮಲ್ಲದೆಯುಂ

ಶಾ॥ವಿ॥ [3]ಶ್ರೀಮಚ್ಚಾಡಸವಂಶವರ್ಧನಕರಂ ಶತ್ರುಚ್ಛಟಾಭೀಕರಂ
ಸೋಮೋತ್ತಂಸದಯಾತ್ತಭಾಗ್ಯನಿಕರಂ ಗಾಂಭೀರ್ಯರತ್ನಾಕರಂ
ಕಾಮಾಕಾರನುದಗ್ರಸಾಯಕಕರಂ ಪೂರ್ಣಾನುಕಂಪಾಕರಂ
ಧೀಮಚ್ಛೇಖರನಾಳ್ದನೊಪ್ಪುವಿಳೆಯಂ ಶ್ರೀವೆಂಕಟೋರ್ವೀಶ್ವರಂ ೫೧

ವ॥ ಈ ವೆಂಕಟಪ್ಪನಾಯಕರ್ ಚಿತ್ರಭಾನು ಸಂವತ್ಸರದ ಮಾರ್ಗಶಿರ ಶುದ್ಧ ೫ ಯಾ[3]ರಭ್ಯ ಶುಕ್ಲ ಸಂವತ್ಸರ ಕಾರ್ತಿಕ ಬಹುಳ ೩೦ಯವರೆಗೆ ವರ್ಷ ೪೬ ತಿಂಗಳು ೧೧ ದಿನ ೨೬ ಪರ್ಯಂತಂ ರಾಜ್ಯವಾಳಿ [4]ಐಕ್ಯ[4]ವಾದರ್*

ಪಂಚಮಾಶ್ವಾಸಂ ಸಂಪೂರ್ಣಂ

---

1 ತಜನ (ಗ) 2 ಕರ್ಳ್ ಮುಂ (ಗ) 3 ಇವರಿಗೆ ಪಟ್ಟಮಾದಾ (ಮ) 4 ಶಿವಾಧೀನ (ಮ)

*ಇವರ ಕಾಲದಲ್ಲಿ ಬದುಕುಗಳಂ ಮಾಡಿದವರು ಪ್ರಧಾನಿ ಚೌಡಪ್ಪಯ್ಯ ಕರಣಿಕ ಅಣ್ಣಾಜಿ ವೆಂಕಟಯ್ಯ ಅಣ್ಣಾಜಿ ತಿರುಮಲಯ್ಯ ಕಲಿಸೆ ತಿಮ್ಮಪ್ಪಯ್ಯ ಬಾಳಗಾರ ತಮ್ಮರಸಯ್ಯ ಜೋಯಿಸ ತಿಮ್ಮಪ್ಪಯ್ಯ ಬಿಳಿಗಿ ಗಿರಿಯಪ್ಪಯ್ಯ ರಾಯಸದ ರಾಮಚಂದ್ರಯ್ಯ ಚಿಕ್ಕರಸರ ಶಂಕರನಾರಣಯ್ಯ ಮಲ್ಲಪ್ಪನ ವೆಂಕಟಪ್ಪಯ್ಯ ಯಲ್ಲಪ್ಪಯ್ಯ ತಮ್ಮರಸಯ್ಯ ನಿಯೋಗಿ ದಾಸಪ್ಪಯ್ಯ ಸೀತಪ್ಪಯ್ಯ ಬಿಳಿಗಿ ಪುಟ್ಟಯ್ಯ ನಿಸಾನಿ ಸಾಮರ್ಥಜಯವಜೀರರು (?) ದಳವಾಯಿಕಲ್ಲಪ್ಪ ಸಿದ್ದಲಿಂಗಣ್ಣನಾಯಕ ಯಲ್ಲಪ್ಪ ತಮ್ಮರಸಯ್ಯ ಮುಂತಾದವರು. (ಕ)

Sri Vidyabharathi Book Centre, Sringeri

CC-O. In Public Domain. Digitized by eGangotri

[1]ಷಷ್ಠಾ[1]ಶ್ವಾಸಂ

ಕಂ॥ † ವರ ಕೆಳದಿಯ ಚೌಡಮಹೀ
ಶ್ವರನ ಸುತಂ ವರ ಸದಾಶಿವೋರ್ವೀಪಾಲಂ
ಧುರಧೀರತತ್ಸದಾಶಿವ
ಧರಣೀಶ್ವರವರ್ಯಗಾತ್ಮಸಂಭವರಿರ್ವರ್ ೧

ಪಿರಿಯಂ ಸಂಕಣಭೂಪಂ
ಕಿರಿಯಾತಂ ಚಿಕ್ಕಸಂಕಣೋರ್ವೀಪತಿಯಾ
* ಪಿರಿಯ ಸಂಕಣಧರಾಧೀ
ಶ್ವರಗಿರ್ವರ್ ತನುಜರ್ಕಳಹಿಮಧಾಮನಿಭರ್ ೨

ಅವರಿರ್ವರೊಳಂ ಪಿರಿಯಂ
ಭುವನೈಕಪ್ರಥಿತ ರಾಮರಾಜನೃಪಾಲಂ
ಅವಿರಳಕ್ರಮತತ್ಸಹ
ಭುವನವನೀನಾಥತಿಲಕ ವೆಂಕಟಭೂಪಂ ೩

ಆ ವೆಂಕಟನೃಪನ ಸುತಂ
ಭೂವಿನುತಂ ಭದ್ರಭೂಪನಾತನ ತನುಜಂ
ಶ್ರೀವೀರಭದ್ರನೃಪನಿವ
ರಾ ವರಸಂಕಣನೃಪಾಲವಂಶಜರಾದರ್ ೪

ಅರಿವಂತಿನ್ನೊರೆವೆಂ ನೃಪ
ವರನೆನಿಸುವ ಪಿರಿಯಸಂಕಣೋರ್ವಿಪನ ಸಹೋ
ದರನೆನಿಪ ಚಿಕ್ಕಸಂಕಣ
ಧರಣೀಶನ ವಿತತವಂಶಪಾರಂಪರೆಯಂ ೫

---

1 ಏಳನೆಯಾ (ಗ)

† ಈ ವಂಶಾವಳಿಯನ್ನು ತಿಳಿಸತಕ್ಕ ಹದಿಮೂರು ಕಂದಪದ್ಯಗಳು (ಮ) ಪ್ರತಿಯಲ್ಲಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮೊರೆ ಚಿಕ್ಕಸಂಕಣ್ಣೋರ್ವೀ
ಶ್ವರಪುತ್ರಂ ಸಿದ್ಧಪೋರ್ವಿಪಂ ತತ್ತನುಜಂ
ಮೆರೆವ ಶಿವನೃಪತಿ ತತ್ಸೋ
ದರನುರು ವೆಂಕಟನೃಪಾಲನರಿಕುಲಕಾಲಂ ೬

ಆ ಶಿವನೃಪನ ತನೂಜಂ
ಭಾಸುರಗುಣ ಭದ್ರಭೂಮಿಪಂ ತದನುಜನಾ
ಶ್ರೀಸೋಮಶೇಖರೇಂದ್ರಮ
ಹೀಶಂ ತತ್ಪತ್ನಿ ಚನ್ನಮಾಂಬಿಕೆ ತಿಳಿಯಲ್ ೭

* ಅರಿವೊಡಾ ಸೋಮಶೇಖರ
ವರನೃಪತಿಯ ಪತ್ನಿ ಚನ್ನಮಾಂಬಿಕೆಯೊರ್ವಳ್
ಧರೆಯರಿಯೆ ತದ್ಗೃಹೀತಂ
ಮರಿಯಪಕುವರಿಯೊಳುದಿಸಿದ ಬಸವಮಹೀಪಂ ೮

ಮೆರೆವಾ ಬಸವನೃಪಾಗ್ರೇ
ಶ್ವರಗಿರ್ವರ್ ಪುತ್ರರವರೊಳಂ ಪಿರಿಯಾತಂ
ವರ ಸೋಮಶೇಖರೇಂದ್ರಂ
ಕಿರಿಯಮಗಂ ವೀರಭದ್ರನಾಯಕನೆನಿಪಂ ೯

ಆ ವೀರಭದ್ರಪಾಖ್ಯಮ
ಹೀವಿಭುವಿನ ಸೂನು ಬಸವಭೂಮಿಪನೆನಿಪಂ
ಆ ವರಬಸವೇಂದ್ರನ ಸತಿ
ಭಾವಿಸೆ ತಾಂ ಚನ್ನವೀರಮಾಂಬಿಕೆಯೆನಿಪಳ್ ೧೦

ಪರಿಕಿಪೊಡೆ ತದ್ಗೃಹೀತಂ
ಸುರುಚಿರ ಗೀರ್ವಾಣಮಂತ್ರಿಯಾತ್ಮಜನೆನಿಪಾ
ಗುರವೇಂದ್ರನ ಸುಕುಮಾರಂ
ಧರಣಿಪಮಣಿ ಚನ್ನಬಸವಭೂಮಿಪನೆನಿಪಂ ೧೧

ಆತನನಂತರಮತಿವಿ
ಖ್ಯಾತ ಶ್ರೀಚನ್ನವೀರಮಾಂಬಿಕೆಯಿಂದಂ
ಭೂತಳವರಿಯಲ್ಕಾದ ಗೃ
ಹೀತನದಾರೆನಲು ಪೇಳ್ವೆನನುನಯದಿಂದಂ ೧೨

Sri Vidyabharathi Book Centre, Sringeri

CC-O. In Public Domain. Digitized by eGangotri

ಧರೆಯೊಳಗತಿಶಯ ಬಂಕಾ
ಪುರದುಜ್ಜ್ವಲ ಚನ್ನವೀರಪನ ಸುಕುಮಾರಂ
ಧುರಧೀರ ಸೋಮಶೇಖರ
ಧರಣೀಶ್ವರವರ್ಯನಮರಗಿರಿನಿಭಧೈರ್ಯಂ ೧೩

ವ|| [1]ಆ ಹಿರಿಯವೆಂಕಟಪ್ಪನಾಯಕರ[1] ತರುವಾಯ ಸ್ವಸ್ತಿಶ್ರೀ ವಿಜಯಾಭ್ಯು ದಯ ಶಾಲಿವಾಹನ ಶಕವರ್ಷ ೧೫೫೧ನೆಯ ಶುಕ್ಲಸಂವತ್ಸರದ ಮಾರ್ಗಶಿರ ಶುದ್ಧ [2]೧ಯಲ್ಲಿ[2] ವೆಂಕಟಪ್ಪನಾಯಕರ ಪೌತ್ರರಾದ ವೀರಭದ್ರನಾಯಕರ್ಗೆ ಇಕ್ಕೇರಿಯರಮನೆ ಯಲ್ಲಿ ರಾಜಪಟ್ಟಂ*

ಕಂ|| ವರ ವೆಂಕಟಭೂಪನನಂ
ತರದೊಳ್ತತ್ಪೌತ್ರನಧಿಕಪುಣ್ಯಚರಿತ್ರಂ
ನೆರೆ ವೀರಭದ್ರನಾಯಕ
ನರಿಹಿಮಕರರಾಹು ರಾಜ್ಯರಮೆಗರಸಾದಂ ೧೪

ವ|| ಮತ್ತಮಾ ವೀರಭದ್ರನಾಯಕಂ ತನ್ನ ತಂದೆ ಭದ್ರಪ್ಪನಾಯಕನ ಹಿರಿಯಪ್ಪ ರಾಮರಾಜನಾಯಕನ ಪುತ್ರರಾದ ವೀರವೊಡೆಯರ್ ಬಸವಲಿಂಗನಾಯಕರಂ ಚಿಕ್ಕ ಸಂಕಣ್ಣನಾಯಕರ ಪೌತ್ರರಾದ ಸಿದ್ದಪ್ಪನಾಯಕರ ಪುತ್ರರಾದ ವಾವೆಯಿಂ ತಮಗೆ ಚಿಕ್ಕಪ್ಪಂದಿರಾದ ಶಿವಪ್ಪನಾಯಕ ವೆಂಕಟಪ್ಪನಾಯಕರುಮಂ ಮೈದುನ ಸದಾಶಿವಯ್ಯ ನುಮಂ ತತ್ಪುತ್ರ ಭದ್ರಯ್ಯ ವೆಂಕಟಯ್ಯನುಮನತ್ಯಂತಪ್ರೀತಿಯಿಂ ನಡೆಸಿಕೊಳುತ್ತುಂ [3]ರಾಜ್ಯಂಗೆಯ್ಯುತಿರ್ದ[3]ವಸರದೊಳ್

---

[1] ಆ (ಮ) [2] ಪಾಡ್ಯದಲ್ಲೂ (ಗ) [3] ರಾಜ್ಯಮಂ ಗೈದು ಸದಾಶಿವಯ್ಯನುಮಂ ಆತನ ಮಕ್ಕಳು ತಮಗೆ ಸೋದರಳಿಯಂದಿರಾದ ವೆಂಕಟಯ್ಯ ಭದ್ರಯ್ಯನಂ ಸಹ ಅಂಕೆಯಮ್ಯಾಲೆ ಇಟ್ಟುಕೊಂಡು ಇರ್ದ (ಕ)

* ಈ ವೀರಭದ್ರನಾಯಕರು ತಮಗೆ ರಾಜಪಟ್ಟವಾದ ಮೇಲೆ ಶಕವರ್ಷ ೧೫೬೦ನೆಯ ಈಶ್ವರ ಸಂವತ್ಸರದ ಪುಷ್ಯ ಬಹುಳ ೧೧ಯ ವರೆಗೆ ವರ್ಷ ೮ ದಿನ ೨೫ ಪರ್ಯಂತಂ ಇಕ್ಕೇರಿ ಯಲ್ಲಿ ರಾಜ್ಯವಾಳಿದ ಮೇಲೆ ಇಕ್ಕೇರಿಯಿಂದ ತೆರಳಿ ಭುವನಗಿರಿಯ ದುರ್ಗಕ್ಕೆ ಬಂದು ನಿಂದು ಮತ್ತಮಾ ಭುವನಗಿರಿಯ ದುರ್ಗದಿಂ ತೆರಳ್ದು ಶಾಲಿವಾಹನ ಶಕ ೧೫೬೧ನೆಯ ಬಹುಧಾನ್ಯ ಸಂವತ್ಸರದ ವೈಶಾಖ ಶುದ್ಧದಲ್ಲಿ ವೇಣುಪುರದರಮನೆಗೆ ಬಂದು ನೆಲೆಯಾಗಿ ನಿಂದು ಆಮೇಲೆ ವರ್ಷ ೭ ತಿಂಗಳು ೭ ಪರ್ಯಂತಂ ರಾಜ್ಯವಾಳಿದರಿಂತು ತಮಗೆ ರಾಜಪಟ್ಟವಾದ ಶುಕ್ಲ ಸಂವ ತ್ಸರದ ಮಾರ್ಗಶಿರ ಶುದ್ಧ ೧ ಯಾರಭ್ಯ ಪಾರ್ಥಿವ ಸಂವತ್ಸರದ ಮಾರ್ಗಶಿರ ಶುದ್ಧ ೧೧ಯ ವರೆಗೆ ವರ್ಷ ೧೬ ದಿವಸ ೧೧ ಪರ್ಯಂತಂ ಸುಖದಿಂ ರಾಜ್ಯಪರಿಪಾಲನಂಗೈದರಾ ವಿವರಣಮಂ ಪದ್ಯರೂಪದಿಂ ಪೇಳ್ವೆನದೆಂತೆನೆ ([illegible])

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ॥ * ಸ್ವಾರಿಮಾರ್ಗ-ದೊಳೆ ತಾನಿ
ಕ್ಕೇರಿಯ ಪೊಳಲಿಂ ತೆರಳ್ದು ಪೊಕ್ಕಾರಗವಮಂ
* ವೀರಭದ್ರಾವನೀಶ್ವರ
ನಾ ರಾಜಿಪ ತೀರ್ಥರಾಜಪುರಮಂ ಸಾರ್ದಂ ೧೫

ಮೆರೆವಾ ಪುಣ್ಯಕ್ಷೇತ್ರದೊ
ಳುರೆ ಶೋಭಿಸುತಿರ್ಪ ದಿವ್ಯತುಂಗಾತಟದೊಳ್
ಪರಮಾನಂದದೆ ವಿಹರಿಸು
ತಿರುತಿರೆ ತನ್ನೃಪತಿಯಿತ್ತಮಿಕ್ಕೇರಿಯೊಳಂ ೧೬

ಭಾವಿಸಲಾ ಮೃತ್ಯುಂಜಯ
ದೇವುಗಳಂ (?) ಪರಮಕುಹಕಿ ಲಕ್ಷ್ಮೀಪತಿಯುಂ
ಸೇವಕನಿಕರಾಧಮ ಗ
ರ್ವಾವಿಷ್ಕೃತ ಠಾಣದಾರ ತಿಮ್ಮಣ[1]ನಿ[1]ನಿಬರ್ ೧೭

ನೆನೆದುರು ಕುಮಂತ್ರಮಂ ಕಾ
[2]ಪಿ[2]ನೊಳಿರುತಿಹ ರಾಮರಾಜಭೂಪನ ವರ ನಂ
ದನನೆಗೆಸೆವ ರಾಜಪಟ್ಟವ
ನನುನಯದಿಂ ಕಟ್ಟಿ ನಡೆಸಿಕೊಳುತಿರಲಿತ್ತಂ ೧೮

ಮ ವಿ॥ ಧರಣೀಶಾಗ್ರಣಿ ವೀರಭದ್ರನೃಪನಂದೀ ವಾರ್ತೆಯಂ ಕೇಳ್ದು ತಾಂ
ಭರದಿಂ ಕೌಲಿಯ ದುರ್ಗಕೈದಿ ಗಡಮಂ ಸ್ವಾಧೀನಮಂ ಮಾಡಿಕೊಂ
ಡಿರದಲ್ಲಿಂದೆ ತೆರಳ್ದನಂದಪುರಮಂ ಪೊಕ್ಕೊಪ್ಪುವಾ ಕೋಂಟೆಯ
ಲ್ಲಿರುತಿರ್ದಂ ನೃಪತಿತ್ವಮಿಂತುಭಯರೂಪಾಗಲ್ ಕ್ವಚಿತ್ಕಾಲದೊಳ್ ೧೯

ವ॥ ಇಂತು ದೊರೆತನಮೆರಡಾಗಿ ನಡೆ[3]ಯುತ್ತುಮಿ[3]ರಲ್ ತರುವಾಯ ತ್ರಿಮಾಸಂ ಸಲಲಿಕ್ಕೇರಿಯೊಳಾಳುತಿರ್ಪ ವೀರವೊಡೆಯರ್ ದೈವವಶದಿಂ ಶಿವಸಾಯುಜ್ಯಮಂ ಪಡೆಯಲೀ ವಾರ್ತೆಯಂ ಕೇಳ್ದು ವೀರಭದ್ರನಾಯಕನಾನಂದಪುರದಿಂದೆತ್ತಪ್ಪನಿತರೊಳಾ ವೀರಭದ್ರ ನಾಯಕರ ಮೈದುನ ಸದಾಶಿವನಾಯಕಂ ತನಗೆ ರಾಜಪಟ್ಟವಾಗಬೇಕೆಂಬಭಿಲಾಷೆಯಿಂ ಮುಂದುವರಿದು ವೀ[4]ರವೊ[4]ಡೆಯರ ಸಹೋದರ ಬಸವಲಿಂಗನಾಯಕನನಂಗವಿಕಲನಂ

1 ಠ (ಗ) 2 ಖ್ಯ (ಗ) 3 ಪುತ್ತಿ (ಗ) 4 ರೋ (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಡಿ ತಾಂ ಪಟ್ಟಕ್ಕೆ ಕುಳ್ಳಿರ್ದನಿತರೊಳ್ ವೀರಭದ್ರನಾಯಕಂ ಸೈನ್ಯಂವೆರಸತಿಶೀಘ್ರದಿಂದೊದಗಿಬರಲತ್ಯಂತ ಭಯೋದ್ರೇಕದಿಂ ಮೈದುನ ಸದಾಶಿವಯ್ಯಂ ನಿತ್ತರಿಸಲಮ್ಮದಲ್ಲಿಂ ಪಲಾಯನಂಬಡೆದು ಸೋದೆಯವರಂ ಸೇರ್ದಿರುತ್ತುಮಿರಲ್ ವೀರಭದ್ರನಾಯಕನಾ ಸದಾಶಿವನಾಯಕನಂ ಕಳುಪಲೆಂದು ಪೇಳಿಕಳುಪಲ್ ಸೋದೆಬಿಳಿಗಿಯವರೊಂದಾಗಿ ಸದಾಶಿವಯ್ಯನಂ ಕೊಡದಿರಲಾಗಳಾ ವೀರಭದ್ರನಾಯಕನತ್ಯಂತಕೋಪಾಟೋಪದಿಂ ಸೈನ್ಯಸಮೇತನಾಗಿ ತಾನೇ ತೆರಳಲ್ ಕ್ವಚಿತ್ಕಾಲದೊಳಾ ಸದಾಶಿವಯ್ಯಂ ವಿಧಿವಶದಿಂದಲ್ಲಿಯೆ ಶಿವಾಧೀನಮಾಗಲೊಡನಾ ವೀರಭದ್ರನಾಯಕಂ

ಕಂ॥ ಸೋದೆಬಿಳಿಗಿಯ ನೃಪಾಲರ
ಮೇದಿನಿಯಂ ಕೊಂಡು ತತ್ಪರಿಸ್ತರಣಗಳಂ
ಸ್ವಾಧೀನಂಗೈದು ಬಳಿ
ಕ್ಕಾ ದೊರೆಗಳನಾಜಿರಂಗದೊಳ್ ನೆರೆ ಮುರಿದಂ ೨೦

ವರ ವೀರಭದ್ರನೃಪ ಭಾ
ಸ್ಕರನತಿಶಯಶೌರ್ಯಪಾದನೊದೆದೊದೆದು ವಿಜಾ
ಪುರಕೆಬ್ಬಟ್ಟಿದುದು ಸುಧಾ
ಪುರ ಬಿಳಗಿಯ ದೊರೆಗಳೆಂಬ ತಿಮಿರೋತ್ಕರಮಂ ೨೧

ವ॥ ಇಂತಾ ವೀರಭದ್ರನಾಯಕಂ ಸೋದೆಬಿಳಿಗಿಯ ದೊರೆಗಳದಟಂ ಮುರಿದವರ ರಾಜ್ಯಪರಿಸ್ತರಣಂಗಳಂ ಕಟ್ಟಿಕೊಳಲನರ್ ವಿಜಾಪುರಕ್ಕೈದಿ ಪಾತುಶಾಹನಂ ಸಂಧಿಸಿ ವೀರಭದ್ರನಾಯಕನ ಮೇಲಣ ಕೊಂಡೆಯಂಗಳಂ ಪೇಳ್ದು ಕುಮಂತ್ರಮಂ ಬೋಧಿಸಿ ಕಿವಿಗೆಡಿಸಿ ದೂರುತ್ತುಮಿಂತೆಂದರ್

ಕಂ॥ ಅಳಿಯೆ ಸದಾಶಿವನಾಯಕ
ನಳವಂ ಮುರಿದೊಪ್ಪುವೆಮ್ಮ ಕೋಂಟೆಗಳಂ ಕೊಂ
ಡಿಳೆಯಂ ಕವರ್ದು ನಿಮ್ಮ
ಗ್ಗಳಮಂ ಲೆಕ್ಕಿಸದೆ ಮೀರಿ ನಡೆಯುತ್ತಿರ್ಪಂ ೨೨

ವ॥ ಇಂತು ಬಹುವಿಧ ಕುಬೋಧೆಗಳಂ ತುಂಬಿ ವಿಜಾಪುರಾಧಿರಾಜನ ಮನಮಂ ಸಂತಸಗೆಡಿಸಿ ಬಳಿಕ್ಕನನಂತಃಕರಣಕ್ಕೆ ಖತಿಯಂ ಪುಟ್ಟಿಸುತ್ತುಂ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ॥ ಮರಳ್ದಾ ಸದಾಶಿವಯ್ಯನ
ತರುಣಂಗಿಕ್ಕೇರಿಯಲ್ಲಿ ಪಟ್ಟವನನುವಿಂ
ದಿರದಾಗಿಸಿ ತಮ್ಮ ಪರಿ
ಸ್ತರಣಗಳಂ ಕೊಡಿಸಬೇಹುದೆಂದೀ ತೆರದಿಂ ೨೩

ಅಡಿವಿಡಿದು ಪಾತುಶಾಹನ
ನೊಡವಡಿಸಿ ಸಹಾಯಕುರು ತುರುಷ್ಕರ ಫೌಜಂ
ಒಡಗೊಂಡು ಬರ್ಪನಿತರೊಳ್
ಕಡುಗಲಿ ಭದ್ರೇಂದ್ರಸೂನುವರಿದೀ ಕಥೆಯಂ ೨೪

ವ॥ ಇಂತು ಸೋದೆಬಿಳಿಗಿಯವರ್ ಪಾತುಶಾಹನಂ ಕಿವಿಗೆಡಿಸಿ ಹೇರಳಮಾದ ತುರುಷ್ಕ ಸೈನ್ಯವನೊಡಗೊಂಡು ಬರಲುದ್ಯುಕ್ತರಾಗಿರ್ಪರೆಂಬ ವಾರ್ತೆಯಂ ವೀರಭದ್ರನಾಯಕಂ ಕೇಳ್ದು ರಾಯಸದ ಶಂಕರನಾರಣಯ್ಯನೆಂಬ ನಿಯೋಗಿಯಂ ವಿಜಾಪುರಕ್ಕೆ ಕಳು[1]ಹಿ[1] ಮುರಾರಿಪಂತನೆಂಬ ಮಂತ್ರಿಯ ಮುಖದಿಂ ಪಾತುಶಾಹಂಗೆ ತಮ್ಮ ಸಂಸ್ಥಾನದ ಸಕಲ ಪೂರ್ವೋತ್ತರವೃತ್ತಾಂತಂಗಳಂ ತಿಳುವಲ್ ಕೇಳ್ದು ಪರಮಪರಿತೋಷಂಬಟ್ಟು ಸೈನ್ಯಮಂ ತೆರಳುವ ಬುದ್ಧಿಯಂ ಮಾಣ್ದು ಸೋದೆಬಿಳಿಗಿಯವರ್ ಕುಹಕಿಗಳ್ ತಮ್ಮ [2]ಪ[2]ರಿಸ್ತರಣಂಗಳ್ ಪೋದ ಸಂಕಟಕ್ಕೋಸುಗಂ ದುರ್ಬೋಧೆಯಂ ಬೋಧಿಸು[3]ತ್ತಿ[3]ರ್ಪರಿಕ್ಕೇರಿಯ ದೊರೆತನಕ್ಕೆ ವೀರಭದ್ರನಾಯಕನೆ ಸಲ್ವನೆಂಬುದಂ ದೃಢಮಾಗಿ ನಿರ್ಧರಿಸಿ ರಾಯಸದ ಶಂಕರನಾರಣಯ್ಯಂಗೆ ಶರಜಾರಾಯನೆಂದು ಪೆಸರಿತ್ತುಚಿತಮಾದುಡುಗೊರೆವೀಳ್ಯಂಗಳನಿತ್ತು ತನ್ನೆಡೆಗೈದಿ ಬಹುಪ್ರಕಾರ ದೈನ್ಯೋಕ್ತಿಗಳಿಂ ಪೇಳಿಕೊಂಡರೆಂಬುದಕ್ಕೋಸುಗಂ ಸೋದೆಬಿಳಿಗಿಯವರ ರಾಜ್ಯಪರಿಸ್ತರಣಂಗಳನವರ್ಗೆ ಕೊಡಿಸುವುದೆಂದು ನಿಯಾಮಿಸಿ ವೀರಭದ್ರನಾಯಕನ ಪ್ರಾಮಾಣಿಕತ್ವಕ್ಕಂ ಭುಜಬಲಪ್ರತಾಪಾತಿಶಯಂಗಳ್ಗಂ ಮೆಚ್ಚಿ ಹಸುರುಸತ್ತಿಗೆ ನಿಶಾನಿ [4]ಮುಂತಾದ[4] ಬಿರುದುಗಳುಮಂ ಮತ್ತಮನೇಕಮಾದಂಗೋಚಿತಾಭರಣಾಂಬರಂ ಮೊದಲಾದುಡುಗೊರೆಗಳುಮನಿತ್ತು ಕಳುಪಲ್ ವೀರಭದ್ರನಾಯಕನತ್ಯಂತಸಂತೋಷದಿಂದಾ ಬಿರುದುಗಳನಂಗೀಕರಿಸಿ ಸೋದೆಬಿಳಿಗಿಯವರ ರಾಜ್ಯಪರಿಸ್ತರಣಂಗಳನವರ್ಗಿತ್ತು ಬಳಿಕಂ ಬಿಳಿಗಿಯ ಘಂಟೆವೊಡೆಯರ ಪುತ್ರಿ ಘಂಟೆಯಮ್ಮನಂ ಸದಾಶಿವಯ್ಯನವರ ಪುತ್ರನಾದಳಿಯ ಭದ್ರಯ್ಯಂಗತ್ಯಂತಸಂಭ್ರಮದಿಂ ವಿವಾಹಮಂ ರಚಿಯಿಸಿ ಸುಖದಿಂ ರಾಜ್ಯಂಗೆಯ್ಯುತ್ತಮಿರಲ್ಕೆ ಮತ್ತಮೊಂದವಸರದೊಳ್

---

[1] ಹಿಸಿ (ಗ) [2] ರಾಜ್ಯಪ (ಗ) [3] ತ್ತಿ (ಗ) [4] ಪಹಿಲೆಮಾಯಿ ಮರ್ತಬಿ ಮುಂತಾದ (ಕ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕ|| ಮೆರೆವ ತರೀಕೆರೆಯಾಣ್ಮಂ
ವರ ಬಾಣಾವರದ ದುಷ್ಟ ವೆಂಕಟಪತಿ ಪೇ
* ಳ್ದುರುಕುಮಂತ್ರಕ್ಕೆಯೊಡವ
ಟ್ಟಿರವೈದಿಸಿ ಪಾತುಶಾಹಸೈನ್ಯೋತ್ಕರಮಂ ೨೫

ರಣದುಲಖಾನನ ಮುಖದಿಂ
ದಣಿಯರಮಿಕ್ಕೇರಿಮುಖ್ಯರಾಜ್ಯವನೆಲ್ಲಂ
ಕ್ಷಣದೆ ಪುಡಿಗೈಸಿ ತನ್ನೃಪ
ಮಣಿ ಕೌಲಿಯ ದುರ್ಗಮಂ ದಲಂದುರೆ ಸಾರ್ದಂ ೨೬

ವ|| ಇಂ[1]ತು[1] ರಣದುಲ್ಲಾಖಾನನ ದಾಳಿಯಿಂ ಶಾಲಿವಾಹನ ಶಕವರ್ಷ ೧೫೬೦ನೆಯ ಈಶ್ವರ ಸಂವತ್ಸರದ ಪುಷ್ಯ ಬಹುಳ ದಶಮಿಯ ದಿನಸದೊಳಿಕ್ಕೇರಿಯ ಪತ್ತನಂ ವಿಸ್ಖಲಿತಮಾಗಲಲ್ಲಿ ನಿತ್ತರಿಸಲಮ್ಮದೆ ‡ವೀರಭದ್ರನಾಯಕಂ ಸ್ವಕುಟುಂಬವೆರಸು‡ ಭುವನಗಿರಿಯ ದುರ್ಗವನ್ನೈದಿ ಪೋಗಲೊಡನಾ ರಣದುಲ್ಲಾಖಾನಂ ಕೆಂಗೆಯ ಹನುಮ ನಾಯಕನ ಸೈನ್ಯಂ[2]ವೆರಸು ತಾನ್ನೈತಂದು ಭುವನ[2]ಗಿರಿಯ ದುರ್ಗಮಂ ವೇಢೈಸಲ್ ದೈವವಶದಿಂದಪಾಯದೊಳ್ ಬಂದ ಬವರದೊಳ್ ಧೈರ್ಯಂಗುಂದದೆಂತಾದೊಡಂ ನಿತ್ತರಿಸಿನಿಂದು ತಾನುಳಿದು ಮುಂದೆ ಕಾಲಸಾಧನೆಯಂ ಮಾಡಿ ಶತ್ರುವಂ ಮುರಿದು ಮಹಾ ಕಾರ್ಯಮಂ ಸಾಧಿಸಬೇಕೆಂಬ ರಾಜ್ಯನೀತಿಯಂ ನಿಶ್ಚಯಿಸಿಯುಚಿತರಪ್ಪ ನಿಯೋಗಿಗಳ ಮುಖದಿಂದಾ ರಣದುಲ್ಲಾಖಾನನಂ ತಿಳುಹಿ ಸಂಧಾನವನೊಡರ್ಚಿಸಿ

ಕಂ|| ಆ ನರನಾಥಂ ರಣದುಲ
ಖಾನನ ಪಿಂದೆಗೆಸಿ ವೇಣುಪುರದೊಳ್ ನಿಂದೀ
ಶಾನಪದಕಮಲಮಧುಕರ
ನಾನಂದದೊಳಖಿಲರಾಜ್ಯಮಂ ಪಾಲಿಸಿದಂ ೨೭

ವ|| ಇಂತಾ ವೀರಭದ್ರನಾಯಕಂ ‡ರಾಜನೀತಿಮಾರ್ಗಮಿಡಿದು ಸಂಧಾನ ಮುಖದಿಂ ರಣದುಲ್ಲಾಖಾನನಂ ಮುತ್ತಿಗೆಡೆಗೆಸಿ ಕಳುಹಿ ರಾಜ್ಯರಾಷ್ಟ್ರವನುಳುಹಿಕೊ[3]ಂಡು[3] ಶಾಲಿವಾಹನ‡ ಶಕವರ್ಷ ೧೫೬೧ನೆಯ ಬಹುಧಾನ್ಯ ಸಂವತ್ಸರದ ಮಾರ್ಗಶಿರ ಮಾಸದಲ್ಲಿ ಬಿದುರೂರ ಕೋಂಟೆಯ[4]ರಮನೆಯೊಳ್[4] ನೆಲೆಯಾಗಿ ನಿಂದು ತರಿಕೆರೆಯುವರೊಡರ್ಚಿ[5]ದ[5]

---

[1] ತರಲಾ (ಗ) [2] ಕೂಡಿ ಆ (ಮ) [3] ಡುವೀರಭದ್ರನಾಯಕಂ (ಗ) [4] ಯೊಳ್ (ಮ) [5] ದು(ಗ)

‡ ಈ ಭಾಗಗಳು (ಮ) ದಲ್ಲಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪಕಾರಮಂ ಮನದೆಗೊಂಡು ರಾಮಕೃಷ್ಣಪ್ಪನೆಂಬ ನಿಯೋಗಿಯಂ ವಿಜಾಪುರಕ್ಕೆ ಕಳುಪಿ ಪಾತುಶಾಹನಂ ಪ್ರಸನ್ನೀಕರಿಸಿಕೊಂ[1]ಡು ಪಿಂತೈದಿದ ರಣದುಲಾಖಾನನ ಸಂಗಡಮ ಪರಿಮಿತ ತುರುಷ್ಕಸೈನ್ಯಮುಂ ತೆರಳ್ಚಿಸಿ ತಂದಾ ವೀರಭದ್ರನಾಯಕಂ ಹರಿಹರಪೆಡೆಯೊಳ್ ಆ ರಣದುಲಾಖಾನನಂ ಸಂಧಿಸಿ ಶಿವಪ್ಪನಾಯಕಂ ರಾಮಕೃಷ್ಣಪ್ಪಯ್ಯ[2]ನಿವರೊ[2]ಡನ ಸಂಖ್ಯಾತಸೈನ್ಯಮಂ ಕೂಡಿಸಿ ರಣದುಲಾಖಾನನ ಸಂಗಡಂ ಪ್ರಯಾಣಮನೊಡರ್ಚಿಸಿ ಕಳುಹಿ ದಾಳಿವರಿಸಿ ತರಿಕೆರೆಯವನ ರಾಜ್ಯರಾಷ್ಟ್ರಮಂ ನಿಪಾತಂಗೈಸಿ ಬಳಿಕಾನೆವಳ್ಳಿಯೆಂದು ಪೂರ್ವನಾಮಾಂಕಿತವಾದ ಬಸವಾಪಟ್ಟಣದ ಕೋಂಟೆಗೆ ಮುತ್ತಿಗೆಯಿಕ್ಕಿಸಿಯಾ ಕೋಂಟೆಯಂ ಕೊಂಡು ಯುದ್ಧಮುಖದೊಳ್ ಕೆಂಗೆಯ ಹನುಮಪ್ಪನಾಯಕನ ಸಹೋದರರಂ ಕೈಸೆರೆವಿಡಿಸಿ ಪಾತುಶಾಹನೆಡೆಗೆ ಕಳುಪಿ ಬಳಿಕಮಾ ರಣದುಲಾಖಾನನೊಡನೆ ಶಿವಪ್ಪನಾಯಕ[1] ರಾಮಕೃಷ್ಣಯ್ಯರಂ ಸೈನ್ಯಸಮೇತಮಾಗಿ ಮಾಯಾವಾದಿಗಳ ರಾಷ್ಟ್ರಮುಖಕ್ಕೆ ತೆರಳ್ಚಿ [3]ಕಳುಹಿ[3] ಪಾತುಶಾಹಂಗಾಮುಖದೊಳಪ್ಪ ಕಜ್ಜಂಗಳನೆಲ್ಲಮನಿವರ್ಗಳ ಮುಖದಿಂ ನಿರ್ವಾ[4]ಹಂ[4]ಗೈಸಿ [5]ತ[5]ತ್ಪಾತುಶಾಹಂ ಕಳುಪಿದನೇಕಮಾದುಚಿತವುಡುಗೊರೆಗಳಂ ಪರಿಗ್ರಹಿಸಿ ಬಹಳ ಸನ್ಮಾನಂಬೆತ್ತು [6]ಪರಮಪ್ರಖ್ಯಾತಿಯಂ ಪಡೆದು ವಿರಾ[6]ಜಿಸುತಿರ್ದನಂ[7]ತು ಮಲ್ಲದೆಯುಂ[7]

ಕಂ॥ ಮೇದಿನಿಗತಿಬಲನೆನಿಸುವ
ಸೋದೆಯ ರಘುನಾಥರಾಜನಂ ಕೆಂಗೆರೆಯೊಳ್
*ಕಾದಿ ಪಿಂದೆಗೆಸಿ ಪೊಗಲಾ
ಮೋದದೆ ಸಂಧಿಯೊಳೆ ಮೈತ್ರಿಯಿಂ ಮನ್ನಿಸಿದಂ ೨೮

ಅಡಿಗಡಿಗಲೆವ ತುರುಷ್ಕರ
ಪಡೆಯಂ ಮುಗ್ಗಿಸುತೆ ಮಲೆತ ತೌಳವ ನೃಪರಂ
*ಜಡಿದು ಮಾರ್ಮಲೆತ ಕಾರ್ಕಳ
ದೊಡೆಯನ ನಿಗ್ರಹಿಸಿ ವಿತ್ತಮಂ ನೆರೆಕೊಂಡಂ ೨೯

ವ॥ ಮತ್ತಮಾ ವೀರಭದ್ರನಾಯಕಂ ತಮ್ಮ ಚಿಕ್ಕಪ್ಪನಾದ ವೆಂಕಟಪ್ಪನಾಯಕರ್ಗೆ ಬೊಕ್ಕಸದಧಿಕಾರವನಿತ್ತು ಶಿವಪ್ಪನಾಯಕರುಮಂ ಪ್ರೀತಿಯಿಂ ನಡೆಸಿಕೊಳುತ್ತುಮಿರಲ್ ಸೇನೆದಿವಾನ ಪುಟ್ಟಣ್ಣಂ ಮುಂತಾದ ಕುಹಕಿಜನರ್ ಕುಮಂತ್ರಮಂ ನೆನೆಯಲೆಚ್ಚತ್ತು

---

1 ಡು (ಮ) 2 ನೊ (ಗ) 3 ಸಿ ಕಳುಹಿ ಓ (ಗ) 4 ಕಂ (ಗ) 5 ಕಳುಹಿ ತ (ಗ)
6 ರಾ (ಮ) 7 ತರಂ (ಮ)

Sri Vidyabharathi Book Centre, Sringeri

CC-O. In Public Domain. Digitized by eGangotri

ಶಿವಪ್ಪನಾಯಕಂ ಶೀಘ್ರದಿಂ ಸಾಗರಕ್ಕೈದಲ್ ಸೇನೆದಿವಾನ ಪುಟ್ಟಣ್ಣಂ ಪಟ್ಟಗುಪ್ಪೆಯೈದಿ ನಿಂದಿಕ್ಕೇರಿಯೊಳಿರ್ಪ ಪಾತುಶಾಹನ ವಕೀಲನಾಗಿರುತಿರ್ದ ಜನ್ನೋಪಂತಂಗೆ ಪರಿಧಾನ [1]ಮನಿತ್ತು[1] ಒಳಗುಮಾಡಿಕೊಂಡು ಶಿವಪ್ಪನಾಯಕನಂ ಕೈವಶಮಂ ಮಾಡಿಕೊಳಬೇಕೆಂದು ಬಹುವಿಧ ಪ್ರಯತ್ನದಿಂ ಹುಡುಕುವನಿತರೊಳ್ ಆ ಸಾಗರದ ಮಹಾನಾಡು ಬಾದಾವಿ ಲಿಂಗಪ್ಪ ರುದ್ರಪ್ಪ ಸಹಿತಂ ಸುಂಕದ [2]ಸೇನಬೋವ[2] ಕೋನಪ್ಪನ ಮನೆಯೊಳ್ ನೆಲ ಮಾಳಿಗೆಯೊಳಡಂಗಿಸಿ ಪೇಟೆಯೊಳಿಲ್ಲವೆಂಬುದಂ ಮಾಡಿ ಕೆಳುಪಲೊಡನಿಂತು ಮರೆಯಾಗಿರು ತ್ತಿರಲ್ ಕತಿಪಯದಿನಂಗಳ್ ಪೋಗಲೊಡನೆ ಸಮಿಪಾಪವರ್ತಿಗಳಾದ ಸೇನೆದಿವಾನ ಪುಟ್ಟಣ್ಣಂ ಮುಂತಾದ ಕುಹಕಿಗಳ್ ಮತ್ತಂ ಸದಾಶಿವನಾಯಕನಂ ಪಿಡಿದು ನಿಗ್ರಹಿಸಬೇಕೆಂದು ದುರಾ ಲೋಚನೆಯನೆಸಗುತ್ತಿರಲ್ ವೀರಭದ್ರನಾಯಕಂ ತಿಳಿ[3]ದಂ[3]ತಪ್ಪುದುಚಿತಮಲ್ತೆಂದು ಬಗೆದು

ಕಂ॥ ಬರಿಸಿ ಶಿವಭೂಮಿಪತಿಯಂ
ವರ ಚಂದಾವರದ ಸೀಮೆಕೋಂಟೆಯ ಮುಖದಾ
ಹೊರಪಾಳ್ಯದಾಧಿಪತ್ಯವ
ನುರುಕರುಣದೊಳಿತ್ತು ನೃಪವರಂ ಬೀಳ್ಕೊಟ್ಟಂ ೩೦

ವ॥ ಇಂತಾ ವೀರಭದ್ರನಾಯಕಂ ಚಿಕ್ಕಪ್ಪ ಶಿವಪ್ಪನಾಯಕಂಗೆ ಚಂದಾವರದ ಸೀಮೆಕೋಂಟೆಗಳ ಹೊರಪಾಳ್ಯದಧಿಕಾರವನಿತ್ತು ಕಳುಹಿ ಸುಖದಿಂ ರಾಜ್ಯಂಗೈಯುತ್ತು ಮಿರಲ್ ತಮ್ಮ ಪತ್ನಿಯಾದ ವೀರಮ್ಮಾಜಿಯವರ್ ಶಿವಸಾಯುಜ್ಯಮನೈದಲೊಡನತ್ಯಂತ ವೈರಾಗ್ಯಪರನಾಗುತುಂ ತಮ್ಮ ಕನಿಷ್ಠ ಪತ್ನಿಯಾದ ಕೊಲ್ಲೂರಮ್ಮಾಜಿಯವರ್ವೆರಸು

ಕಂ॥ *ವೀರಭದ್ರಾವನೀಶಂ
ಚಾರು ಹೊಸಂಗಡಿಯೊಳಿರ್ದನಂತರಮಾ ಕೊ
ಲ್ಲೂರಂ ಪೊರ್ದಿ ಬಳಿಕ್ಕಾ
ಭೂರಿಯಶಂ ಕಂಡಲೂರನಂದುರೆ ಸಾರ್ದಂ ೩೧

ವ॥ ಇಂತಾ ವೀರಭದ್ರನಾಯಕಂ ಕಂಡಲೂರಂ ಸಾರ್ದಾ ಕೋಂಟೆಯೊಳ್ ವರ್ತಿ ಸುತ್ತುಮಿರಲಾ ಕಾಲದೊಳ್

ಕಂ॥ ಬಿದುರೂರೊಳ್ ಸಂಸ್ಥಾನದ
ಬದುಕಿಂಗರುಹರುಮನೊರ್ವರಂ ಕಾಣದೆಯು
ಲ್ಲಿದ ಪಳಬರೊಳಂ ಮಿಗೆ ಬ
ಲ್ಲಿದನೆನಿಸುವ ಬಾಲರಾವುತನ ಪರುವಪನುಂ ೩೨

---

[1] ಮಂ ಮುನಿತು (ಗ) [2] [illegible] (ಗ) [3] [illegible] (ಗ)

Sri Vidyabharathi Book Centre , Sringeri

CC-O. In Public Domain. Digitized by eGangotri

ಕಂ॥ ಆ ಸಿದ್ಧಪನುಂ ವಸುಧಾ
ಧೀಶಂಗಿರದರಿಕೆಗೈಸೆ ಚಂದಾವರದಿಂ
ಭಾಸುರ ಬಿದರೂರ್ಗೈತಂ
ದೋಸರಿಸದೆ ಸಬ್ಬಬರ್ದುಕನಾಗಿಪುದೆನುತುಂ ೩೩

ಚಂ ಮಾ॥ ಬರಿಸೆ[1] ಶಿವಪ್ಪನಾಯಕರಿಗಟ್ಟಿ ನಿರೂಪವನಾಕ್ಷಣಾರ್ಥದೊಳ್
ತ್ವರಿತಮೊಳಾ ಶಿವೇಂದ್ರನುರು ವೇಣುಪುರಕ್ಕಣಪ್ಪೈದಿ ಸೋದರಂ
ವೆರಸು ಬರ್ದುಂಕನೊಲ್ದು ನಡೆಸುತ್ತಿರೆ ಸೇನೆದಿವಾನ ಪುಟ್ಟಣಂ
ಪರಿಕಿಸಿ ರಾಮಕೃಷ್ಣಪನುಮುನ್ಮದ ಕಾಶಿಯ ವೀರಯಾಖ್ಯನುಂ ೩೪

ಕಂ॥ ನೆರೆದಿನಿಬರ್ ಕುಹಕಿಗಳಂ
ದುರೆ ಬಲ್ಲಿದ ಬಾಲರಾವುತನ ಪರುವಪನಂ
ವರಸಿದ್ಧಪನಂ ಬೋಧಿಸು
ತಿರದನರುನುನೊಳಗುಮಾಡಿಕೊಂಡು ಬಳಿಕ್ಕಂ ೩೫

ಬಿಡದೆ ನೃಪಕಾರ್ಯಗಳುಮಂ
ನಡೆಯಿಸುವ ಶಿವೇಂದ್ರ ವೆಂಕಟಪನಾಯಕರಂ
ಪಿಡಿದು ನಿಗ್ರಹಿಸಬೇಕೆಂ
ಜೆಡೆವಿಡದುರೆ ತೋಹನಿಕ್ಕಿ ಸಾಧಿಸುತಿರ್ದರ್ ೩೬

ವ॥ ಇಂತು ಸಮಯಸಾಧನಂಗೈದೊಡಂ ಕೈಯೊಳಗಾಗದಿರಲೊಂದುದಿನವೆಂದಿನಂತೆ ಚಿಕ್ಕರಮನೆಯಿಂ ರಾಜಾಲಯಕ್ಕೈದಿದ ಶಿವಪ್ಪನಾಯಕ ವೆಂಕಟಪ್ಪನಾಯಕರಂ ಕಡಿತದ ಚಾವಡಿಯೊಳ್ ಕುಳ್ಳಿರಿಸಿ ಪೊರಗೈದದಂತೆ ಪರಿಸ್ತರಣಕವಾಟಂಗಳಂ[2] ಬದ್ಧಂಗೈಸಲಾ ಶಿವಪ್ಪನಾಯಕಂ ಸಹೋದರ ವೆಂಕಟಪ್ಪನಾಯಕಂವೆರಸು ಮಹಾಧ್ಯೈರ್ಯಪರನಾಗುತ್ತುಮಾ ಕಡಿತದ ಚಾವಡಿಯೊಳಚ್ಚರಿನೊಳಿರ್ದಾರಾತ್ರಿಯಂ ಕಳೆದರುಣೋದಯಮಾಗಲೊಡನೆ ತಮ್ಮ ಸಮೀಪದೊಳಿರ್ದ ಹೊನ್ನೆನಾಯಕನ ವೆಂಕಟಯ್ಯ ಮುಂತಾದ ಮುಂದಿಮಕ್ಕಳಂ ಕೂಡಿಕೊಂಡತ್ಯಂತಶೌರ್ಯದಿಂ ತಡೆದವರ್ಕಳ ಶಿರಶ್ಛೇದಸಂಗೆಯ್ಯುತ್ತೈದಿ ಕೋಂಟೆಯ ಬಾಗಿಲಂ ತೆಗಿಸಿಕೊಳುತ್ತುಂ ಪೊರಟು ದುರಾಲೋಚನೆಗೊಳಗಾದ ಪರುವಪ ಸಿದ್ಧಪಂ ಮುಂತಾದ ಕುಹಕಿಗಳಂ ಪಿಡಿದು ನಿಗ್ರಹಂಗೈದಾವುದರಲ್ಲಿಯುಮತಿಸಾವಧಾನಚಿತನಾಗಿಂತುವರ್ತಿಸುತ್ತುಮಿರಲ್ ವೀರಭದ್ರನಾಯಕನಾ ಶಿವಪ್ಪನಾಯಕನ ಮುಖದೊಳಖಿಲಕಾರ್ಯಂಗಳಂ ನಡೆಸುತ್ತುಂ ಕೆಂಡಲೂರೊಳ್ ನಿಶ್ಚಿಂತನಾಗಿರಲಾ ಪ್ರಸ್ತಾವದೊಳ್

1 ರಸಿ (ಗ) 2 ಟಮಂ (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ಚಂ ಮಾ॥ ಮಿಸುಪ ವಿಜಾಪುರಾಧಿಪತಿಯುಪ್ಪತಿಸಾಹಸಿ ಪಾತುಶಾಹನಂ
ದೆಸವ ವಜೀರರಂ ನೆರಹಿ ದಕ್ಷಿಣದತ್ತಣ ನಾಡನೈದೆ ಸಾ
ಧಿಸಿ ಮಲೆವಾಕೆವಾಳರೆನಿಸಿರ್ಪಿಳೆಯಾಣ್ಮರ ದರ್ಪಮಂ ನಿವಾ
ರಿಸಿಬಹುದೆಂದುಸಿರ್ದು ನಿಜಪುತ್ರನನೈದೆ ತೆರಳ್ಚಿ ಖ್ಯಾತಿಯಿಂ ೩೭

ಕಂ॥ ರುಸ್ತುಂಜಮಾನನೊಡನುರು
ಹಸ್ತ್ಯಶ್ವಪದಾತಿಸಹಿತಮಂಬರಖಾನಂ
ಶಸ್ತ್ರಮುಹಮುದ್ದಖಾನಂ
ವಿಸ್ತರತನು ಕೂಬಖಾನನಂ ಕುಶಖಾನಂ ೩೮

ಮತ್ತಂ ಶಾ[1]ಜೀ[1]ಖಾನಂ
ಪತ್ತೇಖಾನಂ ಪರಾತಖಾನ[2]ನೆ[2]ನಿಪ್ಪ
ನ್ಮತ್ತರಹ ಖಾನಖಾನರ್
ಪತ್ತಿಚಯಂವೆರಸು ತೆರಳ್ದು ಕದನೋತ್ಸಹದಿಂ ೩೯

ವ॥ ಇಂತು ಪಾತುಶಾಹಂ ತಾನಾತ್ಮಪುತ್ರನೆನಿಪ ರುಸ್ತುಂಜಮಾನನೊಡನ ಪರಿಮಿತಸೈನ್ಯ ವಜೀರರ್ಕಳಂ ಕೂಡಿಸಿ ತೆರಳ್ಚಲವರ್ ದಾಳಿವರಿಯುತ್ತೈದಿ ಸಿವೊಗ್ಗೆಯ ಕೋಂಟೆಯಂ ವೇಢೈಸಲ್ ವೀರಭದ್ರನಾಯಕನಪರಿಮಿತಸೇನಾಸಮೂಹಮಂ ಕೂಡಿಸಿ ಶಿವಪ್ಪನಾಯಕನಂ ತೆರಳ್ಚಲಾತಂ ತನ್ನನುಜ ವೆಂಕಟಪ್ಪನಾಯ[3]ಕಂ[3]ವೆರಸತ್ಯಂತಾಟೋಪದಿಂ ತೆರಳ್ದೈತಂದು ಯವನ ಸಮೂಹಕ್ಕಿದಿ[4]ರ್ಚಿ[4] ನಿಂದು ಕೈಗೈ[5]ದು[5] ಯುದ್ಧರಂಗದೊಳ್ ಅಂಬರಖಾನನ ಡೊಂಬಿಯಂ ನಿಲಿಸಿ ಮಹ[6]ಮುದ್ದಖಾನನ[6] ಬಹುಮದಮಂ ಕೆಡಿಸಿ ಕೂಬಖಾನನಂ ಕ್ಷೋಭೆನಡಿಸಿ ಅಂಕುಶಖಾನನ ಬಿಂಕಮಂ ಕಳಲ್ಚಿಸಿ ಶಾಜೀಖಾನನ ಫೌಜಂ ಮುರಿದು ಪತ್ತೇಖಾನನ ಕತ್ತಿಯಂ ನಿಲಿಸಿ ಪರಾತಖಾನನಂ ಪರಿಭವಂಗೈದಿಂತು ತುರುಷ್ಕಸೈನ್ಯಮಂ ಸದೆದೋಡಿಸಿ ಕೋಂಟೆಗಳ ಮುತ್ತಿಗೆದೆಗೆಸಿ ರುಸ್ತುಂಜಮಾನನಂ ಪಿಂದೆಗೆಸಲ್ ಪಾತುಶಾಹಂ ಕೇಳ್ದು ಕೆರಳ್ದು ಬಂಕಾಪುರಕ್ಕೈದಿ ನಿಂ[7]ದು[7] ಮುಸ್ತಾಪಖಾನನ ಕೂಡಪರಿಮಿತಸೈನ್ಯಮಂ ಕೂಡಿಸಿ ತೆರಳ್ಚಲವಂ ಪಡೆವೆರಸೆತ್ತಂದು ಕೆಳವೂರ ಬಯಲ್ಗೈತಂದು ನಿಲಲ್ ಬಳಿಕಂ ನಿಯೋಗಿ ಶರಜಾರಾಯನಂ ಪ್ರಯಾಣವನೊಡರ್ಚಿಸಿ ಕಳುಹಿ ಶಿವಪ್ಪನಾಯಕನ ಮುಖದಿಂ ಸಮರಸಂಧಾನವನೊಡರ್ಚಿಸಿ ಪಾತುಶಾಹನಂ ಪಿಂದೆಗೆಸಿ ರಾಜ್ಯಂಗೆಯ್ಯುತ್ತಮಿರಲಾಪ್ರಸ್ತಾವದೊಳ್

---

[1] ಜಿಯ (ಗ) [2] ರೆ (ಗ) [3] ಕರ್ (ಗ) [4] ರ್ಚಿ ನಿಂದು ಮಹಾಯುದ್ಧಮ ರಚಿಸಿ ಸೀಮೊಗೆಯ ಕೋಂಟೆಯಂ ಮುತ್ತಿಗೆ ದೆಗೆಸಿ ಮತ್ತೆ ಮುಡುಗುಣಿ ಗುತಿಜಡೆಯ ಮಹದೇವಪುರ ಹೊಸಹೊನ್ನೂರ ಪರಿಸ್ತರಣಂಗಳನಾಕ್ರಮಿಸಿದ ತುರುಷ್ಕರ ಸೈನ್ಯಕಿದಿರ್ಚಿ (ಗ) [5] ದಾ (ಗ) [6] ಮುದ್ದಾಖಾನನು (ಪ) [7] ದು ಮತ್ತಂ (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ|| ವರವೀರಭದ್ರಧರಣೀ
ಶ್ವರನಂ ಬಿದುರೂರ್ಗೆ ಬರಿಸಬೇಕೆಂದೆನುತುಂ
ಧುರಧೀರ ಶಿವನರೇಂದ್ರಂ
ತ್ವರಿತದೊಳಂ ಘಟ್ಟವಿಳಿದು ಗುಳವಾಡಿಯೊಳಂ ೪೦

ನಿಂದಿರೆ ಕಾಶಿಯ ಭದ್ರಪ
ನಂದುರೆ ಸೇನಾದಿವಾನ ಪುಟ್ಟಣ ಮುಖ್ಯರ್
ಮಂದಿಕುದುರೆಗಳ ಕೂಡಿಸಿ
ನಿಂದೊಡ್ಡಂಬಲಿಸಿ ದೂಪಗಟ್ಟೆಯ ಬಳಿಯೊಳ್ ೪೧

ಯುದ್ಧವನೊಡರ್ಚಲಲ್ಲಿಯೆ
ಬಿದ್ದಳಿಯಲ್ಕಳಿಯಭದ್ರಪಂ ಕರ್ತರ್ ಕೇ
ಳ್ದುದ್ವೃತ್ತರ ದುರ್ಮಂತ್ರದ
ಗದ್ದಲನುಂ ನಿಲಿಸಿ ತಾವೆ ತೆರಳ್ದೈತರುತುಂ ೪೨

ಗುಳವಾಡಿಗೈದಿಯಂತಃ
ಕಲಹವನುರೆ ಬಿಡಿಸಿ ಶಿವನರೇಂದ್ರನ ಮನನುಂ
*ತಿಳುಹಿ ತಕ್ಕೈಸಿಯಲ್ಲಿಂ
ಘಳಿಲನೆ ತಾಂ ತೆರಳ್ದು ಕಂಡಲೂರಂ ಪೊಕ್ಕಂ ೪೩

ವ|| ಇಂತು ವೀರಭದ್ರನಾಯಕರ್ ಗುಳವಾಡಿಯಿಂ ತೆರಳ್ದು ಕಂಡಲೂರಂ ಪೊಗಲನಂತರಂ

ಕಂ|| ಮರುದಿವಸನನುಜಸಹಿತಂ
ಭರದಿಂದಲ್ಲಿಂ ತೆರಳ್ದು ಶಿವಭೂಪಾಲಂ
ವರಕಂಡಲೂರನುರೆ ಪೊ
ಕ್ಕರಸಿನ ಸಂದರ್ಶನವನಣಂ ವಿರಚಿಸಿದಂ ೪೪

ವ|| ಇಂತಾ ಶಿವಪ್ಪನಾಯಕಂ ಸಹೋದರ ವೆಂಕಟಪ್ಪನಾಯಕಂವೆರಸು ಗುಳವಾಡಿಯ ಪಾಳ್ಯದಿಂ ತೆರಳ್ದು ಕಂಡಲೂರಂ ಪೊಕ್ಕು ಕರ್ತರ ಸಂದರ್ಶನಂಗೈದು ನೀಂ ಮುನ್ನಿನಂತೆ ವೇಣುಪುರಕ್ಕೆ ಬಿಜಯಂಗೈದು ಸಂಸ್ಥಾನದ ಸಕಲ ಕಾರ್ಯಂಗ[1]ಳಂ[1] ವಹಿಸಿ

1 ಳನೆಲ್ಲಂ (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ನಡೆಸಲ್ವೇಳ್ಕೆಂದು ಪಲಬಗೆಯೊಳೊಡಪಡಿಸಿ ಕರೆಯಲಾವಿಲ್ಲಿಯೆ ನಿಂದಿ[1]ರ್ದು[1]ದಾವ ಸಂಸ್ಥಾ[2]ನ[2]ಕಾರ್ಯಂಗಳನೆಲ್ಲಮಂ ನಿನ್ನ ಮುಖದಲ್ಲಿಯೆ ನಡೆಸುವುದೆಮಗೆ ಭೂಷಣಮಾಗಿರ್ಪು ದೆಂದು ನೀತಿಶಾಸ್ತ್ರಂಗಳಂ ಪೇಳ್ದೊಡಂಬಡಿಸಿಯಾ ಶಿವಪ್ಪನಾಯಕರಂ ವೆಂಕಟಪ್ಪನಾಯಕರಂ ವೇಣುಪುರಕ್ಕೆ ಬೀಳ್ಕೊಟ್ಟು [3]ತಾಂ[3] ನಿಶ್ಚಿಂತೆಯಿಂ ಶಿವಾರ್ಚನಾದಿ ಸತ್ಕೃತ್ಯ ನಿತ್ಯ ನಿಯಮಂಗಳಂ ಲೋಪಮಾಗದಂತಾಚರಿಸಿ ನಡೆಸುತ್ತುಂ

ಕಂ॥ ಇಂತಾ ಭದ್ರಪಭೂಮಿಾ
ಕಾಂತನ ಸುತನೆನಿಪ ವೀರಭದ್ರನುಹೀಶಂ
ಕಂತುನಿಭರೂಪನತಿಬಲ
ವಂತಂ ಸದ್ಧರ್ಮದಿಂದಮಿಳೆಯಂ ಪೊರೆದಂ ೪೨

ವ॥ ಇಂತು ವೀರಭದ್ರನಾಯಕಂ ತನಗೆ ಪಟ್ಟಮಾ[4]ದ ಶಾಲಿವಾಹನ ಶಕ ವರ್ಷ ೧೫೫೨ನೆಯ ಶುಕ್ಲ ನಾಮ[4]ಸಂವತ್ಸರದ ಮಾರ್ಗಶಿರ ಶುದ್ಧ [5]೧೧[5]ಯವರೆಗೆ ವರ್ಷ ೧೬ ದಿವಸ [6]೧೨[6]ರ ಪರ್ಯಂತಂ ಸುಖದಿಂ ರಾಜ್ಯಂಗೈದಂ*

ಷಷ್ಠಾಶ್ವಾಸಂ ಸಂಪೂರ್ಣಂ

---

[1] ರ್ದೆನುಂ (ಕ) [2] ನದ (ಕ) [3] ತಾವು (ಗ) [4] ದಾರಭ್ಯ ಪಾರ್ಥಿವ (ಮ)
[5] ೧ ದಾರಭ್ಯ ಪಾರ್ಥಿವ ಸಂವತ್ಸರದ ಮಾರ್ಗಶಿರ ಶುದ್ಧ ೧೧ (ಗ) [6] ೧೧ (ಗ)

* ಈ ವೀರಭದ್ರನಾಯಕರ ಕಾಲದಲ್ಲು ಬದುಕುಗಳ ಮಾಡಿದವರು:— ಶಿವಪ್ಪ ನಾಯಕರು ಆವರ ತಮ್ಮ ವೆಂಕಟಪನಾಯಕರು ಪ್ರಧಾನಿ ಹಾರೋ ವೆಂಕಟಯ್ಯ ರಾಮ ಕೃಷ್ಣಯ್ಯ ಕರಣಿಕ ಬಿಳಿಗಿ ಕೋನಪ್ಪಯ್ಯ ಕೋಟಾಲದ ಕೋನಪ್ಪಯ್ಯ ರಾಯಸದ ವೆಂಕಟಪ್ಪಯ್ಯ ನಾರಣಪ್ಪಯ್ಯ ಹೂವಯ್ಯ ಶರಜಾ ವೆಂಕಟಪ್ಪಯ್ಯ ನಿಯೋಗಿ ರಾಮ ಚಂದ್ರಯ್ಯ ಶರಜಾರಾಯ ಅಂಡಿಗೆ ರೇವಣ್ಣವೊಡೇರು ದಳವಾಯಿ ಚಿಕ್ಕಲಿಂಗಣ್ಣ ಶಾಂತಪ್ಪನಾಯಕ ಗಿಡಿ ಲಿಂಗಯ್ಯ ಬಾಲಯಾವುತನ ಪರುವಪ್ಪ ಹೊನ್ನೆನಾಯಕನ ವೆಂಕಟಯ್ಯ ಸೇನೆದಿವಾಣ ಪುಟ್ಟಣ್ಣಂ ಮುಂತಾದವರು.

ಈ ವೀರಭದ್ರನಾಯಕರು ಕಂಡುಲೂರಲ್ಲೂ ಐಕ್ಯವಾದಲ್ಲಿ ಇವರ ಪತ್ನಿ ಕೊಲ್ಲೂರಮ್ಮಾಜಿ ಯವರಿಗೆ ಇವರ ಸಂಗಡಲೇ ಸಹಗಮನವಾಯಿತು (ಮ)

Sri Vidyabharathi Book Centre, Sringeri

CC-O. In Public Domain. Digitized by eGangotri

[1]ಸಪ್ತಮಾ[1]ಶ್ವಾಸಂ

ವ|| ಆ ವೀರಭದ್ರನಾಯಕರ ತರುವಾ[2]ಯ[2] ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷ ೧೫೬೭ನೆಯ ಪಾರ್ಥಿವ ಸಂವತ್ಸರದ ಮಾರ್ಗಶಿರ ಶುದ್ಧ ೧೨ಯಲ್ಲಿ ಚಿಕ್ಕಸಂಕಣನಾಯಕರ ಮಗ ಸಿದ್ದಪ್ಪನಾಯಕರ ಜ್ಯೇಷ್ಠಕುಮಾರರಾದ ಶಿವಪ್ಪನಾಯಕರ್ಗೆ ವೇಣುಪುರದ ಅರಮನೆಯಲ್ಲಿ ರಾಜಪ[3]ಟ್ಟಂ[3]

ಉ ಮಾ|| ಇಂತು ನೆಗಳ್ತೆವೆತ್ತ ಸಮುದಗ್ರಪರಾಕ್ರಮಿ ವೀರಭದ್ರಭೂ
ಕಾಂತನನಂತರಂ ರಿಪುಕನತ್ಕದಳೀವನ ಗಂಧಸಿಂಧುರಂ
ಪಿಂತಣ ರಾಯರಿಂ ಶತಗುಣಾಧಿಕನಾದತಿಶೌರ್ಯದೇಳ್ಗೆಯಿಂ
ಸಂತರೊಡಂಬಡಲ್ ಧರೆಯನಾಳ್ದನುದಾರಶಿವಾವನೀಶ್ವರಂ ೧

ವ|| ಅದೆಂತೆನಲಾ ಶಿವಪ್ಪನಾಯ[4]ಕರ್[4] ತನ್ನ ಪಿತಾಮಹನಾದ ಚಿಕ್ಕಸಂಕಣನಾಯಕರ ಅಗ್ರಜರಾದ ದೊಡ್ಡಸಂಕಣನಾಯಕರ ಪ್ರಪೌತ್ರರಾದ ವೀರಭದ್ರನಾಯಕರಾಳಿಬರುತಿರ್ದ ದೇಶ ಕೋಶ ಪ್ರಜೆ ಪರಿವಾರ ಪರಿಸ್ತರಣ ಪರಿಜನ ಪುರಜನ ಬಂಧುಜನ ಮಂತ್ರಿ ಸಾಮಾಜಿಕ ನಿಯೋಗಿಜನ ಸೇವಕಜನರ್ ಮುಂತಾದ ಸಮಸ್ತಜನರಂ [5]ಪಾ[5]ಲಿಸುತ್ತುಂ ತಮ್ಮನುಜ ವೆಂಕಟಪ್ಪನಾಯಕರಂ ಪ್ರೀತಿಯಿಂ ನಡೆಸಿಕೊಳುತ್ತುಂ ತನ್ನ ಸಹೋದರಿ ಪರಮೇಶ್ವರಮ್ಮನ[6]ನ್ನ[6]........[7]ವಿ[7]ವಾಹನುಂ ರಚಿಸಿ ನಾಗಾಜಮ್ಮನೆಂಬನುಜೆಯಂ ...ಗಿತ್ತು ವಿವಾಹಮುಂ ರಚಿಸಲಾ ಪೆಣ್ಮಣಿಯೊಳೊರ್ವ ಕುಮಾರನುದಿಸಲಾ ಕುಮಾರಂಗೆ ಅಳಿಯ ಶಿವಲಿಂಗನಾಯಕನೆಂದು ನಾಮ[8]ಕರ[8]ಣಮುಂ ರಚಿಸಿ ಪೋಷಿಸುತ್ತುಂ ಮತ್ತಂ ತನ್ನ ಕನಿಷ್ಠ ಸಹೋದರಿಯಾದ ಚನ್ನಮ್ಮನೆಂಬ ಪೆಣ್ಮಣಿಯಂ ಮೈದುನ ಕೆಂಚಣ್ಣಂಗಿತ್ತು ವಿವಾಹಮಂ ರಚಿಸಲಾ ಚನ್ನಮ್ಮನ ಗರ್ಭದೊಳ್ ಸಿದ್ದಯ್ಯನೆಂಬ ಕುಮಾರನಂ ಸಿದ್ದಮ್ಮ ಗೌರಮ್ಮನೆಂಬಿರ್ವರ್ ಪೆಣ್ಮಣಿಗಳುಮುದಿಸಲವರುಮಂ ಸಂರಕ್ಷಿಸುತ್ತುಮಾ ಶಿವಪ್ಪನಾಯಕರ್, ಮೊದಲ್ ವೆಂಕಟಪ್ಪನಾಯಕರ ಕಾಲದಲ್ಲಿ ತಾಂ ವಿವಾಹನಾದ

---

1 ಎಂಟನೆಯಾ (ಗ) 2 ಯ ಶಿವಪ್ಪನಾಯಕ (ಮ) 3 ಟ್ಟಂ ಈ ಶಿವಪ್ಪನಾಯಕರದು ತಮಗೆ ರಾಜಪಟ್ಟಮಾದ ಪಾರ್ಥಿವ ಸಂವತ್ಸರದ ಮಾರ್ಗಶಿರ ಶುದ್ಧ ೧೨ ಆರಭ್ಯ ಶಾರ್ವರಿ ಸಂವತ್ಸರದ ಆಶ್ವಯುಜ ಶು ೧ ವರೆಗೆ ವರುಷ ೧೪ ತಿಂ ೯ ದಿನ ೨೦ ಪರ್ಯಂತಂ ಸಧರ್ಮದಿಂ ರಾಜ್ಯ ಪರಿಪಾಲನಂಗೈದರಾ ವಿವರಣಮೆಲ್ಲಮಂ ಪದ್ಯರೂಪದಿಂ ಬಿತ್ತರಿಸಿದೆನದೆಂತೆಂದೊಡೆ (ಗ)
4 ಕಂ (ಗ) 5 ಪರಿಪಾ (ಗ) 6 ನಂ (ಗ) 7 ಗಿತ್ತುವಿ (ಗ) 8 ಗ್ರಹ (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ದುರ್ಗದ ಪಟ್ಟಣಸೆಟ್ಟರ ಮಗಳು ಲಿಂಗಮ್ಮಾಜಿಯುವರ ಗರ್ಭದೊಳೊರ್ವ ಕುಮಾರಿ ಯೊಗೆಯಲಾ ಪೆಣ್ಮಣಿಗೆ ಸಿದ್ದಮ್ಮಾಜಿಯೆಂದು ಪೆಸರಿಟ್ಟು ಸಿದ್ದಮ್ಮಾಜಿಯುಂ ಸರಭೆಲ ಮಲ್ಲಿಕಾರ್ಜುನಯ್ಯಂಗೆ ವಿವಾಹವನೊಡರ್ಚಿಸಿ ಮತ್ತಂ ತನ್ನ ದ್ವಿತೀಯಪತ್ನಿ ಸೂರಿ ರಾಯನ ಬಸವಪ್ಪನ ಸಹೋದರಿಯರಾದ ಶಾಂತಮ್ಮಾಜಿಯುವರ ಗರ್ಭದೊಳೊರ್ವ ಕುಮಾರನುದಿಸಲಾ ಕುಮಾರಂಗೆ ಭದ್ರಪನಾಯಕನೆಂದು ನಾಮಕರಣಮಂ ರಚಿಸಿ ಆ ಭದ್ರಪನಾಯಕಂಗೆ ಸೂರಿರಾಯನ ಕಲ್ಲಪ್ಪನ ಕುಮಾರಿ ಬೊಮ್ಮಮ್ಮಾಜಿ ಸೋದರಿಕೆಯಲ್ಲಿ ಮೈದುನ ಕೆಂಚಣ್ಣನ ಮಗಳು ಸಿದ್ದಮ್ಮಾಜಿ ಇಂತಿರ್ವರ್ ಸ್ತ್ರೀಯರನತ್ಯಂತ ಸಂಭ್ರಮದಿಂ ವಿವಾಹಮಂ ರಚಿ[1]ಯಿಸಿ[1] ತಮಗೆ [2]ಈ ರಾಜ[2]ಪಟ್ಟಮಾದಮೇಲೆ ತಾವು ನಂಬಿಯಣ್ಣ ಸೆಟ್ಟರ ಮಗ ಚನ್ನಪ್ಪಸೆಟ್ಟರ ಪತ್ನಿ ಚನ್ನಮ್ಮನ ಸಹೋದರಿಯಾದ ಬಸವಪೂರ ಸೋಮ ಯ್ಯನ ಕುಮಾರಿ ಭದ್ರಮ್ಮಾಜಿ ಬಾದಾವಿಲಿಂಗಪ್ಪಸೆಟ್ಟರ ಕುಮಾರಿ ಬಸವಲಿಂಗಮ್ಮಾಜಿ ಇಂತುಭಯ ಸ್ತ್ರೀಯರಂ ವಿವಾಹಮಾದರ್ [3]ಬ[3]ಸವಲಿಂಗಮ್ಮಾಜಿಯೆಂಬ ಪತ್ನಿಯೊಳೊರ್ವ ಕುಮಾರನುದ್ಭವಿಸಲಾ ಕುಮಾರಂಗೆ ಸೋಮಶೇಖರನಾಯಕನೆಂದು ನಾಮ[4]ಕರ[4]ಣಮಂ ರಚಿಯಿಸಿ ಇಂತಾ ಶಿವಪ್ಪನಾಯ[5]ಕರ್[5] [6]ಸೋಮ[6]ಶೇಖರನಾಯಕರ್ವೆರಸು ಸುಖ

---

1 ಸಿ ಈ ಸಿದ್ದಮ್ಮಾಜಿಯ ಸಹೋದರಿಯಾದ ಗೌರಮ್ಮನೆಂಬ ಪೆಣ್ಮಣಿಯುಂ ಮುಂದುಸಿರ್ವ ಕಥಾ ಸಂಗತಿಯಲ್ಲೂ ಪರದೇಶಿ ಸೆಟ್ಟರ ಚನ್ನಪ್ಪ ಸೆಟ್ಟರ ಪುತ್ರರಾದ ನಿರ್ವಾಣಯ್ಯನ ತಂದೆ ವೀರನಪ್ಪ ಸೆಟ್ಟರ ಭಾವನಾದ ಮರಿಯಪ್ಪ ಸೆಟ್ಟರಿಗೆ ಕೊಟ್ಟು ವಿವಾಹಮಂ ರಚಿಸಿದ ಕಾರಣದಿಂದೀ ಶಿವಪ್ಪನಾಯಕರ ಕುಮಾರ ಭದ್ರಪ್ಪನಾಯಕರು ಈ ಚನ್ನಪ್ಪಸೆಟ್ಟರ ಕುಮಾರರಾದ ಮರಿಯಪ್ಪಸೆಟ್ಟರು ಇಂತಿರ್ವರು ಸಡ್ಡುಕರಾಗಬೇಕೆಂದು ಗ್ರಹಿಸಿ ಕೊಂಬುದು ಮತ್ತಮಾ ಶಿವಪ್ಪನಾಯಕಂ (ಗ) 2 ರಾಜ್ಯ (ಗ) 3 ಮತ್ತಮಾ ತರುವಾಯ ಗುಡುವೆ ಚನ್ನಪ್ಪನ ತಂಗಿ ನಾಗಾಜಮ್ಮಾಜಿಯೆಂಬ ಪೆಣ್ಮಣಿಯುಂ ವಿವಾಹಮಾದರ್ ಆನಾಗಾಜಮ್ಮಾಜಿಯುವರ ಗರ್ಭದೊಳ್ ಸಂತಾನಮಿಲ್ಲಂ ಇಂತಾ ಶಿವಪ್ಪನಾಯಕರ್ ತಾವು ಸ್ವತಂತ್ರರಾಗಿ ವಿವಾಹಮಾದ ಸ್ತ್ರೀಯ ಮೂವರೊಳ್ ಬಸವೂರ ಸೋಮಯ್ಯನ ಕುಮಾರಿ ಭದ್ರಮ್ಮಾಜಿಯುವರ ಗರ್ಭದೊಳೊರ್ವ ಕುಮಾರಿಯುದಿಸಲಾ ಕುಮಾರಿಗೆ ಬಸವ ಲಿಂಗಮ್ಮಾಜಿಯೆಂದ ಪೆಸರಿಟ್ಟು ಆ ಬಸವಲಿಂಗಮ್ಮಾಜಿಯುಂ ಕೇಶಾರಾನ್ಯದ ಶಿವಲಿಂಗ ದೇವರ ಶಿಷ್ಯ ಬಸವಲಿಂಗಮ್ಮಾಜಿಯ ಬಸಿರೊಳೊರ್ವ ಕುಮಾರಿಯುದಿಸಲಾ ಕುಮಾ ರಿಗೆ ಸೋಮಮ್ಮನೆಂದು ಪೆಸರಿಟ್ಟು ಸೋಮಮ್ಮನಂ ಗರಜಿನ ಒಡೆಯರ್ಗೆ ವಿವಾಹಮಂ ರಚಿಯಿಸಿದರ್ ಮತ್ತಂಬ (ಗ) 4 ಗ್ರಹ (ರ) 5 ಕಂ (ಗ) 6 ತಮ್ಮ ಕುಮಾರರಾದ ಭದ್ರಪ್ಪ ನಾಯಕರು ಸೋ (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ಮಿರು[1]ತುಂ[1] ನಾಲ್ದೆಸೆಯೊಳಿರ್ಪ ವರ್ತಕ ಪ್ಯೆರುದಾರ ಗಂದಿಗ ಕೊಂಕಣಿಗರ್ ಮುಂತಾದ ಮಹಾನಾಡವರಂಬರಿಸಿ ವೇಣುಪುರವರದೊಳ್ ಸ್ಥಳನಿವೇಶನ ಪೇಟೆಸಾಲ ಕ್ಲುಪ್ತಿಗಳಂ ಮಾಡಿಸಿ ಸ್ಥಿರಲೇಖನಂಗಳಂ ಬರೆಸಿತ್ತು ಮತ್ತಮದಲ್ಲದೆ ಚಿತ್ರಕ ಶಿಲ್ಪಕ ವರ್ಣಕ ಕಂಸ್ಯಾಕಾರ ತೈಲಯಂತ್ರಿಕ ಕುಂಭಕಾರ ಸ್ವರ್ಣಕಾರ ವರ್ಧಕಿ ಕಾರುಕ ವಸ್ತ್ರ[2]ಶೋ[2]ಧಕ [3]ದಿವಾಕೀರ್ತಿಕ[3] (ಮುಂತಾದ) ನಾನಾ ಕೈವಾಡ ಕರಣಚಮತ್ಕಾರವಿಶಾರದರಾದ ನಾನಾವಿಧ ಜಾತಿಜನರ್ಗಾಸ್ಪದನಿವೇಶನಂಗಳಂ ಕಲ್ಪಿಸಿಯವರ್ಗಳಂ ಸ್ಥಾಯಿಗಳಾಗಿ ನಿಲಿಸಿ ಈ ಪ್ರಕಾರದಿಂ ವೇಣುಪುರಮಂ ಬಹುವಿಧ ರಚನೆಗಳಿಂ ವಿಸ್ತಾರಂಗೈಸಿ ಬ್ರಹ್ಮಕ್ಷತ್ರಿಯಾದಿ ವರ್ಣಾಶ್ರಮಾಚಾರ ಧರ್ಮಕರ್ಮಂಗಳಂ ಶ್ರುತಿ ಸ್ಮೃತ್ಯುಕ್ತಮಾರ್ಗೋಲ್ಲಂಘನಮಾಗದಂತು ನಡೆಯಿಸಿ ಶೈವವೈಷ್ಣವಾದಿ ಷಡ್ದರ್ಶನವರ್ತಿಗಳಂ ತತ್ತದುಕ್ತಮಾರ್ಗದೊಳ್ ನಡೆವಂತು ನಿಯಾಮಕಂಗೈಸಿ ಸ್ವರಾಷ್ಟ್ರಸ್ಥಿತ ಸಮಸ್ತ ಜನರೊಳ್ ಜಾತಿಸಂಕರಮಾಗಿ ನಡೆಯದಂತಾಜ್ಞಾಪಿಸಿ ತಾಂ ಧರ್ಮದಿಂ ರಾಜ್ಯಭಾರವಿಚಾರತತ್ಪರರಾಗಿ ರಾಜಧರ್ಮದಿಂ ವರ್ತಿಸುತ್ತುಮಿರ್ದು ಕತಿಪಯದಿನಂಗಳ್ ಪೋಗಲೊಡನೆ

ಕಂ|| ವಸುಧಾರೆಯ ಕೋಂಟೆಯನಾ
ವಸುಧೀಶಂ ಕೊಂಡು† ಸಕ್ಕರೆಯಪಟ್ಟಣಮಂ
ಮಿಸುಗುವ ಹಾಸನಬೇಲೂ[4]
ರಸದೃಶಕೋಂಟೆಗಳನಾನೃಪಂ ವಶಗೈದು ೧

ಮಾಯಾವಾದಿಗಳಧಿಕಸ
ಹಾಯದೆ ಬಹುಸೈನ್ಯಸಹಿತಿದಿರ್ಚಿದ ರಣಗಾಂ
* ಗೇಯ ಬೇಲೂರಕೃಷ್ಣಪ
ನಾಯಕನಂ ಯುದ್ಧರಂಗದೊಳ್ ಸೋಲಿಸಿದಂ ೨

ಮಗುಳಾ ಕೃಷ್ಣಪರಾಯನ
ಮಗನೆನಿಸುವ ವೆಂಟಾದ್ರಿನಾಯಕನುರ್ವಿಂ
ಮಿಗೆ ಕೈಗೈಯಲ್ಕಂ ಪಿಡಿ
ದಗಣಿತ ಶತ್ರುಸೈನ್ಯಜಾಲಮಂ ನೋಯಿಸಿದಂ ೩

---

1 ತ್ತುಮಾ ಶಿವಪ್ಪನಾಯಕಂ (ಗ) 2 ಚ್ಛೇ (ಒಕಗ) 3 ರಜಕರ್ (ಗ) 4 ಹೇವಿಳಂಬಿ ಸಂವತ್ಸರದೊಳ್ (ಕ)

† ಸರ್ವಜಿತ್ಸಂವತ್ಸರದಿಂ ಸಾಹಸಂಗೈದು ಖರಸಂವತ್ಸರದಿ (ಕ)

Sri Vidyabharathi Book Centre, Sringeri

CC-O. In Public Domain. Digitized by eGangotri

ವ|| ಇಂತರ್ಕಲಗೋಡ ಕೃಷ್ಣಪ್ಪನಾಯಕನದಟಂ ಮುರಿದಾತನ ತನೂಜ ವೆಂಕಟಾದ್ರಿನಾಯಕನಂ ಯುದ್ಧರಂಗದೊಳ್ ಪಿಡಿದು ಕೈಗಾಯ್ದು ಕಳುಹಿದನಂತುಮಲ್ಲದೆಯುಂ

ಕಂ|| ಕರೆಯುವನಿಗೆ ಬಾಧಕರಾ
ಗಿರುವ ಪರಂಗಿಗಳ ಬಲವನುಡುಗಿಸಿ [1]ಕುಂದಾ
ಪುರ ಗಂಗುವಳ್ಳಿ ಹೊನ್ನಾ
ವರಗಳ ಕೋಂಟೆಗಳನಾ ನೃಪಂ ವಶಗೈದಂ ೫

ಕಂಗೊಳಿಪ ಮಂಗಲೂರು
ತ್ತುಂಗಪರಿಸ್ತರಣಮುಂ ವಶಂಗೈದು ಬಳಿ
* ಕ್ಕಿಂಗರೀಜಾದ್ಯರಾಗನು
ನಂಗಳುಮಂ ತವಿಸಿ ರಾಜ್ಯಮಂ ಬಾಳಿಸಿದಂ ೬

ವ|| ಇಂತುಮಂಗಲೂರ ಕೋಂಟೆಯಂ ಕೊಂಡನಂತರಮುಳವೆಯಂ ಕಟ್ಟಿಕೀಳೂರಂ ಸಾಧಿಸಿ ಬೇಕಲ ಚಿತ್ತಾರಿಗಳೆಂಬ ಕೋಂಟೆಗಳುಮಂ ಮತ್ತಂ ಜಂದ್ರಗಿರಿ ಮುಂತಾದ ಕೋಂಟೆಗಳುಮಂ ಬಲ್ಪುಗೈಸಿದನಂತು ಮಲ್ಲದೆಯುಂ

ಕಂ|| ಬಳಿಕುರುನೀಲೇಶ್ವರದು
ಜ್ಜ್ವಳಿಪಿಳೆಯಂ ಕೊಂಡು ನಾಯಿಮಾರರ ನೆಲದೊಳ್
ತೊಲಗದ ಕಂಬವನನುವಿಂ
ನಿಲಿಸಿ ಮಹಾದ್ಭುತಪರಾಕ್ರಮುವನುರೆ ಮೆರೆದಂ ೭

ವ|| ಇಂತು ನೀಲೇಶ್ವರದ ಗಡಿಮುಖದೊಳ್ ತೊಲಗಿದ ಕಂಬಮಂ ನಿಲಿಸಿ ನಾಯಿಮಾರರಂ ವಶಗೈದು ಪಣಮಣಿಹಂಗಳಂ ಕೊಂಡನಂತರಂ ಕೊಲ್ಲಂತಮಾಪಳರ್ ಮುಂತಾದ ಕೇರಳಮಂಡಲದ ಮನ್ನೆಯರ್ಕಳನೆರ್ದೆಗೆಡಿಸಿ ಮರಳ್ದನಂತುಮಲ್ಲದೆಯುಂ

ಕಂ|| ರಂಜಿಸುವಲತ್ತನಾಡಂ
ಮಂಜುಳಮೆನಿಸಿರ್ಪ ಪಡುವನಾಡನಿಳಾಭೃ
ತ್ಕುಂಜರನುನ್ಮೂಲಿತರಿಪು
ಪುಂಜಂ ಶಿವನೃಪತಿ ಶೌರ್ಯದಿಂ ಸಾಧಿಸಿದಂ ೮

Sri Vidyabharathi Book Centre, Sringeri

1 ನಂದನಸಂವತ್ಸರದೊಳ್ (ಕ)

CC-O. In Public Domain. Digitized by eGangotri

ವ|| ಮತ್ತಮಾ ಶಿವಪ್ಪನಾಯಕಂ ದುರ್ಮುಖಿಸಂವತ್ಸರದಲ್ಲಿ ವಿಜಾಪುರದ ಪಾತುಶಾಹಂ ಮೃತನಾದನೆಂಬ ವರ್ತಮಾನಂ ಕೇಳ್ದು ತಾವ್ರಮುಖರ್ ಕಟ್ಟಿಕೊಂಡ ಇಕ್ಕೇರಿ ಸೊರಬ ಮುಡುಗಣಿ ಮ[1]ಹಾ[1]ದೇವಪುರ ಅಂಬಲಿಗೊಳ್ಳ ಮುಂತಾದ ಕೋಂಟೆಗಳಂ ಸಾಧಿ[2]ಸಿ ಬಳಿಕ್ಕಂ[2] ಸೋದೆಯವರ್ ಮಾರ್ಮಲೆತಿದಿರ್ಚಿನಿಲಲವರಾಳ್ವ ನಾಡೊಳಗಣ ಸಿರಸೆ ಹೇರೂರ್ ಬೋಳೂರ್ ಪುಲಿಯಕಣ್ ಕರುವೂರ್ ಬನವಸೆ ಬದನಗೋಡು ಮುಂತಾದ ಸೀಮೆಗಳಂ ಸ್ವಾಧೀನಂಗೈದನಂತುಮಲ್ಲದೆಯುಂ

ಕಂ|| ಸಿರಸೆಯ ಕೋಂಟೆಯುಮಂ ಸಂ
ಗರದೊಳ್ ಕೊಂಡುರುಸುಧಾಪುರಾಧಿಪನೆನಿಸಾ
ಗರುವ ಮಧುಲಿಂಗನಾಯಕ
ನುರೆ ಪುಗೆ ಕೊಂಡಖಿಳರಾಜ್ಯಮಂ ಮಗುಳಿತ್ತಂ ೯

ವ|| ಇಂತಾ ಶಿವಪ್ಪನಾಯಕಂ [3]ಸೋದೆಯರಾಳ್ವ ರಾಜ್ಯರಾಷ್ಟ್ರಪರಿಸ್ತರಣಂಗಳಂ ಸ್ವಾಧೀನಂಗೈದನಂತರಂ ಸಂ[3]ಧಿಮುಖದೊಳಾ ಸೋದೆಯ ಮಧುಲಿಂಗನಾಯಕಂ ಬೇಡಿಕೊಳಲ್ ತದ್ದೈನ್ಯೋಕ್ತಿಗಳಂ ಲಾಲಿಸಿ ಮಗುಳ್ದವರ ರಾಜ್ಯಪರಿಸ್ತರಣಂಗಳನವರ್ಗಿತ್ತು ಮನ್ನಿಸಿ [4]ಬೀಳ್ಕೊಟ್ಟತ್ಯಂತ ಭುಜಬಲಪರಾಕ್ರಮದಿಂ ರಾಜ್ಯಂಗೆಯ್ಯುತಿರ್ದನಂತುಮಲ್ಲದೆಯುಂ[4]

ಕಂ|| ಭೀಕರಬಲ ಶಿವಭೂಪನ
ಡಾಕಿಂಗಗಿದಖಿಳರಾಜರಗಣಿತ ಧನಮಂ
ಬೇಕಾದ ವಸ್ತುಚಯವನ
ನೇಕವನಿತ್ತೆರಗಿ ತದನುಚರರಾಗಿರ್ದರ್ ೧೦

ವ|| ಇಂತು ವರ್ತಿಸುತ್ತುಮಿರಲ್

ಕಂ|| ಸಸಿಯಂ ಶಿವನವೌಳಿಯನೈ
ದಿಸಿ ಕಡಲಂ ಪುಗಿಸಿ ಬಾಂಬೊಳೆಯನಹಿಪತಿಯಂ
ರಸೆಯಡಿಗಳ್ದಿ ಶಿವೇಂದ್ರನ
ಜಸಮೆಸಕದಿನುರ್ವಿ ಪರ್ವಿದುದು ಮೂಜಗಮಂ ೧೧

ವ|| ಮತ್ತಮದಲ್ಲದೆ

---

1 ಹ (ಮ) 2 ಸಿ (ಮ) 3 ಸಂ (ಮ) 4 ದಂ (ತಿ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ॥ ಆಗಸಕೆ ಸಂಜೆಗೆಂಪೀ
ಭೂಗೆಳೆವಿಸಿಲಾ ರಸಾತಳಕ್ಕಹಿಪಫಣಾ
* ರಾಗರತ್ನಪ್ರಭಾಮಯ
ಮಾಗೆಸೆದುದು ಸತ್ಪ್ರತಾಪಮಾ ಶಿವನೃಪನಾ ೧೨

ವ॥ ಇಂತೆಸೆವ ಕೀರ್ತಿಪ್ರತಾಪಂಗಳ್ ಮೂಜಗಮುಂ ಮುಸುಂಕಲ್ ಸದ್ಧರ್ಮದಿಂ ರಾಜ್ಯಪ್ರತಿಪಾಲನಂಗೆ[1]ಯ್ಯುತಿರ್ದನಂತುಮಲ್ಲದೆಯುಂ[1]

ಕಂ॥ ವರವೆಂಕಟಾವನೀಶಂ
ಧುರದೊಳ್ ಸಾಧಿಸಿದ ಸರ್ವಪೃಥ್ವೀತಳಮುಂ
ಸ್ಥಿರಮಾಗಿ ಬಾಳ್ವ ಪರಿಯಂ
ವಿರಚಿಸಿದಂ ಶಿವನೃಪಾಲನರಿಹೃಚ್ಛೂಲಂ ೧೩

ವ॥ [2]ಮತ್ತಮದಲ್ಲದಾ ಶಿವಪ್ಪನಾಯಕಂ[2] ತೀರ್ಥರಾಜಪುರೀಕ್ಷೇತ್ರದೊಳ್ ತುಂಗಭದ್ರಾನದೀತೀರದೊಳ್ ಶ್ರೋತ್ರಿಯ ಬ್ರಾಹ್ಮಣರ್ಗೆ ಕಾಲಪುರುಷದಾನ ತುಲಾಪುರುಷದಾನ ಸಹಸ್ರಗೋಪ್ರದಾ[3]ನಂ[3]ಗಳಂ ರಚಿಸಿ ಕಾಶೀಕ್ಷೇತ್ರದೊಳನೇಕ ದಾನಧರ್ಮ[4]ಪೂಜೆಗಳ್[4] ನಡೆವಂತು ನಿಯಾಮಕಂಗೈಸಿ ತಾಂ ಸೋಮವಾರವ್ರತನಿರತನೆನಿಸಿ ರಾಜಮುದ್ರಾಜ್ಞಾಶಕ್ತಿ[5]ಯಿಂ ಸದ್ಧರ್ಮದಿಂ[5] ರಾಜ್ಯಪ್ರತಿಪಾಲನಂಗೈದನಂತುಮಲ್ಲದೆಯುಂ

ಚಂ॥ಮಾ॥ ಪ್ರಜೆಗಳುಸಿರ್ವ ಬಿನ್ನಪವನಾಲಿಸಿಯೊಳ್ಗಿರೆ ಕಾಳ್ಪುರಂಗಳಂ
ಸೃಜಿಯಿಸಿ ಮೇಣವರ್ಗೆ ಕರಮೂಲಧನಂಗಳನಿತ್ತು ಬಿತ್ತುಮಂ
ನಿಜಮೆನಲಿತ್ತು [6]ಗೋಪ್ಪ[6]ದವನಿತ್ತಿಳೆಯಂ ಮಿಗೆ ಬೀಳಲೀಯದಾ
ದ್ವಿಜಸುರಪಾದಪಂ ಶಿವನೃಪಂ ಮಿಗೆ ಗೈಮೆಗೆ ತಂದನಕ್ತಿಯಿಂ ೧೪

ವ॥ ಅಂತುಮಲ್ಲದೆ

ಚಂ॥ಮಾ॥ ಕಡುಗಿ ದುರಾಸೆಯಿಂ ಪ್ರಜೆಗಳಂ ನೆರೆನೋಯಿಸದಾ ನೃಪಾರ್ಥಮುಂ
ಬಿಡದೆ ತದೀಯ ಸೌಖ್ಯಸುಪದಾರ್ಥಗಳಂ ಲವಮಾತ್ರಮಾದೊಡಂ
ಪೊಡವಿಯನೈದೆ ಪಾಳ್ಗೆಡಹಲೀಯದೆ ಬಲ್ಪಿಡಿದಂಕೆಝುಂಕೆಯಿಂ
ನಡೆಯಿಪನಿಂತು ನಾಡಿನಧಿಕಾರವನೇಳ್ಗೆಗೆ ತಂದನುರ್ವಿಯಂ ೧೫

---

[1] ಯ್ಯುತ್ತಮಿರಲ್ (ಮ) [2] ಮತ್ತಂ (ಮ) [3] ನ ಸಹಸ್ರ ಕನ್ಯಾ ಪ್ರದಾನಂ (ಗಮ)
[4] ಗಳ್ (ಮ) [5] ಯಿಂ (ಗ) [6] ಗೋಪ್ಪತ (ಮಕ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ|| ಕೆಂಡು ಪಣವಿತ್ತು ನಡೆಯುದೆ
ಚಂಡಿಸಿ ಪುಂಡೆದ್ದು ಪರಿವ ದುಷ್ಪ್ರಜೆಗಳುಮಂ
ದಂಡಿಸಿಯುಳ್ಳರ್ಥವನೀ
ಳ್ದುಂಡಿಗೆಗೆಡೆಗೈಸಿ ತೆತ್ತರಂ ರಕ್ಷಿಸಿದಂ ೧೬

ಕೂಟವನೊಡರಿಪರಂ ಬ
ಲ್ಗೋಟೆಗಳೊಳ್ ಬಂದಿಗಿಕ್ಕಿ ತುಂಟರ್ಕಳ ಕಾ
ಲಾಟವನುಡುಗಿಸಿ ಧೂರ್ತರ
ಗೋಟುಗಳಂ ಕೊಂಡು ರಾಜ್ಯಮಂ ಪಾಲಿಸಿದಂ ೧೭

ನೆರೆವರಿ ವರಾಡ ಕಡ ಮುಸ
ವರಿ ವಂಚನೆ ವಟ್ಟ ಲಂಚ ಹೊರನಿಲ ಹಸ್ತಾಂ
ತರಸಂಜಾಯಿತನಿಲಗಳ
ಪರಿವಿಡಿಯಂ ನಿಲಿಸಿ ಸೀಮೆಯಂ ರಕ್ಷಿಸಿದಂ ೧೮

† ಕಳೆದುಳಿದ ಲೆಕ್ಕಗುತ್ತಿಗೆ
ಗಳ ನಿಲಹದ ನಾಮಿಯಡ್ಡವಂತಿಕೆ ನಾನಾ
* ಸುಲಿಗೆ ಲಾವಣಿಗೆಯೆಂಬೀ
ಗಳಬಳಮಂ ನಿಲಿಸಿ ಸುಂಕಮಂ ಬಾಳಿಸಿದಂ ೧೯

* ಕಟ್ಟುಕ್ಕೈವಾಲೆ ಸಮಯಂ
ತಟ್ಟಿನ ಮೆರೆವಣಿಗೆ ಪೊಮ್ಮು ಕೈದುಡುಕುಗಳಂ
ಪುಟ್ಟಿಸಿ ಪೊಣರ್ವ ಸೆಟ್ಟಿಗ
ಳಟ್ಟುಳಿಯಂ ನಿಲಿಸಿ ಸುಂಕಮಂ ಬಾಳಿಸಿದಂ ೨೦

ಪುಸಿ ಠಕ್ಕು ಠೌಳಿ ಚೌರ್ಯಂ
ಪಿಸುಣನ್ಯಾಯಂ ವಿರೋಧಮುಪಹೃತಿ ಭಯಮು
ಬ್ಬಸ ಮೋಸ ಪಾದರಂಗಳ
ಪೆಸರುಸಿರಲ್ಕಿಲ್ಲಮೆನಿಸಿ ಪೊರೆದಂ ಧರೆಯಂ ೨೧

---

† (ಮ) ಪ್ರತಿಯಲ್ಲಿ ೧೯, ೨೦, ೨೧, ೨೨ನೆಯ ಪದ್ಯಗಳಿಲ್ಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ॥ ಕರಣಿಕೆಯನಿತ್ತು ಸಿಸ್ತಿನ
ಬರಹಗಳಿಂದಾಯಬೀಯಮಂ ಬಣಿತೆಗೆ ತಂ
ದುರುದುರ್ವ್ಯಯಂಗಳಂ ತಾಂ
ವಿರಚಿಸಿದಾರ್ಜಿಸಿದನೊಪ್ಪುವಗಣಿತಧನಮಂ ೨೨

ದುಷ್ಟಜನರ್ಕಳ ಶಿಕ್ಷಿಸಿ
ಶಿಷ್ಟರನುರೆ ಪೊರೆದು ಸಂತತಂ ಶಿವಪೂಜಾ
* ನಿಷ್ಠನೆಂದೆನಿಸಿ ಲೋಗರ
ರಿಷ್ಟಗಳಂ ತವಿಸಿ ಪೊಡವಿಯುಂ ಪಾಲಿಸಿದಂ ೨೩

ಪರಿವಹಿಯಂ ನಿಲಿಸಿದನಾ
ದೊರೆ ತನ್ನಯ ಮೇಲಣಾಣೆ ಘೋಷಣೆಯಿಂದಂ
ಪರವಸ್ತುವನೊಯ್ದಡಗಿದ
ನರಿಯಂ ಪಿಡಿತರಿಸಿ ಶಾಸ್ತಿಯಂ ಮಾಡಿಸಿದಂ ೨೪

ಪಲವುಕ್ತಿಗಳಿಂದೇಂ ರಿಪು
ಕುಲಭೈರವ ಶಿವನೃಪಾಲಗೆಣೆಯಹ ನೃಪರೀ
ಕಲಿಯುಗದೊಳಿಲ್ಲಮುವನಿಪ
ಕುಲಕಂ ತಾಂ ತಿಲಕನೆನಿಸಿ ರಾರಾಜಿಸಿದಂ ೨೫

ವ॥ ಇಂತು ನೆಗಳ್ತೆವೆತ್ತ ಭುಜಬಲಪ್ರತಾಪಾತಿಶಯು[1]ದಿಂ ಸದ್ಧರ್ಮದಿಂ[1] ರಾಜ್ಯವನಾಳುತಿರ್ದಾ ಶಿವಪ್ಪನಾಯಕಂ ವಿಕಾರಿಸಂವತ್ಸರದಲ್ಲಿ ರಾಯಸಂಸ್ಥಾನವನುದ್ಧರಿಸಲ್ವೇಳ್ಕುಂದು ಮನಂದಂದು ಸೋದೆ ಬಿಳಿಗೆ ತರಿಕೆರೆ ಹರಪುರ ಮುಂತಾದ [2]ನಾಡ ದೊರೆಗಳ ಸೈನ್ಯಸ್ವಸೈನ್ಯಂವೆರಸು[2] ತೆರಳ್ದು ಬೇಲೂರಂ ತೆಗೆದುಕೊಂಡು ಶ್ರೀರಂಗರಾಯರ್ಗಿತ್ತು ರಾಯಸಂಸ್ಥಾನಮಂ ನೆಲೆಗೊಳಿಸಿ ನಿಲಿಸಿ ತದ್ರಾಯ[3]ರಿಂ ಶಂಖ ಚಕ್ರ ಸ್ಥೂಲನೀಲಪರಿಶೋಭಿತವಜ್ರಖಚಿತ[3]ಕರ್ಣಾಭರಣಂ ಮುಂತಾದ ಬಿರುದುಗಳಂ ಪಡೆದು ರಾಮಬಾಣನೆಂಬಾನೆಯಂ ಕೊಡಲದಂ ಪರಿಗ್ರಹಿಸಿ [4]ನಿಲಿಸಿ[4] ಪಟ್ಟಣದ ಮುಖಕ್ಕೆ ದಂಡಂ ತೆರಳ್ದೈದಿ ಗ್ರಾಮದ ಸಮೀಪಮಂ ಸಾರ್ದು ಪಾಳಯವನಿಳಿದಿರಲಾ ಪ್ರಸ್ತಾವದೊಳ್

---

[1] ದಿಂ (ಮ) [2] ರಸುಗಳಂ ಕೂಡಿಕೊಂಡು ಸ್ವಸೈನ್ಯ ಸಮೇತನಾಗಿ (ಗ) [3] ರಿಂ (ಮ)
[4] ಶ್ರೀರಂಗ (ಗಮ)

Sri Vidyabharathi Book Centre, Sringeri

CC-O. In Public Domain. Digitized by eGangotri

ಚಂ॥ವಾ॥ ಘನತರದುರ್ಮದಾಂಧ ಮಹಿಸೂರಮಹೀಪನ ಸೇನಮದಿಂ ಮಹಾ
ವನಧಿ ಯುಗಾಂತಮೊಳ್ ಕವಿವವೊಲ್ ಬಹುಸೈನ್ಯಸಮೇತನಾಗಿ ಭೋಂ
ಕನೊದವಿ ತನ್ನನಂ ಪಿಡಿಯಲ್ಕೈದಿದ ತದ್ದಳವಾಯಿ ಹಂಪನ
ರ್ಯನನೆಸೆವಾಜಿಯೊಳ್ ಪಿಡಿದು ತಾಂ ಜಯಲಕ್ಷ್ಮಿಯನಾಂತನಾ ನೃಪಂ ೨೬

ಕಂ॥ ಆ ರಣದೊಳೊದವಿದುರುಮದ
ವಾರಣಗಳನಶ್ವಚಯುವ ಷೋಡಶಸಂಖ್ಯಾ
ಧೀರ ಗುರಿಕಾರರಂ ಬಹು
ವೀರರ್ಕಳನಾಕ್ಷಣದೊಳ್ ಕೈಸೆರೆವಿಡಿದಂ ೨೭

ಜವನ ಗಡಾವಣೆ ಲಯಮೃ
ತ್ಯುವಿನುರವಣೆ ಕಾಲರುದ್ರನಭ್ಯಾಟೋಪಂ
ಶಿವಭೂಪನ ಕೋಪದ ಪವ
ಣಿವರಿಂಬಲ್ಪಂಕದೆಡೆಯೊಳಿನ್ನೇನುಸಿರ್ವೆಂ ೨೮

ಮಿಗವಿಂಡುಗಳಂ ಪೆರ್ಬುಲಿ
ಯುಗಿವಂತಿಭಚಯವನಲೆವ ಕೇಸರಿಯೆನೆ ಪೊ
ಕ್ಕುಗಿಬಗಿದರಿಗಳ ಶಿರಗಳ
ಜಗತಿಯನೊಟ್ಟಿಸಿದನಾಜಿಯೊಳ್ ಶಿವಭೂಪಂ ೨೯

ವ॥ ಇಂತವರೀ ಜಗತಿಯಗ್ರದೊಳೆಸೆವ ಸಿಂಹಾಸನದೊಳ್ ಕುಳ್ಳಿರ್ದು ಸೇನಾ ಸಮೂಹಂಗಳಿಂ ಸಲಾಮುಗಳಂ ಕೈಕೊಂಡು ಧರ್ಮಗಹಳೆಯಂ ಪಿಡಿಸಿಯನಂತರಂ

ಕಂ॥ ಗ್ರಾಮದ ಮಸಲತಿಯೊಳ್ ನಿ
ಸ್ಸೀಮಪ್ರತಿಭಟರನಲೆದು ತತ್ಕೋಂಟೆಯುಮಂ
ಭೂಮಿಪತಿಲಕಂ ರಿಪುಕುಲ
ಭೀಮಂ ಶಿವಭೂಪನಾಜಿಯೊಳ್ ಸಾಧಿಸಿದಂ ೩೦

ವ॥ ಮತ್ತಮದಲ್ಲದೆ

ಕ॥ ಧಾರಿಣಿ[1]ಗ[1]ಪ್ರತಿಯಹ ಕಾ
ವೇರಿಯ ಪೆರ್ಬೊಳಗೆ ಸೇತುವಂ ವಿರಚಿಸಿ ತ
ದ್ಧೀರ ಶಿವಾವನಿಪಂ ಮೈ
ಸೂರರಸನ ಗಾಢಗರ್ವಮಂ ಮಗ್ಗಿಸಿದಂ ೩೧

1 ಯ (ಮ)

Sri Vidyabharathi Book Centre, Sringeri

CC-O. In Public Domain. Digitized by eGangotri

ವ|| ಇಂತಾ ಶಿವಪ್ಪನಾಯಕಂ [1]ಕಾವೇರೀನದಿಗೆ ಸೇತುವಂ ಕಟ್ಟಿಸಿ ನಿಜಸೈನ್ಯ ಸಮೂಹಮಂ ತೆರಳ್ಚಿ ಪಾಳೆಯವನಿಳಿದು[1] ಪಟ್ಟಣದ ಕೋಂಟೆಯಂ ವೇಷ್ಟೈಸಲವರ್ ಯುದ್ಧ ಮುಖದೊಳ್ ನಿಸ್ತರಿಸಲಮ್ಮದೆ ತಮ್ಮ ಸಹಾಯಕ್ಕೆ ವಿಜಾಪುರದಿಂ [2]ಸೈನ್ಯಂವೆರಸು ಬಲೂಲಖಾನನಂ ತೆರಳ್ಚಿ ತರ[2]ಲ್ ಮಂತ್ರಮುಖದಿಂದಾ ಬಲೂಮಖಾನನಂ ಪಿಂದೆಗೆಸಿ ಕೋಂಟೆಯಂ ವಶಂಗೈವನಿತರೊಳವರ್ ಕಂಗೆಟ್ಟು ಕೋಂಟೆಯಂ ವೇಷ್ಟೈಸಿದ [3]ಗುರಿಮಾ ನಿಸರ್ಗಂ ಮತ್ತಂ[3] ಕೆಲಂಬರ್ ನಿಯೋಗಿಗಳ್ಗಂ [4]ಪ[4]ರಿಧಾನವನಿತ್ತಂತುಮಲ್ಲಿದಾಭಿಚಾರ ಹೋಮ ಮುಂತಾದ ದುಷ್ಕೃತ್ಯಂಗಳನೊಡ[5]ರ್ಚಲ್[5] ದೇಹದೊಳಾಯಾಸಂ ಪುಟ್ಟಲಿಂತಪ್ಪ ಕಾಲದೊಳ್ ಶತ್ರುಸೀಮಾಸನ್ನಿವೇಶದೊಳಾವಿಲ್ಲಿರ್ಪುದನುಚಿತಮೆಂದು ಬಗೆದಾ ಶಿವಪ್ಪ ನಾಯಕಂ ಮುತ್ತಿಗೆದೆಗೆಸಿ ಮರಳ್ದು ಸ್ವಸೈನ್ಯಂವೆರಸು ವೇಣುಪುರವರಮಂ [6]ಸಾರ್ದಿರುತ್ತು ಮಿರ್ದಂ[6]

ಕಂ|| ರಾಜಾಧಿರಾಜನಾ ಶಿವ
ರಾಜಂ ಸದಸತ್ಪ್ರಪಾಲನಾಜ್ಞಾಬಲದಿಂ
* ರಾಜಮುದ್ರಾಧಿಕಾರದ
ತೇಜವನುಡುಗಿಸದೆ ಪೊರೆದನವನೀತಳಮಂ ೩೨

ವ|| ಇಂತಾ ಶಿವಪ್ಪನಾಯಕಂ ತನಗೆ ರಾಜಪಟ್ಟಮಾ[7]ದ ಶಾಲಿವಾಹನಶಕ ವರ್ಷ ೧೫೬೮ನೆಯ ಪಾರ್ಥಿವ ಸಂವತ್ಸರದ ಮಾರ್ಗಶಿರ ಶುದ್ಧ ದ್ವಾದಶಿಯಾ[7]ರಭ್ಯ ಶಾರ್ವರಿ ಸಂವತ್ಸರದ ಆಶ್ವಯುಜ ಶುದ್ಧ ೧೪ವರೆಗೆ ವರ್ಷ ೧೪ ತಿಂಗಳು ೯ ದಿನ ೨೦ ಪರ್ಯಂತಂ [8]ಸದ್ಧರ್ಮದಿಂ ರಾಜ್ಯಪರಿಪಾಲನಂಗೈದು ಶಿವಸಾಯುಜ್ಯಮಂ ಪಡೆದನಂತರಂ[8]

---

1 ಮೈಸೂರ (ಮ) 2 ಬಲೂಲಖಾನನಂ ಸೈನ್ಯಂವೆರಸುತ (ಮ) 3 ವರ್ಗಂ (ಮ) 4 ಹೇರಳ ಪ (ಗಮ) 5 ರ್ಚಿಸಲ್ (ಮ) 6 ಸಾರ್ದಿರುತ್ತುಮಿರ್ದು(ಗ) ಸಾರ್ದುಮಿರಲ್ (ಮ) 7 ದಾ (ಮ) 8 ಸದ್ಧರ್ಮದಿಂ ರಾಜ್ಯಪರಿಪಾಲನಂಗೈದು ಶಿವಸಾಯುಜ್ಯಮಂ ಪಡೆದ ನಂತರಂ ಈ ಶಿವಪ್ಪನಾಯಕರ ಕಾಲದಲ್ಲು ಬದುಕುಮಾಡಿದವರು : ಪ್ರಧಾನಿ ದೊಡ್ಡ ತಮ್ಮರಸಯ್ಯ, ಗರಿತು (?) ಬಸಪ್ಪದೇವರು, ಚಾಡಪ್ಪೈಯ್ಯ. ಕರಣಿಕ ಅಪ್ಪಣ್ಣಯ್ಯ, ತಿರುಮಲಯ್ಯ ಬಿಳಿಗಿ ಕೋನಪ್ಪಯ್ಯ, ವೆಂಕಟಯ್ಯ, ಬಿಳಿಗಿ ವೆಂಕಪ್ಪಯ್ಯ, ಸರಜಾಶಂಕರನಾರಾಯಣಯ್ಯ, ಹಾರೋವಾಬರಸಯ್ಯ, ನಿಯೋಗಿ ರಾಮಚಂದ್ರಯ್ಯ, ಹೂವಯ್ಯ, ಚಿಕ್ಕವೆಂಕಟಪ್ಪ ನಾಯಕರು, ಶರಜಾರಾಯ, ಶರಜಾ ವೆಂಕಟಪ್ಪಯ್ಯ, ಕೋಳಾಲದ ವೆಂಕಪ್ಪಯ್ಯ, ಕೃಷ್ಣಪ್ಪಯ್ಯ, ಸಬ್ಬನೀಸ ದೊಡ್ಡಕೃಷ್ಣಪ್ಪಯ್ಯ, ಚಿಟನಿಸ ಕರೆವೆಂಕಪ್ಪಯ್ಯ, ಜೋಯಿಸರ ವೆಂಕಪ್ಪಯ್ಯ, ಪಟ್ಟೆ ಗಂಗಾಧರಯ್ಯ, ರಾಯಸದ ಮೃತ್ಯುಂಜಯದೇವರು, ಗರಜಿನ ಮಲ್ಲಪ್ಪೊಡೆಯರು, ಸೋಮಪ್ಪದೇವರು ಹೊನ್ನೇನಾಯಕನ ವೆಂಕಟಯ್ಯ, ಪಟ್ಟಣಸೆಟ್ಟಿ, ಲಿಂಗಪ್ಪಸೆಟ್ಟರು ಮುಂತಾದವರು (ಕ) ಸದ್ಧರ್ಮದಿಂ ರಾಜ್ಯಂಗೈದು ಶಿವಸಾಯುಜ್ಯಮಂ ಪಡೆದಂತದನಂತರದೊಳ್ (ಗ) ರಾಜ್ಯವನಾಳಿದನಂತರಂ (ಮ)

Sri Vidyabharathi Book Centre, Sringeri

CC-O. In Public Domain. Digitized by eGangotri

[1]ಸ್ವ[1]ಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರ್ಷ ೧೫೮೩ನೆಯ ಶಾರ್ವರಿ ಸಂವತ್ಸರದ ಆಶ್ವಯುಜ ಶುದ್ಧ ೧ ಯಲ್ಲಿ ಆ ಶಿವಪ್ಪನಾಯಕ[2]ರ[2]ನುಜರಾದ [3]ವೆಂ[3]ಕಟಪ್ಪನಾಯಕರ್ಗೆ ವೇಣುಪುರದರಮನೆಯೊಳ್ ರಾಜಪ[4]ಟ್ಟಂ[4]

ಕಂ॥ ಅರಿಭೀಕರ ಶಿವಭೂಪನ
ತರುವಾಯಿಯೊಳಾತನನುಜ ವೆಂಕಟಭೂಭೃ
ದ್ವರನಾಳ್ದಂ ಧರೆಯಂ ಸು
ಸ್ಥಿರೆಯಂ ವಿಬುಧಾಳಿ ಮೆಚ್ಚೆ ಕತಿಪಯದಿವಸಂ ೩೩

ವ॥ ಆ ಚಿಕ್ಕವೆಂಕಟಪ್ಪನಾಯಕಂ ತನ್ನಗ್ರಜನಾದ ಶಿವಪ್ಪನಾಯಕರಾಳ್ದ ದೇಶ ಕೋಶ ಪ್ರಜೆ ಪರಿವಾ[5]ರಂಗಳಂ[5] ಪ್ರತಿಪಾಲಿಸುತ್ತುಂ ಶಿವಪ್ಪನಾಯಕರ ಕುಮಾರರಾದ ಭದ್ರಪ್ಪನಾಯಕರಂ ಪ್ರೀತಿಯಿಂ ಪೋಷಿಸುತ್ತುಂ ತಮ್ಮ ಸಹೋದರಿಯರಾದ ಪರಮೇಶ್ವರಮ್ಮ ನಾಗಾಜಮ್ಮ ಚನ್ನಾಜಮ್ಮನವರನತ್ಯಂತ ಪ್ರೇಮಾತಿಶಯದಿಂ ನಡೆಸಿಕೊಳುತ್ತುಂ ಪಟ್ಟಣದವರ್ ಮೇರೆವರಿದೆಡೆಯಾಡದಂತು [6]ಶ್ರೀರಂಗರಾಯರ[6] ಸಮೀಪದೊಳ್ ಗಡಿ ಮುಖದೊಳ್ ಸೈನ್ಯಸಹಿತಮಳಿಯ ಶಿವಲಿಂಗನಾಯಕನಂ ನಿಲಿಸಿ ಪರಾಕ್ರಮಾತಿಶಯದಿಂ ರಾಜ್ಯಂಗೆಯ್ಯುತಿರ್ದನಂತುಮಲ್ಲದೆಯುಂ

ಚಂ॥ಮಾ॥ ಗಡಿಗಳೊಳೈದೆ ಬಾಧಿಪ ತುರುಷ್ಕರ ಸೈನ್ಯವನೈದೆ ಮುಗ್ಗಿಸು
ತ್ತಿಡವಲದುರ್ವಿಪಾಲಕರೊಳುನ್ನತತೇಜನನಾಂತು ದುಷ್ಟರಿಂ
ಗೆಡೆಗುಡದುತ್ತಮೋತ್ತಮರನೋವುತ ಧರ್ಮವನೊತ್ತಿ ಧರ್ಮದಿಂ
ಪೊಡವಿಯನಾಳ್ದನಾ ಶಿವನೃಪಾಲಸಹೋದರನರ್ಕಭಾಸುರಂ ೩೪

1 ಆ ತರುವಾಯಸ್ವ (ಮ) 2 ತ (ಮ) 3 ಚಿಕ್ಕವೆಂ (ಗಮ) 4 ಟ್ಟವಾದುದಾ ವೆಂಕಟಪ್ಪ ನಾಯಕಂ ರಾಜ್ಯಂಗೈದ ವಿವರಣಮಂ ಪದ್ಯರೂಪದಿಂ ಪೇಳ್ವೆನದೆಂತೆಂದೊಡೆ (ಗ) 5 ರ ಮುಂತಾದ ಸಸಮಸ್ತ ಜನರಂ (ಗ) 6 ಶ್ರೀ ಸೋಮಶೇಖರನಾಯಕನ (ಕ)

Sri Vidyabharathi Book Centre, Sringeri

CC-O. In Public Domain. Digitized by eGangotri

ವ॥ [1]ಇಂತೀ[1] ಚಿಕ್ಕವೆಂಕಟಪ್ಪನಾಯಕಂ ತನಗೆ ರಾಜ್ಯಪಟ್ಟಮಾ[2]ದ ಶಾಲಿವಾಹನ ಶಕವರ್ಷ ೧೫೮೨ನೆಯ ಶಾರ್ವರಿ ಸಂವತ್ಸರದ ಆಶ್ವಯುಜ ಶುದ್ಧ ೧ಯಾರಭ್ಯ[2] ಪ್ಲವ ಸಂವತ್ಸರದ ಭಾದ್ರಪದ ಶುದ್ಧ ೧೪ವರೆಗೆ ವರ್ಷ ೦ ತಿಂಗಳು ೧೧ ದಿವಸ ೧೪ ಪರ್ಯಂ[3]ತಂ ಸದ್ಧರ್ಮದಿಂ[3] ರಾಜ್ಯ[4]ಪ್ರತಿಪಾಲನಂಗೈದಂ[4]

ಸಪ್ತಮಾಶ್ವಾಸಂ ಸಂಪೂರ್ಣಂ

---

[1] ಈ (ಮ) [2] ದಾರಭ್ಯ (ಮ) [3] ತು (ಮ) [4] ಪ್ರತಿಪಾಲನಂಗೈದಂ ಈ ಚಿಕ್ಕ ವೆಂಕಟಪ್ಪನವರ ಕಾಲದಲ್ಲು ಬದುಕುಮಾಡಿದವರು: ಪ್ರಾಂಕು ಶಿವಪ್ಪನಾಯಕರ ಕಾಲದಲ್ಲಿ ಬದುಕುಗಳ ಮಾಡಿದವರೆ ಹೊಸತಾಗಿ ಬಾಳಪ್ಪಗೊಳಪ್ಪ.

ಈ ಶಿವಪ್ಪನಾಯಕರಿಗೆ ಇವರ ಪತ್ನಿಯರು ಲಿಂಗಮ್ಮಾಜಿ ನಾಗಮ್ಮಾಜಿಯವರಿಗೆ ಸಹ ಶಿವಪ್ಪನಾಯಕರ ಸಂಗಡಲೆ ಬಿದುರೂರ ಹಳಿಯ ಮಠದಲ್ಲು ಸಮಾಧಿಯಾಯಿತು. ಅನಂತರಮಾ ಶಿವಪ್ಪನಾಯಕರ ಸಹೋದರ ವೆಂಕಟಪ್ಪನಾಯಕರಿಗೆ ಅವರ ಪತ್ನಿ ಮಲ್ಲಮ್ಮಾಜಿಯವರಿಗೆ ಸಹ ಆ ವೆಂಕಟಪ್ಪನಾಯಕರ ಸಂಗಡಲೆ ಬಿದೂರೂರು ಹಳೆಯಮಠದ ಸ್ಥಳದಲ್ಲು ಸಮಾಧಿ ಆಯಿತು.

ಈ ವೆಂಕಟಪ್ಪನಾಯಕರ ತಮ್ಮ ಅಗ್ರಜರಾದ ಶಿವಪ್ಪನಾಯಕರ ಮಗ ಭದ್ರಪ್ಪ ನಾಯಕರ ಅಳಿಯ ಶಿವಲಿಂಗನಾಯಕರ ಹುಕುಮಿನ ಮೇಲೆ ಚಿಟ್ಟೂಜಟ್ಟಿಯೆಂಬವನ ಕೈಯಿಂದ ಘಾತವಾಗಿ ಹೋದರು (ಕ) ವಾಳಿದನಂತರಂ ಶಿವಲೋಕ[illegible] ಸಾರ್ದಂ (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

[1]ಅಷ್ಟಮಾಶ್ವಾಸಂ[1]

ವ|| [2]ಆ ಚಿಕ್ಕವೆಂಕಟಪ್ಪನಾಯಕರ[2] ತರುವಾಯ [3]ಸ್ವ[3]ಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ೧೫೮೪ನೆಯ ಪ್ಲವ ಸಂವತ್ಸರದ ಭಾದ್ರಪದ ಶುದ್ಧ ೧೫ಯಲ್ಲಿ ಶಿವಪ್ಪನಾಯಕರ ಜ್ಯೇಷ್ಠಪುತ್ರರಾದ ಭದ್ರಪ್ಪನಾಯಕರ್ಗೆ ವೇಣುಪುರದ ಅರಮನೆಯಲ್ಲಿ ರಾ[4]ಜಪಟ್ಟಂ[4]

ಕಂ|| ಭಾವಿಸಲಾ ವೆಂಕಟಧರ
ಣೀವಿಭುವಿನನಂತರಂ ತದಗ್ರಜನಹ ಶೋ
ಭಾವಹ ಶಿವನೃಪನಾತ್ಮಜ
ನೀ ವಸುಧೆಯನಾಳ್ದನೆಸೆವ ಭದ್ರಪಭೂಪಂ ೧

ವ|| ಅದೆಂತೆಂದೊಡಾ ಭದ್ರಪನಾಯಕಂ ತಮ್ಮ ತಂದೆ ಶಿವಪ್ಪನಾಯಕರಾಳಿಬರುತ್ತಿರ್ದ ದೇಶ ಕೋಶ ಪ್ರಜೆ ಪರಿವಾರ ಪರಿಸ್ತರಣ ಪರಿಜನ ಪುರಜನ ಸೇವಕರ್ಗಳಂ ಸಂರಕ್ಷಿಸುತ್ತುಂ ತಮ್ಮನುಜ ಸೋಮಶೇಖರನಾಯಕರಂ ಸೋದರತ್ತೆಯಾದ ಪರಮೇಶ್ವರಮ್ಮ ನಾಗಾಜಮ್ಮ[5]ನವರುಮಂ ಅ[6]ಕ್ಕ ಸಿದ್ದಮ್ಮ[6]ನುಮಂ[6] ಪರಮಪ್ರೀತಿಯಿಂ ನಡೆಸಿಕೊಳುತ್ತುಂ ಸದ್ಧರ್ಮದಿಂ ರಾಜ್ಯಪರಿಪಾಲನಂಗೈಯುತುಂ ವರ್ತಿಸುತ್ತುಮಿ[7]ರ್ದಾ[7] ಕಾಲದೊಳ್ ಮಾಯಾವಿಗಳ ಮೇಲಣ ರಾಜಕಾರ್ಯಾರ್ಥಂ ಅಳಿಯ ಶಿವಲಿಂಗಯ್ಯನಂ ಸೈನ್ಯಸಹಿತಂ ಪ್ರಯಾಣವನೊಡರ್ಚಿಸಲಾತಂ ತೆರಳ್ದು ಬೇಲೂರ್ಗೈದಿ ರಾಯರಂ ಸಂಧಿಸಿ ತತ್ಸೈನ್ಯಂವೆರಸು ಮುಂತೆರಳ್ದು ಮಾಯಾವಿಗಳ್ ವೇಢೈಸಿದ ಹೆಬ್ಬಾಳಿಕೋಂಟೆಯಂ ಮುತ್ತಿಗೆದೆಗೆಸಿ ಮುಂತೈದಿ ನರಸಿಂಹಪುರಕ್ಕೆ ಮುತ್ತಿಗೆಯಿಕ್ಕಲವರ್ಕೈತಂದು ಕೊಣನೂ[8]ರು[8] ಕೋಂಟೆಯಂ ತೆಗೆದುಕೊಳಲಿವರತಿತ್ವರಿತದಿಂದಲ್ಲಿಗೈದಿ ತಳಿಸುರಂಗಗಳಂ ನಡೆಸುತ್ತುಮಿರಲಾ ವೇಳೆಯೊಳ್ ಮೈಸೂರ ಮಹೀಪತಿಯನುಜ್ಞೆಯಿಂ

---

1 ಒಂಬತ್ತನೆಯಾಶ್ವಾಸ (ಗ) 2 ಆ (ಮ) 3 ಭದ್ರಪ್ಪನಾಯಕಂ ಸ್ವ (ಮ) 4 ಜ್ಯಪಟ್ಟಮಾದುದಾ ಭದ್ರಪ್ಪನಾಯಕರು ತಮಗೆ ರಾಜ್ಯಪಟ್ಟವಾದ ಪ್ಲವ ಸಂವತ್ಸರದ ಭಾದ್ರಪದ ಶು ೧೫ ಆರಭ್ಯ ಶೋಭಕೃತ ಸಂವತ್ಸರದ ಫಾಲ್ಗುನ ಶು ೧ಂವರೆಗೆ ವರ್ಷ ೨ ಮಾಸ ೫ ದಿ ೨೫ ಪರ್ಯಂತರ ಸದ್ಧರ್ಮದಿಂ ರಾಜ್ಯಪರಿಪಾಲನಂಗೈದರಾ ವಿವರಣಮಂ ಪದ್ಯರೂಪದಿಂ ಬಿತ್ತರಿಪೆನದೆಂತೆಂದೊಡೆ (ಗ) 5 ಅ (ಗ) 6 ನವರಂ (ಗ) 7 ರ್ದುನಾ (ಗ) 8 ರ (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ|| ತಳತಂತ್ರಸಹಿತಮಲ್ಲಿಗೆ
ಕಳಲೆಯಕಾಂತಯ್ಯನೆಂಬ ಸೇನಾಧೀಶಂ
* ಘಳಿಲನ್ನೈತಂದು ಕಣಗಾ
ಲಿಳೆಯೊಳ್ ಪಾಳೆಯವನಿಳಿಯಲುಂದವರ್ಗಿವರ್ಗಂ ೨

ಯುದ್ಧಂ ಪಣ್ಣಲ್ ಶೌರ್ಯಸ
ಮುದ್ರಂ ಶಿವಲಿಂಗನಾಯಕಂ ಕೈಗೈವ
ತ್ಯುದ್ಧತರಿಪುಸುಭಟಾಸ್ಯ
ಗೃದ್ಧಾಸಿಕರಾಬ್ಜನೆನಿಸಿ ರಾರಾಜಿಸಿದಂ ೩

ಕೊಳುಗುಳದೊಳಾಂತ ಸುಭಟರ
ತಲೆಗಳನುರೆ ಕೇ[1]ಣ[1]ಗೊಂಡಿದಿರ್ಚಿದ ಬಲವತ್
ಕಳಲೆಯಕಾಂತಯ್ಯನ ಕೈ
ಚಳಕಮನುರೆ ನಿಲಿಸಿ ಧುರದೆ ಮುರಿದೋಡಿಸಿದಂ ೪

ವ|| ಇಂತು ಪಣ್ಣಿದ ಯುದ್ಧರಂಗದೊಳಾ ಶಿವಲಿಂಗನಾಯಕಂ ಕಳಲೆಯಕಾಂತಯ್ಯನದಟಂ ಮುರಿದು ಪಲಾಯನಂಗೊಳಿಸಲಾ ವೇಳೆಯೊಳ್ ವಿಧಿವಶದಿಂ ಶತ್ರುಸೈನ್ಯದ ಬಾಣಮುಪಾಯಸ್ಥಳಕಂ ತಾಗಿ ಶಿವಲಿಂಗನಾಯಕನಲ್ಲಿಯೇ ಶಿವಲೋಕಮುಂ ಪಡೆಯಲಾ ವಾರ್ತೆಯಂ ಕೇಳ್ದು ಭದ್ರಪ್ಪನಾಯಕಂ ಪಡೆವೆರಸತಿತ್ವ[2]ರೆಯಿಂ[2] ದಾಳಿವರಿದಾ ಮಾಯಾವಿಗಳ ನಾಡೊಳಗಣ ಹೊನ್ನವಳ್ಳಿ ಚಿಕ್ಕನಾಯಕನಹಳ್ಳಿ ಕಂದುಗೆರೆ ಬೂದಿವಾಳ ಮುಂತಾದ ಸೀಮೆಗಳಂ ಕೊಂಡವರ ರಾಜ್ಯರಾಷ್ಟ್ರಮಂ ಪುಡಿಗೈಸಿ ಮರಳ್ದೈತಂದು ಸುಧಾಪುರದವರ ಗರ್ವೋದ್ರೇಕಮಂ ಮುಗ್ಗಿಸಿ ತದ್ರಾಜ್ಯರಾಷ್ಟ್ರಂಗಳನೀಳ್ದು ಸೈನ್ಯಂವೆರಸು ಸಬ್ಬುನೀಸ ಕೂಸಪ್ಪಯ್ಯನಂ ತೆರ[3]ಳ್ಚಿ[3] ದಿವಾಣದ ವಕೀಲಿತಿಯಾದ ಸೀರೆಡೆಕೋಂಟೆಗೆ ಮುತ್ತಿಗೆಗೈಸಲಾ ಪ್ರಸ್ತಾವದೊಳ್

ಕಂ|| ಸೋದೆಯವರ್ಕಳುಸಿರ್ದಪಿ
ರ್ಯಾದಿಯನುರೆ ಕೇಳ್ದು ವಿಜಯಪುರದಧಿನಾಥಂ
ಏದುಲಶಾಹಂ ಪಡೆವೆರ
ಸೈದಿ ಕಪಂ ತಾನೆ ನಿಂದು ಗಡಿಯೊಳ್ ಖತಿಯಿಂ ೫

---

1 ಣ (ಗ) 2 ರತದಿಂ (ಗ) 3 ಳಿಸಿ (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ॥ ಕರಿತುರಗಪತ್ತಿಸಹಿತಂ
ವರಶಾಹಿ ಬಲೂಲಖಾನ ಸೈದವಿಲಾಸಂ
ವೆರಸಿದ ಶರಜಾಖಾನನ
ನಿರದಲ್ಲಿಂದಂ ತೆರಳ್ಚೆ ಕೇಳ್ದೀ ಹದನಂ ೬

ಶಿವಭೂಪತಿಯ ತನೂಜಂ
ಸುವಿವೇಕಿಯೆನಿಪ್ಪ ಜಾತಪನ ಭದ್ರಪನಂ
ಜವದೆ ತೆರಳ್ಚಿಸಿಯವನೊಡ
ನವಿರಳಸೇನಾಸಮೂಹಮಂ ಬೀಳ್ಕೊಟ್ಟಂ ೭

ವ॥ ಇಂತಾ ಭದ್ರಪ್ಪನಾಯಕಂ ಜಾತಪನ ಭದ್ರಪನೊಡನಗಣಿತಸೇನಾ ಸಮೂಹಮಂ ತೆರಳ್ಚಿ[1] ಬೀಳ್ಕೊಟ್ಟು ತಾಂ ಭುವನಗಿರಿಯ ದುರ್ಗದೊಳ್ ನಿಲಲಂಬಲಿಗೊಳ್ಳದ ಬಳಿಯೊಳುಭಯಸೈನ್ಯಕ್ಕಂ ಕೈಗಲಿಸಿ ಮಹಾದ್ಭುತಮಾದ ಯುದ್ಧಂ ಪಣ್ಣಲಾವೇಳೆಯೊಳ್ ಜಾತಪನ ಭದ್ರಪನಂ ಮುರಿದಾ ತುರುಷ್ಕಸೈನ್ಯಮತಿತೀವ್ರಗತಿಯಿಂ ದಾಳಿನರಿಯುತ್ತೈದಿ ಬಿಲುಸಾಗರದ ಕಣಿವೆಯ ಮಾರ್ಗವಿಡಿದೈತಂದೆ.ೞಪೊಕ್ಕು ತೊಡಿಸಿ ಹೊಳೆ ಪ್ರಾಂತದೊಳ್ ಪಾಳೆಯವನಿಳಿದು ಬಳಿಕಂ ವೇಣುಪುರದ ಪರಿಸ್ತರಣಕ್ಕೆ ಮುತ್ತಿಗೆಯನಿಕ್ಕಿ ತತ್ಪರಿಸ್ತರಣಮಂ ಕೊಳಲ್ ಪಿಂತಣಿಂ ಪಾತುಶಾಹನೈತಂದು ಶೋಭಕೃತ್ ಸಂವತ್ಸರದ ಕಾರ್ತಿಕ ಬಹುಳದಲ್ಲಿ ವೇಣುಪುರದ ಕೋಂಟೆಯರಮನೆಯೊಳಿಳಿದು ಬಳಿಕ್ಕಂ ಶಾಜಿ ಸೈದವಿಲಾಸ ಶರ್ಜಾಖಾನ ಮುಂತಾದ ವಜೀರರಂ ಸೈನ್ಯಂವೆರಸು ತೆರಳ್ಚಲವರ್ಗಳೈತಂದು ಭುವನ ಗಿರಿಯ ದುರ್ಗಮಂ ವೇಢೈಸಲ್ ಭದ್ರಪ್ಪನಾಯಕಂ ಧೈರ್ಯಗುಂದದೆ ನಿತ್ತರಿಸಿ ನಿಂದು ಪೇರಳಮಾದ ಸೇನಾಸಮೂಹಂ ನೆರಹಿ ಪಥ ಪೈಕ ಕಂಡಿ ಕಣಿವೆಗಳಂ ಕಟ್ಟೈಗೆಯ್ದು ಮಹಾದ್ಭುತಮಾದ ಯುದ್ಧಮಂ ರಚಿಸಿ ಯವನಸೈನ್ಯಮಂ ಪುಡಿಗೈಸಿ ಮತ್ತಂ ತೋಪು ಖಾನಿ ಸನ್ನಾಹತಂತ್ರಪ್ರಯೋಗಮುಖದಿಂ ಫೌಜಂ ಮೆದೆಗೆಡಹಿ ಪೆಣಂಗಳಂ ಹರಹಿ ತಚ್ಛರಜಾಖಾನ ಸೈದವಿಲಾಸ ಶಾಜಿ ಮುಂತಾದವರಂ ಪಿಂದೆಗೆಸಿ ಪಲಾಯನಂಗೊಳಿಸಿ ಬಳಿಕ್ಕಂ ಹೂವಯ್ಯ ಮುಂತಾದ ನಿಯೋಗಿಗಳಂ ಕಳುಹಿ ಸಂಧಾನವನೊಡರ್ಚಿಸಿ ಇಂತು ಸಮರಸಂಧಾನಮುಖದಿಂ ಪಾತುಶಾಹನಂ ಪಿಂದೆಗೆಸಿ ಪರಮಪ್ರಖ್ಯಾತಿಯಂ ಪಡೆದು ಬಳಿಕ್ಕಂ ಭುವನಗಿರಿಯ ದುರ್ಗದಿಂದೆಳ್ತಂದು ವೇಣುಪುರವರಮಂ ಸಾರ್ದು ಭುಜಬಲ ಪರಾಕ್ರಮಾತಿಶಯದಿಂ ರಾಜ್ಯಂಗೆಯ್ಯುತಿರ್ದನಂತುಮಲ್ಲದೆಯುಂ

Sri Vidyabharathi Book Centre, Sringeri

1 ಳ್ಚಿಸಿ (ಗ)

CC-O. In Public Domain. Digitized by eGangotri

ಕಂ|| ವರತೀರ್ಥವಳ್ಳಿಯೊಳ್ ಭಾ
ಸುರ ತುಂಗಾತಟದೊಳೆಸೆವ ಭದ್ರಪಭೂವಿಾ
ಶ್ವರನುರೆ ಸದ್ಬ್ರಾಹ್ಮಣ್ಯಾ
ಕ್ಕುರುತರ ಬಹುದಾನಧರ್ಮಮಂ ವಿರಚಿಸಿದಂ ೮

ಅವಿರಳತುಲಾಪುರುಷದಾ
ನವನೆಸೆವ ಹಿರಣ್ಯಗರ್ಭದಾನವನೊಲವಿಂ
ಶಿವಭೂಪನ ಸುಕುಮಾರಂ
ತವೆ ವಿರಚಿಸಿ ಪರಮಸುಕೃತಗಳನಾರ್ಜಿಸಿದಂ ೯

ಕರಿತುರಗಗೋಹಿರಣ್ಯಾಂ
ಬರರಜತಸುರತ್ನಧಾನ್ಯ ಭೂಕನ್ಯಾಮುಂ
ದಿರಮು[1]ಖ್ಯ[1]ಮಾದ ನಾನಾ
ಸುರುಚಿರದಾನಗಳನಾ ನೃಪಂ ವಿರಚಿಸಿದಂ ೧೦

ಉಪನಯನಾದಿ ಸುದಾನವ
ನಪರಿಮಿತಾನ್ನಪ್ರದಾನಮಂ ಸಂತಸದಿಂ
ದುಪಮಾತೀತಂ ಶಿವಭೂ
ಮಿಪನ ಸುತಂ ರಚಿಸಿ ಪಡೆದನತಿಶಯ ಯಶಮಂ ೧೧

ಅವನೀಶ್ವರಕುಲತಿಲಕಂ
ಶಿವಭೂಪನ ಪುಣ್ಯಪುತ್ರ ಭದ್ರಪಭೂಪಂ
ತವೆ ದೇಶಕೋಶದರ್ಥಂ
ಸವೆವನ್ನಂ ದಾನಧರ್ಮಮಂ ವಿರಚಿಸಿದಂ ೧೨

ತರಣಿಜನಿಂ ಶಿಬಿ ಶಿಬಿಯಿಂ
ದುರುಬಲಿ ಬಲಿಯಿಂ ದಧೀಚಿಮುನಿಯಾ ಮುನಿಯಿಂ
ಕರಮಿಾವರೊಳಂ ಭದ್ರಪ
ಧರಣೀಶ್ವರನಧಿಕನೆನಿಸಿ ರಾರಾಜಿಸಿದಂ ೧೩

ವ|| ಮತ್ತಮದಲ್ಲದೆ

---

1 ಖ (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ॥ ಪರಮಶ್ರೋತ್ರಿಯರಹ ಭೂ
ಸುರರ್ಗಂ ಸುಕ್ಷೇತ್ರವೃತ್ತಿಗಳನಿತ್ತತಿಭಾ
ಸುರ ಭದ್ರರಾಜಪುರಮೆಂ
ಬುರುತರವಿತತಾಗ್ರಹಾರಮಂ ವಿರಚಿಸಿದಂ ೧೪

ವ॥ ಮತ್ತಮದಲ್ಲದಾ ಭದ್ರಪ್ಪನಾಯಕಂ ಸ್ವಪಿತೃ ಶಿವಪ್ಪನಾಯಕನ ಪೆಸರೊಳ್ ಶಿವರಾಜಪುರಮೆಂಬಗ್ರಹಾರಮುಮಂ ಕನಿಷ್ಠಪಿತೃ ವೆಂಕಟಪ್ಪನಾಯಕನ ಪೆಸರೊಳ್ ವೆಂಕಟಪುರಮೆಂಬಗ್ರಹಾರಮುಮಂ ವಿರಚಿಸಿ ವೃತ್ತಿಕ್ಷೇತ್ರಂಗಳಂ ಕಲ್ಪಿಸಿ ಭೂಸುರರ್ಗೆ ಶಿವಾರ್ಪಿತಮಾಗಿ ಧಾರೆಯನೆರೆದು ಸ್ಥಿರಶಾಸನಮಂ [1]ಬರೆಸಿತ್ತು ಮತ್ತಂ ಮುಳುವಾಗಿಲ ಕೃಷ್ಣಾನಂದಸ್ವಾಮಿಗಳ ಮಠಕ್ಕಂ ಹೇರಳವಾದ ಭೂಸ್ವಾಸ್ಥೆಯಂ ಧಾರೆಯನೆರೆದು ಸ್ಥಿರ ಶಾಸನಮಂ ಬ[1]ರೆಸಿತ್ತತಿಶಯ ಸುಕೃತವಿಶೇಷಂಗಳನುಪಾರ್ಜಿಸಿದನಂತುಮಲ್ಲದೆಯುಂ

ಕಂ॥ ನಾಶಂಬೊಂದದವೊಲ್ ವ
ರ್ಷಾಶನಮಂ ಬ್ರಾಹ್ಮಣೋತ್ತಮರ್ಗಾಗಿಸಿ ಮೇ
ಣಾ ಶಿವನೃಪನ ತನೂಜಂ
ಕಾಶೀಧರ್ಮವ ಸುಸಾಂಗಮೆನೆ ವಿರಚಿಸಿದಂ ೧೫

ವ॥ ಮತ್ತಮದಲ್ಲದಾ ಭದ್ರಪ್ಪನಾಯಕನುಚಿತಮಾದ ಸ್ಥಳಂಗಳೊಳ್ ಮಹತ್ತಿನ ಮಠಂಗಳಂ ಕಟ್ಟಿಸಿ ಶಿವಜಂಗಮಧರ್ಮಾರ್ಥಂ ಭೂಸ್ವಾಸ್ಥೆಗಳಂ ಶಿವಾರ್ಪಿತಮಾಗಿ ಧಾರೆಯನೆರೆದು ಸ್ಥಿರಶಾಸನಮಂ ಬರೆಸಿತ್ತು ವಿಶೇಷಮಾಗಿ ಕಾಶೀಧರ್ಮಂಗಳ್ ನಡೆವಂತು ಕಟ್ಟಳೆಯಂ ರಚಿಸಿ ಪೂರ್ವಧರ್ಮಂಗಳಂ ಸಾಂಗಮಾಗಿ ನಡೆಸಿ ಕೊಲ್ಲೂರ ಮೂಕಾಂಬಿಕೆಯಮ್ಮನವರ ಪೂಜಾರ್ಥಂ ಹೇರಳಮಾದ ಭೂಸ್ವಾಸ್ಥೆಯಂ ಬಿಡಿಸಿ ಶಾಶ್ವತಮಾದ ಧರ್ಮಕೀರ್ತಿಸುಕೃತಂಗಳನುಪಾರ್ಜಿಸಿ ಮತ್ತಂ ದೇವತಾಯಾತ್ರೆಯಂ ರಚಿಸಲ್ವೇಳ್ಕೆಂದು ಮನಂದಂದು

ಕಂ॥ ವೇಣುಪುರದಿಂ ತೆರಳ್ದ
ಕ್ಷೀಣಬಲಂ ಭದ್ರಭೂಮಿಪಂ ಕೊಲ್ಲೂರಂ
ಮಾಣದೆ ಪೊರ್ದಿ ಬಳಿಕ್ಕಾ
ಕ್ಷೋಣೀಶ್ವರನೆಸೆವ ವಸುಪುರವನುರೆ ಸಾರ್ದಂ ೧೬

ಕ್ರೋಡಪುರವರಮನಾ ನೃಪ
ಚೂಡಾಮಣಿಯೆಯ್ದಿ ಸಾರ್ದು ಕೋಟೇಶ್ವರಮಂ
*ನೀಡುಮಲ್ಲಿಂ ತೆರಳ್ದೊಳ್
ನಾಡೊಳಧಿಕಮೆನಿಪ ಶೃಂಗಪುರಮಂ ಪೊಕ್ಕಂ ೧೭

[1] ಬ (ಮ)

Sri Vidyabharathi Book Centre, Sringeri

CC-O. In Public Domain. Digitized by eGangotri

ವ|| ಮತ್ತಮುದಲ್ಲದಾ ಭದ್ರಪ್ಪನಾಯಕಂ ಶೃಂಗಪುರದಿಂ ತೆರಳ್ದು ಕಿಗ್ಗಮಂ ಸಾರ್ದು ಶೃಂಗೇಶ್ವರಸ್ವಾಮಿಯ ಸಂದರ್ಶನಂಗೈದಿಂತು ದೇವತಾಯಾತ್ರೆಯಂ ವಿರಚಿಸಿತ್ತುಂ [1]ತತ್ತದ್ದೇವತಾಸಂದರ್ಶನಂಗೈದು ತ[1]ತ್ತತ್ಪೂಜಾರ್ಥಂ ಭೂಸ್ವಾಸ್ಥ್ಯಗಳಂ ಬಿಡಿಸಿ [2]ಲೋಪ ಮಾಗದಂತು ಪೂಜಾವಿಭವಗಳ್ ನಡೆವಂತು ನಿಯಾಮಕಂಗೈದು ಮ[3]ರಳ್ದು ವೇಣು ಪುರಮಂ ಸಾರ್ದನಂತರಂ

ಕಂ|| ಪಲಬಗೆಯ ದಾನಧರ್ಮಂ
ಗಳನನುವಿಂ ರಚಿಸಿ ಖಳರನಲೆದುತ್ತಮರಂ
ಸಲಹುತ್ತೆಡಬಲದ ನೃಪತಿ
ಗಳೊಳಗ್ಗಳನೆನಿಸಿ ಮೆರೆದನಾ ನೃಪತಿಲಕಂ ೧೮

ಈಪರಿಯೊಳ್ ವರಭದ್ರಪ
ಭೂಪಂ ಭೂಪರ್ಗಧೀಶನೆಂದೆನಿಸಿ ಕರಂ
ವ್ಯಾಪಿ[3]ಸೆ[3] ಕೀರ್ತಿ ದಿಗಂತವ
ನಾ ಪುಣ್ಯಶ್ಲೋಕನಾಳ್ದನುರ್ವೀತಳಮಂ ೧೯

ವ|| ಈ ಭದ್ರಪ್ಪನಾಯಕರ್ ತಮಗೆ ಪಟ್ಟಮಾದ ಶಾಲಿವಾಹನ ಶಕವರ್ಷ ೧೫೮೪ ನೆಯ ಪ್ಲವ ಸಂವತ್ಸರದ ಭಾದ್ರಪದ ಶುದ್ಧ ೧೫ಯಾರಭ್ಯ ಶೋಭಕೃತ್ ಸಂವತ್ಸರದ ಫಾಲ್ಗುಣ ಶುದ್ಧ ೯ ವರ್ಷ ೨ ತಿಂಗಳು ೫ ದಿನ ೨೪ ಪರ್ಯಂತಂ ರಾಜ್ಯವಾಳಿ ಐಕ್ಯವಾ[4]ದರ್[4]

[5]ಭ[5]ದ್ರಪ್ಪನಾಯಕಂ ರಾಜ್ಯ[6]ಮಾಳ್ದ ತರುವಾಯ ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರ್ಷ ೧೫೮೬ನೆಯ[6] ಶೋಭಕೃತ್ ಸಂವತ್ಸರದ ಫಾಲ್ಗುಣ ಶುದ್ಧ

---

[1] ತ (ಮ) [2] ಮ (ಮ) [3] ಸಿ (ಮ) [4] ದರ್ ಈ ಭದ್ರಪ್ಪನಾಯಕರ ಇಬ್ಬರು ಸ್ತ್ರೀಯರಿಗೂ ಈ ಭದ್ರಪ್ಪನಾಯಕರ ಸಂಗಡಲೆ ಬಿದುರೂರ ಹಳೆಯಮಠದ ಕೊಪ್ಪಲ ಸ್ಥಳದಲ್ಲೂ ಸಮಾಧಿ ಯಾಯಿತು.

ಈ ಭದ್ರನಾಯಕರ ಕಾಲದಲ್ಲು ಬದುಕು ಮಾಡಿದವರು: ಪ್ರಧಾನಿ ಚೌಡಪ್ಪಯ್ಯ, ಜೋಯಿಸರ ವೆಂಕಪ್ಪಯ್ಯ, ಕರಣಿಕ ಬಿಳಿಗಿ ಕೋನಪ್ಪಯ್ಯ, ಲಕ್ಷ್ಮೀಪತಿಯಯ್ಯ, ಸಬ್ಬ ನೀಸ ಕೃಷ್ಣಪ್ಪಯ್ಯ. ಚಿಟನೀಸ ಕರೆವೆಂಕಪ್ಪಯ್ಯ, ಪುರುಷೋತ್ತಮಯ್ಯ, ರಾಮಚಂದ್ರಯ್ಯ, ಗರಜಿನ ಮಲ್ಲಪ್ಪೊಡೇರು, ಅಳಿಯ ಶಿವಲಿಂಗನಾಯಕ, ಪಟ್ಟಣಶೆಟ್ಟಿ ಬ(ಸವ)ಸೆಟ್ಟರು, ಲಿಂಗಾಪಂಡಿತ ಮುಂತಾದವರು (ಕ) [5] ಮತ್ತಮಾ ಭ(ಗಮ) [6] ಫಲವಾದರಭ್ಯ (ಮ)

Sri Vidyabharathi Book Centre, Sringeri

CC-O. In Public Domain. Digitized by eGangotri

೧೨[1]ಯಲ್ಲಿ ಶಿವಪ್ಪನಾಯಕರ ಕನಿಷ್ಠಪುತ್ರರಾದ ಭದ್ರಪ್ಪನಾಯಕರ ಸಹೋದರರಾದ ಹಿರಿಯ ಸೋಮಶೇಖರನಾಯಕರ್ಗೆ ವೇಣುಪುರದರಮನೆಯಲ್ಲಿ[1] ರಾಜ[2]ಪಟ್ಟಂ. ಆ[2] ಸೋಮಶೇಖರನಾಯಕರ್ ತನುಗೆ ಪಟ್ಟವಾದ ಶೋಭಕೃ[3]ನ್ನಾಮ ಸಂ[3]ವತ್ಸರದ ಫಾಲ್ಗುಣ ಶುದ್ಧ ೧೦ಯಾರಭ್ಯ ವಿರೋಧಿಕೃತ್ ಸಂವತ್ಸರದ ಮಾರ್ಗಶಿರ ಶುದ್ಧ ೧೧ [4]ಯ[4]ವರೆಗೆ ವರ್ಷ ೭ ತಿಂಗಳು [5]೯[5] ಪರ್ಯಂತಂ [6]ಸದ್ಧರ್ಮದಿಂ ರಾಜ್ಯಪ್ರತಿಪಾಲನಂ ಗೈದರಾ ವಿರಣಮಂ ಪದ್ಯರೂಪದಿಂ ಪೇಳ್ವೆನದೆಂತೆಂದೊಡೆ[6]

ಕಂ॥ ನಿರುಪಮಭದ್ರಪಭೂಪನ
ತರುವಾಯಿಯೊಳಾತನನುಜನತಿಶಯತೇಜಂ
ವರಸೋಮಶೇಖರೇಂದ್ರಂ
ಸುರುಚಿರಗುಣಸಾಂದ್ರನಾಳ್ದನವನೀತಳಮಂ ೨೦

ವ॥ ತತ್ ಸೋಮಶೇಖರನಾಯಕಂ ತನ್ನಗ್ರಜ ಭದ್ರಪ್ಪನಾಳಿಬರುತಿರ್ದ ದೇಶ ಕೋಶ ಪ್ರಜೆ ಪರಿವಾರ ಪರಿಸ್ತರಣ ಪರಿಜನ [7]ಸೇ[7]ವಕಜನರಂ ಪ್ರತಿಪಾಲನಂಗೈಯುತ್ತಂ ಕೊಟ್ಟೆ ಪುರದ ಸಿದ್ದಪ್ಪಶೆಟ್ಟರ ಕುಮಾರಿ ಚನ್ನಮ್ಮಾಜಿಯೆಂಬ ಪೆಣ್ಮಣಿಯನತ್ಯಂತ ಸಂಭ್ರಮದಿಂ ವಿವಾಹವಾಗಿ ತಮ್ಮ ಸೋದರತ್ತೆಗಳಾದ ಪರಮೇಶ್ವರಮ್ಮ, ನಾಗಾಜಮ್ಮ ಭಗಿನಿ ಸಿದ್ದಮ್ಮ ದಾದಿ ಚನ್ನಮ್ಮನವರನತ್ಯಂತ ಪ್ರೀತಿಯಿಂ ನಡೆಸಿಕೊಳುತ್ತಂ [8]ಸುಖದಿಂ[8] ರಾಜ್ಯಂಗೆಯುತ್ತುಮಿರ್ದು ಮೈಸೂರವರ ಮದೋದ್ರೇಕಮಂ ಮಗ್ಗಿಸಲ್ವೇಳ್ಕೆಂದು ಮನಂದಂದು ಸೈನ್ಯಂವೆರಸು ತೆರಳ್ದವರ ರಾಜ್ಯಮಂ ನಿಪಾತಮಂ ಗೈದನಂತರಂ

ಕಂ॥ ಬೆಕ್ಕೋಡಂ ಬೆಳಗೋಡಂ
ಮಿಕ್ಕಾ ಕಣತೂರನ[9]ಬ್ಬಿ[9]ಣವ ಬೇಲೂರಂ
ಚಕ್ಕನೆ ಕೊಂಡಾ ಶಿವನೃಪ
ನಕ್ಕರಿನಣುಗಂ ಬಲಾತಿಶಯಮಂ ಮೆರೆದಂ ೨೧

ವ॥ ಇಂತಾ ಸೋಮಶೇಖರನಾಯಕಂ ಮಾಯಾವಿಗಳ ಮದೋದ್ರೇಕಮಂ ನಿವಾರಿಸಿ ಮರಳ್ದು ವೇಣುಪುರನರಮಂ ಸಾರ್ದನಂತರಂ ತರಿಕೆರೆಯ ಹನುಮಪ್ಪನಾಯಕಂ

---

1 ವರೆಗೆ ವ ೨ ಮಾಜ ದಿನ ೩೫ ಪರ್ಯಂತಂ (ಮ) 2 ಪಟ್ಟವಾದುದು (ಗ) ಜ್ಯಮಂ ಪರಿಪಾಲಿಸಿದಂ ಆ ತರುವಾಯ ಹಿರೇ (ಮ) 3 ತ್ಸಂ (ಗ) 4 ದಿವಸದ (ಗ) 5 ೭ (ಮ) 6 ರಾಜ್ಯವಾಳಿದ ವಿವರಣಂ (ಮ) 7 ಪುರಜನ ಸೇ (ಗ) 8 ಹೂವಯ್ಯನ ಪುರುಷೋತ್ತಮಯ್ಯ ಸಬ್ಬುನೀಸ ಕೃಷ್ಣಪ್ಪಯ್ಯ, ಕಂಸಪ್ಪಯ್ಯ, ಬಿಳಿಗಿ ಕೊಸಪ್ಪಯ್ಯ (ಗ) ದೇವುಗಳ ವೆಂಕಟಯ್ಯ, ರಾಯಸದ ರಾಮಯ್ಯ, ಸೀತಪ್ಪ, ಕೋಳಾಲದ ವೆಂಕಟಪ್ಪಯ್ಯ ಮುಂತಾದ ನಿಯೋಗಿ ಜನರ್ವೆರಸು ಸುಖದಿಂ (ಕಗ) 9 ಬ್ಬ (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ವಪತ್ನಿಯಂ ವಧೆಗೈದು ಉನ್ಮದಾವಸ್ಥೆಯಿಂ ಭ್ರಾಂತನಾಗಿ ಅವ್ಯವಸ್ಥಿತವ್ಯಾಪಾರದಿಂ ವರ್ತಿಸುತ್ತಿರ್ಪ ವಾರ್ತೆಯಂ ಕೇಳ್ದು ಸಬ್ಬನೀಸ ಕೃಷ್ಣಪ್ಪಯ್ಯನಂ ಸೈನ್ಯಂಗೂಡಿಸಿ ತೆರಳ್ಚಿಸಿ ಕಳುಪಿ ಕಾಮನದುರ್ಗಮಂ ತೆಗೆದುಕೊಂಡಾತನ ಕುಮಾರ ಸೀತಾರಾಮ[1]ಪ್ಪಯ್ಯ[1] ನಾಯಕಂಗಿತ್ತು ತದ್ರಾಜ್ಯಮಂ ನೆಲೆಗೊಳಿಸಿ ನಿಲಿಸಿ ಹನುಮಪ್ಪನಾಯಕನಂ ವೇಣುಪುರಕ್ಕೈದಿಸಿ ಪೊರೆದೀ ಪ್ರಕಾರದಿಂ ತರಿಕೆರೆಸಂಸ್ಥಾನಮನುದ್ಧರಿಸಿ ಪರಮಪ್ರಖ್ಯಾತಿಯಂ ಪಡೆದು ವಿರಾಜಿಸುತ್ತಿರ್ದನಂತುಮಲ್ಲದೆಯುಂ

ಕಂ॥ ಉರುತರ ಗರ್ವೋದ್ರೇಕದ
ಭರದಿಂ ಬೆರೆತಿರ್ಪ ತುಳುವವನ್ನೆಯರದಟಂ
ಮುರಿದು ಪಣಗೊಂಡು ಪಾರ್ಮಲೆ
ತರಿಗಳ ನಿಗ್ರಹಿಸಿ ಬಾಹುಬಲಮಂ ಮೆರೆದಂ ೨೨

ವರರಾಜನೀತಿಮಾರ್ಗದ
ನಿರುಗೆಯನತಿಗಳೆಯದಿಂತು ತೇಜೋಬಲದಿಂ
ಧುರಧೀರ ಸೋಮಶೇಖರ
ಧರಣೀಶಂ ಧರ್ಮದಿಂದಮಿಳೆಯಂ ಪೊರೆದಂ ೨೩

ವ॥ ಇಂತಾ ಸೋಮಶೇಖರನಾಯಕಂ [2]ಸದ್ಧರ್ಮದಿಂ ರಾ[2]ಜ್ಯಪ್ರತಿಪಾಲನಂಗೆಯ್ಯುತ್ತುಂ ಸುಖದಿರ್ಪ ಕಾಲದೊಳ್ ಬರಮೆಮಾವುತನೆಂಬೊರ್ವ ಕ್ಷುಲ್ಲಕಂ ನೀವಾನೆಯ ಮದಮಂ ಸೇವಿಸಲ್ [3]ಶರೀರದೊಳಾವುದರಲ್ಲಿಯು ಬ[3]ಲಕರಮಾಗಿರ್ಪುದೆಂದೊಡನಡಿಸಲ್ ದೈವವಶದಿಂದಾ ದುರ್ಬೋಧೆಗೊಡವಟ್ಟು ಸೋಮಶೇಖರನಾಯಕನಾನೆಯ ಮದಮಂ ಸೇವಿಸಿ ತನ್ಮೂಲದಿಂ[4]ದೊಗೆದುನ್ಮದಾವಸ್ಥೆಯಿಂ ಭ್ರಮಿತ[5]ನುಂ[5] ನಿತ್ಯಮವ್ಯವಸ್ಥಿತಚಿತ್ತನುಮಾಗಿ[4] ಕ್ಷುದ್ರಜನರೊಡನೆ ಖೇಳಮೇಳದಿಂ ಸ್ವೇಚ್ಛಾವ್ಯಾಪಾರದಿಂ ಮನಂಬಂದಂತೆ ವರ್ತಿಸುತ್ತುಮಿರಲಾ ಪ್ರಸ್ತಾವದೊಳ್ ನಿಜಸಂಸ್ಥಾನದೊಳಿರ್ಪ ಕುಹಕಿನಿಯೋಗಿಗಳೊಡರ್ಚಿದ ಪಿತೂರಿಯಿಂ

ಕಂ॥ ವಿಜಯಪುರವರ್ತಿಯೆನಿಸುವ
ಮುಜಬರಖಾನಂ ತೆರಳ್ಚಿ ಜನ್ನೋಪಸಂತಂ
ನಿಜಸೈನ್ಯಂವೆರಸೈತಂ
ದು ಜವದೆ ಮುಹನವಮಿವಯಲೊಳಂ ತಾನಿರುತುಂ ೨೪

---

[1] ಪ್ಪ (ಗ) [2] ರಾ (ಮು) [3] ಬ (ಮು) [4] ಭ್ರಮಿತನಾಗಿ (ಮು) [5] ನಾಗಿ (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ|| ಖಳರ ಕುಮಂತ್ರಕ್ಕೊಡವ
ಟ್ಟಳವಿಂ ತತ್ಸೋಮಶೇಖರೇಂದ್ರನನಿರಿದಂ
[1]ದು[1]ಳಿದರೆ ತನ್ನೃಪನಂಗನೆ
ಲಲನಾಮಣಿ ಚನ್ನಮಾಂಬೆ ಕೇಳ್ದೀ ಕಥೆಯಂ ೨೫

ಆ ಜಿನ್ನೋಪಂತನ ಭಟ
ರಾಜಿಯನಾಭಟರೊಳಧಿಕರಂ ಬಹುಮುಖದಿಂ
ದಾಜಿಯೊಳೆ ಕೊಲಿಸಿ ಚನ್ನ
ಮ್ಮಾಜಿ ಕೃತಾಂತನ ಭಟರ್ಗೆ ಕೈವರ್ತಿಸಿದಳ್ ೨೬

ವ|| ಮತ್ತಮದಲ್ಲದೆ

ಕಂ|| †ಕೆಂಗೆಯ ಹನುಮಪನಸಿಯಿಂ
ಕಂಗೊಳಿಸ ತದೀಯ ಶೇಖಬಾಬನೆನಿಪ್ಪು
ತ್ತುಂಗಪಟುಭಟನ ಶಿರಮಂ
ಸಂಗರದೊಳ್ ಪೊಯ್ಸಿ ಮೆರೆದಳತಿವಿಕ್ರಮಮಂ ೨೭

ಕುಹಕಕ್ಕೊಳಗಾದ ಜನರಂ
ಬಹುಮುಖದೊಳ್ ಶಿಕ್ಷೆಗೈಸಿ ಕೊಡಸಿಯ ಬಯಲ
ಲ್ಲಿಹ ಜಿನ್ನೋಪಂತನುಮಂ
ಸಹಸದಿನೆಬ್ಬಟ್ಟಿ ಕೋಂಟೆಯುರೆ ಲೂಟಿಸಿದಳ್ ೨೮

*ಬರಮೆ ಮಾವುತ ಮಸೂದರ
ನಿರಮೋಡಿಸಿ ಪರಮಧೂರ್ತ ಮೊಳೆಯಪನದಟಂ
ಮುರಿದು ಕೆಲಂಬ[2]ರ ದುಷ್ಟರ[2]
ನೆರವಿಯನಾಕ್ಷಣದೆ ಶಾಸ್ತಿಯಂ ಮಾಡಿಸಿದಳ್ ೨೯

ವ|| ತತ್ಸೋಮಶೇಖರನಾಯಕರ ಪಟ್ಟದರಸಿ ಚನ್ನಮ್ಮಾಜಿ [3]ತನ್ನ[3]ಪತಿಗೆ ವಿಘಾತಿಯಂ ನೆನೆದ ಕುಹಕಿಜನರ್ಕಳನೀಪರಿಯಿಂ ಶಿಕ್ಷೆಗೈಸಿ ವರ್ತಿಸುತ್ತುಮಿರಲ್ ತದನಂತರಂ ರಾಜ್ಯಾಧಿಕಾರವನಪೇಕ್ಷಿಸಿ ಕುಹಕಿಗಳ ದುರ್ಬೋಧೆಗೊಳಗಾದ ಮೈದುನ ಬಸವಲಿಂಗ

---

[1] ದಿ (ಗಮ) [2] ರ್ ಧೂರ್ತರ (ಮ) [3] ಯವರು (ಮ)

† ಈ ಪದ್ಯವು (ಮ) ನಲ್ಲಿಲ್ಲ

Sri Vidyabharathi Book Centre, Sringeri

CC-O. In Public Domain. Digitized by eGangotri

ನಾಯಕನಂ ಸ್ಥಳಾಂತರಕ್ಕೆ ಕಳುಪಿ ಅಂಗವಿಕಲನಂ ಮಾಡಿಸಿ [1]ರಾ[1]ಜ್ಯಂಗೆಯ್ಯುತ್ತು ಮಿರಲ್ ಮತ್ತಂ ಕ್ವಚಿತ್‌ಕಾಲದೊಳ್ ಮರೆಬೋವ ಕಂದಾಚಾರದ ಲಕ್ಷ್ಮಯ್ಯ ವೀರ ಭದ್ರಯ್ಯ ಮುಂತಾದ ಕೆಲಂಬರ್ ಕೂಡಿ ಚನ್ನಮ್ಮಾಜಿಯಂ ಮಾಣ್ದು ರಾಜತ್ವಕ್ಕೆ ಬೇರೊರ್ವರನಧಿಕಾರಿಯಂ ಮಾಡಿ ನಡೆಸಬೇಕೆಂದು ದುರಾಲೋಚನೆಯಂ ರಚಿಸಿ ಪ್ರಾಕು ಹೊಸಂಗಡಿ ಪರಿಸ್ತರಣದೊಳಂಕೆಯೊಳಿರುತಿರ್ದ ಅಂಧಕ ವೆಂಕಟಯ್ಯಂಗೆ ಪರಿಚರ್ಯೆಮಂ ರಚಿಸುತಿರ್ದ ಹೊರಹೆಣ್ಣಿನೊಳೊರ್ವ ಪುತ್ರನುದಿಸಿರಲಾತನಂ ಬರಿಸಿ ಆ ಅಂಧಕ ವೆಂಕಟಯ್ಯ ನೆಂಬಾತಂಗುದ್ಭವಿಸಿದ ಕುಮಾ[2]ರಂ ಹಿರಿಯ[2]ವೆಂಕಟಪ್ಪನಾಯಕರ ಮಗಳು ಹಿರಿಯಮ್ಮನ ಮಗ ಸದಾಶಿವಯ್ಯಂಗೆ ಮೊಮ್ಮಗನಾದುದರಿಂದಮಾ ಅಂಧಕ ವೆಂಕಟಯ್ಯನ ಮಗಂಗೆ ಶಿವಪ್ಪನಾಯಕನೆಂದು ನಾಮಾಂಕಿತಮಂ ಮಾಡಿ ಆತನ ತಂದೆ ಅಂಧಕ ವೆಂಕಟಯ್ಯ ನೆಂಬಾತನುಮಂ ಸಮೀಪದೊಳಿಟ್ಟುಕೊಂಡು ಅವರ ಮುಖದಲ್ಲಿಯೆ ಸಂಸ್ಥಾನದ ಆರಭಾರಮಂ ನಡೆಸುತ್ತುಮಿರಲಾ ಕಾಲದೊಳ್

ಕಂ || ಆ ಸೋಮಶೇಖರೋರ್ವೀ
ವಾಸನ*ನಂತರದೆ ಸಾರ್ಧಮಾಸತ್ರಯಮಾ
ಭಾಸಂ ಶಿವನೃಪನೆಂದೆನಿ
ಪಾ ಸಮುಚಿತರಹಿತನಾತನರಸೆನಿಸಿರ್ದಂ ೩೦

ವ|| ಇಂತು ಕುತ್ಸಿತ ಶಿವಪ್ಪನಾಯಕನೆಂಬಾತನಂ ಕರ್ತೃನಂ ಮಾಡಿಕೊಂಡು ವರ್ತಿಸುತ್ತುಮಿರುತಿರಲ್ ಬರನೆಮಾವುತ ಮುಂತಾದ ಕುಹಕಿಗಳ್ ರಚಿಸಿದ ಫಿರಿಯಾದಿನಿಂ ನಿಸ್ತರಿಸಲಮ್ಮದೆ ಸ್ಥಳದಿಂ ಮುನ್ನಮೆ ತೊಲಗಿ ಪೋಗಿ ಬಿಳಿಗಿಸೀಮೆಯ ಪ್ರಾಂತದೊಳಿರುತಿರ್ದ ಕಾಸರಗೋಡ ತಿಮ್ಮಣ್ಣನೆಂಬಾತನುಂ ಸಬ್ಬನೀಸ ಕೃಷ್ಣಪ್ಪಯ್ಯನುಮೀ ವೃತ್ತಾಂತಮಂ ಕೇಳ್ದು ಜಾತಪ್ಪನ ಮಗ ಭದ್ರಯ್ಯನ ಮಗನಂ ರಾಜಾಧಿಕಾರಕ್ಕೆ ನಿಲಿಸ ಬೇಕೆಂದು ಆಲೋಚನೆಯಂ ಮಾಡಿಕೊಂಡು ಮೊದಲ್ಪೈತಂದಿರ್ದ ಜನ್ನೋಪಂತನಂ ಸಹಾಯಕ್ಕೆ ಬರಿಸಿಕೊಂಡು ಬಿಳಿಗಿಯವರ ಸೈನ್ಯಮಂ ಕೂಡಿಕೊಂಡು ಬಂದು ನಿಲಲಾ ಕಾಲದೊಳ್ ಅಂಧಕ ವೆಂಕಟಯ್ಯನ ಮುಖದಿಂ ರಾಜ್ಯಾಧಿಕಾರಮಂ ನಡೆಸುತಿರ್ದ ಮರೆಬೋವಿ ಕಂದಾಚಾರದ ಲಕ್ಷ್ಮಯ್ಯ ವೀರಭದ್ರಯ್ಯ ಮುಂತಾದವರೊಂದಾಗಿ ಯುದ್ಧಮಂ ರಚಿಸ ವೇಳ್ಕೆಂದು ಯೋಚಿಸಿ ಮಂದಿಯುಂ ಕೂಡಿಸಿ ಚಿಟನೀಸ ಗಿರಿಯಪ್ಪನಂ ಕಳುಹಲವರಿರ್ವರ್ಗೆ ಕೈಗಲಿಸಿ ತತ್‌ಸಂಗ್ರಾಮದೊಳಾ ಗಿರಿಯಪ್ಪನಮರಲೋಕಮಂ ಪಡೆಯಲೊಡನುಳಿದವರ್ ನಿಸ್ತರಿಸಲಮ್ಮದೆ ಮುರಿದು ಹಳೆಪೈಕದ ಹೆಮ್ಮೆ ವೀರಭದ್ರಣ್ಣ ಸಹಿತಂ ತಿರುಗಿ ಬರಲೊಡನೆ ಮರೆಬೋವಿಯ ಶಿರಚ್ಛೇದನಮಂ ಮಾಡಿಸಿ ಇಕ್ಕಟ್ಟನೊಳಿಂತಿರ್ಪ ವಿಷಮಕಾಲ

---

1 ಚನ್ನಮ್ಮಾಜಿಯವರು ರಾ (ಗ) 2 ರುನಂ ಹಿರೇ (ಗ)
* 'ನಂತರ' ಎಂಬ ಶಬ್ದಪ್ರಯೋಗಕ್ಕೆ ತೃತೀಯಾ ಮತ್ತು ನವಮಾ ಆಶ್ವಾಸಗಳನ್ನು ನೋಡಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಡೊಳಿಂವಿಲ್ಲಿರ್ಪುದನುಚಿತಮೆಂದು ಯೋಚಿ[1]ಸಿ[1] ಚನ್ನಮ್ಮಾ[2]ಜಿ[2] ವೇಣುಪುರದರಮನೆಯಿಂ ತೆರಳ್ದು ಭುವನಗಿರಿಯ ದುರ್ಗದರಮನೆಯಂ ಸಾರ್ದು ಕಾಸರಗೋಡು ತಿಮ್ಮಣ್ಣನಾಯಕ ಸಬ್ಬನೀಸ ಕೃಷ್ಣಪ್ಪಯ್ಯರಂ ನಂಬುಗೆಯ ಮೇಲೆ ಬರಿಸಿಕೊಳಲೊಡನೆ ಅವರೆಲ್ಲರುಂ ಭುವನ ಗಿರಿಯ ದುರ್ಗದ ಪರಿವಾರದವರ್ ಸಹಿತಮೊಂದಾಗಿ ತಮ್ಮ ತಮ್ಮ ರಾಗದ್ವೇಷಮಂ ಮಾಣ್ದು ಏಕಮತದಿಂ ಮಂತ್ರಾಲೋಚನೆಯಂ ರಚಿಸಿ ಜಾತಪ್ಪನ ಭದ್ರಯ್ಯನ ಮಗಂಗೆ ರಾಜ್ಯಾಧಿಕಾರಕ್ಕೆ ಸಂಬಂಧವಿಲ್ಲವೆಂಬುದಂ ನಿಶ್ಚಯಂಮಾಡಿ ಚನ್ನಮ್ಮಾಜಿಯವರ ಸಮ್ಮತಿ ವಿಡಿದು ಅಂಧಕ ವೆಂಕಟಯ್ಯನುಮಂ ತತ್ಪುತ್ರನುಮಂ ಮುನ್ನಿನಂತೆ ಹೊಸಂಗಡಿಯ ಪರಿಸ್ತರಣಕ್ಕೆ ಕಳುಪಿ ತದ್ವೆಂಕಟಯ್ಯನ ಮಗ ಕುತ್ಸಿತ ಶಿವಪ್ಪನಾಯಕನೆಂಬಾತನನಂಗ ವಿಕಲನಂ ಮಾಡಿಸಿ ರಾಜತ್ವಕ್ಕೆ ಚನ್ನಮ್ಮಾಜಿಯನೆ ಅರ್ಹಳಂ ಮಾಡಿಕೊಂಡಿಂತು ಸಂಸ್ಥಾ[3]ನದ ಕಾರ್ಯಂ[3]ಗಳನೆಲ್ಲಮಂ ಚನ್ನಮ್ಮಾಜಿಯ ಮುಖದಲ್ಲಿಯೆ ನಡೆ[4]ಸುತ್ತುಮಿರಲ್[4] [5]ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ[5] ವರ್ಷ ೧೫೫೮ಳನೆಯ ವಿರೋಧಿಕೃತ್ ಸಂವತ್ಸರದ ಫಾಲ್ಗುಣ ಬಹುಳ ೧೦ಯಲ್ಲಿ ಭುವನಗಿರಿಯ ದುರ್ಗದರಮನೆಯಲ್ಲಿ [6]ಸೋಮ ಶೇಖರನಾಯಕರ ಪತ್ನಿ ಚನ್ನಮ್ಮಾಜಿಗೆ ರಾಜಪಟ್ಟಮಾಗಲೊಡನೆ ಚನ್ನಮ್ಮಾಜಿ[6] ಸಕಲ ಸೈನ್ಯ ಸಮೇತ[7]ಳಾ[7]ಗಿ [8]ಭುವನಗಿರಿದುರ್ಗದರಮನೆಯಿಂ[8] ತೆರಳ್ದು ವೇಣುಪುರದ ಕೋಂಟೆಯಂ ಪೊಕ್ಕು ರಾಜಾಲಯಮಂ ಸಾರ್ದು

ಕಂ|| ನೆರೆ ರಾಜಧರ್ಮಮಾರ್ಗದ
ಪರಿಯಂ ಬಲ್ಲವನಿಪಾಲರೊಳ್ ಮಿಗಿಲೆನಿಪಾ
ತರುಣೀನಿಕರಶಿರೋಮಣಿ
ವರಚನ್ನಮ್ಮಾಜಿ ಕೆಳದಿಯಿಳೆಗರಸಾದಳ್ ೩೧

[9]ಅಷ್ಟಮಾಶ್ವಾಸಂ ಸಂಪೂರ್ಣಂ[9]

---

1 ಸಿ ಅಂಧಕ ವೆಂಕಟಯ್ಯನ ಪುತ್ರ ಶಿವಪ್ಪನಾಯಕ... (ಗ) 2 ಜಿಯವರು (ಗ) 3 ನಂಗಳ ವಿಚಾರಮಂ (ಮ) 4 ಸುತ್ತುಮಿರ್ದು (ಗ) ಪುತ್ತಿರ್ದು (ಮ) 5 ಶಕ (ಮ) 6 ರಾಜಪಟ್ಟಮಾಗಿಯವರು (ಮ) 7 ರಾ (ಗ) 8 ಅಲ್ಲಿಂ (ಮ) 9 ಈ ಸೋಮಶೇಖರ ನಾಯಕರ ಕಾಲದೊಳ್ ಬದುಕುಮಾಡಿದ ಮುಖ್ಯಸ್ಥರು—ಪ್ರಧಾನಿ ಆವಿನಹಳ್ಳಿ ನರಸಪ್ಪಯ್ಯ ಕರಣಿಕ ಬಿಳಿಗಿ ಸುಬ್ಬಯ್ಯ ಕೋಳಾಲದ ಕೋನಪ್ಪಯ್ಯ ಸಬ್ಬನೀಸ ಕೃಷ್ಣಪ್ಪಯ್ಯ ಕೂಸಯ್ಯ ಕಂದಾಚಾರದ ಲಕ್ಷ್ಮಯ್ಯ ಚಿಟನೀಸ ಕೃಷ್ಣಪ್ಪಯ ಕೋಳಾಲದ ವೆಂಕಪ್ಪಯ್ಯ ಗಿರಿಯಪ್ಪಯ್ಯ ಪಟ್ಟೀಗಂಗಾಧರಯ್ಯ ಸಂಕಪ್ಪಯ್ಯ ವೆಂಕಟಪ್ಪಯ್ಯ ರಾಯಸದ ಮಲ್ಲಪ್ಪಯ್ಯ ಶರಜಾ ಶಂಕರ ನಾರಾಯಣಯ್ಯ ಬಿಳಿಗಿ ಗಂಗಪ್ಪಯ್ಯ ಯೋಗಪ್ಪಯ್ಯ ಸೀತಪ್ಪಯ್ಯ ಬೆಳವಂದೂರು ಗುರುವಪ್ಪ ನಾಯಕ ಕಾಸರಗೋಡು ತಿಮ್ಮಣ್ಣನಾಯಕ ಬರಮೆಮಾವುತ ಮೊಳೆಯಪ್ಪ ಮರಿಬೋವ ಮಸೂದ ಗರಜಿನಮಲ್ಲಪ್ಪೊಡೇರು ಸರಭೆಲ ಮಲ್ಲಿಕಾರ್ಜುನಯ್ಯ ಮೈದುನ ಕೆಂಚಣ್ಣನ ಮಗ ಸಿದ್ದಪ್ಪ ಹುದಾರ ಶಾಂತಯ್ಯ ಪಟ್ಟಣಶೆಟ್ಟಿ ಬಸೆಟ್ಟರು ಮುಂತಾದವರು ಅಷ್ಟಮಾಶ್ವಾಸಂ ಸಂಪೂರ್ಣಂ (ಕ)

Sri Vidyabharathi Book Centre, Sringeri

CC-O. In Public Domain. Digitized by eGangotri

[1]ನವಮಾ[1]ಶ್ವಾಸಂ

ಕಂ॥ * ವರ ಸೋಮಶೇಖರೇಂದ್ರನ
ತರುವಾಯಿಯೊಳಾಳ್ದ ಕುಶಿವನೃಪನನಂತರಮಾ
ದೊರೆ ಸೋಮಶೇಖರಾಂಗನೆ
ಸುರುಚಿರ ಚನ್ನಾಂಬೆಯಾಳ್ದಳುರ್ವೀತಳಮಂ ೧

ವ॥ ತಮಗೆ ರಾ[2]ಜ[2]ಪಟ್ಟಮಾದ ತರುವಾಯಮಾ ಚನ್ನಮ್ಮಾಜಿಯವರ್ ತಮ್ಮರಸ ಸೋಮಶೇಖರನಾಯಕರಾಳಿಬರುತ್ತಿರ್ದ ರಾಜ್ಯ ರಾಷ್ಟ್ರ ಕೋಶ ಪ್ರಜೆ ಪರಿವಾರ ಪರಿಜನ ಪುರಜನ ನಿಯೋಗಿಜನ ಮಂತ್ರಿಜನ ದೇಶಸೇವಾಜನರ್ ಮುಂತಾದ ಸಮಸ್ತ ಜನರಂ ಸಂರಕ್ಷಿಸುತುಂ ರಾಜ್ಯವಾಳುತಿರ್ದು ಮುಂದೆ ಕೆಳದಿ ಧರ್ಮಸಂಸ್ಥಾನದ ರಾಜತ್ವಕರ್ಹನಾದೊರ್ವ ಕುಮಾರನಾಗಲ್ವೇಳ್ಕೆಂದು ಮಂತ್ರಿಜನ ನಿಯೋಗಿಜನ ಬಂಧುಜನರೋಳಾಲೋಚಿಸಿ ಶಿವಪ್ಪನಾಯಕರ ಜ್ಯೇಷ್ಠಪುತ್ರರಾದ ಭದ್ರಪ್ಪನಾಯಕರುಂ ತಮ್ಮರಸ ಸೋಮಶೇಖರನಾಯಕರಂ ಸಹೋದರರಾದುದರಿಂದೆಯುಂ ಆ ಭದ್ರಪ್ಪನಾಯಕರ ಪತ್ನಿ ಸಿದ್ದಮ್ಮಾಜಿಯವರ್ ನಂಬೆಣ್ಣಶೆಟ್ಟರಮಗ ಮರಿಯಪ್ಪಶೆಟ್ಟರ ಪತ್ನಿಯಾದ ಗೌರಮ್ಮನವರ್ ಈಯಿ[3]ರ್ವರುಮೇ[3]ಕೋದರಿಯರಾದುದರಿಂದೆಯುಂ ಆ ಮರಿಯಪ್ಪಶೆಟ್ಟರ ಪತ್ನಿ ಗೌರಮ್ಮನ ಕುಮಾರರಾದ ಬಸಪ್ಪನವರ್ ಶಿವಪ್ಪನಾಯಕರ ಜ್ಯೇಷ್ಠಕುಮಾರ ಭದ್ರಪ್ಪನಾಯಕರ್ಗೆ ಪುತ್ರವಾವೆಯಾದ ಕಾರಣಮಾ ಭದ್ರಪ್ಪನಾಯಕರನುಜನಾದ ತಮಗೆ ವಲ್ಲಭನಾದ ಸೋಮಶೇಖರನಾಯಕರ್ಗಂ ಪುತ್ರವಾವೆಯೇ ಆದುದರಿಂದಮಾ ಮರಿಯಪ್ಪಶೆಟ್ಟರ ಕುಮಾರ ಬಸವಪ್ಪನವರ್ ಕೆಳದಿಧರ್ಮಸಂಸ್ಥಾನದ ರಾಜತ್ವಕ್ಕರ್ಹರಹುದೆಂದು ಬಸವಪ್ಪನವರಂ ರಾಜತ್ವಕ್ಕೆ ನಿಲಿಸಬೇಕೆಂದು ನಿಶ್ಚಯಂಗೈದು ಸರ್ವಜನ ಸಮ್ಮತಿಯಿಂದಮಾ ಬಸವಪ್ಪನವರ್ಗೆ ಕೆಳದಿನೃಪಾಲ ಬಸವಪ್ಪನಾಯಕರೆಂದು ನಾಮ[4]ಕರ[4]ಣಮಂ ರಚಿಸಿ [5]ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶ[5]ಕ ವರ್ಷ ೧೫೯೫ನೆಯ ಪರೀಧಾವಿ ನಾಮ ಸಂವತ್ಸರದ ಶ್ರಾವಣ ಶುದ್ಧ [6]೧೪[6]ಯ ದಿವಸಮಾ ಬಸವಪ್ಪನಾಯಕರಂ ಗೃಹೀತ ಪುತ್ರನಂ ಮಾಡಿಕೊಂ[7]ಡು[7] ಸರ್ವಸಂಭ್ರಮದಿಂದಮರಮನೆಗೆ ಬಿಜಯಂಗೈಸಿ ತಂದಾ ಕುಮಾರಬಸವಪ್ಪನಾಯ[8]ಕರಂ[8] ಓದು ಸಾಧನೆ ಗಜತುರಗಸ್ಯೆಹಾಳಿ ಮುಂತಾದ

---

[1] ಹತ್ತನೆಯಾ (ಕ) [2] ಜ್ಯ (ಮ) [3] ಬ್ಬರೂ ಹೆಣ್ಣು ಮಕ್ಕಳುಯೇ (ಕ) [4] ಗ್ರಹ (ಮ) [5] ಶ (ಮ) [6] ೪ (ಮ) [7] ಡಾತಂಗೆ (ಮ) [8] ಕಂಗೆ (ಗ)

* ೧ನೆಯ ಪದ್ಯಕೆ ಮೊದಲು 'ಆ ತರುವಾಯ ಚನ್ನಮ್ಮಾಜಿಯವರ' ಎಂಬ ಗ್ರಂಥಭಾಗ (ಮ) ಪ್ರತಿಯಲ್ಲಿ ಅಧಿಕವಾಗಿದೆ

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಜೋಪಯುಕ್ತಮಾದ ಸಮಸ್ತ ವಿದ್ಯಂಗಳಲ್ಲಿಯುಂ ಪರಿಣತರಂ[1] ಮಾಡಿಸಿ[1] ಕುಮಾರ ಬಸವಪ್ಪನಾಯಕರಂ ಮುಂದಿಟ್ಟುಕೊಂಡು ಸದ್ಧರ್ಮದಿಂ ರಾಜ್ಯಂಗೆಯ್ಯುತ್ತುಮಿರ್ದು ಕಾಸರಗೋಡು ತಿಮ್ಮಣ್ಣನಾಯಕನೊಡನೆ ಸೇನಾಸಮೂಹಮಂ ತೆರಳ್ಚಿಸಿ ಕಳುಹಿ

ಕಂ॥ ಯವನರ್ ಬಿಡದಾಕ್ರಮಿಸಿದ
ತವನಿಧಿ ಹೊನ್ನಾಳಿ ಜಡೆಯದುರುಕೋಂಟೆಗಳಂ
*ಬವರದೊಳ್ ಕೊಂಡವಿದ್ಧ
ಶ್ರವಣರ ಕಾಲ್ದೆಗೆಸಿ ಬಾಹುಬಲಮಂ ಮೆರೆದಳ್ ೨

ವ॥ ಮತ್ತಮಲ್ಲದೆ ಸರಪನಮಲುಕನೆಂಬ ತಾಮ್ರಮುಖಂ ತಾಂ ದಿವಾಣದ ವಕೀಲಿಯಾಗಿ ವರ್ತಿಸುತ್ತುಮಿರ್ದು ಅವಂ ಮುನ್ನಾಳ್ದ ಪಂಚಮಹಲೊಳಗಣ ಮಿಡಿಜೆಯೆಂಬ ಪರಿಸ್ತರಣಮಂ ಸೋದೆಯವರಾಕ್ರಮಿಸಿ ಹನುಮನಾಯಕನೆಂಬಧಿಕಾರಿಯನಿಟ್ಟು ತನ್ನಾಧೀನಮಂ ಮಾಡಿಕೊಂಡು ವರ್ತಿಸುತ್ತುಮಿರಲಾ ಕಾಲದೊಳ್ ಕಾಸರಗೋಡು ತಿಮ್ಮಣ್ಣನಾಯಕನೊಡನೆ ಸೇನಾಸಮೂಹಮಂ ತೆರಳ್ಚಿಸಿ ಕಳುಹಿ

ಕಂ॥ *ಹನುಮನಾಯಕನ ದರ್ಪದ
ಮೊನೆಯಂ ಮುರಿದಾ ಸುಧಾಪುರಾಧಿಪರೊಳಗಿ
ರ್ದನುಪಮ ಮಿಡಿಜೆಯ ಕೋಂಟೆಯ
ನನುವರದೊಳ್ ಕೊಂಡು ಮೆರೆದಳತಿಸಾಹಸನುಂ ೩

ವ॥ ಮತ್ತಮದಲ್ಲದೊಂದವಸರದೊಳಿತ್ತಂ ಕಡೆಯವನಿಯೊಳ್ ಕಲ್ಯಾಣಪುರದ ಪರಿಸ್ತರಣದೊಳ್ ಸದಾಶಿವಯ್ಯನೆಂಬ ಕುಮಾರಸಹಿತಮಂಕೆಯೊಳಿರುತಿರ್ಪ ಜಾತಪ್ಪನ ಭದ್ರಪಂ ಘಟ್ಟದ ಕೆಳಗಣ ರಾಜ್ಯಕ್ಕೆ ತಾನಧಿಕಾರಿಯಾಗಬೇಕೆಂಬಪೇಕ್ಷೆಯಿಂ ಚೌಟ ಬಂಗಾಜಲ ಸಾವಂತ ಮುಂತಾದ ತುಳುವ ಮನ್ನೆಯರ್ಕಳ್ಗಂ ಬೋಧಿಸಿ ಕಾರಕಳ ಮಲ್ಲಿಕಾರ್ಜುನಗಿರಿ ಮುಂತಾದ ಕೋಂಟೆಗಳಂ ಸ್ವಾಧೀನಮಂ ಮಾಡಿಕೊಂಡಿದಿರ್ಚಿ ಗರ್ವೋದ್ರೇಕದಿಂ ವರ್ತಿಸುತ್ತುಮಿರಲಲ್ಲಿಗೆ ದಳವಾಯಿ ಭದ್ರಪನೊಡನೆ ಸೈನ್ಯಮಂ ತೆರಳ್ಚಿಸಿ ಕಳುಹಿ

ಕಂ॥ ಆ ತುಳುವನೃಪರ ಕುಮತದ
ರೀತಿಯನುರೆ ನಿಲಿಸಿ ಕೊಂಡು ನಿಜಕೋಂಟೆಗಳಂ
ಜಾತಪನ ಭದ್ರಪನ ತ
ಜ್ಞಾತನುಮಂ ಪಿಡಿಸಿ ಶಾಸ್ತಿಯಂ ಮಾಡಿಸಿದಳ್ ೪

---

[1] ನಂ ಮಾಡಿ (ಗಮು)

Sri Vidyabharathi Book Centre, Sringeri

CC-O. In Public Domain. Digitized by eGangotri

ವ|| ಮತ್ತಮುದಲ್ಲದೆ ಸಬ್ಬುನೀಸಕೃಷ್ಣಪ್ಪಯ್ಯ ಕಾಸರಗೋಡು ತಿಮ್ಮಣ್ಣನಾಯಕ ರೊಡನಸಂಖ್ಯಾತವಾದ ಸೇನಾಸಮೂಹಂ ತೆರಳ್ಚಿಸಿ ಕಳುಹಿ

ಕಂ|| ಮಾಯಾವಾದಿಗಳುರುದಳ
ವಾಯಿಕುಮಾರ[1]ಯ್ಯನದಟನುಡುಗಿಸಿ ಬಲನಂ[1]
ನೋಯಿಸಿ ವಸುಧಾರೆಯ ಕನು
ನೀಯ ಪರಿಸ್ತರಣಮಂ ಕರಂ ವಶಗೈದಳ್ ೫

ವ|| ಇಂತು ಮೈಸೂರಮಹೀಪನ ದಳವಾಯಿ ಕುಮಾರಯ್ಯನಂ ಪಲಾಯನಂ ಗೊಳಿಸಿ ವಸುಧಾರೆಯ ಕೋಂಟೆ ಸೀಮೆಗಳಂ ಸ್ವಾಧೀನಂಗೈದು ಸುಖದಿಂ ರಾಜ್ಯಂಗೆಯುತ್ತು ಮಿರಲಿತ್ತಮತ್ಯಂತಗರ್ವೋದ್ರೇಕದಿಂ ಸೋದೆಯ ರಾಮಚಂದ್ರನಾಯಕಂ ಮಿಡಿಜೆಯ ಕೋಂಟೆಯಂ ತೆಗೆದು ಕೊಳಲ್ಕೇಳ್ದು ಸಬ್ಬುನೀಸಕೃಷ್ಣಪ್ಪಯ್ಯನೊಡನೆ ಸೈನ್ಯಮಂ ತೆರಳ್ಚಿಸಿ ಕಳುಹಿ ಯುದ್ಧರಂಗದೊಳಾ ಮಿಡಿಜೆಯ ಕೋಂಟೆಯಂ ಮಗುಳ್ದು ಸ್ವಾಧೀನಂಗೈದಳಂತು ಮಲ್ಲದೆಯುಂ

ಕಂ|| ಸಿರಸೆಯ ಸೋದೆಯ ಸುಪರಿ
ಸ್ತರಣಗಳಂ ಕೊಂಡು ತತ್‌ಸುಧಾಪುರದವನೀ
ಶ್ವರನ ಬಿರುದಗಳನೀಳ್ದಾ
ದೊರೆ ಚನ್ನಮ್ಮಾಜಿ ಮೆರೆದಳತಿವಿಕ್ರಮಮಂ ೬

ವ|| ಇಂತು ಸಿರಸೆ ಸೋದೆಗಳ ಪರಿಸ್ತರಣಂಗಳಂ ಕೊಂಡಾ ಸುಧಾಪುರಾಧಿಪನಂ ಪಲಾಯನಂಗೊಳಿಸಿ ತತ್‌ಸುಧಾಪುರದೊಳ್ ಸ್ವಸೈನ್ಯಮಂ ನಿಲಿಸಿ ಅವರಾಳ್ವ ನಾಡೊಳಗಣ ಬನವಸೆ ಬದನಗೋಡು ಬಾಳೂರ್ ಪುಲಿಯಕೆಣ್ಣಿ ಕರುವೂರ್ ಮುಂತಾದ ಸೀಮೆಗಳು ಸ್ವಾಧೀನಮಂ ಮಾಡಿಕೊಂಡವರ ಬಿರುದಿನ ನೀಲಚ್ಛತ್ರಮಂ ಕೆಳದಿ ವೀರಭದ್ರದೇವರ್ಗೆ ಕಾಣ್ಕೆಯಂ ಕಳುಪಲವರ್ ನಿಸ್ತೇಜಸ್ಕರಾಗಿ ಸಂಧಿಯನಪೇಕ್ಷಿಸಿ ದೈನ್ಯಭಾವದಿಂ ಪೊಕ್ಕು ಪೇಳಿಸಲತ್ಯಂತಕಾರುಣ್ಯದಿಂದಾಗಲವರ್ಗೆ ಸೋದೆ ಮುಂತಾದ ಕೆಲವು ಸೀಮೆಗಳನಿತ್ತು ಬನವಸೆ ಮುಂತಾದ ಕೆಲವು ಸೀಮೆಯಂ ಸ್ವಾಧೀನಮಂ ಮಾಡಿಕೊಂಡಿಂತೀ ಪ್ರಕಾರದಿಂ ಸುಧಾಪುರದರಸರ ಗರ್ವಮಂ ಮುರಿದು ಮಗುಳ್ದವರಂ ಸಂಸ್ಥಾನದೊಳ್ ನಿಲಿಸಿ ಪರಮ ಪ್ರಖ್ಯಾತಿಯಂ ಪಡೆದತ್ಯಂತಸಂತೋಷದಿಂ ರಾಜ್ಯವಾಳುತ್ತುಂ ಕುಮಾರ ಬಸವಪ್ಪ ನಾಯಕರ್ಗೆ ಕಾಳಯುಕ್ತಿ ಸಂವತ್ಸರದ ಮಾರ್ಗಶಿರ ಮಾಸದಲ್ಲಿ ಹೆಬ್ಬೆ ಮಹಂತಯ್ಯನ ಕುಮಾರಿ ಚನ್ನಮ್ಮಾಜಿಯವರ್ ಮಳಿಗೆ ಚನ್ನವೀರಪ್ಪನ ಕುಮಾರಿ ಬಸಮ್ಮಾಜಿಯವರ್

---

[1] ಆನಂದಸಂವತ್ಸರದೊಳ್ (ಕ)

Sri Vidyabharathi Book Centre, Sringeri

CC-O. In Public Domain. Digitized by eGangotri

ಇಂತಿರ್ವರ್ ಕನ್ಯಾರತ್ನಂಗಳನತ್ಯಂತ ಸಂಭ್ರಮದಿಂ ವಿವಾಹಮಂ ರಚಿಸಿಯನಂತರಂ ಸಬ್ಬನೀಸಕೃಷ್ಣಪ್ಪಯ್ಯನೊಡನೆ ಸೈನ್ಯಮಂ ಕೂಡಿಸಿ ಕಳುಹಿ ದಿವಾಣದ ವಕೀಲಿಯೊಳಿರುತಿರ್ದ ಬಸವಾಪಟ್ಟಣಮಂ ಸ್ವಾಧೀನಂಗೈದು ಮತ್ತಮಾ ಸಬ್ಬನೀಸಕೃಷ್ಣಪ್ಪಯ್ಯನಂ ತೆರ[1]ಳ್ಚಿಸಿ[1] ಕಳುಹಿ

ಕಂ|| [2]ಧುರದೊಳ್ ಕಡವೂರ್ ಬಾಣಾ
ವರ[3] ಹಾಸನಮಂ ಸುರಮ್ಯಬೇಲೂರ ಪರಿ
ಸ್ತರಣಮುಮಂ ಕೊಂಡು ಮಹ
ತ್ತರ ಮೈಸೂರವರ ಮದವನುರೆ ಮಗ್ಗಿಸಿದಳ್ ೭

ವ|| ಇಂತು ಮಾಯಾವಿಗಳ ಮದಮಂ ಮಗ್ಗಿಸಿಯವರ ನಾಡೊಳಗಣ ಕಡವೂರ್ ಬಾಣಾವರ ಹಾಸನ ಬೇಲೂರ ಪರಿಸ್ತರಣ ರಾಜ್ಯಂಗಳಂ ಸ್ವಾಧೀನಂಗೈದ[4]ನಂತರಂ[4] ಗೋಕರ್ಣಯಾತ್ರೆಯಂ ರಚಿಸಿ ಮಹಾಬಲೇಶ್ವರಾದಿ ಲಿಂಗಸಂದರ್ಶನಪೂಜಾದಿಗಳಂ ನಿರ್ಮಿ[5]ರ್ಚಿ[5] ಮಗುಳ್ದೆಳ್ತಂದು ವೇಣುಪುರವರಮಂ [6]ಸಾರ್ದು[6] ಸುಖದಿಂ ರಾಜ್ಯಂಗೆಯ್ಯುತ್ತಮಾ ಚನ್ನಮ್ಮಾಜಿ ತಾಂ ಪೋಷಿಸುತಿರ್ದ ಕುಮಾರಿ ಮರಿಚನ್ನಮ್ಮಾಜಿಯ[7]ನ[7] ಕ್ಷಯ ಸಂವತ್ಸರದ ವೈಶಾಖ ಮಾಸದಲ್ಲಿ ಸಿದ್ದಮ್ಮಾಜಿಯವರ ಮಗ ಮಲ್ಲಿಕಾರ್ಜುನ ನಾಯಕಂಗತ್ಯಂತ ಸಂಭ್ರಮದಿಂ ವಿವಾಹಮಂ ರಚಿಸಿ ತದ್ವಿವಾಹಮಹೋತ್ಸವಕಾಲದೊಳೈದಿದ ಸೋದೆಯ ಅರಸಪ್ಪನಾಯಕ ರಾಮಚಂದ್ರನಾಯಕರನುಜನೆನಿಪ ಸದಾಶಿವ ನಾಯಕಂ ತನ್ನು ಸೀಮೆಯನೀಯಲ್ವೇಳ್ಕೆಂದು ಪೇಳಿಸಲ್ ದಯೆಯಿಂ ಮುನ್ನಮಧೀನಂಗೈದ ಬನವಸೆ ಮುಂತಾದ ಸೀಮೆಗಳನಿತ್ತು ಬೀಳ್ಕೊಟ್ಟು ಭಾಗಾನಗರದವರ ಬಗೆಯ(?) ಪೆದೂರ ಲಿಂಗಪ್ಪಂ ಬಿಗಡಿಸಿ ಬಂದಿರಲಾತನಂ ಬಸವಾಪಟ್ಟಣದೊಳಿಟ್ಟು ಸಂತಸಂಬಡಿಸಿಯನಂತರಂ ಜರಿಮಲೆಯರಸನ ಪ್ರತಾಪಾತಿಶಯಮಂ ಕೇಳ್ದು ಸಬ್ಬನೀಸಶರಜಾಶಂಕರನಾರಾಯಣಯ್ಯನಂ ತೆರ[5]ಳ್ಚಿಸಿ[5] ಕಳುಹಿ

ಕಂ|| ಮೆರೆವ ಮೊಳಕಾಲ ಬಾಸಿಗ
ದುರುಬಿರುದಂ ಧರಿಸಿ ಶೌರ್ಯದಿಂ ಮಾರ್ಮಲೆವಾ
ಜರಿಮಲೆಯರಸನುಮಂ ಸಂ
ಗರದೊಳ್ ಸೆರೆವಿಡಿದು ಬಾಹುಬಲಮಂ ಮೆರೆದಳ್ ೮

ವ|| ಇಂತತ್ಯಂತಪರಾಕ್ರಮಶಾಲಿಯಪ್ಪ, [8]ಜ[8]ರಿಮಲೆಯರಸನಂ ಕೈಸೆರೆವಿಡಿದು ಮೊಳಕಾಲ ಬಾಸಿಗದ ಬಿರುದಂ ಕಳಲ್ಚಿಸಿ ಕೈಗಾಯ್ದುಳುಹಿ ಕಳುಹಿದಳಂತುಮಲ್ಲದೆಯುಂ

---

[1] ಳ್ಚಿ (ಗ) [2] ರೌದ್ರಿಸಂವತ್ಸರದಲ್ಲು (ಕ) [3] ದುರ್ಮತಿಸಂವತ್ಸರದಿ (ಕ) [4] ಅನಂತರ ಮಾಚನ್ನಮ್ಮಾಜಿ (ಕ) [5] ಳ್ಚಿ (ಕ) [6] ಪೊಕ್ಕು (ಮ) [7] ವರನು (ಗ) [8] ಮತ್ತಂ ಜ (ಮ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ॥ ಭೂಮಹಿತ ಯವನರೊಳ್ ಸಂ
ಗ್ರಾಮದೆ ಮುರಿದ್ಪೈದಿ ಪೊಕ್ಕ ಮನ್ನೆಯ ರಾಜೇ
ರಾಮನನುರೆಕಾಯ್ದು ನೃಪ
ಸ್ತೋಮದೊಳತ್ಯಧಿಕಕೀರ್ತಿಯಂ ಮಿಗೆ ಪಡೆದಳ್ ೯

ವ॥ ಆ ವಿವರಣಮೆಂತೆಂದೊಡಾರೆಯರ ಮೂಲಮುಮನಾ ರಾಮರಾಜನಂ ಪಿಡಿಯಲ್ಪೈದಿದ ತುರುಷ್ಕರ ಮೂಲಮುಮನಾ ತುರುಷ್ಕರಾಮರಾಯರ್ಗಂ ವಿರೋಧಂ ಪುಟ್ಟಿದ ಕಾರಣಮುಮನುಸಿರ್ವನದಕ್ಕೋಸುಗಂ ಮೊದಲೊಳಾರೆಯರ ಮೂಲವೃತ್ತಾಂತಮಂ ಬಿತ್ತರಿಸೆನದೆಂತೆಂದೊಡೆ:—ಕುರುಕ್ಷೇತ್ರಸಮೀಪದೊಳ್ ಕಾಶಿಯ ಡಿಳ್ಳಿಯ ವಾಯವ್ಯದಿಕ್ಕಿನ ತಾಣದೊಳ್ ಕ್ಷತ್ರಿಯರ್ಗೆ ಮೂಲಸಂಸ್ಥಾನಮಾದ ಚಿತ್ತೋಡೆಂಬ ಗಡಮೊಪ್ಪುತಿರ್ಪುದು ಚಿತ್ತಕ್ಕೆ ಭಯಮಂ ಪುಟ್ಟಿಸುತಿರ್ದುದರಿಂ ಚಿತ್ತೋಡೆಂಬ ನಾಮಮಾದುದಾ ಚಿತ್ತೋಡೆಂಬ ಗಡಂ ಸುತ್ತಿನೈದುಯೋಜನ ವಿಸ್ತೀರ್ಣದಿಂ ಸಮಸ್ತಧನಧಾನ್ಯಪುಷ್ಪಫಲಸಮೃದ್ಧಿಯಿಂ ಸತತಂ ವಿರಾಜಿಸುತ್ತುಮಿರ್ಪುದಾ ಚಿತ್ತೋಡ ಸಂಸ್ಥಾನಾಧಿಪತಿಗಳಾದ ಭಾರದ್ವಾಜಗೋತ್ರಜರೆನಿಪ ಕ್ಷತ್ರಿಯರಾಜರ್ ಪರಂಪರೆಯಿಂ ರಾಣರೆಂಬಭಿಧಾನಮನಾಂತು ರಾಜ್ಯಪ್ರತಿಪಾಲನಂಗೆಯುತಿರ್ದರಾ ಕ್ಷತ್ರಿಯಕುಲಪರಂಪರೆಯೊಳುದ್ಭವಿಸಿದ ರಾಣನೆಂಬ ರಾಜನಾ ಚಿತ್ತೋಡ ಸಂಸ್ಥಾನದೊಳೊಪ್ಪುತಿದನಾ ರಾಣನೆಂಬಾತಂಗೆ ರೂಪವತಿಯಾದ ಪದ್ಮಿನೀಜಾತಿಯ ಕುಮಾರಿಯುದಿಸಲಾ ಕುಮಾರಿಯಂ ಪೋಷಿಸುತ್ತುಮಾ ರಾಣಂ ರಾಜ್ಯವಾಳುತ್ತಿರಲಾ ಪದ್ಮಿನೀಜಾತಿಯ ಕುಮಾರಿಯ ರೂಪಲಾವಣ್ಯ ಗುಣಗಣಶೀಲಮಂ ಡಿಳ್ಳಿಯನಾಳುತಿರ್ದಕಬರಪಾತುಶಾಹಂ ಕೇಳ್ದು ಸೈನ್ಯಸಮೇತನಾಗಿ ತಾನೇ ತೆರಳ್ದೈತಂದಾ ಚಿತ್ತೋಡೆಂಬ ಗಡಮಂ ವೇಷ್ಟೈಸಿ ನೆಲದಂಡಿಳಿದು ಆ ಸಂಸ್ಥಾನಮಂ ಸಾಧಿಸವೇಳ್ಕೆಂದು ಪನ್ನೆರಡು ವರುಷಂಬರಂ ಬಹುವಿಧಪ್ರಯತ್ನಂಬಟ್ಟೊಡಮಾ ಗಡಂ ಸಾಧ್ಯಮಾಗದಿರ್ಪುದಂ ಕಂಡು ಪ್ರಚ್ಛನ್ನವೇಷದಿಂದಕಬರಪಾತುಶಾಹನಾ ಗಡಮನೊಳಪೊಕ್ಕು ವಸಿಷ್ಠಗೋತ್ರಜನಾದ ರಾಣನ ಅಳಿಯ ರಾಮಸಿಂಗನ ಬಳಿಯೊಳ್ ಮುಖ್ಯಸೇವಕನಾಗಿ ವರ್ತಿಸುತ್ತಿರ್ದೊಂದವಸರದೊಳ್ ರಾಮಸಿಂಗನೆಂಬವನ ಸಂಗಡಮೇ ತಾನರಮನೆಯೊಳಪೊಕ್ಕು ಆ ರಾಣನ ಸಮೀಪಕ್ಕೈದಲಾ ರಾಣಂ ಸಿಂಹಾಸನದಿಂದಿಳಿದು ನಿಂದಿರಲದಂ ರಾಮಸಿಂಗಂ ಕಂಡು ಭಯದಿನೈದುತ್ತೆನ್ನಂ ಕಂಡೇಂ ಕಾರಣಂ ಸಿಂಹಾಸನವನಿಳಿದಿರೆಂದು ಬೆಸಗೊಳಲಾಂ ನಿನ್ನಂ ಕಂಡು ಸಿಂಹಾಸನದಿಂದಿಳಿದವನಲ್ಲಂ ನಿನ್ನ ಸಂಗಡಮೈದಿದವನಂ ಕಂಡಾಂ ಸಿಂಹಾಸನವನಿಳಿದೆನೆಂದಾ ಅಕಬರಪಾತುಶಾಹನಂ ರಾಣಾರಾಯಂ ಕೈವಿಡಿದು ಸಿಂಹಾಸನದೊಳ್ ಕುಳ್ಳಿರಿಸಿ ಆ ಚಿತ್ತೋಡಗಡಮಂ ನಜರುಗಾಣಿಕೆಯಂ ಮಾಡಿ ನೀವಿಲ್ಲಿಗೆಯ್ದಿದ ಪದನೇನೆನ್ನಿಂದಪ್ಪ ಕಜ್ಜಮೇನೆಂದು ಬೆಸಗೊಳಲ್ ನಿನ್ನ ಕುಮಾರಿಯಾದ ಪದ್ಮಿನಿಯಂ ನೋಡಲೆತ್ತಂದೆನೆನಲಂತಾದೊಡೊಳ್ಳಿತೆಂದು ಪದ್ಮಿನಿಯಿಂ ಬರಿಸಿ ಕಾಣಿಸಲಾಗಳಾ ಅಕಬರಪಾತುಶಾಹನಾ ಪದ್ಮಿನಿ ತನ್ನ ಮಗಳೆಂದು ತೊಡೆಯ ಮೇಲೆ ಕುಳ್ಳಿರಿಸಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊಂಡು ಮುದ್ದಾಡಿ ರಾಣನಂ ಕರೆದು ನೀನೆನಗಿತ್ತ ಚಿತ್ತೋಡಗಡಮಂ ಭಾಷಾಪೂರ್ವಕಮಾಗಿ ನಿನ್ನ ಮಗಳಾದ ಪದ್ಮಿನಿಗಿತ್ತೆನೆಂದುಸಿರಲಾ ಮಾತಂ ಪದ್ಮಿನಿ ಕೇಳ್ದು ತನ್ನ ತಂದೆಯು ಮೇಲೆ ಪ್ರತ್ಯರ್ಥಿಯಾಗಿ ದಂಡೆತ್ತಿ ಬಂದಾತನಿತ್ತ ಗಡ[1]ಮಂ ತಾಂ[1] ಸರ್ವಥಾ ಅಂಗೀಕರಿ[2]ಸು[2]ವವಳಲ್ಲವೆಂದು ತನ್ನ ತಂದೆ ರಾಣನೊಡನುಸಿರಲಾಗಳಾ ಗಡಕೊರ್ವರುಮಧಿಕಾರಿಗಳಿಲ್ಲದಿರಲಾಗಳಾ ರಾಣ[3]ನು[3]ಮಕಬರಪಾತುಷಾಹ[4]ನುಮಿ[4]ರ್ವರುಮೈಕಮತ್ಯಮಾಗೆ ಮಾತನಾಡಿ ಈ ಚಿತ್ತೋಡಗಡಮೆಮ್ಮಿರ್ವರ್ಗಂ ಬೇಡಮೆಂದರಮನೆಯ ಬಾಗಿಲಂ ಪೃಥಮಾಗಿ ಬೀಗಮುದ್ರೆಯಂ ಮಾಡಿಸಿ ಅಕಬರಪಾತುಶಾಹಂ ಮುತ್ತಿಗೆದೆಗೆದು ಡಿಳ್ಳಿಯಂ ಸಾರಲಿತ್ತಲೀ ರಾಣಂ ಮಗಳ್ವೆರಸು ಆ ಚಿತ್ತೋಡಗಡದ ಸಮಿಾಪದೊಳಿರುತಿರ್ದ ಉದಯಪುರಮೆಂಬ ಪಟ್ಟಣಮಂ ಸಾರ್ದು ಸಕಲ ರಾಜವಿಭವಸಹಿತಂ ತಾನಲ್ಲಿಯೆ ನೆಲೆಯಾಗಿ ನಿಂದು ತನ್ನ ಪತ್ನಿಯೊಳೊರ್ವ ಕುಮಾರನಂ ಪಡೆದಾ ಕುಮಾರಂಗೆ ರಾಣನೆಂದು ಪೆಸರನಿಟ್ಟು ಪೋಷಣಮಂ ಮಾಡುತಿಂತಿರುತಿರ್ದಾ ರಾಣನೊಂದವಸರದೊಳ್ ಸ್ವಾರಿಮಾರ್ಗಮಂ ಪೋಗಿ ಬರುತ್ತುಂ ತತ್ಪುರದೊಳಿರ್ಪೊರ್ವ ವರ್ಧಕಿಯ ಮಗಳಂ ಕಂಡು ಕಾಮಿಸಿ ಆಕೆಯಂ ಪರಿಗ್ರಹಿಸಿ ಕೆಲಕಾಲಂ ವರ್ತಿಸುತ್ತುಮಿರಲಾ ಬಡಗಿಯ ಮಗಳ ಗರ್ಭದೊಳಿರ್ವರ್ ಕುಮಾರರುದ್ಭವಿಸಲವರ್ಗೆ ಶಿವಾಜಿ ಸಂಬಾಜಿಯೆಂದು ನಾಮಕರಣಮಂ ರಚಿಸಿ ಪೋಷಿಸುತ್ತುಮಿರಲ್ ಕತಿಪಯವತ್ಸರಂ ಪೋಗಲೊಡನೊಂದವಸರದೊಳಾ ರಾಣಾರಾಯನ ಕುಮಾರನಾದ ರಾಣಂ ಶಿವಾಜಿ ಸಂಬಾಜಿಗಳ್ವೆರಸು ತಾ[5]ಮ[5]ನ್ಯೋನ್ಯಮೈತ್ರಿಯಿಂ ಮೂವರ್ ಕುವರರೊಂದಾಗಿ ಮೃಗಯಾವ್ಯಸನಕ್ಕೈದಿ ಬೇಂಟೆಯನಾಡಿ ಬಳಲ್ದಾ ಮೂವ[6]ರು ಮೊಂ[6]ದು ವೃಕ್ಷಚ್ಛಾಯೆಯಂ ಸಾರ್ದು ಮಲಗಿರಲವರೊಳಾ ಶಿವಾಜಿಯೆಂಬವಂ ರಾಣನಂ ಕರೆದೀ ವೃಕ್ಷದ ಜಾತಿಯ ಪೆಸರೇನೆಂದು ಬೆಸಗೊಳಲಾಂ ಕ್ಷತ್ರಿಯಪುತ್ರನೀವೃಕ್ಷದ ಜಾತಿ ಸ್ವಭಾವಮಂ ವರ್ಧಕಿಸ್ತ್ರೀಸಮುದ್ಭವರೇ ಬಲ್ಲರೆನಲಾ ಮಾತು ತಮ್ಮ ಮರ್ಮಮಂ ತಾಗಲಾಗಳಾ ಮಾತಂ ಶಿವಾಜಿ ತನ್ನ ಮನದೊಳಿಟ್ಟು ಸ್ವೈರಿಸಿಯಾ ಮೂವರುಮುದಯಪುರಕ್ಕೈತಂದ ಬಳಿಕ್ಕಂ ಆ ಶಿವಾಜಿ ಸಂಬಾಜಿಗಳಾಲೋಚಿಸಿ [7]ತಾಂ[7] ಬಡಗಿವೆಣ್ಣಿನೊಳುದ್ಭವಿಸಿದ ಮುಂ[8]ದೆ[8] ರಾಜತ್ವಕ್ಕನರ್ಹರಾದೆವಿನ್ನಿಂತಿರ್ಪುದನುಚಿತಮೆಂದು ತತ್ಪುರದೊಳಿರ್ಪ ಓಂಕಾರೇಶ್ವರಲಿಂಗಮಂ ಭಜಿಸಲಾ ಓಂಕಾರೇಶ್ವರಂ ಶಿವಾಜಿಯ ಸ್ವಪ್ನದೊಳ್ ಬ್ರಾಹ್ಮಣವೇಷದಿಂ ಪ್ರಸನ್ನನಾಗಿ ನಿಮಗೆ ರಾಜತ್ವಮನಿತ್ತಪೆನಿದಕ್ಕೆ ಕುರುಹೇನೆಂದೊಡೆ ನೀವಿರ್ವರುಂ ಮುನ್ನಿನಂತೆ ಮೃಗಯಾವ್ಯಸನಕೆಂದೈದಲ್ ನೀಂ ತೊಟ್ಟಂಗಿಯ ಸೆರಗೊಂದುಗಿಡಕ್ಕೆ ಸಿಲುಂಕುವುದಲ್ಲಿಯಗುಳ್ಚಿಸಿ ನೋಡಲಪರಿಮಿತ ನಿಕ್ಷೇಪಂ ಕೈಸಾರ್ವುದದರಿಂ ಮುಂದೆ ನೀಂ ದಿನದಿನದೊಳ್ ವರ್ಧಿಷ್ಣುಗಳಾಗಿ ಪ್ರತ್ಯೇಕರಾಜರೆನಿಸಿ ಪ್ರಸಿದ್ಧಿಯಂ ಪಡೆವಿರೆಂದುಸಿರ್ದು

---

1 ಮಂ (ಗ) 2 ಸಲ್ಪಡು (ಗ) 3 ಣ (ಗ) 4 ರಿ (ಗ) 5 ವು ಆ (ಗ) 6 ರುಂ ನಿಬಿಡ ಮಾದೊಂ (ಗ) 7 ತಾವು (ಗ) 8 ತೆ ತಾವು (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಯುಮಾಗಲ್ಕೆಚ್ಚತ್ತು ತಾನಾ ಸ್ವಪ್ನಾಭಿಪ್ರಾಯಮಂ ಮನದೆಗೊಂಡು ತನ್ನ ತಮ್ಮ, ಸಂಬಾಜಿಗುಸಿರ್ದು ಈ ಸ್ವಪ್ನಾಭಿಪ್ರಾಯಫಲ ನಿದರ್ಶನಮಂ ನೋಡವೇಳ್ಕೆಂದು ಮೃಗಯಾ ವ್ಯಸನವ್ಯಾಜದಿಂ ತಾಮಿರ್ವರುಮೊಂದಾಗಿ ವೈಹಾಳಿಯಂ ಪೊರಟು ಪೋಗುತ್ತಿರಲಾ ವೇಳೆಯೊಳ್ ಶಿವಾ[1]ಜಿ[1] ತೊಟ್ಟಿರ್ದಂಗಿಯ ಸೆರಗೊಂದು ಗಿಡುವಿಂಗೆ ತೊಡಂಗಲಲ್ಲಿ ನಿಂದು ಆ ತಾಣವ[2]ನು[2]ಗುಳ್ಚಿಸಿ ನೋಡಲಲ್ಲಿ ಭೂರಿನಿಕ್ಷೇಪಮಿರಲದಂ ಸಾಧ್ಯಮಂ ಮಾಡಿಕೊಂಡು ಬಳಿಕ್ಕಾ ಶಿವಾಜಿ ಸಂಬಾಜಿಯೆಂಬಿರ್ವರುಂ ಕಾಶೀಕ್ಷೇತ್ರಕ್ಕೈದಿ ನಾಗಭಟ್ಟನೆಂಬ ವಿಧ್ವಾಂಸನಂ ಬರಿಸಿಕೊಂಡು ತಮ್ಮ ಮೂಲವೃತ್ತಾಂತಮನೆಲ್ಲಮನುಸಿರಲಾ ವೃತ್ತಾಂತಮನೆಲ್ಲಮಂ ಕೇಳ್ದು [3]ನೀಂ[3] ಜನಿಸಿದ ಭೂಮಿ ನೀಚಜಾತಿಯದಾದೊಡಮಾ ಭೂಮಿಯಲ್ಲಿ ಬಿತ್ತಿದ ಬೀಜಂ ಕ್ಷತ್ರಿಯಬೀಜಮಾದ ಕಾರಣದಿಂ [3]ನೀಂ[3] ಉಪನಯನಕ್ಕರ್ಹರೆಂಬುದುಸಿರ್ದು ಬಳಿಕ್ಕ [4]ವ[4]ರ್ಗಂ ಭಾರದ್ವಾಜಗೋತ್ರಜರೆಂದು ಉಪನಯನಮಂ ರಚಿಸಿ ಬೀಳ್ಕೊಡ[5]ಲ್ ಬಳಿಕ್ಕಂ[5] ಕ್ಷತ್ರಿ[6]ಯವಂ[6]ಶಜರಾದ ರಜಪೂತರ್ಗೆ ದಾಯಾದರೆನಿಸಿ ಪ್ರಖ್ಯಾತಿವೆತ್ತ ಶಿವಾಜಿ ಸಂಬಾಜಿಯೆಂಬಿರ್ವರುಂ ಪ್ರತ್ಯೇಕವಜೀರರೆಂದೆನಿಸಿ ವರ್ತಿಸುತ್ತುಮಿರ್ದರ್ ಮುಂತವರ ವಂಶಪರಂಪರೆಯೊಳ್

ಕಂ|| ಹರಿಜಿಯೊಗೆದಂ ತದಾತ್ಮಜ
ನುರತರ ನೇತೋಜಿ ತತ್ಸುತಂ ಶಾಜಿಯುಮಾ
ವರಶಾಜಿಯ ಸುಕುಮಾರರ್
ಪರಿಕಿಸೆ ವಿಲಸಚಿ ವಾಜಿ ಯೇಕೋಜಿ ವಲಂ ೧೦

ವ|| ಇಂತೊಗೆದ ಶಾಜಿಯ ಪುತ್ರರಿರ್ವರೊಳಾ ಶಾಜಿಯ ಜ್ಯೇಷ್ಠಪತ್ನಿ ಜಾಜಾ ಬಾಯಿಯ ಬಸಿರೊಳೊಗೆದ ಕುಮಾರಂ ಶಿವಾಜಿ ತಚ್ಛಾಜಿಯ ಕನಿಷ್ಠಪತ್ನಿಯೊಳೊಗೆದ ಕುಮಾರನೇಕೋಜಿಯೆಂದು ತಿಳಿವುದಂತುಮಲ್ಲದೆಯುಂ

ಕಂ|| ಮೆರೆವೇಕೋಜಿಯ ಪುತ್ರರ್
ಪರಿಕಿಪೊಡಂ ಶಾಜಿಯೆಸೆವ ಶರಭಜಿ ಮತ್ತಾ
ಕಿರಿಯ ಕುಮಾರಂ ಭೂತಳ
ವರಿಯಲ್ ತುಕ್ಕೋಜಿಯಿಂತು ಮೂವರ್ ತನುಜರ್ ೧೧

ವ|| ಅಂತುಮಲ್ಲದೆ

---

[1] ಜಿಯು (ಗ) [2] ನ (ಗ) [3] ನೀವು (ಗ) [4] ವರಿರ್ವ (ಗ) [5] ಲವರಿರ್ವರುಂ (ಗ)
[6] ಯವಂ (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ॥ ಶಾಜಿಯ ನಂದನನೆನಿಪ ಶಿ
ವಾಜಿಗೆ ಸಂಭೂತನಾದ ಪಿರಿಯ ಮಗಂ ಸಂ
ಬಾಜಿ ಕನಿಷ್ಠಸುತಂ ವಿ
ಭ್ರಾಜಿಸುತಿಹ ರಾಮರಾಜನಿಂತಿವರಿರ್ವರ್ ೧೨

ವ॥ ಇಂತೊಗೆದ ಶಿವಾಜಿಯ ಪುತ್ರರಿರ್ವರೊಳಾ ಶಿವಾಜಿಯ ಜ್ಯೇಷ್ಠಪತ್ನಿ ಜಿ[1]ವಾ[1]ಬಾಯಿ ಬಸಿರೊಳೊಗೆದ ಪುತ್ರಂ ಸಂಬಾಜಿ ತತ್ ಕನಿಷ್ಠಪತ್ನಿಯಾದ ಜಾಧವರಾಯನ ಕುಮಾರಿ ತಾರಾಬಾಯಿಯ ಬಸಿರೊಳುದ್ಭವಿಸಿದ ಕುಮಾರಂ ರಾಮರಾಜನಾ ರಾಮರಾಜನೇ ರಾಜೇರಾಮನೆಂದು ನೆಗಳ್ತೆವೆತ್ತನಂತುಮಲ್ಲದೆಯುಂ

ಕಂ॥ ಕರಮೆಸೆವಾ ಸಂಬಾಜಿಯ
ವರತನುಜಂ ಸಾಹುರಾಜನೆಂದೆನಿಪಂ ಭಾ
ಸುರ ತತ್ಸಂಬಾಜಿಯ ಸೋ
ದರನೆನಿಸುವ ರಾಮರಾಜಗಿರ್ವರ್ ಸತಿಯರ್ ೧೩

ಅವರೊಳ್ ಜ್ಯೇಷ್ಠವಧೂಸಂ
ಭವನಭಿಧಾನಂ ಶಿವಾಜಿ ಕಿರಿವೆಂಡತಿಯೊಳ್
ತವೆ ಜನಿಸಿದ ಸುಕುಮಾರಂ
ವಿವರಿಸೆ ಸಂಬಾಜಿಯವಗೆ ನಂದನರಿರ್ವರ್ ೧೪

ವ॥ [2]ಇನ್ನು[2] ಡಿಳ್ಳಿಯನಾಳ್ದ ತುರುಷ್ಕರ [3]ವಂಶ[3]ವಿವರಣಮಂ ಪೇಳ್ವೆನದೆಂತೆಂದೊಡೆ:— ಡಿಳ್ಳಿಯೆಂಬುದಾದಿಯೊಳ್ ಹಸ್ತಿನಾವತಿ ಆ ಸಂಸ್ಥಾನಮಂ ದುರ್ಯೋಧನನಂತರಂ ಧರ್ಮರಾಯನಾಳ್ದಂ ತದನಂತರಂ ಪರೀಕ್ಷಿತಮಹಾರಾಯನಾಳ್ದ[4]ನಾ[4] ತರುವಾಯಂ ಕೆಲ್[6]ಬರ್[5] ಜಾತಿಕ್ಷತ್ರಿಯರಾಳ್ದರಾ ತರುವಾಯಂ ಕೆಲ್[6]ಬರಾ[6]ಭಾಸ ಕ್ಷತ್ರಿಯರಾಳ್ದರಾ ತರುವಾಯಂ ಮಿಶ್ರಜಾತಿಯವರಾಳ್ದರಾ ತರುವಾಯಂ ರಜಪೂತಸಂತತಿಯೊಳುದಿಸಿದ ಜಯಚಂದ್ರ ನರೇಂದ್ರನಾಳ್ದನಾತನ ತರುವಾಯಂ ತದ್ವಂಶಜನಾದ ಅನಂಗಪಾಲಂ ವರ್ಷ ೩೬ ಪೃಥುರಾಜಂ ವರ್ಷ ೬ ಉಭಯಂ ವರ್ಷ ೪೨ ಆ ತರುವಾಯಂ ಪಠಾಣ ಜಾತಿಯವರಾಳ್ದರವರೊಳ್ ಸುಲ್ತಾನ ವರ್ಷ ೪೦ ಸುಲ್ತಾನ ಶಹಮೋದೀನ್ ವರ್ಷ ೨೭ ಮಾಸ ೭ ಶಾಹಾಸುದೀನ್ ಘೋರಿ ವರ್ಷ ೨೦ ಮಾಸ ೧೦ ಸುಲ್ತಾನ ಫೇರೋದಶಾಹ ವರ್ಷ ೧೦ ಮಾಸ ೭ ಈತನ ಪತ್ನಿ ಶಾಹಾ ಮಸೂದಾಬೀಬಿಪಾಜಿ ವರ್ಷ ೭ ಮಾಸ ೬

---

[1] ತಾ (ಕ) [2] ಈ ದೊರೆಯರ ಸಂತಾನ ಪರಂಪರೆ ಇನ್ನು (ಗ) [3] ಸಂತಾನ ಪರಂಪರಾ (ಗ)
[4] ನನಂತರಂ ಜನಮೇಜಯರಾಯನಾಳ್ದನಾ (ಗ) [5] ವು (ಗ) [6] ರಾ (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ಶಾಹಾ ಮೈಸುದೀನ್ ವರ್ಷ ೭ ಮಾಸ ೧ ಮಸೂದನಶಾಹಾ ರಣತಿ (?) ತಿಂಗಳು ೫ ನಸೀಮದೀನ್ ಘೋರಿ ವರ್ಷ ೩೦ ತಿಂಗಳು ೬ ಗಯಾಸುದೀನ್ ಘೋರಿ ವರ್ಷ ೨೨ ಮಾಸ ೪ [1]ಶಾಹಾ ಕುತು[1]ಬಘೋರಿ ವರ್ಷ ೩ ಮಾಸ ೮ ಶಾಹಾ ನಸೀಮದೀನ್ ಘೋರಿ ವರ್ಷ ೬ ಮಾಸ ೫ ಶಾಹಾ ಅಲ್ಲಾವುದೀನ್ ವರ್ಷ ೫೮ ಮಾಸ ೪ ಶಾಹಾ ಕುತುಬುದೀನ್ ವರ್ಷ ೪೮ ಮಾಸ ೩ ಶರಶಾಹಾ ಸು[2]ರ[2] (?) ಅಭಗ ವರ್ಷ ೬ ತಿಂಗಳು ೮ ಅಂ[3]ತುಂ[3] ಪಠಾಣ ರಾಳಿ[4]ದುದು[4] ವರ್ಷ ೨೯೦

ಆ ತರುವಾಯಂ ಮೊಗಲ[5]ರ[5]:— ಸುಲ್ತಾನ ಕುಸ್ರು ವರ್ಷ ೮ ಮಾಸ ೬ ಸುಲ್ತಾನ ಪೇರೋದಶಾಹಾ ಖತನು ಪಾತುಶಾಹಾ ವರ್ಷ ೩೮ ಮಾಸ ೫ ಮಹಮ್ಮದುಲ್ಲಾ ನಸಲಕ್ಕ ವರ್ಷ ೬ ಮಾಸ ೬ ಈ ಮಹಮ್ಮದುಲ್ಲಾ ನಸಲಕ್ಕಾ ಪಾತುಶಾಹಾಂ ತೊಗಲ ನಾಣ್ಯಂ ನಡೆಸಿದಂ ಆಮೇಲೆ ಶಾಹಾ ಸುಲ್ತಾನ ಮಹ[6]ಮ್ಮದ ತೋ[6]ಬರ ವರ್ಷ ೧೨ ಮಾಸ ೫ ಶಾಮಾಯಿಯಾಸನ್ (?) ವರ್ಷ ೧ ಮಾಸ ೪ ಸುಲ್ತಾನ ಹಮ್ಮಿರ ವರ್ಷ ೨೦ ತಿಂಗಳು ೧೦ ಸುಲ್ತಾನ ಬಹಿಲೋಲ ಲೂದಿ ವರ್ಷ ೩೮ ಮಾಸ ೫ ಶಿಖೇಂದ್ರ ಲೋದಿ ವರ್ಷ ೨೮ ಮಾಸ ೭ ವಿಭರಾಮ ಲೋದಿ ವರ್ಷ ೧೦ ಬಾಬರ್ ಪಾತುಶಾಹಾ ವರ್ಷ ೪ ಮಾಸ ೧೦ ಹಮ್ಮಾವು ವರ್ಷ ೧೪ ಮಾಸ ೨ ಅಂತು ವರ್ಷ ೧೮೪

ಆಮೇಲೆ ಇತ್ತ ಕೇವಲ ಪ್ರಖ್ಯಾತಿವೆತ್ತರೊಳ್ ಫಕೀರೇಶ್ವರನ ಕೃಪೆಯಿಂ ತಕಥನಾಳ್ದ ತಿಮಿರಲಂಗ ವರ್ಷ ೨೭ ಮಾಸ ೮ ಬಾಬರ್ ಲಂಗ ವರ್ಷ ೭ ಮಾಸ ೯ ಸರೀಮಶಾಹಾ ಪೆಸ[7]ರಶೇರುಶಾಹಾ[7] ವರ್ಷ ೮ ಮಾಸ ೧೦ ಮಸೂದಶಾಹಾ ಶರೀರಮನ್ (?) ಮಾಸ ೧ ಶಾಹಾಹಮ್ಮಾವು ತಿಂಗಳು ೯ ಮಸೂದ ಶಾಹಾ ಜಲಾವುದೀನ್ ವರ್ಷ ೫೦ ಮಾಸ ೧ ಜಹಂಗೀರ್ ವರ್ಷ ೨೦ ಮಾಸ ೧ ಶಿರಜಾನ್ ವರ್ಷ ೩೨ ಅವರಂಗಜೇಬ ವರ್ಷ ೫೨ ಮಾಸ ೬ ಶಾಹಾ ಅಲ್ಲಿ ವರ್ಷ ೫ ಮಾಸ ೫ ಫರಕ್ಷಾಹ ವರ್ಷ ೨ ಮಾಸ ೬ ಆಮೇಲೆ ಮೌಜದೀನ್ ವರ್ಷ ೨ ಮಾಸ ೧೧ ಅಜಂ ಮೌಜದೀನ್ ವರ್ಷ ೧ ಮಾಸ ೧೦ ಫರಕ್ಷಾಹ ವರ್ಷ ೩ ಮಹಮುದ್ದಅಜಂ ರಾಜದೀನ್ ವರ್ಷ ೧ ಮಾಸ ೬ ಅಂ[7]ತುಂ[7] ವರ್ಷ ೨೧೮ ಮಾಸ ೯ ಅಂ[8]ತುಂ[8] ಶಾಲಿವಾಹನ ಶಕವರ್ಷ ೧೬೫....ನೆಯ ಶಾರ್ವರಿ ಸಂವತ್ಸರದ ಮಾರ್ಗಶಿರ ೩೦ ವರೆಗೆ ಆ[9]ಳ್ದರ್[9] ಇಂತು ಪೂರ್ವಮಾರಭ್ಯ ದಿಳ್ಳಿಯನಾಳ್ದವರೊಳಿತ್ತಂ ಸುಲ್ತಾನನಾದಿಯಾಗಿ ವಂಶಪರಂಪರಾವಿವರಂ ತತ್ತಚ್ಚರಿತ್ರಂಗಳಂ ಪದ್ಯರೂಪದಿಂ ಪೇಳ್ವೆನದೆಂತೆಂದೊಡೆ

---

1 ಶಹರೋತ (ಗ) 2 ರು (ಗ) 3 ತು (ಗ) 4 ದ್ದು (ಗ) 5 ರು (ಗ) 6 ಮ್ಮದುಕ್ಲೋ (ಕ) 7 ಶಿಶಿಮುಶಾಹಾ (ಬ) ರಶಿಶಿದ್ಮುಶಾಹ (ಕ) 8 ತು (ಗ) 9 ಳಿದವರು... (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ|| [1]ವರ[1] ದಿಳ್ಳಿಯನಾಳ್ದ ತುರು
ಷ್ಕರ ಗನುದಿಂ ಪೇಳ್ವೆನಾದಿಯೊಳ್ ಸುಲಿತಾನಂ
ಪರಿಕಿಪೊಡಿತ್ತ ಫಕೀರೇ
ಶ್ವರಕೃಪೆಯಿಂ ತಿಮಿರಲಂಗನೆಂಬವನಾಳ್ದಂ ೧೫

ವರತಿಮಿರಲಂಗ ಬಾಬರ್
ಪರಿಕಿಸೆ ಹಮ್ಮಾವಕಬರ ಜಾಂಗೀರ್ ಶರಜಾ
ಮಿರುಗುವವರಂಗಜೇಬಂ
ನೆರೆ ಬಹದರ್ಪರಕಶಾಹ ಮಹಮುದಶಾಹಂ ೧೬

ಅವರೊಳ್ ಕಂಪಿಲರಾಯನ
ಕುವರನೆನಿಪ್ಪುರುಕುಮಾರರಾಮನ ದಂಡಂ
ಬವರದೆ ಮುಳುಗಿಸಿ ಶೋಭಿಸು
ವವನೀಮಂಡಲವನಾಳ್ದನಾ ಸುಲಿತಾನಂ ೧೭

ವಿಲಸತ್ ತ್ರಿವೇಣಿಯೊಳಗಾ
ಳ್ದಳಿದಾನಾವಿಲನೆ (?) ಧರೆಯೊಳಕಬರನಾದಂ
*ಬಳಿಕೆ ಜಾತಿಸ್ಮರತ್ವಂ
ದಳೆದತಿಭುಜಬಲದೆ ಡಿಳ್ಳಿಯಂ ಪಾಲಿಸಿದಂ ೧೮

ಚಾರುಯಶೋವಿಕ್ರಮದಿಂ
ರಾರಾಜಿಸುವೋರುಗಲ್ಲಧೀಶನೆನಿಪ್ಪಾ
ವೀರಪ್ರತಾಪರುದ್ರಮ
ಹೀರಮಣಾಧಿಪನನ್ನೈದೆ ಕೈಸೆರೆವಿಡಿದಂ ೧೯

[2]ದು[2]ಮ್ಮಿಯ ಯವನಾಧೀಶನ
ಹಮ್ಮಂ ಮುರಿದವನ ಘೋಟಕಂಗಳ್ಗೆಂದುಂ
ಧುಮ್ಮುಚಿಯನಿಕ್ಕದಿಹ ಪರಿ
ಯಮ್ಮಾಡಿಸಿ ತದ್ವಕೀಲಿಯಂ ಮಾಣಿಸಿದಂ ೨೦

ವ|| ಮತ್ತಮದಲ್ಲದಾ ಅಕ್ಬರಪಾತುಶಾಹನ ವಂಶೋದ್ಭವನಾದ ಅವರಂಗಜೇಬ ಪಾತುಶಾಹಂ ತನ್ನಗ್ರಜನಾದ ದಾರಶಾಹನಂ ಕೊಂದು ತಾಂ ಪಟ್ಟಕ್ಕೆ ನಿಂದು ರಾಜ್ಯಂಗೆಯ್ಯುತ್ತುಂ

---

[1] ತವ (ಕ) [2] ರು (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ॥ ಅವರಂಗಜೇಬನೊಪ್ಪುವ
ಬವರದೆ ಬಾವನ್ನಪಾತುಶಾಹರ ಮುರಿದು
ತ್ಸವದಿಂದೇಕಚ್ಛತ್ರದೊ
ಳವನೀಮಂಡಲವನಾಳ್ದನತಿವಿಕ್ರಮದಿಂ ೨೧

ವ॥ ಮತ್ತಮುದಲ್ಲವರಂಗಜೇಬಪಾತುಶಾಹಂ ರಜಪೂತವೆಣ್ಣಿನೊಳಕ್ಬರನೆಂಬ ಕುಮಾರನಂ ಮೊಗಲವೆಣ್ಣಿನೊಳ್ ಶಹಲನೆಂಬ [1]ಪುತ್ರ[1]ನಂ ಬೇಗಮ್ಮುಯೆಂಬ ಕುಮಾರಿಯುಮನಿಂತಿರ್ವರುಮಂ ಮತ್ತಂ ಮುಸಲ್ಮಾನವೆಣ್ಣಿನೊಳಜಮುತಾರನೆಂಬ ಪುತ್ರನಂ ಗುಜರಾತಿ ಕಾರುಕಿ ಸೂಳೆವೆಣ್ಣಿನೊಳ್ ಕಾಂಬಕ್ಸನೆಂಬ ನಂದನನಂ ಪಡೆದಿಂತಿರುತೊಂದವಸರದೊಳ್ ಅವರಂಗಜೇಬಪಾತುಶಾಹಂ ಸದರೊಳ್ ಕುಳ್ಳಿರ್ದಕ್ಬರನೆಂಬ ಕುಮಾರನಂ ಕರೆದು ತನ್ನ ಕಯ್ಯೊಳ್ ಪಿಡಿದಿರ್ದ ಪಟ್ಟದ ಕೂರಸಿಯನವನ ಕೈಗಿತ್ತಿದೆಂತಿರ್ಪುದ ನಲವನಳ್ಕಿ ಹೂಣಿಸಿ ನಿಲಲಾರದೆ ಕಂಪಿಸುತ್ತಿರಲವನಂ ಕಂಡಿವಂ ತಕತ್ತನಾಳ್ವುದರ್ಕ ಯೋಗ್ಯನೆಂದು ಬಗೆದು ತಿರಸ್ಕರಿಸಲವಂ ನಿಸ್ತೇಜಸ್ಕನಾಗಿ ಗುಜ್ಜರದೇಶಪ್ರಾಂತವನ್ನೆದಲುಳಿದ ಜಮುತಾರ ಕಾಂಬಕ್ಸ ಶಹಲಮನೆಂಬ ಕುಮಾರರುಂ ಬೇಗಮುಯೆಂಬ ಕುಮಾರ್ತಿಯುಂವೆರಸು ಸುಖಮಿರುತ್ತುಂ ಶಹಲಮನೆಂಬ ಕುಮಾರನ ತೇಜೋಬಲ ಪಟುತ್ವಕ್ಕಂ ಮೆಚ್ಚಿ ಭಾದುರ್ಶಾಹನೆಂದು ಪ್ರತಿನಾಮುವನಿಟ್ಟಾ ಶಹಲಮಂಗೆ ಮೂವರ್ ಪುತ್ರರುದಿಸಲ್ ಕ್ರಮದಿಂದವರ್ಗೆ ಅಜಮುದೀನ್ ಮೌಜದಿನ್ ರಸೇಲ್‌ಶಾಹನೆಂದು ಪೆಸರಿಟ್ಟು ಮತ್ತಮಾರ ಪೇಲ್‌ಶಾಹನೆಂಬ ಮೊಮ್ಮಗಂಗೆ ಬುಲಂದಕ್ಥರ(?)ನೆಂದು ಪ್ರತಿನಾಮುವನಿಟ್ಟು ಮತ್ತಮಾ ಶಹಲಮನ ಮಗನಾದ ಅಜಮ್ಮುದಿನ್‌ಗೊರ್ವ ಕುಮಾರನೊಗೆಯಲವಂಗೆ ಫರಕ್ಸ್‌ಶಾಹನೆಂದು ಪೆಸರಿಟ್ಟು ಮತ್ತಮಾ ಜಮುತಾರನೆಂಬ ಕುಮಾರನೊಳುದ್ಭವಿಸಿದ ಮೊಮ್ಮಗಂಗೆ ದಿವಾಬೋರ್ಕ್ಸ (?)ನೆಂದು ಪೆಸರಿ[2]ಟ್ಟು[2] ಇಂತವರಂಗಜೇಬಪಾತುಶಾಹಂ ಮಕ್ಕಳ್ ಮೊಮ್ಮಕ್ಕಳ್ ಮರಿಮಕ್ಕಳ್ವೆರಸು ತನ್ನ ಸೋದರಮಾವನಾದ ಶಾಸ್ತಾಖಾ[3]ನ ಫೇರೋಜಂಘನೆಂದುಭಯನಾಮಾಂಕಿತನಾದ ಶಾಬ್ಜಿಖಾನನ ಮಗ ನಿಜಾಮಂಗೆ[3] ಮಂತ್ರಿ ಅಸತ್ಖಾನ ಅವನ ಮಗ ಜುಲುಪರಖಾನ ಮತ್ತಂ ಶೇಖುನಿಜಾಮ ರಗಟಬಲ್ಲೂಲಖಾನ ಮುಂತಾದ ವಜೀರರ್ಕಳ್ವೆರಸು ಗಾಜದೀಖಾನ [4]ಚಿ[4]ಕ್ಕಲೀಸಖಾನನೆಂದು (?) [5]ಇವನಿಗೆ[5] ದಾಕ್ಷಿಣಾತ್ಯ ರಾಜ್ಯದಧಿಕಾರವನಿತ್ತು ತಾಂ ಪ್ರಾಜ್ಯರಾಜ್ಯಭಾರವಿಟ್ಟು ವಿಚಾರ[6]ಕೃತ[6]ನಾಗಿ ವರ್ತಿಸುತ್ತುಂ ಮತ್ತಂ ಸ್ವನಾಮಾಂಕಿತಮಾದವರಂಗಾಬಾದೆಂಬ ಪಟ್ಟಣಮಂ ನಿರ್ಮಾಣಂ

---

[1] ಸುತ (ಗ) [2] ಟ್ಟು ಮತ್ತಂ ಕಾಂಬೋಕ್ಸನೆಂಬ ಕುಮಾರಂಗೊರ್ವಸುತನೊಗೆಯಲಾತಂಗೆ ಸುರಿತಾನಮುಹಂಮುದನೆಂದು ಪೆಸರಿಟ್ಟು (ಗ) [3] ನ (ಗ) [4] ಫೆರೋಜಂಘನೆಂದು ಭಯಮನಾಮಾಂಕಿತನಾದ ಷಾಬ್ಜಿಖಾನನ ಮಗ ನಿಜಾಮಂಗೆಚಿ (ಗ) [5] ಪ್ರತನಾಮುವನಿತ್ತಾ ಚಿಕ್ಕಲೀಸಖಾನಂಗೆ (ಗ) [6] ತತ್ಪರ (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ಗ್ರೈಸಿ ಸ್ವಮತಾನ್ಯಮತಂಗಳೆನ್ನದೆ ತತ್ತ್ವಚ್ಛಾಸ್ತ್ರಮರ್ಮಂಗಳಂ ಕೇ[1]ಳುತುಂ[1] ಮಂತ್ರ ಶಾಸ್ತ್ರಂಗಳಂ ಸಂಗ್ರಹಿಸಿ ಮುಲ್ಲಾಶಾಸ್ತ್ರ ವಿವರಣಂಗಳಂ ಕೇಳುತಿಂತು ಸುಖಸಂಕಥಾ ವಿನೋದಗೋಷ್ಠಿಗಳಿಂ ರಾಜ್ಯವನಾಳುತ್ತುಮಿರ್ದಂ

ಇನ್ನು ಮುಂದುಸಿರ್ವ ಕಥಾಸಂದರ್ಭಕೋಸುಗಂ ೧೯ಜಗನಹಳ್ಳಿಯ (ಪ್ರತಿನಾಮ ಬಿಜಾಪುರ) ಸಂಸ್ಥಾ[2]ನವ[2]ನಾಳ್ದ ಪಾತುಶಾಹರಂ ವಿವರಣಮಾಗೆ ಪೇಳ್ವೆನದೆಂತೆಂದೊಡೆ:— ಆದಿಯಲ್ಲಿ ಪರಮೇಶ್ವರನ ಕೃಪೆಯಿಂ ಸಂಸ್ಥಾನಾಧಿಪತಿಯಾದ ಶಾಹಾಮೂರ್ತಜಾ ಅಲ್ಲಿ ವರ್ಷ.... ಅವನ ತಮ್ಮ ಶಾಹಾನದೀಮುಲ್ಲ ವರ್ಷ.... ಆಮೇಲೆ ಫಕೀರ ಸಾಹೇಬ (ಪ್ರತಿನಾಮ ದರ್ಬೇಸಿ) ಪಾತುಶಾಹ ವರ್ಷ ... ಆ ಬಳಿಕಂ ಅಲ್ಲಿಯೇದುಲ ಶಾಹಾ ವರ್ಷ ... [3]ಅವನಿಂ[3] ಬಳಿಕಂ ಸುಲ್ತಾನ ಮಹಮುದ್ದ ವರ್ಷ.... [4]ಆಮೇಲೆ[4] ಸುಲ್ತಾನಿ ಶಿಖೀಂದ್ರ ವರ್ಷ.... ಅಂತುಂ ವರ್ಷ.... [5]ಈ[5] ಶಿಖೀಂದ್ರನ ಕಾಲದಲ್ಲಿ ಶಾಲಿವಾಹನ ಶಕವರ್ಷ ೧....ನೆಯ ಕ್ಷಯಸಂವತ್ಸರದಲ್ಲಿ ಈ ವಿಜಾಪುರಸಂಸ್ಥಾನಂ ಮುಂದೊರೆವ ಗೊಲುಕೊಂಡೆಯ (ಪ್ರತಿನಾಮ ಭಾಗಾನಗರದ) ಸಂಸ್ಥಾ[6]ನ[6]ಮಿಂತುಭಯಸಂಸ್ಥಾ[7]ನಂ ಗಳುಂ[7] ಕಾಕತಾಳೀಯನ್ಯಾಯದಿಂ ಸಿಂತೊರೆದಾರೆಯರ ವಂಶೋದ್ಭವನಾದ ಶಾಜಿಯ ಸುತ ನೆನಿಪ ಶಿವಾಜಿಯುಂ ವಶಂಗೆಯ್ವೆನೆಂದ್ಯೈದಿದ ಡಿಳ್ಳಿಯ ಪಾತುಶಾಹದಪ್ಪವರಂಗಜೇಬನಧೀನ ಮಾದುವಾ ವೃತ್ತಾಂ[8]ತಂ[8] ಮುಂದೆ [9]ಬ[9]ರ್ಪುದೀಗೊರೆದ ವಿಜಾಪುರದ ಸಂಸ್ಥಾನವನಾಳ್ದ ತುರುಷ್ಕರ ನಾಮಂಗಳಂ ಪದ್ಯರೂಪದಿಂ ಪೇಳ್ವೆನದೆಂತೆಂದೊಡೆ

ಉ|| ಮಾ|| ಸೊಲ್ಲಿಪೆನಾ ವಿಜಾಪುರವನಾಳ್ದರನೊಪ್ಪುವ ಶಾಹಮು[10]ರ್ತು[10]ಜಾ
ಅಲ್ಲಿಯನಂತರಂ ನದಿಯುಮುಲ್ಲನುದಾರ ಪಕೀರಶಾಹನಾ
ಅಲ್ಲಿಯಯೇದುಲಂ ಮೆರೆವ ವಿಭ್ರಮಯೇದುಲಪಾತುಶಾಹನಿಂ
ತಿಲ್ಲಿಗೆಯ್ಯೆನರಿನ್ನುಳಿದ ನಾಲ್ವರುಮಂ ತಿಳಿವಂತುಸಿರ್ದಪೆಂ ೨೨

ಕಂ|| ಸುಲುತಾನ ಮಹಮುದಾಖ್ಯಂ
ಬಳಿಕಲ್ಲಿಯೆದುಲಶಹಾನ ಸಮನಂತರದೊಳ್
ವಿಲಸದ್ಬಡೆಸಾಹೇಬತಿ
ಸುಲುತಾನಶಿಖೀಂದ್ರರೆಂಬಿವರ್ಕಳ್ ಕ್ರಮದಿಂ* ೨೩

---

* (ಗ) ಪ್ರತಿಯಲ್ಲಿ ಮುಂದೆ ಇದುವರೆಗೂ ಹೇಳಿದ ವಂಶಾವಳಿಯನ್ನೇ ತಿಳಿಸತಕ್ಕ

1 ಳ್ದು (ಗ) 2 ವ (ಕ) 3 ಮತ್ತಮವನ ತರುವಾಯ ವಿಭ್ರಾಮಯದುಲಿಶಾಹ ಅವನಿಂ (ಗ) 4 ಆಮೇಲೆ ಅಲ್ಲಿಯದುಶಾಹ ವ... ಬಡೇಸಹೇಬ ವ... ಆಮೇಲೆ (ಗ) 5 ಈ ಸುಲುತಾನ (ಗ) 6 ನಮು (ಕ) 7 ನಮುಂ (ಗ) 8 ತಮಂ (ಕ) 9 ಪೇಳುತ್ತಿ (ಗ) 10 ರ್ತ (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ವ|| ಇಂತು ಶಾಹಮುರ್ತಜಾ ಅಲ್ಲಿಯಾದಿಯಾಗಿ ಸುಲುತಾನಶಿಖೀಂದ್ರಾಂತಮಾಗಿ ವಿಜಾಪುರದ ತಕಥನಾಲ್ದ ಪಾತುಶಾಹರ್ ಇನರೊಳಾ ವಿಬ್ರಾಮಲ್ಲಿ ಯೇದುಲಶಾಹನ ತಂಪೆಯಾದ ಅಲ್ಲಿಯೇದುಲಶಾಹಂಗೆ ವಿವಾಹಮಾದ ಸ್ತ್ರೀಯರಾರೆಂದೊಡೆ ದೇವಗಿರಿ ಪ್ರತಿನಾಮ ದೌಲತಾಬಾದಿನ ಸಂಸ್ಥಾನಕ್ಕೆ ಸಲ್ವ ಅಮದಾನಗರದ ನಿಜಾಮಪಾತುಶಾಹನ ಮಗಳ್ ಆಕೆಯ ಪೆಸರ್......................ಮತ್ತಮಾ ವಿಬ್ರಾಮಯೇದುಲಶಾಹನ ಮಗ ಸುಲುತಾನ ಮಹಮ್ಮದಶಾಹನ ಮಂತ್ರಿಯ ಪೆಸರ್ ಹಿರೆಖವಾಸಖಾನ ಆ ಅರಸಿನ ನಿಯೋಗಿಯಾದ ಕಾರಕೂನಂ ಮುರಾರಿ ಜಗದೇವಪಂತಂ ಈ ಮುರಾರಿ ಜಗದೇವಪಂತಂ ಕರ್ತೃ ಸುಲುತಾನಮಹಮ್ಮದಶಾಹಂಗೆ ಗೋಲುಕೊಂಡೆಯ ಕುತುಬಶಾಹನ ಮಗಳಾದ ಬಡೆ ಸಾಹೇಬತಿಯೆಂಬ ಪೆಣ್ಣಂ ವಿವಾಹಮಂ ಮಾಡಿಸಿದಂ. ಆ ಬಡೆಸಾಹೇಬತಿಯ ಮಗನ ಪೆಸರ್............ಈ ಸುಲ್ತಾನಮಹಮ್ಮದಶಾಹಂ ಬಡೆಸಾಹೇಬತಿಯೆಂಬ ಸ್ತ್ರೀಯಲ್ಲದೆ ನವರಸನಾರಿಯೆಂಬ ಸೂಳೆಯ ಬಸರಿನಲ್ಲಿ ಪುಟ್ಟಿದ ಮಗನ ಪೆಸರ್ ಅಲ್ಲಿಯೇದುಲಶಾಹಾ ಆ ಅಲ್ಲಿಯೇದುಲಶಾಹಾನ ಕುಮಾರಂಗೆ ತನ್ನ ಕಡೆಯ ವಜೀರ ಪತ್ತೇಖಾನನ

ಕೆಳಗಣ ಪದ್ಯಭಾಗನಿದೆ :—

ಶಾಹಮುರ್ತಜಾ ಅಲ್ಲಿಯ ತಮ್ಮಂ
ಶಾಹನದೀಮುಲ್ಲಂ ಭಾವಿಸೆ ತ
ಚ್ಛಾಹಮುರ್ತಜಾ ಅಲ್ಲಿಯ ಪುತ್ರಂ
ಸಾಹಸಿಯೆನಿಪ ಪಕೀರಸಾಹೆಬಂ ||
ಧೀರಪಕೀರಸಾಹೇಬನ ಪುತ್ರಂ
ಧಾರಿಣಿಗಲ್ಲಿ ಯೇದುಲಾಶಾಹಂ
ಭಾರಣೆಯಲ್ಲೀಯೇದುಲಶಾಹಕು
ಮಾರಂ ವಿಭ್ರಮಯೇದುಲಶಾಹಂ ||
ಮಿನುಪಾ ವಿಭ್ರಮಯೇದುಲಶಾಹನ
ತನುಜಂ ಸುಲುತಾನಕ ಮಹಮುದ್ದಂ
ಘನತರಸುಲುತಾನಕ ಮಹಮುದ್ದನ
ವನಿತೆ ಬಡೇಸಾಹೇಬತಿಯೆನಿಪಳ್ ||
ನಡ ಸುಲುತಾನನ ಸೂಳೆಯ ತನುಜಂ
ಪೊಡವಿಯೊಳಲ್ಲೀಯೇದುಲಶಾಹಂ
ಒಡನಾ ಅಲ್ಲೀಯೇದುಲನ ಸುತಂ
ಕಡುಗಲಿಯುಹ ಸುಲುತಾನಶಿಖೀಂದ್ರಂ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಗಳಂ ವಿವಾಹನುಂ ಮಾಡಿ ತಾನೀರೀತಿಯಲ್ಲಿರುತ್ತಿ[1]ರ್ದಂ[1]. ಆ ಪತ್ತೇಖಾನನ ಕಾರಕೂನನ ಪೆಸರ್ ಕಾಶೀಪಂತಂ ಇಂತು ವರ್ತಿಸುತ್ತುಮಿರ್ದ ಸುಲುತಾನ ಮಹ ಮುದ್ದಶಾಹಂಗೆ ವ್ಯಾಧಿ ಪ್ರಕೋಪಿಸಲಾ[2]ಗಳ್[2] ತನ್ನ ಬೀಗ ಪತ್ತೇಖಾನನಂ ಬರಿಸಿ ಕೊಂಡಾಪ್ತಾಳೋಚನೆಯಂ ರಚಿಸಿ ನಿನಗಿಂತು ಸೌಭಾಗ್ಯಮೆಂತು ದೊರೆಕೊಂಡುದೆಂದು ಬೆಸಗೊಳಲ್ ತನ್ನ ಕಾರಕೂನಂ ಕಾಶೀಪಂತನಿಂದಾದುದೆನಲಾ ಕಾಶೀಪಂತಂ[3]ಗೆ[3] ಜಾನಂತರಾಯನೆಂದು ಪ್ರತಿನಾಮುವನಿಟ್ಟು ದವಲತ್ತು ಕೊಟ್ಟು ಬಹಳ ಮೇರುಮಾನಿಯಂ ಮಾಡಿ ಈ ಪ್ರಕಾರದಲ್ಲಿಟ್ಟುಕೊಂಡಿರ್ದು ತನ್ನ ಪ್ರಾಣೋತ್ಕ್ರಮಣಕಾಲದಲ್ಲಿ ಆ ಜಾನಂತರಾಯನಂ ಕರೆಸಿಕೊಂಡು ತಾನಿಟ್ಟುಕೊಂಡಿರ್ದ ನವರಸನಾರಿಯೆಂಬ ವೇಶ್ಯೆಯ ಪುತ್ರಂಗೆ ಸಂಸ್ಥಾನದ ಪಟ್ಟಾಧಿಕಾರಮಂ ರಚಿಸಿ ನಡೆಸುವಂತೆ ಆ ಜಾನಂತರಾಯನಿಂ ನಂಬುಗೆಯಂ ತೆಗೆದುಕೊಂಡು ಪ್ರಾಣಮಂ ಬಿಟ್ಟಂ. ಆಮೇಲೆ ಆ ಜಾನಂತರಾಯಂ ಮುನ್ನಮೇ ಸ್ಥಳಚ್ಯುತನಾಗಿ ಬಿಟ್ಟು ಪೋಗಿರ್ದ ಬಡೆಸಾಹೇಬತಿಯ ಮಗಂಗೆ ಬರೆಸಿ ಕಳುಹಿ ನಿನಗೆ ಪಟ್ಟಮಂ ಕಟ್ಟಿ ದೊರೆತನಮಂ ನಡೆಸಿ ಅಲ್ಲಿಯೇದುಲಶಾಹಗಂ ನಿನಗಂ ಭೇಟಿಯಂ ಮಾಡಿಸಿ ಮನಸ್ಸಂಕೋಚಮಂ ಪರಿಹರಿಸಿ ಅನ್ಯೋನ್ಯಮಾಗೆ ನಡೆವಂತು ಮಾಡಿ ಪಾತು ಶಾಹಿಕೆಯಂ ನಿನಗೆ ನಡೆವಂತು ಮಾಳ್ಪೆಂ ಕ್ಷಿಪ್ರದೊಳ್ ತೆರಳಿ ಬರ್ಪುದೆಂದು ಲಿಖಿತಮಂ ಬರೆಸಿ ಕಳುಪಿ ಅವನಂ ಪಟ್ಟಣದ ಸಮೀಪಕ್ಕೆ ಬರಿಸಿಕೊಂಡು ಅವನ ಸಮೀಪದಲ್ಲಿರ್ಪ ವಜೀರ ಉಮರಾವು ಕಾರಕೂನ[4]ರ್ಗೆ[4] ಹೇರಳ ಲಂಚಮಂ ಕೊಟ್ಟೊಳಗುಮಾಡಿಕೊಂಡು ಈ ಅಲ್ಲಿಯೇದುಲಶಾಹನಂ ಕರೆದು ಭೇಟಿಯ ಮುಖದಲ್ಲಿ ಆಲಿಂಗನ ಕಾಲದಲ್ಲಿ ನೀಂ ಹೆದರದೆ ನಿನ್ನ ಕೈಯೊಳಡಂಗಿಸಿಕೊಂಡಿರ್ಪ ಕಿರುಚೂರಿಯೊಳವನಂಗುಲಿಚ್ಛೇದನಮಂ ಮಾಳ್ಪುದೆಂದು ಬೋಧಿಸಿ ಬಳಿಕ್ಕವರವರ್ಗೆ ಭೇಂಟಿಯಂ ಮಾಡಿಸಿ ತಾಂ ಮನಸ್ಸಂಕಲ್ಪಂ ಗೈದಂತು ಭೇಟಿಯ ಮುಖದೊಳವನಂಗುಲಿಚ್ಛೇದನಮಂ ಮಾಡಿಸಿ ಅವನ ಸಮೀಪಸ್ಥ ರಾದ ವಜೀರ ಉಮರಾವು ಕಾರಕೂನರಂ ಸ್ವಾಧೀನಕೆಳದು ಅಲ್ಲಿಯೇದುಲಶಾಹಂಗೆ ಪಟ್ಟಮಂ ಕಟ್ಟಿಸಿದಂ. ಮುರಾರಿಜಗದೇವಪಂತಂ ಬಡೆಸಾಹೇಬತಿಯೊಡನೆ ನಿಷ್ಠುರೋ ಕ್ತಿಯಂ ನುಡಿದು ತನ್ಮೂಲಮಾದಾಜ್ಞೆಗೊಳಗಾಗಿ ಮೃತಿನೆತ್ತಂ. ಆಮೇಲೆ ಜಾನಂತ ರಾಯಂ ಪಿತುಮೆಯಮೇಲೆ ಖವಾಸಖಾನನಂ ಕೊಲಿಸಿ ತಾನೇ ಮುಖ್ಯನಾಗಿ ಪಾತು ಶಾಹಿಯ ಬದುಕುಗಳಂ ನಡೆಸಿ[5]ದಂ[5]. ಆಮೇಲೆ ಈ ಅಲ್ಲಿಯೇದುಲಶಾಹನ ಮಗ ಸುಲು ತಾನಶೀಖೀಂದ್ರಂಗೆ ಪಟ್ಟಮಾಯ್ತು. ಈ ಸುಲುತಾನಶೀಖೀಂದ್ರನ ಕಾಲದಲ್ಲಿ ಕಿರಿಯ

---

1 ರ್ದನು (ಗ) 2 ಗಲಾಗ (ಗ) 3 ಗೆ ಕೊಡಬೇಕೆಂದು ಪಲವುವಿಧದಿಂ ಕೊಡವಡಿಸಿ ಬೀಗನಂ ಕಳುಪಿ ಕಾಶೀಪಂತನಂ ಬರಿಸಿ ಭೇಟಿಗೊಂಡು ಆಕಾಶೀಪಂತಂಗೆ(ಗ) 4 ರ್ಗೆ ಸಹ (ಗ) 5 ವನು (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ಖವಾಸಖಾನನ ಪ್ರಾಬಲ್ಯಂ ಈ ವಿಜಾಪುರದ ಪಾತುಶಾಹಂಗೆ ಹಸುರು ನಿಶಾನಿ ಬಿರುದು ಇದು ಬಿಜಾಪುರವನಾಳ್ದ ಪಾತುಶಾಹರ ವಿವರಣಂ:—

ಇನ್ನು ಗೋಲುಕೊಂಡೆಯವೆಂಬ ಭಾಗ್ಯನಗರಿಯ (ಪ್ರತಿನಾಮ ಭಾಗಾನಗರವ) ನಾಳ್ದ ಪಾತುಶಾಹರ ವಿವರಣಮುಂ ಪೇಳ್ವೆನದೆಂತೆಂದೊಡೆ:—ಆದಿಯಲ್ಲಿ ಚಾಂದೀನ ಮಲ್ಲೀಕನ ಮಕ್ಕಳ್ ಖೋದಾಖಂಡ ಮಲ್ಲೀಕವಿಭ್ರಾಮು ಈತಂ ಕಾಮಿಸಿದ ಬ್ರಾಹ್ಮಣ ಸ್ತ್ರೀಯ ಪೆಸರ್ ಭಾಗೀರಥಿ ಆ[1]ಕೆ[1] ತನ್ನ ಪೆಸರಿನಲ್ಲಿ ನಗರವಮುಂ ವಿಸ್ತಾರಂಗೈಸಲದೆ ಭಾಗಾ ನಗರವೆಂದು ಪೆಸರಾಯ್ತು. ಮಲ್ಲೀಕವಿಭ್ರಾಮನ ಮಗಂ [2]ಮು[2]ದಖುಲ್ಲಿ ಮತ್ತವನ ಮಗಂ ಮಹಮುದ್ದಖುಲ್ಲಿ ಅವನ ಮಗಂ ಸುಲ್ತಾನಅಬ್ದುಲ್ ಆತನ ಅಳಿಯಂ ಸುಲ್ತಾನ ಅಬ್ದುಲ್ ಹಸನ್ ಪಾತುಶಾಹಂ ಅವನ ಮಗಂ ಲತೆಬ ಅವನ ಮಗಂ ಪಿರಿಯ ಕುತುಬ ಶಾಹಂ ಅವನ ಮಗಂ ಮರಿ ಕುತುಬಶಾಹಂ ಅವನ ತರುವಾಯಂ ಖೋದಾಖಂಡನ ಮಗಳ ಮಗಂ ತಾನಾಶಾಹಂ ಈ ಭಾಗಾನಗರದ ಪಾತುಶಾಹರ್ಗೆ ಹಳದಿಯ ನಿಶಾನಿಯ ಬಿರುದು.

ದೇವಗಿರಿಯ (ಪ್ರತಿನಾಮ ದವಲತಾಬಾದಿನ) ಸಂಸ್ಥಾನಕ್ಕೆ ಸಲ್ವನುದಾನಗರವೆಂಬ ಸಂಸ್ಥಾನವನಾಳ್ದ ಪಾತುಶಾಹರ ವಿವರಣಮುಂ ಪೇಳ್ವೆನದೆಂತೆಂದೊಡೆ:—ಆದಿಯೊಳ್ ನಿಜಾಮುಪಾತುಶಾಹಂ ಹಳದಿನಿಶಾನಿಯ ಬಿರುದು.

[3]ಬೀ[3]ದಿರೆ ಸಂಸ್ಥಾನಕ್ಕೆ ಬರೀದಪಾತುಶಾಹಂ ಕೆಂಪಿನ ನಿಶಾನಿಯ ಬಿರುದು ಸಗ[4]ಕ್ಕೆ[4](?) ಬಹಿರ್ವಾಸದ ನಿಶಾನಿಯ ಬಿರುದು ಅದಕ್ಕಧಿಪತಿ ಹಸನಗಂಗೂ ಬೊಮ್ಮಣ್ಣ ಪಾತುಶಾಹಂ. ಇದು ದಿಳ್ಳಿಯಾದಿಯಾದ ತತ್ತತ್ಸಂಸ್ಥಾನಂಗಳನಾಳ್ದ ಪಾತುಶಾಹರ ವಿವರಣಂ. ಇನ್ನು ಪೂರ್ವಕಥಾಸಂದರ್ಭಕ್ಕೀಸುಗಂ ಹರಿಜಿ ಮೊದಲಾದ ಆರೆಯ[5]ರ[5] ಸಂಗತಿಯೆಂತವರೆಂತಿರ್ದರೆಂತುವೃದ್ಧಿಯನೈದಿದರೆಂಬ ವಿವರಣಮುಂ ಪೇಳ್ವೆನದೆಂತೆಂದೊಡೆ:—

ಕಂ॥ ಸೊಗಯಿಪ ಹರಿಜಿಯುಮುದಾ
ನಗರದಧೀಶನ ವಜೀರನೆಂದೆನಿಸಿರ್ದಂ
ತೆಗೆದಲ್ಲಿಂ ತತ್ತನುಜಂ
ಮಗನೆರಸೊರಸಿಂ ವಿಜಾಪುರವನುರೆ ಸಾರ್ದಂ ೨೪

---

[1] ಕೆಯು (ಗ) [2] ಮುಹಮು (ಗ) [3] ಷಾಹರ್ ಬಿ (ಗ) [4] ರಕ್ಕೆ (ಗ) [5] ರ ವೃತ್ತಾಂತ (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ನೇತೋಜಿಶಾಜಿಗಳ್ ವಿ
ಖ್ಯಾತವಿಜಾಪುರದ ಪಾತುಶಾಹನ ಪರಮ
ಪ್ರೀತಿಯ ವಜೀರರಾರೆಯ
ಜಾತಿಯೊಳೆ ಬಲಾಢ್ಯರೆನಿಸಿ ಸುಖದಿಂ ಬಾಳ್ದರ್ ೨೫

ವ|| ಇಂತು ನೆಗಳ್ತೆವೆತ್ತ ನೇತೋಜಿಶಾಜಿಗಳ್ ವಿಜಾಪುರದ ನಾಡಿಂಗೆ ಸಲ್ವ ತಮಗೆ ಸ್ಥಿರಾಮರಮಾಗಣೆಯಾಗಿತ್ತ ಜಾವಲಿಮ್ಮಾರ್ಲಿ (?)ಯೆಂಬ ಗ್ರಾಮಕಧಿಕಾರಿಗಳೆನಿಸಿ ತದ್ಗ್ರಾಮಮಂ ಬಲ್ಪುಗೈವದರೊಳಪ್ಪಾಜಿಪಂತನೆಂಬ ಸ್ವಕೀಯನಂ ನಿಲಿಸಿ ತಾಮಿರ್ವರುಂ ಪಾತುಶಾಹನನೋಲಗಿಸುತ್ತುಂ ತತ್ಸಮೀಪದೊಳ್ ಶಸ್ತ್ರೋಪಜೀವಿಗಳಾಗಿ ವರ್ತಿಸುತ್ತಿರ್ದಿಂದಿನಂತೊಂದುದಿನದೊಳಾ ನೇತೋಜಿಯ ಪುತ್ರನಾದ ಶಾ[1]ಜಿ[1] ತನ್ನ ಮಗ ಶಿವಾಜಿ ವೆರಸು ಪಾತುಶಾಹನನೋಲಗಿಸಲವನರಮನೆಗೈತಪ್ಪವಸರದೊಳಾ ಪಾತುಶಾಹನ ವಜೀರನಪ್ಪ ತುರುಷ್ಕಂ ಗೋವಧೆಯಂ ರಚಿಯಿಸುತ್ತಿರಲದಂ ಶಿವಾಜಿ ಕಂಡು ತನ್ನ ತಂದೆ ಶಾಜಿಗೆ ತೋರ್ದಿಂತು ಗೋವಧೆಗೈವುದಂ ಕಂಡಿವರ್ಕಳಂ ಶಿಕ್ಷಿಸಿದಲ್ಲದೆ ತಾಂ ಸುಮ್ಮನಿರ್ಪುದನುಚಿತಮೆನಲೀ ವಜೀರಂ ಪಾತುಶಾಹಂಗೆ ಪರಮಪ್ರೀತಿಪಾತ್ರನಾಗಿರ್ಪನೆಮಗಾ ವಜೀರನ ತ್ವಷ್ಟಿ(?) ಬೇಡವಥವಾ ಶಿಕ್ಷಿಸಿದೆವಾದೊಡೆ ಪಾತುಶಾಹಂಗೆ ದೂರಾಗಿ ಜಾತ್ಯಭಿಮಾನದಿಂ ಬಲವದ್ವಿರೋಧಂ ಸಂಭವಿಸಲ್ ತಮಗೆ ಮೂಲಚ್ಯುತಿಯಪ್ಪುದೆಂದುಸಿರಲೇನಾದೊಡಮಾಗಲಿಂತು ದುಷ್ಕೃತ್ಯಮಂ ಮಾಳ್ಪರುಂ ಶಿಕ್ಷಿಸಿದಲ್ಲದೆ ಮಾಣ್ಬನಲ್ಲೆನೆಂದಾಗಳಾ ಶಿವಾಜಿ ವಜೀರನಂ ಕರೆದಿಂತು ದುಷ್ಕೃತ್ಯಮಂ ರಚಿಸವೇಡೆಂದು ಕೋಪಿಸಿ ಗಜರಿಸಿ ಗರ್ಜಿಸಲವನಾ ಮಾತಂ ಲಕ್ಷೀಕರಿಸದಿರಲವರಿರ್ವರ್ಗಂ ಕೈಗಲಸಿ ಯುದ್ಧಂ ಪಣ್ಣಿ ಬಳಿಕ್ಕೀ ವೃತ್ತಾಂತಮೆಲ್ಲಂ ಪಾತುಶಾಹಂಗೆ ಕಿವಿದಾಗಳಾಗಳಾ ಪಾತುಶಾಹಂ ಜಾತ್ಯಭಿಮಾನದಿಂದಾ ವಜೀರನಂ ಪಕ್ಷೀಕರಿಸಿ ಶಾಜಿ ಶಿವಾಜಿಗಳಂ ಕರೆಸಿ ಕನಲ್ದು ಝಂಕಿಸಿ ಕಡೆನುಡಿಯಲ್ ಶಿವಾಜಿಯದಂ ಮನದೊಳಿಟ್ಟು ಮಂದಿರಕ್ಕೈತಂದು ಬಲವದ್ವೀರರೊಳಂ ವಿರೋಧಂ ಬೇಡೆಂದು ಪಲಬಗೆಯೊಳೊಡವಡಿಸಿ ಪೇಳಲೇನಾದೊಡಮಾ ಶಾಜಿಯ ಮಾತಂ ಬಗೆಗೊಳದಂತಾದೊಡೇಕೋಜಿವೆರಸು ನೀನೆ ಪಾತುಶಾಹನನೋಲಗಿಸಿಕೊಂಡು ಸುಖಮಿರ್ಪುದೆಂದತ್ಯಂತಕೋಪಾಟೋಪದಿಂ ನಿಷ್ಠುರೋಕ್ತಿಗಳಂ ನುಡಿದನಂತರಂ

ಉ||ಮಾ|| ತಂದೆಯೆನಿಪ್ಪ ಶಾಜಿಯುಸಿರ್ದಂತಿರೆ ವರ್ತಿಸದಾ ಶಿವಾಜಿ ತಾ
ನಂದು ತೆರಳ್ದು ಶೋಭಿಸುವ ಜಾವುರಿಮಾವುರಿಯೆಂಬ ತಾಣಮಂ
ಪೊಂದಿ ಬಲಿಷ್ಠನಾಗಿ ಹಯಸೈನ್ಯಸಮೂಹವನ್ನೆಡೆ ಕೂಡಿಸು
ತ್ತೊಂದಿ ವಿಜಾಪುರಾಧಿಪನ ನಾಡನವಂ ಪುಡಿಗೈದನಾರ್ಪಿನಿಂ ೨೬

[1] ಜಿಯು (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ವ|| ಮತ್ತಮಂತುಮಲ್ಲದೆಯುಂ

ಕಂ|| ಚಂದನ ವಾಮನ ಪುಣ್ಯಪು
ರಂದರ ಪನ್ನಾಳಿ ಪರಶುರಾಮ ವಸಂತಂ
ವಂದನ ರಿಂಗಿಣಿ ಲೇಖನಿ
ಯೆಂದೆನಿಪುಗ್ಗಡದ ಗಡಗಳಂ ಸಾಧಿಸಿದಂ ೨೭

ಭೂತಳಕದ್ಭುತಮೆನಿಸಿದ
[1]ಸಾತಾರಿಯು ಪಾಳ್ಯಮೆಸೆವರಾದಿರಿಯೆಂಬೀ[1]
ಖ್ಯಾತ ಗಡಂಗಳುಮಂ ತ
ನ್ನೇತೋಜಿಯ ಮೊಮ್ಮನದಟನಿಂ ವಶಗೈದಂ ೨೮

ವ|| ಇಂತಿ[2]ವೇ[2] ಮೊದಲಾದ ಗಡಂಗಳುಮಂ ಕೊಂಡನೇಕರಾಜ್ಯಂಗಳನಧೀನಂ ಗೈದುರವಣೆಯಿಂ ಮಿಕ್ಕು ಮೀರಿ ವರ್ತಿಸುತ್ತಿರ್ಪ ತಚ್ಛಿವಾಜಿಯದಟಂ ವಿಜಾಪುರದ ಪಾತುಶಾಹಂ ಕೇಳ್ದು ಶಾಜಿಯುಂ ಕರೆದು ಕೋಪಿಸಿ ನಿನ್ನ ಮಗನಂ ಕರೆತರಿಸಲ್ಲದೊಡವನಂ ಪಿಡಿತರಿಸಿ ನಿಗ್ರಹಿಸಿದಪೆನೆನಲಾತನೆನ್ನ ಮಾತಿನೊಳಿಲ್ಲಮವನೆನಗಂ ಗನೀಬನಾಗಿ ನಡೆಯುತಿರ್ಪನೆನಲಾ ಮಾತಂ ಪಾತುಶಾಹಂ ಕೇಳ್ದಾತನಂ ಪಿಡಿತರ್ಪುದೆಂದು ಸೈನ್ಯಮಂ ಕೂಡಿಸಿ ತೆರಳ್ಚಿಸಿ ಕಳುಪಲಾಗಳ್ ತನ್ನೆಡೆಗೈದಿದ[3]ಬ್ದು[3]ಲ್ಲಖಾನನೆಂಬ ವಜೀರನಂ ಭೇಟಿಮುಖದೊಳೊಳವುಗುರೆಂಬಾಯುಧದಿಂ ಶಿವಾಜಿ ಘಾತಂಗೆಯ್ಯಲಾ ವಾರ್ತೆಯುಂ ಮಗುಳ್ದು ವಿಜಾಪುರದ ಪಾತುಶಾಹಂ ಕೇಳ್ದತ್ಯಂತಕೋಪಾಟೋಪದಿಂದೆಮಗೆ ಗನೀಬನಾಗಿ ವರ್ತಿಸುತಿರ್ಪ ನಿನ್ನ ಮಗನಂ ಪಿಡಿತರ್ಪುದೆಂದು ನಿಯಾಮಿಸಿ ಹೇರಳಮಾದ ಮಂದಿ ಕುದುರೆಗಳಂ ಕೂಡಿಸಿ ಶಾಜಿಯುಂ ಕಳುಪಲ್ ಶಿವಾಜಿ ಶಾಜಿಯುಂ ಭೇಟಿಗೊಂಡೊಡನಾ ಶಾಜಿಯುಂ ವಂಚಿಸಿ ಪಂಗುಳಿಯಗಡಮುಂ ಸಾರ್ದು ನಿಂದು ಹೇರಳಮಾದ ಮಂದಿಕುದುರೆಗಳಂ ನೆರಹಿ ಮತ್ತಂ ಕೆಲವು ರಾಜ್ಯಗಡಂಗಳಂ ಕೊಂಡತ್ಯಂತಪ್ರಬಲನಾಗಿ ವರ್ತಿಸುತ್ತಿರಲ್ ಮಗನಂ ಕೈವಶಂಗೈವೊಡಸಾಧ್ಯಮಾದ ಕಾರಣದಿಂದಾ ಶಾಜಿ ಲಜ್ಜಿತನಾಗಿ ಪಿಂದೆಗೆದು ಮಗುಳ್ದಾ ವಿಜಾಪುರಕ್ಕೆ ಪೋಪ ದಾರಿಗಾಣದೆ ಮಗ ಯೇಕೋಜಿ ಸಮೇತನಾಗಿ ವೈದೆಗೆದು ನಡೆದು ತಮಗಂದು ಸ್ಥಳಮಾಗೆ ನಿಲ್ವೊಡೆಡೆಗಾಣದೆ ಮಧುರೆಯವರೊಳಗಣ ಚಂದೀಗಡ ಚಂದಾವರದ ಕೋಂಟೆಗಳಂ ತೆಗೆದುಕೊಂಡಾಸ್ಥಳದೊಳ್ ತನ್ನ ಕಿರಿಯಮಗನಾದೇಕೋಜಿ ಸಮೇತನಾಗಿ ನಿಂತು ಕೆಲದಿನಮಲ್ಲಿರ್ದು ಮಗನನಲ್ಲಿಯೆ ನಿಲ್ಲಿಸಿ ತಾಂ ಮಗುಳ್ದು

---

[1] ಸಾಕಾರಿಯು ಲೋಕಗಡಪ್ರತಿನಾಮ ಪಾಳ್ಯಯಸವರಾದಿರಿಯಂಬೀ (ಕ) [2] ವು (ಗ)
[3] ರದಬ್ಬು (ಕ)

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಜಾಪುರಕ್ಕೈದುತಿರಲ್ ಮಧ್ಯಮಾರ್ಗದೊಳ್ ರೋಗಪೀಡಿತನಾಗಿ ಶೀರೆದ ಪ್ರಾಂತದೊಳ್ ಶಿವಸಾಯುಜ್ಯಮಂ ಪಡೆಯಲಿತ್ತಂ ತತ್ಪುತ್ರನಾದ ಶಿವಾಜಿ ಮತ್ತಂ ಬಹುರಾಜ್ಯ ರಾಷ್ಟ್ರಗಡನಿಕ್ಷೇಪಂಗಳಂ ಸಾಧ್ಯಂಗೈದು ದಿನದಿನದೊಳತ್ಯಂತ ಪ್ರಬಲನಾಗಿ ವರ್ತಿಸುತ್ತುಂ

ಕಂ॥ ಡಿಳ್ಳಿಯವರಂಗಜೇಬನ
ಪಳ್ಳಿಯ ಗೋಕುಲವ ತಿರುಹಿ ರಾಷ್ಟ್ರಂಗಳೊಳಿಂ
ಬುಳ್ಳ ಗಡಂಗಳ ನೀಳ್ದೊ
ಳ್ಕೊಳ್ಳೆಯ ರಾಜ್ಯಗಳನಿರದವಂ ವಶಗೈದಂ ೨೯

ಬಳಿಕವನ ರಾಜ್ಯಗಳೊಳುಪ
ಟಳಮಂ ರಚಿಸಲ್ಕೆ ತನ್ನ ಮಾವನೆನಿಪ್ಪ
ಗ್ಗಳನಹ ಶಾಸ್ತಾಖಾನನ
ನಳವಿಂ ಬೀಳ್ಕೊಡೆ ಶಿವಾಜಿಯುಂ ತಹುದೆನುತುಂ ೩೦

ಕಡುಗಲಿ ಶಾಸ್ತಾಖಾನಂ
ಪಡೆವೆರಸು ತೆರಳ್ದು ಶೀಘ್ರದಿಂ ಪನ್ನಾಳೀ
ಗಡನುಂ ಮುತ್ತಲ್ಕೊರ್ವನೆ
ನಡೆತಂದು ಶಿವಾಜಿಯವನಗೋಂಟಂ ಪೊಗುತುಂ ೩೧

ಛುರಿಕದೆ ಶಾಸ್ತಾಖಾನನ
ಬೆರಲಂ ಕತ್ತರಿಸಿ ನಿಶಿಯೊಳಂ ಪೋಗಲವಂ
*ಪರಮಭೀತಿಯೊಳೆ ತೆಗೆದತಿ
ಭರದಿಂ ಪಡೆವೆರಸು ಡಿಳ್ಳಿಯಂ ನೆರೆಪೊಕ್ಕಂ ೩೨

ಆವರಂಗಜೇಬನಂ ಕಂ
ಡವನಾತ್ಮಾಂಗುಲಿಯನ್ನೆದೆ ತೋರಲ್ ಖತಿಯಿಂ
ಯವನಾಧೀಶಂ ಕಲ್ಪದ
ಜವನೆನೆ ಗರ್ಜಿಸಿ ವಜೀರನಂ ನೋಡುತ್ತುಂ ೩೩

ಕರೆದು ಜಯಸಿಂಗನಂ ನೀಂ
ತ್ವರಿತದೊಳಂ ತೆರಳ್ದು ತಚ್ಛಿವಾಜಿಯುಮಂ ಕೈ
ಸೆರೆವಿಡಿದು ತಪ್ಪದೆನುತಂ
ದುರೆ ನೇಮಿಸಿ ಪೋಪುದೆಂದವಂ ಬೀಳ್ಕೊಟ್ಟಂ ೩೪

Sri Vidyabharathi Book Centre, Sringeri

CC-O. In Public Domain. Digitized by eGangotri

ವ॥ ಇಂತೆಂದು ನಿಯಾಮಿಸಿ ಬೀಳ್ಕೊಡಲ್ ಭೂರಿಸೈನ್ಯಂವೆರಸು ಜಯಸಿಂಗಂ ತೆರಳ್ದೈತಂದು ಪನ್ನಾಳಿಯ ಗಡಮಂ ವೇಢೈಸಲ್ ಶಿವಾಜಿಯೆಯ್ತಂದು ಭೇಟಿಯಂ ಕೊಳಲಾಗಲಾ ಜಯಸಿಂಗಂ ಶಿವಾಜಿಯ ಹಸ್ತಮಂ ಪಿಡಿಯಲಾಗಳಾ ಶಿವಾಜಿ ನಸುನಗುತ್ತೆನ್ನ ಹಸ್ತಮಂ ಪಿಡಿವ ಬಲ್ಪುಳ್ಳೊಡೆ ಪಿಡಿವುದಲ್ಲದಿರ್ದೊಡೆ ಮಾಣ್ಬುದೆನಲಾ ಮಾತಂ ಜಯಸಿಂಗಂ ಕೇಳ್ದು ಕೈವಿಡಿದ ಬಳಿಕ್ಕಂ ಬಿಡುವೆನಲ್ಲಮೆನಲಂತಾದೊಡೊಳ್ಳಿತೆಂದೊಡಂಬಟ್ಟಾ ಶಿವಾಜಿ ನಿಜಪುತ್ರ ಸಂಬಾಜಿವೆರಸು ತಾನಲ್ಪಸೈನ್ಯಸಮೇತನಾಗಿ ತೆರಳ್ದು ಡಿಳ್ಳಿಯಂ ಪೊಕ್ಕವರಂಗಜೇಬನ ಭೇಟಿಯಂ ಕೊಳಲ್ ಮನ್ನಿಸಿಯುಚಿತಮಾದುಡುಗೊರೆ ವೀಳ್ಯಂಗಳನಿತ್ತಾದರಿಸಿ ಬಿಡಾರಕ್ಕೆ ತೆರ[1]ಳ್ಚಿ[1]ಯುಲುಪೆ ಮೊದಲಾದ ಸಮಸ್ತವಸ್ತೂತ್ಕರಮಂ ಕಳುಪಿ ಕಬ್ಜಿ ಪ್ರತಿನಾಮವನುಳ್ಳ ಕವಿ ಕಳಸಂಗೆ ನಿಯಾಮಿಸಿ ಚೌಕಿಯನಿಕ್ಕಿಸಲವರೊಳಾ ಶಿವಾಜಿ ಸಾಂಬಾಜಿವೆರಸು ಕೆಲವುದಿನಮಿರುತ್ತುಂ ಕ್ರಮದಿಂ ನಾನಾಪ್ರಕಾರದಿಂದಾ ಕವಿಕಳಸನನೊಳಗುಮಾಡಿಕೊಂಡು ನಿನ್ನ ಸಂಸ್ಥಾನದೊಳಿರ್ಪ ವಜೀರಉಮರಾವುಗಳ್ಗೆ ತಣವುಡುಗೊರೆಗಳಂ ಮಾಡಿಸಲ್ವೇಳ್ಕೆಂದು ಪಾತುಶಾಹನಿಂದಪ್ಪಣೆವೆತ್ತು ಸ್ಥೂಲಸೂಕ್ಷ್ಮಂಗಳಾದ ಪೇಟಿಕೆಗಳಂ ಸಂಗ್ರಹಿಸಿಯವರೊಳ್ ತಂಡುಲಾಢಕ ಮಾಷ ಮುದ್ಗ ಗೋಧೂಮಾದಿ ಸಕಲಧಾನ್ಯ ನಾನಾಫಲ ಪದಾರ್ಥ [2]ಪರಿಮಳ[2]ದ್ರವ್ಯತಾಂಬೂಲ ವಿಚಿತ್ರವಸನಾದಿ ವಸ್ತೂತ್ಕರಂಗಳಂ ತುಂಬಿಸಿ ಚಾರರಿಂದಾ ಪೇಟಿಕೆಗಳನೊಂದೊಂದುದಿನದೊಳೋರೊರ್ವ ವಜೀರರ ಮನೆಗೆ ಕಳುಪುತ್ತೀಪ್ರಕಾರಮಾದ ನಡತೆಯಿಂ ನಚ್ಚು ಹಾಕಿ ಬಳಿಕೊಂದುದಿನದೊಳ್ ತಾಂ ಮಲಂಗುವ ಪಾಸಿನೊಳ್ ನೀಳಮಾದೊಂದು ಲೋಡಂ ಮಲಂಗಿಸಿ ತಲೆಗಿಂಬನಿಕ್ಕಿ ತಾಂ ಪೊದೆವ ವಸ್ತ್ರವನಾ ಲೋಡಿಂಗೆ ಪೊ[3]ದೆಯಿ[3]ಸಿ ನೋಳ್ಪರ್ಗೆ ತಾನೆಂದಿನಂತೆ ಮಲಂಗಿರ್ಪನೆಂಬ ಭಾವಮಂ ಪುಟ್ಟಿಸಿ ಬಳಿಕ್ಕಾ ಶಿವಾಜಿ ತನ್ನ ಮಗನನೊಂದು ಪೆಟ್ಟಿಗೆಯೊಳ್ ಪುಗಿಸಿ ತಾನೊಂದುಪೆಟ್ಟಿಗೆಯೊಳ್ ಪೊಕ್ಕು ಪೂರ್ವದೊಳ್ ಭೇಟಿಕಾಲದೊಳ್ ಕೈವಿಡಿದ ನಂಬುಗೆಯಂ ಮನದೆಗೊಂಡು ಜಯಸಿಂಗನಾಲಯಮಂ ಸಾರ್ದು ಮತ್ತಮಲ್ಲಿ ಫಕೀರವೇಷಮಂ ತಾಳ್ದು ಪೊರಮಟ್ಟು ಮಗ ಸಂಬಾಜಿಯಂ ಕರೆದು ವೇಷಾಂತರದಿಂ ನೀಂ ಪನ್ನಾಳಿಗೈದಿ ನೀನಾವುದರೊಳಮೆಚ್ಚರಿನೊಳ್ ವರ್ತಿಪುದೆಂದೊರೆದು ಬೀಳ್ಕೊಟ್ಟು ತಾಂ ಪರದೇಶಿ ಫಕೀರ ಜೋಗಿ ಜಂಗಮ ಮುಂತಾದ ಬಗೆಬಗೆಯ ವೇಷಗಳಂ ತಾಳ್ದಿದುತ್ತುಂ

ಕಂ॥ ವರಕಾಶೀಕ್ಷೇತ್ರವನಾ
ಗರುವಂ ತಾಂ ಪೊರ್ದಿ ಮಿಂದು ವಾರಾಣಸಿಯೊಳ್
*ಪರಮಭಕ್ತಿಯೊಳೆ ವಿಶ್ವೇ
ಶ್ವರನಡಿಯಂ ಭಜಿಸಿ ಕೂಡೆ ಗಯೆಯಂ ಸಾರ್ದಂ ೩೫

---

[1] ಳ್ಚಿಸಿ (ಗ) [2] ಪದಾರ್ಥಫಲವೇಲೆ ಪರಿಮಳ (ಗ) [3] ದಿ (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ವಿರುಪಾಕ್ಷೇತ್ರದೊಳಂ ಮಿಗೆ
ವಿರಚಿಪ ಕೃತ್ಯಗಳನೈದೆ ತೀರ್ಚಿ ಬಳಿಕ್ಕಂ
ತೆರಳ್ದಲ್ಲಿಂದೆ ತದಾರೆಯ
ರೆರೆಯಂ ತಾಂ ಗೋಲುಕೊಂಡೆಯವನುರೆ ಸಾರ್ದಂ ೩೬

ಅಕ್ಕಣಮಾದಣರುಗಳಿಂ
ಚಕ್ಕನೆ ತತ್ಪಾತುಶಾಹಗರುಹಿಸಿ ಬರವಂ
ಮಿಕ್ಕಾ ರಾಜಾಲಯಮಂ
ಪೊಕ್ಕಾ ಯವನಪನ [1]ಭೇಟಿ[1]ಯಂ ನೆರೆಕೊಂಡಂ ೩೭

ವ|| ಇಂತು ಭಾಗಾನಗರದೊಳ್ ತಾನಾಶಾಹನ ಭೇಟಿಯಂ ಕೊಂಡನೇಕ ಬಹುಮಾನನುಂ ಪಡೆದು ತೆರಳ್ದನಂತರಂ ಪನ್ನಾಳಿಯಂ ಸಾರ್ದು ಮುನ್ನಿಗಿಂದತ್ಯಧಿಕ ಪ್ರಬಲನಾಗಿ ವರ್ತಿಸುತ್ತುಮಿರಲ್ ಡಿಳ್ಳಿಯೊಳಿತ್ತಂ

ಮ|| ವಿ|| ಮಿಗೆ ನೇತೋಜಿಯ ಪೌತ್ರನಂ ಬಿಡದೆ ಕಾಯ್ವರ್ಚೌಕಿಯೊಳ್ ಕಾಣದು
ಚ್ಚೈಗದಿಂದಂದವರಂಗಜೇಬಗರುಪಲ್ ಕೇಳ್ದಿನ್ನೊಳಿಂತಾರೆಯಂ
ಡಗೆಗೆಯ್ದಾವೆಡೆಗೆಯ್ದಿದಂ ಬೆದಕಿ ಶೀಘ್ರಂ ತಪ್ಪಿದೆಂದಾರ್ದು ಕೆ
ನ್ನೊಗರಾಣ್ಮಂ ಬಿಡದಟ್ಟಿದಂ ಪ್ರಬಲಸೇನಾಭಾರರಂ ಚಾರರಂ ೩೮

ಕಂ|| ತೆರಳ್ದವರ್ಗಳ್ನಾಲ್ಗಡೆಗಳೊ
ಳರಸುತ್ತಿರೆ ತಚ್ಛಿವಾಜಿ ಗಯೆಯಿಂ ಪೊರಮು
ಟ್ಟುರೆ ಪನ್ನಾಳಿಯನೈದಿದ
ಪರಿಯಂ ಕೇಳ್ದಾ ತುರುಷ್ಕಪತಿಯತಿಖತಿಯಿಂ ೩೯

ಕಡುಗಲಿ ಶಾಜಿಯ ಸುತನಂ
ಪಿಡಿದವಗಂ ಕಾಯ್ಪನಿಕ್ಕಿ ಕಳುಪುವುದಿರದೆ
ನ್ನೆಡೆಗೀಗೆಂದು ವಿಜಾಪುರ
ದೊಡೆಯಂಗಾ ಮ್ಲೇಚ್ಛಪಂ ನಿರೂಪಿಸಿ ಕಳುಪಲ್ ೪೦

ಬರೆಯಲ್ಪರ್ಯ್ಯಾಯೋಕ್ತಿಯ
ನುರೆ ಕೇಳ್ದವರಂಗಜೇಬನಾಗಳೆ ಫೌಜಂ
ನೆರಹಿ ವಜೀರರ್ಕಳುಮಂ
ಬರಿಯಿಸಿ ಕೋಪದೊಳೆ ತನ್ನೊಳಂದಿಂತೆಂದಂ ೪೧

[1] ಬೇಂಟಿ (ಕ)

Sri Vidyabharathi Book Centre, Sringeri

CC-O. In Public Domain. Digitized by eGangotri

ವ॥ ವಿಜಾಪುರದ ಪಾತುಶಾಹ ವಿಭ್ರಾಮುಅಲ್ಲಿಯೇದುಲಶಾಹನ ಕುಮಾರನಾದ ಸುಲುತಾನಮುಹಮುದ್ದಶಾಹಂಗೆ ಗೋಲುಕೊಂಡೆಯದ ಕುತುಬಶಾಹನ ಪುತ್ರಿಯಾದ ಬಡೆಸಾಹೇಬತಿಯಂ ತಂದುದರಿಂ ವಿಜಾಪುರ ಭಾಗಾನಗರಗಳ ಪಾತುಶಾಹರ್ಬೀಗನುನೆ ತನದವರಾಗಿ ವರ್ತಿಸುತಿರ್ಪರಿನರ್ಗಳನುಸಂಧಾನಮುಖದಿಂದಾ ಶಿವಾಜಿ ಬಲಿಷ್ಠನಾಗಿ ತನ್ನಂ ಲಕ್ಷೀಕರಿಸದೆ ನಡೆಯುತಿರ್ಪನೀವುಭಯುಸಂಸ್ಥಾನಂಗಳಂ ಮುರಿದಲ್ಲದೆ ಈ ಶಿವಾಜಿ ತನಗೆ ಸ್ವಾಧೀನಮಾಗನೆಂದಾಳೋಚಿಸಿ ತೆಂಕಮುಖಕ್ಕೈದಲಾಗದೆಂದುಸಿರ್ದಮಾವಶಾಸ್ತ ಖಾನನುಕ್ತಿಯಂ ಬಗೆಗೊಳ್ಳದವರಂಗಜೇಬಪಾತುಶಾಹಂ ಡಿಳ್ಳಿಯಿಂ ತೆರಳ್ದವರಂಗಾಬಾದಿ ನೊಳ್ ನಿಂದು ಹೇರಳ ಚತುರಂಗಸೈನ್ಯಮಂ ನೆರಹಿ ಬಳಿಕ್ಕನಲ್ಲಿಂ ತೆರಳ್ದು ವಿಜಾಪುರದ ಕೋಂಟೆಗೆ ಮುತ್ತಿಗೆಯಿಕ್ಕಿಸಿ ಪಥ ಪೈಕ ಕಂಡಿ ಕಣಿವೆಗಳಂ ಕಟ್ಟಿಸಿ ನಡೆಗೋಂಟೆತಳಿ ಸುರಂಗಗಳಂ ನಡೆಸುತ್ತಿಂತನೇಕಪ್ರಯತ್ನಗಳಿಂ ಬಹುಕಾಲಂ ಪೋರ್ದತ್ಯಂತಸಾಹಸಂ ಗೈದೊಡಂ ಭಾಗಾನಗರದ ಸಂಸ್ಥಾನದಖಂಡಾಧಿಕಾರಮಂ ವಹಿಸಿ ನಡೆಸುತಿರ್ದಕ್ಕಣ್ಣ ಮಾದಣ್ಣರೆಂಬ ಪ್ರಸಿದ್ಧನಿಯೋಗಿಗಳ್ ನಡೆಸುತಿ[1]ರ್ದ[1] ಸಹಾಯಮೂ[2]ಲ[2]ದಿಂದೇನಾ ದೊಡಮಾ ಪರಿಸ್ತರಣಂ ಕ್ಷಿಪ್ರಸಾಧ್ಯಮಾಗದಿರ್ಪುದಂ ಕಂಡು ಚಲದಿಂ ಕಸ್ತುಗೆಯ್ದು ನಿಂದೀರಯ್ದುವರ್ಷಂಬರಂ ನೆಲದಂಡಿಳಿದು ಜೇರುಮುತ್ತಿಗೆಯನಿಕ್ಕಿ ಬಹುವಿಧ ಪ್ರಯತ್ನಂ ಬಡುತ್ತಿರಲಿತ್ತಂ ಭಾಗಾನಗರದೊಳ್ ಸರ್ವಾಧಿಕಾರಮಂ ನಡೆಸುತಿರ್ದಕ್ಕಣ್ಣಮಾದಣ್ಣರೆಂಬ ನಿಯೋಗಿಗಳ್ ಕುಹಕಿಗಳ್ ಭಿನ್ನತಂತ್ರಮಂ ರಚಿಸಿ ನಡೆಸಿದ ಲೇಖನಮೂಲದಿಂ ಸಿದ್ಧಿ ಜಾತಿ ಯವರಿಂ ಘಾತಮುಖದಿಂದಳಿದರೆಂಬ ವರ್ತಮಾನವನವರಂಗಜೇಬಂ ಕೇಳ್ದಿನ್ನು ವಿಜಾಪುರ ಭಾಗಾನಗರ[3]ಗಳೆಂ[3]ಬುಭಯುಸಂಸ್ಥಾ[4]ನಂಗಳು[4]ಮೆನಗೆ ಸಾಧ್ಯಮಾದು[5]ವೆಂ[5]ದು ಪ್ರಮುದಿತ ಮಾನಸನಾಗಿ ಬಳಿ[6]ಕಿತ್ತಂ[6] ಕೆಲವುದಿವಸಂಗಳ್ ಪೋಗಲೊಡನೆ ಶಾಲಿವಾಹನಶಕ ವರ್ಷ....ನೆಯ ಕ್ಷಯುಸಂವತ್ಸರದೊಳಾ ವಿಜಾಪುರದ ಕೋಂಟೆಯಂ ತೆಗೆದುಕೊಂಡು ಜಕೀರಿ ರಸ್ತುಮುಸ್ತೈದೆಗಳಿಲ್ಲದಿರ್ದೊಡಂ ಬಹುಕಾಲಂ ಕೋಂಟೆಯಂ ಕಲಿಯೇರಿಸಿ ಕಾಡಿಸಿದ ನೆಂದು ಮೆಚ್ಚಿ ಸುಲಿತಾನಶಿಖೀಂದ್ರನಂ ಪಿರಿದು ಮನ್ನಿಸಿ ಬಳಿಕ್ಕಲ್ಲಿಂ ತೆರಳ್ದು ಭಾಗಾನಗರದ ಕೋಂಟೆಯಂ ವೇಷ್ಟೈಸಿ ಷಣ್ಮಾಸಂಬರಂ ನೆಲದಂಡಿಳಿದು ಜೇರುಮುತ್ತಿಗೆಯನಿಕ್ಕಿ ಬಳಿಕ್ಕಾ ಕೋಂಟೆಯಂ ತೆಗೆದುಕೊಂಡು ಜಕೀರಿರಸ್ತು ಮುಸ್ತೈದೆಗಳ್ ಸಂಪೂರ್ಣಮಾಗಿರ್ದುಂ ಕೋಂಟೆಯನಿತ್ತನೆಂದಾ ಭಾಗಾನಗರದ ತಾನಾಶಾಹನಂ ತಿರಸ್ಕರಿಸಿ ತೇಜೋಭಂಗಮಂ ಮಾಡಿ ಚಲಪದದಿಂದಿಂತು ವಿಜಾಪುರ ಭಾಗಾನಗ[7]ರಂಗಳೆಂ[7]ಬುಭಯ ಸಂಸ್ಥಾ[8]ನಂಗಳಂ[8] ಸ್ವಾಧೀನಂಗೈದನಂತರಮವರಂಗಜೇಬಪಾತುಶಾಹಂ ಮುಂದಣ ರಾಜಕಾರ್ಯವನಾ ಳೋಚಿಸಿ ಶಿವಾಜಿಯಂ ಕೈವಶಂಗೆಯಲ್ವೇಳ್ಕೆಂ[9]ದಾ[9]ಟೋಪದಿಂದಲ್ಲಿಂ ತೆರಳ್ದೈತಂದು

---

[1] ರ್ಪ (ಗ) [2] ಲಕ (ಗ) [3] ಮೆಂ (ಗ) [4] ನಮು (ಗ) [5] ಡೆಂ (ಗ) [6] ಕ್ಕಂ (ಗ)
[7] ರವೆಂ (ಗ) [8] ನಮಂ (ಗ) [9] ಬಾ (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕೃಷ್ಣವೇಣೀ ನದೀತೀರದೊಳ್ ವಿರಾಜಿಸುತ್ತಿರ್ಪ ಗಲಗಲಿಯೆಂಬ ಸ್ಥಾನದೊಳ್ ನಿಂದಿರಲ್ಲಿ ಮರುಕಿಯುಪದ್ರವದಿಂ ಬಹುಸೈನ್ಯಂ ಲಯವಾಗಲಾ ಸ್ಥಾನದೊಳ್ ನಿಂದು ನಿತ್ತರಿಸಲಮ್ಮದೆ ಅಲ್ಲಿಂ ತೆರಳ್ದು ಭೀಮರಥೀನದೀತೀರದೊಳ್ ಮೆರೆವ ಮಾತುಳಂಗಕ್ಷೇತ್ರ (ಪ್ರತಿನಾಮ ಬ್ರಹ್ಮಪುರಿ) ಯೆಂಬ ಸ್ಥಳದೊಳ್ ನಿಂದಿರುತ್ತುಮಿರಲಾ ಪ್ರಸ್ತಾವದೊಳ್

ಕಂ॥ ಅಲೆದು ನಿಜಸೈನ್ಯಮಂ ತಾಂ
ಮುಳುಗಿಸುತ್ತೈತಪ್ಪ ಭೀಮರಥಿಯುರವಣೆಯಂ
*ನಿಲಿಸಿ ಬಾಧಿಸುವ ಮರುಗಿಯ
ಕಲೆಯಂ ಕರವಿಾಳ್ದು ನೈಮೆಯಂ ನೆರೆ ಮೆರೆದಂ ೪೨

ಶಾಜಿಯ ಸುತನೆಂದೆನಿಪ ಶಿ
ವಾಜಿಯ ವರಪುತ್ರನೆನಿಸಿ ರಾರಾಜಿಸುತಿಹ ಸಂ
ಬಾಜಿಯುಮಂ ಶಿಕ್ಷಿಸಿ ನಿ
ರ್ವ್ಯಾಜದೆ ತತ್ತನುಜ ಶಾಹುಮಂ ರಕ್ಷಿಸಿದಂ ೪೩

ವ॥ ಅದೆಂತೆಂದೊಡಿಂತವರಂಗಜೇಬಪಾತುಶಾಹಂ ಬ್ರಹ್ಮಪುರಿಯೊಳ್ ವರ್ತಿಸುತಿರ್ದು ಶಿವಾಜಿಯ ಮೇಲಣ ರಾಜಕಾರ್ಯಮಂ ಮನದೆಗೊಂಡು ಪನ್ನಾಳಿಮುಖಕ್ಕೈದವೇಳ್ಕೆಂಬ ಮಂತ್ರಾಳೋಚನೆಯಂ ನಿಶ್ಚಯಂಗೈ[1]ದು....... ತ್ತಿ[1]ರಲನಿತರೊಳಿತ್ತಂ ಪನ್ನಾಳಿಯೊಳ್ ಶಿವಾಜಿ ಶಿವಸಾಯುಜ್ಯಮನೈದಲೊಡನೆ ಮೂರ್ಧಾಭಿಷಿಕ್ತನಾಗಿ ಸುಖಸಂಕಥಾವಿನೋದಗೋಷ್ಠಿಗಳಿಂ ರಾಜ್ಯಂಗೆಯ್ಯುತ್ತಿರ್ಪ ತಚ್ಛಿವಾಜಿಯ ಪಿರಿಯ ಮಗನಾದ ಸಂಬಾ[2]ಜಿ[2] ಪನ್ನಾಳಿಯಂ ತೆಗೆದುಕೊಳಲವರಂಗಜೇಬಪಾತುಶಾಹನೈದುತಿರ್ಪನೆಂಬ ವರ್ತಮಾನಮಂ ಕೇಳ್ದು ತೆರಳ್ದು

ವ॥ ಸಂಬಾಜಿ ತನ್ನ ಪಿತನಿಂ
ದಂ ಬಲ್ಲಿದನೆನಿಸಿ ಪಾತುಶಾಹನ ನಾಡೊಳ್
ತುಂಬಿದ ಧನಧಾನ್ಯಾಭರ
ಣಾಂಬರಪಶ್ವಾದಿ ಸರ್ವಮಂ ವಶಗೈದಂ ೪೪

ಕಂ॥ ಅಂತಲ್ಲದಖಿಳಮುಖಗಳೊ
ಳಂತವನುಪಟಳವನೆಸಗೆ ತಾಮ್ರಮುಖಾಧೀ
ಶಂ ತವೆಕೆರಳ್ದವನಂ ಪಿಡಿ
ದಂತಿಕಕೆಯ್ದಿಸುವುಪಾಯಮೆಂತೆನುತಿರ್ದಂ ೪೫

---

1 ದಿರುತ್ತಿ (ಗ) 2 ಜಿಯು (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ವ|| ಅಂತೆಂದಾಳೋಚಿಸಿ ಬಲಶಾಲಿಯಾಗಿ ವರ್ತಿಸುತಿರ್ಪ ಸಂಬಾಜಿ ಮಾಯಾ ತಂತ್ರವನೊಡ್ಡಿದಲ್ಲದೆ ತನಗೆ ವಶನಾಗನೆಂದು ನಿಶ್ಚಯಿಸಿ ಬಳಿಕ್ಕೊಂದುಪಾಯಾಂತರಮಂ ನೆನೆದು

ಮ|| ವಿ|| ಬರಿಸುತ್ತಾಗಳೆ ಕಬ್ಜಿ ನಾಮಕದ ಕನ್ನೋಜಿದ್ವಿಜಾಧೀಶನಂ
ವರಸಂಬಾಜಿಯನ್ಯೆಡೆ ಸಾರ್ದವನ ನೀನೆಂತಾದೊಡಂ ವಶ್ಯಗೈ
ದಿರದೆನ್ನಲ್ಲಿಗೆ ಬರ್ಪೊಲಾಗಿಪುದೆನುತ್ತೇಕಾಂತದೊಳ್ಪ್ರಾಣದಿಂ
ತೊರೆದಿಷ್ಟಾರ್ಥವನಿತ್ತು ಬೀಳ್ಕೊಡಲನಂ ಪನ್ನಾಳಿಯಂ ಪೊರ್ದಿದಂ ೪೬

ವ|| ಇಂತು ಕಬ್ಜಿ ಪ್ರತಿನಾಮಕವಿಕಳಸನೆಂಬ ಕನ್ನೋಜಿಬ್ರಾಹ್ಮಣಂ ಪನ್ನಾಳಿಗೈದಿ ಸರ್ವವಿದ್ಯಾಸಂಪನ್ನನಪ್ಪ . ಶ್ರೋತ್ರಿಯಬ್ರಾಹ್ಮಣನ್ನೆತಂದಿರ್ಪನೆಂದು ಸಮೀಪವರ್ತಿ ಸಾಮಾಜಿಕರಿಂ ಸಂಬಾಜಿಗರುಹಿಸಿ ಬಳಿಕ್ಕಾತನ ಭೇಟಿಯಂ ಕೊಂಡು ದಿನದಿನದೊಳವಂ ಗತಿಪ್ರೀತಿಪಾತ್ರನೆನಿಸಿ ವರ್ತಿಸುತ್ತಿರ್ದು ಸಮಸ್ತಶತ್ರುಗಳುಂ ನಿನಗೆ ಪಾದಾಕ್ರಾಂತರಾಗಿ ಬಿಡದೋಲಗಿಪಂತು ಜಪಪುರಶ್ಚರಣ ಹೋಮಂಗಳಂ ಮಾಳ್ಪೆನೆಂದೊಡವಡಿಸಿ ಬಳಿಕಂ ಶಲ್ಯ ಶಾಬರ ಮಂತ್ರ ತಂತ್ರ ಯಂತ್ರ ಪುರಶ್ಚರಣ ಜಪತಪ ತರ್ಪಣ ಹೋಮ ಮೂಲಿಕಾದಿ ನಾನಾ ಪ್ರಯೋಗಮುಖದಿಂದಾ ಸಂಬಾಜಿರಾಜನಂ ವಶೀಕರಿಸಿ ಭ್ರಾಂತನಂ ಮಾಡಲವಂ ಬುದ್ಧಿಶಾಲಿಗಳಪ್ಪ ಸಾಮಾಜಿಕರ ಮಾತಂ ಕೇಳದೆ ಪ್ರತಿದಿನದೊಳ್ ಕ್ಷುದ್ರಜನರ್ಕಳ ಭೇದದಿಂದೋಲಾಡು[1]ತುಂ[1]

ಕಂ|| ಸ್ತ್ರೀಲೋಲನಾಗಿ ಕಬ್ಜಿಯ
ಜಾಲನೊಳಂ ಸಿಲ್ಕಿ ಜಾರನಿಚಯಕ್ಕೆಲ್ಲಂ
ಮೂಲಗುರುವೆನಿಸಿ ತಾಂ ಜಲ
ಕೇಳಿಯನೆಸಗುತ್ತುಮಿಂತು ವರ್ತಿಸುತಿರ್ದಂ ೪೭

ವ|| ಇಂತು ಸಂಬಾಜಿ ಮದನಭ್ರಾಂತಿಯೊಳಿರೆ ಕಬ್ಜಿ ಗೂಢಚಾರರ ಮುಖದಿಂದಂ ತೌರುಷ್ಕಪಗೀ ಹದನಂ ತಿಳುಹಿ ಬರವನ್ನೆಡೆ ಪಾರುತ್ತಿರ್ದಂ

ಕಂ|| ಅನಿತರೊಳಿತ್ತಂ ತಾಮ್ರಾ
ನನರಾಣ್ಮಂ ಬರಿಸಿ ಗೋಪ್ಯದೊಳ್ ಶೇಕುನಿಜಾ
ಮನನ್ನೆಡೆ ಕಳುಪಿದಂ ಭೋಂ
ಕನೆ ನೀಂ ಸಂಬಾಜಿರಾಜನಂ ತಹುದೆನುತುಂ ೪೮

---

[1] ತ್ತುಂ (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ॥ ಇಂತೊರೆದು ಬೀಳ್ಕೊಡಲ್ ಸಮ
ನಂತರದೊಳ್ ಫೌಜುವೆರಸು ಶೇಕುನಿಜಾಮಂ
ನಿಂತಲ್ಲಿ ನಿಲ್ಲದುರುವಿ
ಕ್ರಾಂತಂ ಪನ್ನಾಳಿಯಂ ದಲಂದುರೆ ಸಾರ್ದಂ ೪೯

ವ॥ ಇಂತಾ ಶೇಕುನಿಜಾಮಂ [ಫೌಜು]ವೆರಸತಿಕ್ಷಿಪ್ರದೊಳ್ ಪನ್ನಾಳಿಯಂ ಸಾರ್ದು ತತ್ತ್ರದ್ವಾರ ಕಂಡಿ ಕಣಿವೆಗಳಂ ಕಾಯ್ದಿರ್ಪ ಭಟರ್ಗೆ ಹೇರಳ ಪರಿಧಾನವನಿತ್ತು ಕಬ್ಜಿಯ ಸಂಕೇತದಿಂದೊಳಪೊಕ್ಕು ಮದನಭ್ರಾಂತಿಯಿಂ ಮೈಮರೆದೆಂದಿನಂತೆ ಸಂಗಮೇಶ್ವರನ ನದೀತೀರದೊಳ್ ಸ್ತ್ರೀಜನರ್ವೆರಸು ಜಲಕೇಳೀವಿನೋದದಿಂ ವಿಹರಿಸುತ್ತಿರ್ಪ ಸಂಬಾಜಿರಾಜನಂ ಪಿಡಿದು ಕವಿಕಳಸಂವೆರಸತ್ಯಂತಶೀಘ್ರದಿಂದೆ ತಂದವರಂಗಜೇಬ ಪಾತುಶಾಹ ಗೊಪ್ಪಿಸಲ್ ನಿಟ್ಟಿಸಿ ತನಗೆ ಸಲಾಮಂ ಮಾಡಲೆಂದು ಸಂಬಾಜಿರಾಜಂಗೆ ಪೇಳಿಸಲವನೀ ಮಾತನಂಗೀಕರಿಸದಿರಲ್ ಮುಸಲ್ಮಾನನಾದೊಡೆ ಬಿಟ್ಟಪೆನಲ್ಲದೊಡಾಜ್ಞೆಗೈಸಿದಪೆನೆಂದು ಪೇಳಿಸಲ್ ಕೇಳ್ದು ತನ್ನ ಪುತ್ರಿ ಬೇಗಮುವನಿತ್ತೊಡೆ ತಾಂ ಮುಸಲ್ಮಾನನಾದಪೆನೆನಲಾ ಮಾತಂ ಕೇಳ್ದತ್ಯಂತಕೋಪಾಟೋಪದಿಂದಾ ಸಂಬಾಜಿಯನಾಜ್ಞೆಗೈಸಿ ಕಬ್ಜಿಯ ಶಿರಚ್ಛೇದನಂಗೆಯ್ಯಲಾ ಪಾತುಶಾಹನ ಬೇಗಮುಗೆ ಸಂಬಾಜಿಯ ಮೇಲಣಪೇಕ್ಷೆಯಿರ್ದುದರಿಂ ತನಗಾತನೆ ಪತಿಯೆಂದು ಮತ್ತಾರುಮನಪೇಕ್ಷಿಸದೆ ವಿವಾಹಮಂ ತೊರೆದು ವರ್ತಿಸುತಿರ್ದು ಸಂಬಾಜಿಯ ಮಗ ಶಾಹುರಾಜನೆ ತನಗೆ ಮಗನೆಂದಭಿಮಾನಿಸಿ ಅವರಂಗಜೇಬಂಗರುಹಿ ಆ ಶಾಹುರಾಜನಂ ಪೋಷಣೆಗೈಸಿ ವಿವಾಹಮನೊಡರ್ಚಿಸಿ ದವಲತ್ತಂ ಕೊಟ್ಟು ಚೌಕಿಯ ನಿಕ್ಕಿಸಿ ಮನೆತನದ ಶಾ[1]ಭಿ[1]ಯಂ (?) ನಡೆಸುತ್ತಿರಲಿತ್ತಂ

ಕಂ॥ ನೆರೆ ತತ್ಸಂಬಾಜಿಯ ಸೋ
ದರನೆನಿಸುವ ರಾಮರಾಜನು[2]ರು[2]ಪಟ್ಟವನಾಂ
ತುರುಪನ್ನಾಳಿಯೊಳಾಳು
ತ್ತಿರುತಿರೆ ಶೌರ್ಯಾತಿಶಯದೊಳವನೀತಳಮಂ ೫೦

ಯವನಪಗೀ ವೃತ್ತಾಂತಂ
ಕಿವಿದಾಗಲ್ ರಾಮರಾಜನಂ ಪಿಡಿತಹುದೆಂ
ದವನಂದಬ್ದುಲಖಾನಾ
ದಿ ವಜೀರವ್ರಾತಮಂ ತೆರಳ್ಚಿಸಿ ಕಳುಪಲ್ ೫೧

[1] ಬ್ದಿ (ಗ) [2] ರೆ (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ|| ಕತ್ತಲಿಸೆ ಭುವನಮಿಭಹಯ
ಪತ್ತಿಚಯಂಬೆರಸು ಸರ್ವಸನ್ನಾಹದೆ ದಂ
*ಡೆತ್ತಿಬಂದಾ ತುರುಷ್ಕರ
ಮೊತ್ತಂ ಮೋಹರಿಸೆ ಮುತ್ತೆ ಪನ್ನಾಳಿಯುಮಂ ೫೨

ಅನುಚಿತಮಿನ್ನಿಲ್ಲಿಹುದೆಂ
ದೆನುತುಂ ತದ್ರಾಮರಾಜನಲ್ಲಿಂ ತೆರಳ್ದೊ
ಯ್ಯನೆ ಸಾಗುವನಿತರೊಳ್ಪೋಂ
ಕನೊದವಿ ಬೆಂಬತ್ತಲೊಡನೆ ತೌರುಷ್ಕಚಯಂ ೫೩

ತೆರಳ್ದಲ್ಲಿಂ ಪೊನ್ನಾಳಿಗೆ
ಬರೆ ರಾಜೇರಾಮನವನ ಬೆಂಗೊಂಡವರ್ಗಳ್
ಬರೆ ಚನ್ನಮ್ಮಾಜಿಯವರ್
ನೆರೆ ದಾಂಟಸಲ್ಕೈದಿ ಚಂದಿಯಂ ನೆರೆ ಪೊಕ್ಕಂ ೫೪

ವ|| ಅದೆಂತೆಂದೊಡಾ ಶಿವಾಜಿಯ ಪುತ್ರನೆನಿಪ್ಪ ರಾಮರಾಜಂ ಪನ್ನಾಳಿಯಿಂ ಪಲಾಯನಂಬಡೆದೈದಿ ಪೊನ್ನಾಳಿಯಂ ಪೊಕ್ಕು ತಾನೈತಂದು ಪೊಕ್ಕ ವೃತ್ತಾಂತಮೆಲ್ಲಮಂ ಚನ್ನಮ್ಮಾಜಿಯವರ್ಗರುಹಿಸಿ ಮೊಗಲರ್ಗೆ ಗೋಚರಮಾಗದಂತು ನಿಮ್ಮ ಗಡಿರಾಜ್ಯದಿಂ ತನ್ನಂ ಚಂದಿಗೆ ದಾಂಟಸಿಕೊಡಲ್ವೇಳ್ಕೆಂದು ಬಹುಪ್ರಕಾರದಿಂ ಪೇಳಿಸಲ್ ಕರುಣಾನಿಧಿಯಪ್ಪ ಚನ್ನಮ್ಮಾಜಿಯವರ್ ಕೇಳ್ದು ಸಬನೀಸು ಕೋಳಿವಾಡದ ಬೊಮ್ಮಯ್ಯ ಬೊಕ್ಕಸದ ಸಿದ್ಧಬಸವಯ್ಯ ಮುಂತಾದ ಮಂತ್ರಿ ಮನ್ನೆಯ ಸಾಮಾಜಿಕರೊಳ್ ಮಂತ್ರಾಲೋಚನೆಯಂ ರಚಿಸಿ ಡಿಳ್ಳಿಯವರಂಗಜೇಬಪಾತುಶಾಹನೇ ಮುನಿದೈತಂದೆಮ್ಮ ಸಂಸ್ಥಾನಮಂ ತೆಗೆದು ಕೊಂಡೊಡಂ ಕೊಳಲೇನಾದೊಡಂ ಮರೆವೊಕ್ಕವನಂ ಕೊಡುವುದು ರಾಜಧರ್ಮಮಲ್ತೆಂ ದಿಂತು ಮತಮಂ ನಿಶ್ಚಯಂಗೆಯ್ದು ಬಳಿಕ್ಕಾ ರಾಮರಾಜನಂ ಪ್ರಚ್ಛನ್ನವೇಷನಂ ಮಾಡಿ ಸೀಮೊಗ್ಗೆಗಾಗಿ ಗಾಜನೂರ ಪೊಳೆಯಂ ದಾಂಟಸಿ ಪಳುವಮಂ ಮರೆಗೊಂಡೊಳದಾರಿ ವಿಡಿದು ಬೊರೆನೆಡೆಹಳ್ಳಿ ಆಡುವಳ್ಳಿ ಕಳಸ ಖಾಂಡ್ಯ ವಸುಧಾರೆಗಾಗಿ ಸಾಗಿಸಿ ಕಳುಹಿ ಚಂ[1]ದಿಯ'ಗಡಮಂ ಪೊಗಿಸಲವರಂಗಜೇಬಪಾತುಶಾಹನಿಂದ ರಾಜೇರಾಮನಂ ಬೆಂಬತ್ತಿದ ತುರುಷ್ಕಸೈನ್ಯಮತ್ಯಂತಾಟೋಪದಿಂದಾ ರಾಜೇರಾಮನೈದಿದ ಬಳಿವಿಡಿದು ದಾಳಿವರಿಯುತ್ತೈತಂದು

1 ದೀ (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ|| ಚಳಕದೊಳಂ ಪೊನ್ನಾಳಿಯೊ
ಳಿಳಿದಾರಣಮಸ್ತಖಾನ ಮುಖ್ಯವಜೀರರ್
ಮುಳಿಸಿಂದೆ ಗನೀ[1]ಮಂ[1] ನಿ
ಮ್ಮೊಳಪೊಕ್ಕೊಡನಿರ್ಪನವನನೀವುದೆನುತ್ತುಂ ೫೫

ಕೇಳಿಸೆ ಚನ್ನಮ್ಮಾಜಿಯು
ಮಾಳೋಚಿಸಿ ತಮ್ಮ ರಾಷ್ಟ್ರಕಾಗಿಯವಂ ಬಿ
ಚ್ಚಾಳಾಗಿ ಪೋದುದಹುದಾ
ವಾಳುತ್ತಿರ್ಪಿಳೆಯೊಳಿಲ್ಲವೆಂದರುಹಿಸಿದಳ್ ೫೬

ವ|| [2]ಇಂತೆಂದು[2] ತಿಳುಹಿ [3]ತಮ್ಮ ನಾಡಿನ ಮೇಲಾ ರಾಮರಾಜಂ ಪೋಪೆಡೆಯೊಳಾತನ ವಸ್ತ್ರಾಭರಣಂಗಳ್ ಕೆಲವೆಮ್ಮ ವಶಮಾದುದುಂಟೆಂದಾ ವಸ್ತ್ರಾಭರಣ ತುರಗಾದಿತದೀಯ ವಸ್ತೂತ್ಕರಂಗಳನಾ ವಜೀರರ ವಶಕ್ಕೆ ಕೊಡಿಸಿ ಪೇಳಿಸಲ್ ತದೀಯ ವಸ್ತೂತ್ಕರಂಗಳಂ ಕೊಟ್ಟು ರಾಮರಾಜನಂ ಕೊಡದಡಂಗಿಸಿಕೊಂಡಿರ್ಪರೆಂದಾ ವಜೀರ[4]ರ್ಕ[4]ರ ಲೇಖನಗಳಂ[4] ಬರೆಸಿ ತಮ್ಮ ಕೈವಶಮಾದ ರುಪ್ಪಾಜಿಭೋಸಲೆ ಸಂತಾಜೀ ಜಗದಾಬಮನೋಜೀ ಮೋರಾಶರಜಾರಾವುಯೆಂಬಿಂತೀ ನಾಲ್ವರ್ ವಜೀರರುಮನಾ ರಾಮರಾಜನ ವಸ್ತ್ರಾಭರಣ ತುರಗಾದಿ ತದೀಯ ವಸ್ತೂತ್ಕರಂಗಳನೆಲ್ಲ[5]ಮುಮ[5]ವರಂಗಜೇಬಪಾತುಶಾನೆಡೆಗೆ ಕಳುಪಲವಂ ನಿಟ್ಟಿಸಿ ಲೇಖನವನೋದಿ ಕೇಳ್ದು ಕನಲ್ದು ಕೆಳದಿಯ ಸಂಸ್ಥಾನಮಂ ಕೈವಶಂಗೆಯ್ವುದೆಂದು ತನ್ನ ಪುತ್ರನಾದಜಮತಾರನ ಸಂಗಡಮಪರಿಮಿತ ಹಸ್ತ್ಯಶ್ವಪದಾತಿಯಂ ಕೊಡಿಸಿ ತೆರಳ್ಚಲೊಡನಾ ಅಜಮತಾರನತಿಕ್ಷಿಪ್ರದಿಂ ದಾಳಿವರಿಯುತ್ತೈತಂದು ತಾಂ ಮದಗದಕೆರೆಯ ಬಂಡಿತಿಮ್ಮಾಯಿಕಣಿವೆಯೊಳ್ ನಿಂದು ಜಾನ್‌ಸರಖಾನನಂ ದಾಳಿವರಿಸಲವಂ ಮುಂದಾಗಿ ಬಂದು ಮ[6]ಹಾ[6]ದೇವಪುರದ ಕೋಂಟೆಯುಂ ತೆಗೆದುಕೊಳಲೊಡನಜಮತಾರನಾ ಮ[6]ಹಾ[6] ದೇವಪುರದ ಕೋಂಟೆಯೊಳ್ ನಿಂದು ಬಳಿಕಂ ಜಾನ್‌ಸರಖಾನನಂ ಮತ್ತಂ ಮುಂದೈದಿಸಲವನಾನಂದಪುರಕ್ಕಾಗಿ ಶಾಲಿವಾಹನಶಕ ವರ್ಷ ೧೬೭೧ನೆಯ [7]ಶುಕ್ಲ[7]ಸಂವತ್ಸರದ ವೈಶಾಖ ಬಹುಳದ[8]ಲ್ಲಿ[8] ವೇಣುಪುರಕ್ಕೆ ಬಂದಿಳಿದು ತತ್ಪರಿಸ್ತರಣಮುಂ ವೇಢೈಸುವನಿತರೊಳ್ ಚನ್ನಮ್ಮಾಜಿಯುವರಲ್ಲಿಂ ತೆರಳ್ದು ಭುವನಗಿರಿಯ ಮಾರ್ಗದೊಳ್ ನಿಂದು ಹೇರಳ ಪದಾತಿಯಂ ತೆರ[9]ಳ್ಚಿ[9] ಕಳುಹಿ

---

[1] ಬಿಂ (ಗ) [2] ಇನ್ನು ಪ್ರಕೃತಕಥಾಸಂದರ್ಭಕ್ಕೋಸುಗಂ ಇಂತೆಂದು (ಇ) [3] 'ಇಂತು ಪೂರ್ವಮಾರಭ್ಯ' (ಪುಟ ೧೨೪ ಪಂಕ್ತಿ ೨೫) ಎಂಬಲ್ಲಿಂದ ಇಲ್ಲಿಯವರೆಗೆ ಇರತಕ್ಕ ಭಾಗವು ಓಲೆಯ ಪುಸ್ತಕದಲ್ಲಿ ಬಿಟ್ಟುಹೋಗಿದೆ [4] ರ ತರಲೆಗಳಂ (ಓಗ) [5] ವ (ಗ) [6] ಹ (ಗ) [7] ಶುಭಕೃತ್ (ಮ) [8] ಲು ಮೊಗಲರ ಪಾಜು (ಮ) [9] ಳ್ಚಿಸಿ (ಗಮ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ|| ತೊಳಪ ಬಿದುರೂ[1]ರು[1]ಕೋಂಟೆಗೆ
ತಳಿಗಳನಡಿಗಡಿಗೆ ನಡೆಪ ಮೊಗಲರ ಸೇನಾ
ಜಲಧಿಯನಂಕದೊಳಂತಕ
ನಿಳಯವನುರೆ ಪುಗಿಸಿ ಮೆರೆದಳತಿಸಾಹಸಮಂ ೫೭

ಕಗ್ಗೊಲೆಯಂ ಬಿದ್ದಂಕದೊ
ಳಗ್ಗಳಿಯರೆನಿಪ್ಪ ತತ್ತುರುಷ್ಕರ ಫೌಜಂ
ನುಗ್ಗುನುಸಿಮಾಡಿ ರಣದೊಳ್
ಮುಗ್ಗಿಸಿ ಬಹುಮುಖದೆ ಪುಗಿಸಿದಳ್ ಜವಪುರಮಂ ೫೮

ನೆರೆ ಕಂಡಿ ಕಣಿವೆಪಥಗಳ
ನುರೆ ಬಂಧಿಸಿ ಬಲೆಯೊಳಂ ಸಿಲುಂಕಿದ ಮತ್ಸ್ಯೋ
ತ್ಕರಮೆನಲಾಗಿಸಿ ತದ್ಯವ
ನರ ಸೈನ್ಯವನಾಜಿರಂಗದೊಳ್ ಬರಿಕೈದಳ್ ೫೯

ವ|| ಇಂತು ಕಸ್ತುಗೆಯ್ದು ನೆಲದಂಡಿಳಿದುರುಬಿ ತರುಬಿ ನಿಂದು ಕೈಗೆಯ್ವ ತಾಮ್ರಮುಖರಂ ಬಹುಮುಖದಿಂದೀಪ್ರಕಾರದಿಂ ಸಂಹರಿಸಿ ಇಂತು ಸಮರಸಂಧಾನಮುಖದಿಂ ಡಿಳ್ಳಿಯವರಂಗಜೇಬಪಾತುಶಾಹನ ಫೌಜಂ ಪಿಂದೆಗೆಸಿ ರಾಜ್ಯರಾಷ್ಟ್ರಂಗಳಂ ಸಲಹಿ ತನ್ನಂ ಮರೆವೊಕ್ಕಾರೆಯರರಸನೆನಿಪ್ಪ ರಾಮರಾಜನಂ ಪೊರೆದು ಚಲಪದವಂ ಮೆರೆದು ಸಮಸ್ತ ನೃಪಾಲಮಂಡಲಮಧ್ಯದೊಳತ್ಯಂತಪ್ರಖ್ಯಾತಿಯಂ ಪಡೆದು[2] ವಿರಾಜಿಸುತ್ತುಮಿರಲಿತ್ತ ರಾಮರಾಜಂ ಚಂದಿಯಂ ಪೊಕ್ಕ ವರ್ತಮಾನಮಂ ಗಲಗಲಿಯಿಂ ಬ್ರಹ್ಮಪುರಿಯಂ ಸಾರ್ದವರಂಗಜೇಬಪಾತುಶಾಹಂ ಕೇಳ್ದು ಬಳಿಕಂ ತನ್ನ ಮಂತ್ರಿಯಾದ ಅಸತ್ಖಾನನ ಮಗ ಜುಲುಪರಖಾನನೊಡನೆ ಹೇರಳಸೈನ್ಯಮಂ ಕೂಡಿಸಿ ತೆರಳ್ಚಲವನತ್ಯಂತಾಟೋಪದಿಂ ತೆರಳ್ದ್ವಿತ್ತಂದು ಚಂದಿಯಗಡಕ್ಕೆ ಮುತ್ತಿಗೆಯನಿಕ್ಕಲೊಡನಾ ಜುಲುಪರಖಾನಂಗೆ ಪಡಿಬಲಮಾಗಿ ಪಿಂತಣಿಂ ತನ್ನ ಪುತ್ರನಾದ ಕಾಂಬಕ್ಸನಂ ತೆರಳ್ಚಿ ಕಳುಪಲಾ ರಾಮರಾಜಂ ಚಂದಿಯಗಡದೊಳ್ ನಿತ್ತರಿಸಿ ನಿಲಲಾರದಲ್ಲಿಂ ಪಲಾಯನಂಬಡೆದು ರಾಂಗಿಣಿಯ ಗಡವನ್ನೈದಲ್ ಮುಗುಳ್ದೀ ವಾರ್ತೆಯಂ ಕೇಳ್ದು ಪಾತುಶಾಹಂ ಕೆರಳ್ದು ಸಾತಾರಿ ಪನ್ನಾಳಿ ವಸಂತ ಲೇಖಿನಿ ಚಂದನ ವಂದನಾದಿಗಡಂಗಳಂ ಕೊಂಡೊಡನೆ ರಾಂಗಿಣಿಗಡವಂ ವೇಢೈಸಲುಜ್ಜುಗಿಪನಿತರೊಳಾ ರಾಮರಾಜಂ ದೈವವಶದಿಂ ಮೃತಿವಡಲೊಡನೆ ತದ್ರಾಮ

1 ರ (ಗ) 2 ಪಡೆದಳ್ (ಪಿ) ಇಲ್ಲಿಂದ "ಧುರದೊಳ್ಮಹಿಸೂರ......" ಎಂಬ ೬೧ನೆಯ ಕಂದದವರೆಗೂ ಇರತಕ್ಕ ಭಾಗವು ಓಲೆಯ ಪುಸ್ತಕದಲ್ಲಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಜನ ಪತ್ನಿ ರಾಣಿ ಸ್ವಪುತ್ರರಾದ ಶಿವಾಜಿ ಸಂಬಾಜಿಗಳಂ ಮುಂತಿಟ್ಟುಕೊಂಡು ರಾಮ
ಚಂದ್ರಪಂತನಂ ಮುಖ್ಯಾಧಿಕಾರಿಯಂ ಮಾಡಿಕೊಂಡಿಂತು ರಾಜ್ಯಂಗೆಯ್ಯುತ್ತಿರಲಾ ರಾಜೇ
ರಾಮನ ಕುಮಾರಕರಿರ್ವರೊಳಾ ಶಿವಾಜಿಯೆಂಬ ಕುಮಾರಂ ಮಾತೃದ್ರೋಹಮಂ ನೆನೆದು
ತನ್ಮೂಲದಿಂ ಬಂಧನದೊಳ್ ಸಿಲುಂಕಿ ಮರಣಮಂ ಪಡೆಯಲೊಡನೆ ರಾಮರಾಜನ ಪತ್ನಿ
ಸ್ವಪುತ್ರನಾದ ಸಂಬಾಜಿವೆರಸು ರಾಜ್ಯಂಗೆಯ್ಯುತ್ತುಮಿರಲಿತ್ತಲವರಂಗಜೇಬಪಾತುಶಾಹನಾರೆ
ಯರ ಮೂಲಚ್ಛೇದನಮಂ ಮಾಡಲ್ವೇಳ್ಕೆಂದಾಳೋಚನೆಯಂ ರಚಿಸುವನಿತರೊಳಿತ್ತಂ
ವಾಗಿನ ಗಿರಿಯೊಳಿರ್ದ ವಿಜಾಪುರದ ತಳವಾರ ಪಿಡ್ಡಿನಾಯಕಂ ಪ್ರಬಲನಾಗಿ ಕಾಮಿಯಾಬ
ಖಾನನಂ ತೆರಳ್ಚಿಸಿ ಕಳುಹಿ ವಿಜಾಪುರದ ಕೆಲವು ಸೀಮೆಗಳಂ ವಶಂಗೈದು ಮತ್ತಂ ಕೆಲವು
ಸೀಮೆಗಳನಾಕ್ರಮಿಸುತ್ತಂ ಬರಲಾರೆಯರ ರಾಜ್ಯರಾಷ್ಟ್ರಮಂ ಸಾಧಿಸುತಿರ್ಪವರಂಗಜೇಬನೀ
ವಾರ್ತೆಯಂ ಕೇಳ್ದು ಬಳಿಕ್ಕಾರೆಯರ ಮೇಗಣ ರಾಜಕಾರ್ಯಮಂ ಮಾಣ್ದಾಟೋಪದಿಂ
ತೆರಳ್ದೈತಂದಾವಾಗಿನಿಯ ಗಿರಿಯ ನವಬತ್ತಂ ಕೇಳ್ದು 'ಕೆರಳ್ದಾ[1] ವಾಗಿನಗಿರಿಯಂ ತೆಗೆದು
ಕೊಂಡಿಂತು ವರ್ತಿಪನಿತರೊಳಾ ಪಾತುಶಾಹನ ಶರೀರದೊಳ್ ರೋಗಂ ಮೊಳೆದೋರ
ಲೊಡನಮದಾನಗರಕ್ಕೈದುತಿರಲ್ ಮಧ್ಯಮಾರ್ಗದೊಳ್ ವ್ಯಾಧಿಪ್ರಕೋಪಿಸಲಾಗಳಾ
ಅವರಂಗಜೇಬನಾಳೋಚಿಸಿ ತಾಂ ಕೊಂಡ ಸಂಸ್ಥಾನಂಗಳ್ ತನ್ನ ಮೂಲಸಂಸ್ಥಾನಸಹಿತ
ಮನ್ಯಾಕ್ರಾಂತಮಾಗಿ ಪೋಗಬಾರದಿದಕ್ಕೆ ತಕ್ಕ ಬಲಶಾಲಿಗಳಂ ತತ್ತತ್ಸ್ಥಾನಂಗಳೊಳ್
ನಿಲಿಸಲ್ವೇಳ್ಕೆಂದು ಮನಂದಂದು ಮಗ ಶಹಲಮಂಗೆ ಡಿಳ್ಳಿಯಧಿಕಾರಮನಿತ್ತು ತೆರಳ್ಚಿ[2] ಅಜ
ಮತಾರನೆಂಬ ಕುಮಾರಂಗೆ ಉತ್ತರದಿಕ್ಕಿನ ಸುಬೆಯಧಿಕಾರವನಿತ್ತು ಕಳುಹಿ ಕಾಂಬಕ್ಸ
ನೆಂಬ ಸುತನಂ ಕರೆದು ಆತಂಗೆ ವಿಜಾಪುರ ಭಾಗಾನಗರ[3]ಗಳ[3]ಧಿಕಾರಮಂ ಕೈಗೊಳಿಸಿ
ಮಗಳ್ ಬೇಗಮುವಿನ ಮೇಲಣಾಸಕ್ತಿಯಿಂದಾರೆಯರರೆಯನಾದ ಶಿವಾಜಿಯ ಪೌತ್ರನಾದ
ಸಂಬಾಜಿಯ ಪುತ್ರನಾದ ಶಾಹುರಾಜಂಗೆ ತಾನಾ[4]ಳ್ವ[4] ದೇಶಕೋಶಂಗಳೊಳ್ ತನಗೆ
ಬರ್ಪರ್ಥದೊಳ್ ಚತುರಂಶದೊಳೊಂದು ಭಾಗಧನಮಂ ಕೊಂಬುದೆಂದು ಚೌದಾಯಿಯ
ಪರಮಾನಂ ಬರೆಸಿಕೊಡಲ್ ತದಾದಿಯಾಗಾರೆಯರ್ಗೆ ಚೌದಾಯಿಯರ್ಥಮಂ ಕೊಂಬ
ಪದ್ಧತಿಯಾದುದಿಂತು ನಿಯಾಮಕಂಗೈದನಂತರಂ ಬೇಗಮುವಿನ ಮೇಲಾರಯ್ಕೆಯಿಂದಿ
ರುತ್ತುಮಿರಲ್ ಪ್ರತಿದಿನದೊಳಾ ಪಾತುಶಾಹಂಗೆ ಶರೀರದೊಳ್ ಕೇವಲ ರುಜೋತ್ಕಟ
ಮಾಗಿ ಬರಲ್ ದೌಲತಾಬಾದಿನೊಳ್ ತನಗೆ ಗೋರಿಯಂ ಕಟ್ಟಲಪ್ಪಣೆಯಿತ್ತು
ನೀನತಿಶೀಘ್ರದಿಂದೈತಪ್ಪುದೆಂದಜಮತಾರಂಗೆ ಲೇಖನಮಂ ಬರೆಸಿ ಕಳುಹಿ ಸಾಗಿಸು
ತ್ತಿರಲಜಮತಾರನೈತಪ್ಪನಿತರೊಳ್ ಮಧ್ಯಮಾರ್ಗದೊಳವರಂಗಜೇಬಪಾತುಶಾಹಂ ಪಂಚತ್ವ
ವನ್ನೈದಲೊಡನಾತನ ಶರೀರಮಂ ದೌಲತಾಬಾದಿಂಗೆ ಕೊಂಡೊಯ್ದು ಬಳಿಕ್ಕಾ ತಾಣ
ದೊಳ್ ಮುನ್ನಮೆ ನಿರ್ಮಾಣಂಗೈದ ಗೋರಿಯೊಳಾ ಪಾತುಶಾಹನ ಶರೀರಮನಿಕ್ಕಿ

---

[1] ಹೇರಳ್ದ [2] ಳ್ಚಿಸಿ (ಗ) [3] ದ (ಗ) [4] ಳ್ದ (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ಮುಚ್ಚಿ ಸಂಸ್ಕಾರಮಾಗಲನಂತರಮಾ ಸಮಯದೊಳಾ ಅವರಂಗಜೇಬಪಾತುಶಾಹನ ಪುತ್ರಿಯಾದ ಬೇಗಮುವಾ ಸಂಬಾಜಿಯ ಪುತ್ರನಾದ ಶಾಹುರಾಜಂಗಿಕ್ಕಿದ ಚೌಕಿಯಂ ತೆಗೆಸಿ ಚೌದಾಯಿಯರ್ಥಮಂ ಕೊಂಬುದೆಂದು ಪಾತುಶಾಹಂ ಮುನ್ನಂ ಬರೆಸಿತ್ತ ಪರಮಾನನಾ ಶಾಹುರಾಜಂಗೆ ಕೈಗೊಳಿಸಿ ನಿನ್ನ ರಾಷ್ಟ್ರಕ್ಕೈದಿ ನೀನಾವುದರಲ್ಲಿಯುಂ ಬುದ್ಧಿಶಾಲಿಯಾಗಿ ವರ್ತಿಪುದೆಂದು ನಿಯಾಮಕಂಗೆಯ್ದು ಬೀಳ್ಕೊಟ್ಟ ತೆರಳ್ಚಲೊಡನಾ ಶಾಹುರಾಜನೆಳ್ತಂದು ಸಾತಾರಿಯ ಗಡಮನ್ನೈದಿ ರಾಮರಾಜನ ಪುತ್ರನಾದ ಸಂಬಾಜಿವೆರಸು ಬಾಳಾಜಿವಿಶ್ವನಾಥ ಪಂತನ ಮಗನಾದ ಬಾಜಿರಾಯ ಶ್ರೀಪತಿರಾಯ ಖಂಡೋಜೀದಾಭಾಡೆ (?) ಮುಂತಾದ ವಜೀರರ್ಕಳ್ವೆರಸು ಸುಖಸಂಕಥಾವಿನೋದದಿಂ ರಾಜ್ಯವಾಳುತ್ತುಮಿರಲಿತ್ತಂ ಪಾತುಶಾಹು ಸಂದ ವರ್ತಮಾನಮನುತ್ತರದಿಕ್ಕಿನೊಳ್ಕೈತರುತಿರ್ದಜಮುತಾರಂ ಕೇಳ್ದು ತನ್ನ ಮಾ[1]ಗ[1] ದಿವಾರ್ಬೊಕ್ಕಸ ಸಹಿತಂ ಕ್ಷಿಪ್ರದೊಳ್ಕೈತಂದು ಡಿಳ್ಳಿಯೊಳಧಿಕಾರಮಂ ನಡೆಸುತಿರ್ಪ ಶಾಹಲಮನ ಮೇಲೆ ದಂಡೆತ್ತಿ ನಡೆತರಲ್[2] ಚರ್ಮಣಾವತೀ (ಪ್ರತಿನಾಮ ಚಂಬಲ್) ನದೀಪ್ರಾಂತದೊಳುಭಯ ಸೈನ್ಯಕ್ಕಂ ಕೈಗಲಸಿ ಮಹಾಯುದ್ಧಂ ಪಣ್ಣಲಾಗಳಾ ಯುದ್ಧದೊಳಜಮುದಿನ್ ದಿವಾರ್ಬೊಕ್ಕಸನಂ ಕೆಡಪಲೊಡನಜಮುತಾರಂಗಂ ಶಹಲಮಂಗಂ ಮಹಾಯುದ್ಧಮಾಗಲಾ ಸಮರಾಂಗಣದೊಳ್ ಶಹಲಮನ ಮಗನಜಮುತಾರನಂ ಕೊಂದು ಬಳಿಕ್ಕಂ ಮೌಜದೀನ್‌ವೆರಸು ವಿಜಾಪುರ ಭಾಗಾನಗರದ ಸಂಸ್ಥಾನಂಗಳನಾಳುತಿರ್ಪ ಕಾಂಬಕ್ಸನ ಮೇಲೆ ದಾಳಿಮನ್ನೈದಲೊಡನೀ ವೃತ್ತಾಂತಮನೆಲ್ಲಮಂ ಕಾಂಬಕ್ಸಂ ಕೇಳ್ದು ಕೆರಳ್ದು ತನ್ನ ಮಗ ಸುಲುತಾನಮಹಮ್ಮುದು ಸಹಿತಂ ಶಹಲಮನ ಮೇಲೆ ದಂಡೆತ್ತಿ ನಡೆತರಲ್ ಭಾಗಾನಗರಪ್ರಾಂತದೊಳವರಿರ್ವರ್ಗಂ ಕೈಗಲಸಿ ಬಳಿಕ್ಕೇಳುದಿವಸಪರ್ಯಂತಂ ಮಹಾಯುದ್ಧಮಾಗಲೊಡನೆ ತತ್ಸಮರಾಂಗಣದೊಳ್ ಶಹಲಮಂ ಕಾಂಬಕ್ಸನುಮನವನ ಮಗ ಸುಲುತಾನಮಹಮುದ್ದನುಮನಿಂತಿರ್ವರುಮಂ ಕೊಂದು ಬಳಿಕ್ಕಂ ತಾಂ ಡಿಳ್ಳಿಯಂ ಸಾರ್ದೇಕಚ್ಛತ್ರದಿಂ ಪಾತುಶಾಹ ಪಟ್ಟಮನಾಂತಖಂಡಾಧಿಕಾರಮಂ ವಹಿಸಿ ರಾಜ್ಯಮನಾಳ್ದನಾಶಹಮಲನನಂತರಮವನ ಮಗ ಮುಜಾದಿನ್ನುವಾಳ್ದನಾ ಮುಜಾದಿನ್ನು ಸಂದ ತರುವಾಯಿಯೊಳವನ ತಮ್ಮನಾದಜಮೋದಿನ್ನುವಿಂಗೆ ಪಟ್ಟಮಾದುದಾ ಅಜಮೋದಿನ್ನುವಿನಂತರಮಾ ಅಜಮುದಿನ್ನುವಿನ ಮಗ ಪರಕ್ಸಾಹಂಗೆ ಪಟ್ಟಮಾದುದವಂ ಸಂದ ಬಳಿಕ್ಕಂ ಮೌಜದಿನ್ನನ ಮೊಮ್ಮಗನಾದ ಮಹಮ್ಮದಶಾಹಂಗೆ ಪಟ್ಟಮಾದುದು ಇದಾರೆಯರ ತುರುಷ್ಕರ ಮೂಲವೃತ್ತಾಂತಂ.

ಇನ್ನೊಳಗುಸಿರ್ವಂತು ಕೆಳದಿಯ ಚನ್ನಮ್ಮಾಜಿಯುವರ್ ಶುಕ್ಲಸಂವತ್ಸರದಲ್ಲಿ ಏಕಚ್ಛತ್ರಾಧಿಪತಿಯಾದ ಡಿಲ್ಲಿಯವರಂಗಜೇಬಪಾತುಶಾಹನ ಮೇಲೆ ಕೈಗೆಯ್ದು ಸಮರಸಂಧಾನದ ಮೇಲೆ ತತ್ಪಾತುಶಾಹಸೈನ್ಯಮಂ ಪಿಂದೆಗೆಸಿ ತನ್ನಂ ಮರೆವೊಕ್ಕ

---

[1] ಗನಾದ (ಗ) ೨ ಶಹಲಮನಿಂ ವಾರ್ತೆಯಂ ಕೇಳುತಿರ್ಪ ಮಹುಜದಿನ್ನೈನಸಂ ಕೆರಳ್ದು ಜಮುತಾರನ ಮೇಲೆ ದಂಡೆತ್ತಿ ನಡೆತರಲ್ (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ಆರೆಯುರ್ಗಧಿರಾಜನಾದ ಶಿವಾಜಿಯ ಪುತ್ರನಾದ ರಾಮರಾಜನಂ ಕಡೆದಾಂಟಿಸಿ ಮನ್ನೆಯರ್ಕಳೊಳ್ ಪರಮಪ್ರಖ್ಯಾತಿಯಂ ಪಡೆದು ವಿರಾಜಿಸುತಿರ್ದಳಂತುಮಲ್ಲದೆಯುಂ

ಕಂ॥ ಧರಣಿಪ ಸಂದೋಹಾಗ್ರೇ
ಸರನಹ ನಿಜಸೂನುವೆರಸು ತೆರಳ್ದತಿಮುದದಿಂ
ದೊರೆ ಚನ್ನಮಾಂಬೆಯತಿಭಾ
ಸುರಸುಬ್ರಹ್ಮಣ್ಯಯಾತ್ರೆಯಂ ವಿರಚಿಸಿದಳ್ ೬೦

ವ॥ ಇಂತು ಸುಬ್ರಹ್ಮಣ್ಯೇಶ್ವರಯಾತ್ರೆಯಂ ರಚಿಸಿ ಮರಳ್ದು ವೇಣುಪುರವನ್ನೈದಿ ಸುಖಮಿರುತಿರ್ದನಂತರಂ ಸಬನೀಸು ಕೋಳಿವಾಡದ ಬೊಮ್ಮರಸಯ್ಯನೊಡನಸಂಖ್ಯಾತಮಾದ ಸೈನ್ಯಮಂ ತೆರಳ್ಚಿಸಿ ಕಳುಹಿ

ಕಂ॥ ಧುರದೊಳ್ ಮಹಿಸೂರ ಮಹೀ
ಶ್ವರನ ಚಮೂಪತಿಯನಿರಿದು ತತ್ಸುತನಂ ಕೈ
ಸೆರೆವಿಡಿದು ತತ್ಪದಾತಿಯ
ನೊರಸಿ ಜಯೋತ್ಸವವನಾಂತು ರಾರಾಜಿಸಿದಳ್ ೬೧

ವ॥ ಇಂತು ಸಂಗ್ರಾಮದೊಳ್ ಮೈಸೂರ ಮಹೀಶ್ವರನ ದಳವಾಯಿ ತಿಮ್ಮಪ್ಪನಂ ನಿಗ್ರಹಿಸಿ ತತ್ಪುತ್ರನಾದ ಕೃಷ್ಣಪ್ಪನಂ ಕೈಸೆರೆವಿಡಿದು ಮರಳ್ದು ಕಳುಹಿಸಿ ಪರಮ ಪ್ರಖ್ಯಾತಿಯಂ [1]ಪಡೆದು[1] ತುಂಗಭದ್ರಾನದೀತೀರದೊಳ್

ಕಂ॥ ತರುಣಿಯರ ಕುಲಶಿರೋಮಣಿ
ವರಚನ್ನಮ್ಮಾಜಿಯಾತ್ಮನಾಥನ ಪೆಸರೊಳ್
ಸ್ಥಿರಮಾದ ಸೋಮಶೇಖರ
ಪುರಮೆಂದೆನಿಪಗ್ರಹಾರಮಂ ವಿರಚಿಸಿದಳ್ ೬೨

ವ॥ ಇಂತು [2]ಪ್ರಾಣಕಾಂತನಾದ ಸೋಮಶೇಖರನಾಯಕರ ಪೆಸರೊಳ್ ಸೋಮಶೇಖರಪುರಮೆಂದೆನಿಪ[2]ಗ್ರಹಾರಮಂ ನಿರ್ಮಾಣಂಗೈಸಿ ಸ್ವಾಪ್ತಿ ಕ್ಷೇತ್ರವೃತ್ತಿಗಳಂ ಕಲ್ಪಿಸಿ ಶ್ರೋತ್ರಿಯ ಬ್ರಾಹ್ಮಣರ್ಗೆ ಶಿವಾರ್ಪಿತಮಾಗಿ ಧಾರೆಯನೆರೆದು ಸ್ಥಿರಶಾಸನಮಂ ಬರೆಸಿತ್ತಳಂತುಮಲ್ಲದೆ ಬಸವಾಪಟ್ಟಣದ ಸೀಮಾಸನ್ನಿವೇಶದೊಳ್ ಹೊಲಿಕೆರೆಯೆಂಬ ಸ್ಥಳದೊಳ್ ವಿರಾಜಿಪ ಕೋಂಟೆಯಂ ಸ್ವಾಧೀನಂಗೈದದಕ್ಕೆ ಸ್ವನಾಮಾಂಕಿತಮಾ[3]ದ[3] ಚನ್ನಗಿರಿಯ ಕೋಂಟೆಯೆಂದು ಪೆಸರಿಟ್ಟು ತತ್ಪರಿಸ್ತರಣಮಂ ಬಲ್ಪುಗೈಸಿದಳಂತುಮಲ್ಲದೆಯುಂ

---

[1] ಪಡೆದಿರುತ್ತಮನಂತರಂದಾನಿವಾಸದ (ಕಗ) [2] ತನ್ನ ಪ್ರಾಣಕಾಂತನ ಪೆಸರೊಳ್ ಅ (ಮ) [3] ಗಿ (ಯ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ|| ಮೆರೆವಳಕಾನಗರದ ಸುರ
ಪುರದೆಸಕವನಿಳಿಕೆಗೆಯ್ವ ಬಿದುರೂರೆಡೆಯೊಳ್
ಕರಮೆಸೆವ ನೀಲಕಂಠೇ
ಶ್ವರಗೆ ರಥೋತ್ಸವದ ಕಟ್ಟಳೆ[1]ಯನಾಗಿ[1]ಸಿದಳ್ ೬೩

ವ|| ಇಂತು [2]ವೇಣುಪುರದ ನೀಲಕಂಠೇಶ್ವರ ದೇವರ್ಗೆ ಪ್ರತಿವರ್ಷಮುಂ ರಥೋತ್ಸವಮ ನಾಗಿಸಂತು[2] ಕಟ್ಟಳೆಯಂ ರಚಿಸಿ ಮತ್ತಂ ಕೆಳದಿ ರಾಮೇಶ್ವರ ವೀರಭದ್ರೇಶ್ವರ ಕೊಲ್ಲೂರ ಮೂಕಾಂಬಿಕೆಯಮ್ಮನವರ್ಗೆ ಹೇರಳ ಭೂಸ್ವಾಸ್ಥೆಯಂ ಬಿ[3]ಟ್ಟು[3] ಲೋಪವಾಗದಂತು ತತ್ತತ್ಪೂಜಾದಿ ವಿಭವಂಗಳಂ ನಡೆಸಿ [4]ಶ್ರೀಮತ್ಕೊಲ್ಲೂರ ಮೂಕಾಂಬಿಕೆಯವರ ಕಟಾಕ್ಷ ಲಬ್ಧ ಸಂಪೂರ್ಣೈಶ್ವರ್ಯ ಸಂಪನ್ನಳೆನಿಸಿ ಕೆ[4]ಳದಿಯ ವೀರಭದ್ರ[5]ದೇವರ ದೇ[5]ವಸ್ಥಾನದ ಶಿಲಾಮಯ[6]ಶಿಖರದ ಕೆಲಸನು[6]ಮುಂ ತವ್ರಂಗಮುಂಟಪದ [7]ರಚನಾದಿ ನವೀನಕೆಲಸಂ ಗಳುಮಂ ಸಂಪೂರ್ಣಮೆನಲಾಗಿಸಿ[7] ಭೋಗಮುಂಟಪದ ಸಮ್ಮುಖದೊಳ್ ಧ್ವಜಸ್ತಂಭಮಂ ನಿಲಿಸಿ ಮತ್ತಂ ಶೃಂಗಪುರದ ಸಂಸ್ಥಾನದ ಧರ್ಮಮಂ ಸಾಂಗಮಾಗಿ ನಡೆಸಿ ವೇಣುಪುರದರ ಮನೆಯೊಳೊಪ್ಪುವ ಭದ್ರಚಾವಡಿಯಂ ದೃಢಂಗೈಸಿ ಕಾಶೀ ಧರ್ಮಮಂ ಸಾಂಗಮಾಗಿ ನಡೆಸಿ ಮತ್ತಂ ಕಾಶೀರಾಮೇಶ್ವರ ಶ್ರೀಶೈಲ ತಿರುಪತಿ ಮುಂತಾದ ಪುಣ್ಯಕ್ಷೇತ್ರಂಗಳೊಳ್ ಸ್ಥಿರಮಾಗಿ ನಡೆವಂತು ವರ್ಷಾಶನದ ಕಟ್ಟಳೆಯಂ ಕಲ್ಪಿಸಿ ಮತ್ತಮುದಲ್ಲದುಚಿತಸ್ಥಾನಂ ಗಳೊಳ್ ಮಠಂಗಳಂ ಕಟ್ಟಿಸಿ ಶಿವಜಂಗಮಾರ್ಥಂ ಶಿವಾರ್ಪಿತಮಾಗಿ ಧಾರೆಯನೆರೆದು ಸ್ಥಿರಶಾಸನಮಂ ಬರೆಸಿತ್ತಂತುಮಲ್ಲದೆಯುಂ ತಮ್ಮ ಸೇವಕರಾದ ಶಿವಭಕ್ತಗುರಿಕಾರ ಶೈವ ವೈಷ್ಣವಬ್ರಾಹ್ಮಣಗುರಿಕಾರರ ಮುಖದಿಂ ಮಠ ಮಾನ್ಯ ದೇವಸ್ಥಾನಾಗ್ರಹಾರಾದಿ ನಾನಾವಿಧ ದಾನಧರ್ಮಂಗಳನಾಗಿಸಿ ಶಾಶ್ವತಧರ್ಮಕೀರ್ತಿಗಳಂ ಸಂಪಾದಿಸಿ ಸದ್ಧರ್ಮದಿಂ ರಾಜ್ಯಪ್ರತಿಪಾಲನಂಗೈದಳಂತುಮಲ್ಲದೆಯುಂ

ಕಂ|| ಉನ್ನತಶುಭಗುಣಗಣಸಂ
ಪನ್ನತೆಯಿಂ ಕ್ಷಾತ್ರದಾನಧರ್ಮಾದಿಗಳಿಂ
ಚನ್ನಮ್ಮಾಜಿಗೆ ಸರಿಯಹ
ಮನ್ನೆಯರಿಲ್ಲೆನಿಸಿ ರಾಜ್ಯಮಂ ರಕ್ಷಿಸಿದಳ್ ೬೪

---

1 ಯಂ ವಿರಚಿ (ಮು) 2 ವಿಶೇಷ (ಮು) 3 ಡಿಸಿ (ಮು) 4 ಕೆ (ಮು) 5 ದೇ (ಮು) 6 ವನಾಗಿಸಿ ಶಿಖರದ ಕೆಲಸಗತಿಯು (ಮು) 7 ವಿಚಿತ್ರ ಕೆಲಸ ಗತಿಯಿಂ ಶಿ (ಕಗ) 8 ಮಂ ಬರೆಸಿತ್ತು ಕಟ್ಟಿಸಿದ (ಮು)

Sri Vidyabharathi Book Centre, Sringeri

CC-O. In Public Domain. Digitized by eGangotri

ವ॥ ಈ ಚನ್ನಮ್ಮಾಜಿಯವರ್ ಭುವನಗಿರಿಯ [1]ದುರ್ಗದೊಳ್[1] ತಮಗೆ ಪಟ್ಟಮಾದ [2]ಶಾಲಿವಾಹನಶಕ ವರ್ಷ ೧೬೧೪ನೆಯ ವಿರೋಧಿಕೃತ್ಸಂವತ್ಸರದ ಫಾಲ್ಗುಣ [3]ಶುದ್ಧ[3] ೧೦ ಆರಭ್ಯ[2] ಈಶ್ವರನಾಮಸಂವತ್ಸರದ ಶ್ರಾವಣ ಶುದ್ಧ ೧೪ ವರೆಗೆ ವರ್ಷ ೨೫ ತಿಂಗಳು ೪ ದಿನ ೨೦ ಪರ್ಯಂತಂ ಸದ್ಧರ್ಮದಿಂ ರಾಜ್ಯಂಗೈದು ಶಿವಸಾಯುಜ್ಯಮಂ ಪಡೆ[4]ದರ್[4]

ನವಮಾಶ್ವಾಸಂ ಸಂಪೂರ್ಣಂ

---

1 ರ ಮನೆಯೊಳ್ (ಮ) 2 ಆರಭ್ಯ (ಗ) 3 ಬ (ಗ) 4 ದಳ್ ಈ ಚನ್ನಮ್ಮಾಜಿಯವರಿಗೆ ಬಿದರೂರು ಕೊಪ್ಪಲು ಮಠದಲ್ಲೂ ಸಮಾಧಿಯಾಯಿತು.

ಈ ಚನ್ನಮ್ಮಾಜಿಯವರ ಕಾಲದಲ್ಲಿ ಬದುಕುಮಾಡಿದವರು— ಕೋಟೆಪುರದ ಸಿದ್ಧಪ್ಪ ಶೆಟ್ಟರು ಬೊಕ್ಕಸದ ಸಿದ್ಧಬಸವಯ್ಯ ಕೋಳಾಲದ ವೆಂಕಪ್ಪಯ್ಯ ಬಿಳಿಗಿ ಕೋನಪ್ಪಯ್ಯ ಕಂದಾಚಾರದ ಲಕ್ಷ್ಮಯ್ಯ ಕಾಸರಗೋಡು ತಿಮ್ಮಣ್ಣನಾಯಕ ಆವಿನಹಳ್ಳಿ ನರಸಪ್ಪಯ್ಯ ಸಬ್ಬುನೀಸ ಕೃಷ್ಣಪ್ಪಯ್ಯ ಮುತ್ತೂರು ತಮ್ಮರಸಯ್ಯ ಗುರುಬಸವಪ್ಪದೇವರು ಭದ್ರಪ್ಪದೇವರು ಕರಣಿಕ ಬಿಳಿಗಿ ಸುಬ್ಬಯ್ಯ ಕೋಳಾಲದ ರಾಮಪ್ಪಯ್ಯ ಬೊಕ್ಕಸದ ವೆಂಕಪ್ಪಯ್ಯ ರಾಯಸದ ವೆಂಕಪ್ಪಯ್ಯ ಶರಜಾ ನಾಗಪ್ಪಯ್ಯ ಬಿಳಿಗಿ ಚಿಕ್ಕಪ್ಪಯ್ಯ ಅಶ್ವತ್ಥಯ್ಯ ಪುಟ್ಟಯ್ಯ ಸಬ್ಬುನೀಸ ಲಕ್ಷ್ಮಯ್ಯ ಶರಜಾ ಶಂಕರನಾರಣಯ್ಯ ಕೋಳಿವಾಡದ ಬೊಮ್ಮರಸಯ್ಯ ಚಿಟನಿಸ ನಾಗಪ್ಪಯ್ಯ ಶರಜಾ ತಿರುಮಲಯ್ಯ ತಿಮ್ಮಪ್ಪಯ್ಯ ಮರಿಯಪ್ಪಯ್ಯ ಸೂರಪ್ಪಯ್ಯ ಪಟ್ಟೆ ಬೊಮ್ಮಯ್ಯ ಕೃಷ್ಣಪ್ಪಯ್ಯ ಗರಜಿನ ಚನ್ನವೀರವಡೇರು ಮೋನಪ್ಪಶೆಟ್ಟರು ಮರಿಯಪ್ಪಶೆಟ್ಟರು ಶರಜಾರಾಯನ ಮಗ ತಿರುಮಲಯ್ಯ ಗಂಗಾಧರಯ್ಯ ಬೆಳವಂಡೂರು ಗುರಪ್ಪನಾಯಕ ಹೊಸೂರು ಲಿಂಗಪ್ಪಯ್ಯ [illegible] (ಅ)

Sri Vidyabharathi Book Centre, Sringeri

CC-O. In Public Domain. Digitized by eGangotri

[1]ದಶಮಾ[1]ಶ್ವಾಸಂ

ವ|| [2]ಆ ಚನ್ನಮ್ಮಾಜಿಯವರ[2] ತರುವಾ[3]ಯ[3] ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರ್ಷ ೧೬೨೦ನೆಯ ಈಶ್ವರ ಸಂವತ್ಸರದ ಶ್ರಾವಣ ಶುದ್ಧ ೧೪ಯಲ್ಲಿ ಹಿರಿಯ ಸೋಮಶೇಖರನಾಯಕರ ಪತ್ನಿ ಚನ್ನಮ್ಮಾಜಿಯವರ ಕುಮಾರ[4]ರಾದ[4] ಬಸವಪ್ಪನಾಯಕರ್ಗೆ ವೇಣುಪುರದರಮನೆಯಲ್ಲಿ ರಾಜಪ[5]ಟ್ಟಂ[5]

ಕಂ|| ಧರೆಗಧಿಕ ಚನ್ನಮಾಂಬಾ
ತರುಣಿಯ ತರುವಾಯಿಯೊಳ್ ತದಾತ್ಮಜನಹ ಭಾ
ಸುರಬಸವೇಂದ್ರಂ ರಾಜ್ಯದ
ಧುರಮಂ ತಾಂ ವಹಿಸಿ ಬಾಳ್ದನತಿಸಂಭ್ರಮದಿಂ ೧

ವ|| ಅದೆಂತೆಂದೊಡಾ ಬಸವಪ್ಪನಾಯಕಂ ತಮ್ಮ ತಂದೆ ಮರಿಯಪ್ಪ ಸೆಟ್ಟರ್ ಮೋನಪ್ಪಸೆಟ್ಟರ ಪುತ್ರ ನಿರ್ವಾಣಯ್ಯನವರ್ ತದನುಜ ಗುರುವಪ್ಪನವರ್ ಪ್ರಧಾನಿ ಗುರುಬಸವಪ್ಪದೇವರ್ ಗರಜಿನ ಶಾಂತಪ್ಪೊಡೆಯರ್ ಸಬ್ಬುನಿಸ ಕೋಳಿವಾಡದ ಬೊಮ್ಮರಸಯ್ಯ ಶರಜಾ ಹೂವಯ್ಯ ಚಿಟನಿಸ ಭೈರಯ್ಯ ಗಾಜನೂರ ಯಲ್ಲಪ್ಪಯ್ಯ ಆ ಲಕ್ಷ್ಮಯ್ಯ ಹೊನ್ನಾಳಿ ಸುಬ್ಬಯ್ಯ ಪಟ್ಟೆಯ ಸೇನಬೋವ ರಂಗಪ್ಪಯ್ಯ ಕೋಳಾಲದ ವೆಂಕಟೇಶಯ್ಯ ನಲ್ಲೂರ ಲಕ್ಷ್ಮೀಪತಯ್ಯ ಆ ವೆಂಕಪ್ಪಯ್ಯ ರಾಯಸದ ಅಶ್ವತ್ಥಯ್ಯ ಶರಜಾ ನರಸಪ್ಪಯ್ಯ ಚನ್ನಪ್ಪಯ್ಯ ಆ ನಾಗಪ್ಪಯ್ಯ ವೆಂಕಟಯ್ಯ ಚಿಕ್ಕತಿಮ್ಮಯ್ಯನ ಕೊಸಪ್ಪಯ್ಯ ಮುಂತಾದ ಮಂತ್ರಿ ಸಾಮಾಜಿಕ ನಿಯೋಗಿ ಗುರಿಕಾರಜನರ್ವೆರಸು ತಮ್ಮ ಮಾತೃ ಚನ್ನಮ್ಮಾಜಿಯವರಾಳಿ ಬರುತ್ತಿರ್ದ ರಾಜ್ಯ ರಾಷ್ಟ್ರ ದೇಶ ಕೋಶ ಪ್ರಜೆ ಪರಿವಾರ ಪರಿಸ್ತರಣ ಪುರಜನ ಪರಿಜನ ವಿದ್ವಜ್ಜನ ಬಂಧುಜನ ಸೇವಕಜನರ್ ಮುಂತಾದ ಸಮಸ್ತಜನರಂ ಸಂರಕ್ಷಿಸುತ್ತುಂ ಸದ್ಧರ್ಮದಿಂ ರಾಜ್ಯಪ್ರತಿಪಾಲನಂಗೆ[6]ಯ್ಯುತ್ತುಂ[6] ತತ್ಸಂವತ್ಸರದ ಮಾಘಮಾಸದಲ್ಲಿ ಕುಟರಹಳ್ಳಿ ಚನ್ನವೀರವೊಡೆಯರ ಮಗ ಬಸವಪ್ಪನ ಪತ್ನಿಯಾದ ಪುಟ್ಟವ್ವನ ಕುಮಾರಿಯಾದ ಚನ್ನಮ್ಮಾಜಿಯವರ್ ಹೆಬ್ಬೆಕೋಟೆ ವಿರೂಪಾಕ್ಷಯ್ಯನ ಮಗ ಶಿವಯ್ಯನ ಕುಮಾರಿ ವೀರಮ್ಮಾಜಿಯವರ್ ಹೀಗೆ ಇರ್ವರ್ ಸ್ತ್ರೀಯರಂ ವಿವಾಹವಾದರ್ ಈ ಬಸವಪ್ಪ

---

1 ಹನ್ನೊಂದನೆಯಾ (ಗ) 2 ಆ(ಮ) 3 ಯ ಹಿರೇಬಸಪ್ಪನಾಯಕ (ಮ) 4 ನಾದ (ಗಮ) 5 ಟ್ಟಂ ಆ ಬಸವಪ್ಪನಾಯಕರ್ ತಮಗೆ ರಾಜಪಟ್ಟವಾದ ಈಶ್ವರ ಸಂವತ್ಸರದ ಶ್ರಾವಣ ಶುದ್ಧ ೧೪ ಆರಭ್ಯ ಜಯ ಸಂವತ್ಸರದ ಪುಷ್ಯ ಬಹುಳ ೧೦ವರೆಗೆ ವರ್ಷ ೧೭ ತಿಂಗಳು ೫ ದಿವಸ ೧೧ ಪರ್ಯಂತಂ ಸದ್ಧರ್ಮದಿಂ ರಾಜ್ಯಪ್ರತಿಪಾಲನಂಗೈದರಾ ವಿವರಣಮುಂ ಪದ್ಯರೂಪದಿಂ ಪೇಳ್ವೆನದೆಂತೆಂದೊಡೆ (ಒಕಗ) 6 ಯುತ್ತುಮಾ ಬಸವಪ್ಪನಾಯಕಂ (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ನಾಯಕರ್ಗೆ ಪ್ರಾಕು ಈ ಬಸವಪ್ಪನಾಯಕರ ಮಾತೃ ಚನ್ನಮ್ಮಾಜಿಯವರ ಕಾಲದಲ್ಲಿ ಕಾಳಯುಕ್ತಿ ಸಂವತ್ಸರದ ಮಾರ್ಗಶಿರಮಾಸದಲ್ಲಿ ವಿವಾಹವಾದ ಸ್ತ್ರೀಯರ್ ಹೆಬ್ಬೆ ಮಹಂತಯ್ಯನ ಕುಮಾರಿ ಚನ್ನಮ್ಮಾಜಿಯವರ್ ಮಳಿಗೆ ಚನ್ನವೀರಪ್ಪನ ಕುಮಾರಿ ಚನ್ನ ಬಸವಮ್ಮಾಜಿಯವರ್ ಈ ಹಿರಿಯ ಬಸವಪ್ಪನಾಯಕರ್ಗೆ ಈ ಪ್ರಕಾರಂ ನಾಲ್ವರ್ ಸ್ತ್ರೀಯರ್ ಈ ನಾಲ್ಕು ಸ್ತ್ರೀಯರೊಳಗೆ ಹೆಬ್ಬೆ ಮಹಂತಯ್ಯನ ಮಗಳ್ ಚನ್ನ ಮ್ಮಾಜಿಯವರ್ ಹೆಬ್ಬೆ ವಿರೂಪಾಕ್ಷಯ್ಯನ ಮಗ ಶಿವಯ್ಯನ ಕುಮಾರಿಯಾದ ವೀರ ಮ್ಮಾಜಿಯವರ್ ಈ [1]ಇರ್ವರ್[1] ಸ್ತ್ರೀಯರಲ್ಲಿಯುಂ ಸಂತಾನವಿಲ್ಲ ಮೇಲಾದ ಇರ್ವರ್ ಸ್ತ್ರೀಯರೊಳಗೆ ಮಳಿಗೆ ಚನ್ನವೀರಪ್ಪನ ಮಗಳ್ ಚನ್ನಬಸವಮ್ಮಾಜಿಯವರ ಗರ್ಭ ದಲ್ಲಿ ಪ್ರಾಕು ಚನ್ನಮ್ಮಾಜಿಯವರ ಕಾಲದ[2]ಲ್ಲಿ[2] ಪ್ರಜೋತ್ಪತ್ತಿನಾಮ ಸಂವತ್ಸರದ ಕಾರ್ತಿಕ ಶುದ್ಧ ೧೦ ಯಲ್ಲಿ ಸೋಮಶೇಖರನಾಯಕ[3]ರ್[3] ಜನಿಸಿದ[3]ರೆಂದು[3] ಪ್ರಾಕು ಚನ್ನಮ್ಮಾಜಿಯವರ್ ರಾಜ್ಯವಾಳುತ್ತಿರ್ದ ಕಾಲದಲ್ಲಿಯೇ ಒಳಗೆ ಬರೆದು ಇದೆ ಈ ಬಸವಪ್ಪನಾಯಕರ ಇನ್ನೊಬ್ಬ ಪತ್ನಿ ಕುಟರಹಳ್ಳಿ ಚನ್ನವೀರವೊಡೆಯರ ಮಗ ಬಸವಪ್ಪನ ಪತ್ನಿಯಾದ ಪುಟ್ಟವ್ವನ ಮಗಳಾದ ಚನ್ನಮ್ಮಾಜಿಯವರ ಗರ್ಭದಲ್ಲಿ [4]ವಿ[4]ಕ್ರಮ ಸಂವತ್ಸರದ ವೈಶಾಖ ಶುದ್ಧ ೧ ಯಲ್ಲಿ ವೀರಭದ್ರನಾಯಕ[5]ರ್[5] ಜನಿಸಿದ[5]ರ್[5] ಈ ಹಿರಿಯ ಬಸವಪ್ಪ ನಾಯಕರ್ಗೆ ಹೀಗೆ ಇರ್ವರ್ ಕುಮಾರರ್[6] ಅವರೊಳಗೆ ಜ್ಯೇಷ್ಠಪುತ್ರನಾದ ಸೋಮ ಶೇಖರನಾಯಕರ್ಗೆ ಚಿತ್ರಭಾನು ಸಂವತ್ಸರದ ವೈಶಾಖ ಶುದ್ಧ ೩ ಯಲ್ಲಿ ಚಿಲನೂರ [7]ವೀರಪ್ಪನ[7] ಮಗ[8]ಳ್[8] ವೀರಮ್ಮಾಜಿಯವರ್ ಸೂರಿರಾಯನ ಕಲ್ಲಪ್ಪನ ಮಗಳ್ ಬಸವಮ್ಮಾಜಿಯವರ್ ಇಂತಿರ್ವರ್ ಸ್ತ್ರೀಯರುಂ ವಿವಾಹಮಂ ಮಾಡಿದರ್ ಮುಂದೆ ಈ ಸೋಮಶೇಖರನಾಯಕರ್ ತಾವು ಸ್ವಾತಂತ್ರ್ಯದಲ್ಲಿ ರಾಜ್ಯವಾಳುತ್ತಿ[9]ರ್ದ[9] ಪ್ಲವ ಸಂವತ್ಸರದ ಫಾಲ್ಗುಣ ಶುದ್ಧ ೩ ಯಲ್ಲಿ ಪೋನಪ್ಪಶೆಟ್ಟರ ಮಗ ನಿರ್ವಾಣಯ್ಯನವರ [10]ಪತ್ನಿ ಭದ್ರಮ್ಮ ನವರ ಕುಮಾರಿ[10] ನೀಲಮ್ಮಾಜಿಯವರಂ ವಿವಾಹವಾದರ್ ಈ ಹಿರಿಯ ಬಸವಪ್ಪನಾಯ ಕರ [11]ಕುಮಾರ[11] ಸೋಮಶೇಖರ ನಾಯಕರ್ಗೆ [12]ಈ[12] ಮೂವರ್ ಸ್ತ್ರೀಯ[13]ರ್[13] ಈ ಮೂವರ್ ಸ್ತ್ರೀ[14]ಯರೊಳಂ[14] ಸಂತಾನಮಿಲ್ಲ [15]ಪುತ್ತ್ರವಾ ಬಸವಪ್ಪನಾಯಕಂ ತಮ್ಮ ಕ[15]ನಿಷ್ಠ ಪು[16]ತ್ರನಾದ[16] ವೀರಭದ್ರ[17]ನಾಯಕರ್ಗೆ[17] ಸರ್ವಧಾರಿ ಸಂವತ್ಸರದ ಮಾರ್ಗಶಿರ ಬಹುಳ ೫ ಲ್ಲಿ ಸಾಗರದ ವಾರದ ಚನ್ನಬಸವಪ್ಪನ ಕುಮಾರಿ ಚನ್ನಮ್ಮಾಜಿಯವರ್ ಸೂರಿರಾಯನ ಕಲ್ಲಪ್ಪನ ಚಿಕ್ಕ ಕುಮಾರಿ ಮಲ್ಲಮ್ಮಾಜಿಯವರ್ ಹೀಗೆ ಇರ್ವರ್

---

1 ಇಂತು ರಾಜ್ಯವಾಳುತ್ತಿದ್ದ ಕಾಲದಲ್ಲೂ ಈ ಬಸವಪ್ಪನಾಯಕರಿಗೆ ನಾಲ್ವರ್ ಸ್ತ್ರೀಯರ್ (ಗ) 2 ಲ್ಲು ವಿವಾಹವಾ ಜ್ಯೇಷ್ಠ ಪತ್ನೀ ಉದರದೊಳ್ (ಮ) 3 ರು (ಮ) 4 ಕಿರಿಯ ಹೆಂಡತಿಯ ಬಸಿರೊಳ್ ವಿ (ಮ) 5 ರು (ಮ) 6 ಬ್ಬರು ಮಕ್ಕಳು (ಮ) 7 ವಿರುಪನ (ಮ) 8 ಳು (ಮ) 9 ರ್ದ ಕಾಲದಲ್ಲು (ಮ) 10 ಮಗಳು (ಮ) 11 ಜ್ಯೇಷ್ಠ ಪುತ್ರರಾದ (ಮ) 12 ಹೀಗೆ (ಮ) 13ರು ವಿವಾಹವಾದರು (ಮ) 14 ರುಗಳಲ್ಲಿ (ಮ) 15 ಕ (ಮ) 16 ತ್ರ (ಮ) 17 ಪ್ಪಗೆ (ಮ)

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ತ್ರೀಯರಂ ವಿವಾಹಮಂ ಮಾಡಿದಂ ಈ ಇರ್ವರ್ ಸ್ತ್ರೀಯರೊಳಗೆ ವಾರದ ಚನ್ನಬಸವಪ್ಪನ ಮಗಳ್ ಚನ್ನಮ್ಮಾಜಿಯವರ ಗರ್ಭದಲ್ಲಿ ಸಂತಾನವಿಲ್ಲ ಸೂರಿರಾಯನ ಕಲ್ಲಪ್ಪನ ಮಗಳ್ ಮಲ್ಲಮ್ಮಾಜಿಯವರ ಗರ್ಭದಲ್ಲಿ ಮುಂದೆ ಈ ಬಸವಪ್ಪನಾಯಕರ ಕುಮಾರ ಸೋಮಶೇಖರ ನಾಯಕರ್ ರಾಜ್ಯವಾಳುತ್ತಿದ್ದ ಕಾಲದಲ್ಲಿ ಪ್ಲವ ಸಂವತ್ಸರದ ಮಾರ್ಗಶಿರ ಶುದ್ಧ ೩ ಯಲ್ಲಿ [1]ಈ ಬ[1]ಸವಪ್ಪನಾಯಕರ್ ಜನಿಸಿದರ್ ಇದು ಚನ್ನಮ್ಮಾಜಿಯವರ ಕುಮಾರನಾದ ಹಿರಿಯ ಬಸವಪ್ಪನಾಯಕರ ಸಂತಾನಪರಂಪರಾವಿವರಣಂ ಇನ್ನು ಪ್ರಕೃತಕಥಾಸಂದರ್ಭ ಮೆಂತೆನಲಾ ಹಿರಿಯಬಸವಪ್ಪನಾಯ[2]ಕಂ ಸದ್ಧರ್ಮದಿಂ ರಾಜ್ಯಪ್ರತಿಪಾಲನಂಗೆಯ್ಯುತ್ತು ಮಿರ್ದು ತನಗೆ ಪಟ್ಟವಾದ ಈಶ್ವರ ಸಂವತ್ಸರ ಫಾಲ್ಗುಣ ಮಾಸದಲ್ಲಿ ತಮ್ಮ ಮಾತೃ ಚನ್ನಮ್ಮಾಜಿಯವರ್ ಪುತ್ರಿಯ[2] [3]ಭಾವದಿಂದ ಸಾಕಿದ ಆ ಚನ್ನಮ್ಮಾಜಿಯವರ ತಂಗಿ ಮರಿಯಮ್ಮಾಜಿಯೆಂಬ ಕುಮಾರಿಯಂ ಮೋನಪ್ಪಸೆಟ್ಟರ ಮಗ ನಿರ್ವಾಣಯ್ಯಂಗಿತ್ತತ್ಯಂತ ಸಂಭ್ರಮದಿಂ ವಿವಾಹಮಂ ರಚಿಸಿ ಸುಖಮಿರುತ್ತುಮಿರ್ದು[3]

ಕಂ|| ಕಡುಗಲಿಗಳಾರೆಯರ್ಕಳ
ಪಡೆಯಂ ಕಾಲ್ದೆಗೆಸಿ ಖಳರಿಗಾಶ್ರಯಮೆನಿಪಾ
ಕಡಲೆಡೆಯೊಳೆಸೆವ ನವಿಲೆಯ
ಗಡಮಂ ತದ್ವಸವಭೂಮಿಪಂ ಸಾಧಿಸಿದಂ ೨

ವ|| ಇಂತು ನಿರ್ವಾಣಯ್ಯನ ಸಹೋದರನಾದ ಚನ್ನಬಸವಪ್ಪನೊಡನೆ ಸೇನಾ ಸಮೂಹಮಂ ತೆರಳ್ಚಿ [4]ಕಳುಹಿ ಕಡಲೆಡೆಯೊಳೆಸೆವ[4] ನವಿಲೆಗಡಮಂ ಸಾಧಿಸಿಯಾ ಗಡಕ್ಕೆ ಬಸವರಾಜದುರ್ಗಮೆಂದು ಸ್ವನಾಮಾಂಕಿತಮಂ ರಚಿಸಿ ಬಲ್ಪುಗೈಸಿದ[5]ನಂತುಮಲ್ಲದೆ *ಆನಂದ ಪುರದಲ್ಲಿ[5]

---

[1] ಬ (ಗ) [2] ಕರ (ಮ) [3] ವಿವರಮಂ ಪುಷ್ಯಮಾಸದಿಂ ಪೇಳ್ದಂ (ಮ) [4] ಸಿ (ಮ)
[5] ನಂತುಮಲ್ಲದೆ ಪ್ರಾಕು ಶಿವಪ್ಪನಾಯಕನ ಕಾಲದಲ್ಲಿ ನಯನೋತ್ಪಾಟನಮಂ ಮಾಡಿಸಿ ಹೊಸಂಗಡಿಯ ಕೋಟೆಯಲ್ಲಿ ಅಂಕೆಯಲ್ಲಿಟ್ಟಿರಲಲ್ಲಿಂದ ತಪ್ಪಿಸಿಕೊಂಡು ಓಡಿ ಹೋದ ವೆಂಕಟಪ್ಪನಾಯಕರ ದೌಹಿತ್ರ ಸದಾಶಿವಯ್ಯನ ಪುತ್ರ ಅಂಧಕವೆಂಕಟಪ್ಪನಾಯಕನ ಪುತ್ರ ಕುತ್ಸಿತಶಿವಪ್ಪನಾಯಕನ ಮಗನು ವೇಷಧಾರಿನಾಮವನಾಂತು ಇರುತ್ತಿದ್ದನು ಆ ವೇಷಧಾರಿ ಯನ್ನು ಗುತ್ತಳದ ಹನುಮಂತಗೌಡನ ಮುಖದಲ್ಲಿ ಹಿಡಿತರಿಸಿ ಮರಿಯಪ್ಪಸೆಟ್ಟರು ಶಿರಶ್ಛೇದನ ಮಾಡಿಸಿದರು. ಆ ಮೇಲೆ ಆ ವೇಷಧಾರಿಗೆ ಇಬ್ಬರು ಮಕ್ಕಳು ಇರುತ್ತಿದ್ದಲ್ಲಿ ಅವರೊಳಗೆ ಒಬ್ಬನ ಭೇದತಂತ್ರದ ಮೇಲೆ ಹೊರಗೆ ಶಿರಶ್ಛೇದನವ ಮಾಡಿಸಿದರು. ಮತ್ತೊಬ್ಬನು ತಪ್ಪಿಸಿ ಕೊಂಡು ಅನಾಮಧೇಯನಾಗಿ ಕೆಟ್ಟು ಪಾಚಪಕೀರನಾಗಿ ಕಾಕತ್ರನಾಗಿ ಏನಾಗಿ ಎಲ್ಲಿ ಮೃತನಾಗಿ ಹೋದನೆಂಬುದು ತಿಳಿಯಲಿಲ್ಲ.(ಕ) ನಂತರಂ (ಮ)

* ಎಂಬನಂ ವೇಷಧಾರಿಯೆಂದು ನಾಮವನಾಂತು ತುರುಷ್ಕಸೈನ್ಯಮಂ ತನಗೆ ಸಹಾಯವನುರೆ ಕೊಂಡೆಸೆಯುದೆಗೈತಂದಹರೆ ಕತ್ತಿಯಂ ನಡಸಿ ರಾಜ್ಯ ರಾಷ್ಟ್ರಮಂ ಬಾಧಿಸುತ್ತ ಮಿರುತ್ತಿರಲ್ (ಗ) (?)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ॥ ಕಲಿ ಶೇಖುಕುಂದನಂ ಕೊಳು
ಗುಳದೆಡೆಯೊಳ್ ಕೆಡಹಿ ದೇಶಕೋಶವನಲೆವಾ
ಖಳವೇಷಧಾರಿಯಂ ಯಮ
ನಿಳಯವನುರೆ ಪುಗಿಸಿ ರಾಜ್ಯಮಂ ರಕ್ಷಿಸಿದಂ ೩

ವ॥ ಮತ್ತಮುದಲ್ಲದೆ

ಕಂ॥ ಅರ್ಕಲಗೋಡವರಿಳೆಯನ
ವರ್ಕಳ್ ಮಾಯಾವಿಗಳ್ ವಶಂಗೆಯ್ದಿರೆ ಕೊಂ
ಡರ್ಕಲಗೋಡನವರ್ಗಿ
ತ್ತರ್ಕನಿಭಂ ಬಸವಭೂಪನುರೆ ಜಸವಡೆದಂ ೪

ವ॥ ಮತ್ತಮುದಲ್ಲದೆ

ಕಂ॥ ಇಳೆಯಧಿಪರೆಲ್ಲರಿಂಗ
ಗ್ಗಳನೆನಿಸುತೆ ತಾಮ್ರಮುಖರ ವಶಮಾಗಿಹ ಪೆ
*ರ್ಬೊಳೆಯಪೊನ್ನೂರ ಕೋಂಟೆಯ
ನಳವಿಯೊಳಂ ಕೊಂಡು ಸಾಸಮಂ ಮಿಗೆ ಮೆರೆದಂ ೫

ವ॥ ಮತ್ತಮುದಲ್ಲದೊಂದವಸರದೊಳ್ ಮಲೆಯಾಳದವರ್ ಮಾಯಾವಿಗಳ ಸೈನ್ಯಮಂ ಸಹಾಯಮಂ ಮಾಡಿಕೊಂಡ್ಯೆದಿ ಚಂದ್ರಗಿರಿಯ ಕೋಂಟೆಯಂ ವೇಢೈಸಿರಲ್ ಗರಜಿನ ಬಸವಪ್ಪದೇವರೊಡನೆ ಸೈನ್ಯ ಸಮೂಹಮಂ ತೆರಳ್ಚಿಸಿ ಕಳುಹಿ ಮಾಯಾವಿಗಳ ಸೈನ್ಯಮಂ ಸಂಹರಿಸಿ ಮದೋದ್ರೇಕದಿಂದಿದಿರ್ಚಿದ ಮಲೆಯಾಳರಂ ನಿಗ್ರಹಂಗೆಯ್ಸಿ ಚಂದ್ರ ಗಿರಿಯ ಕೋಂಟೆಯಂ ಸ್ವಾಧೀನಂಗೆಯ್ದು ಮಾಯಾವಿಗಳ್ ಮುಂಕೊಂಡ ವಸುಧಾರೆ ಕೋಂಟೆಯಂ ಮಗುಳ್ವಾಜಿರಂಗದೊಳ್ ಸ್ವಾಧೀನಂಗೆಯ್ದು ಬಲ್ಪುಗೆಯ್ಸಿ ಉಭಯ ಸಂಸ್ಥಾನಗಳ್ಗ ಮನ್ಯೋನ್ಯವಿರೋಧಂ ಪುಟ್ಟ ವರ್ತಿಸದಂತು ನಿಯೋಗಿ ಶರಜಾ ನಾಗಪ್ಪ ಯ್ಯನ ಮುಖದೊಳ್ ಕ್ರಿಯಾಪೂರ್ವಕಮಾಗಿ ಭಾಷಾಪತ್ರಿಕೆಯಂ ರಚಿಯಿಸಿ ನಿರ್ವೈ ರಮಂ ನಿರ್ಮಿಸಿದನಂತುಮಲ್ಲದೆಯುಂ

ಕಂ॥ ಕಡುಗಲಿಗಳಪ್ಪ ಮೊಗಲರ್
ಕಡುಹಿಂ ಕೊಂಡಾನೆವಟ್ಟ ಮಹದೇವಪುರಂ
*ಜಡೆಯ ಹೊನ್ನಾಳಿಯೊಪ್ಪುವ
ಮಿಡಿಜೆಯ ಕೋಂಟೆಗಳ ಮಗುಳ್ದವಂ ಸಾಧಿಸಿದಂ ೬

ವ॥ ಇಂತು ಮೊಗಲರಧೀನಮಾದ ಪರಿಸ್ತರಣಂಗಳಂ ಸ್ವಾಧೀನಂಗೈದನಂತು ಮಲ್ಲದೆಯುಂ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ॥ ಕರಿತುರಗಪತ್ತಿಸಹಿತಂ
ದುರುಶೌರ್ಯೋದ್ರೇಕದಿಂದವ್ಯೈದಿದ ಯವನೇ
ಶ್ವರ ಸವಣೂರ ನಬಾಬನ
ಗರುವಿಕೆಯಂ ತೀರ್ಚಿ ರಣದೆ ಮುರಿದೋಡಿಸಿದಂ ೭

ವ॥ ಇಂತು ಬಲಶಾಲಿಯಾದ ಸವಣೂರ ನಬಾಬನಂ ಗುರುವಪ ಮಂತ್ರಿಯ ಮುಖದಿಂ ಯುದ್ಧರಂಗದೊಳ್ ಪಿಂದೆಗೆಸಿ ಸುಖಸಂಕಥಾ ವಿನೋದದಿಂ ರಾಜ್ಯಪ್ರತಿಪಾಲನಂಗೆಯ್ಯುತಿರ್ದನಂತುಮಲ್ಲದೆಯುಂ

ಕಂ॥ ಮೆರೆವ ಶಿವತತ್ತ್ವರತ್ನಾ
ಕರಮೆಂದೆನಿಪಾ ಸುಭಾಷಿತಸುರದ್ರುಮಮೆಂ
ಬುರುತರಕಾವ್ಯದ್ವಯಮುಂ
ವಿರಚಿಸಿ ಸದ್ಯಶವನಾಂತನಾ ಬಸವನೃಪಂ ೮

ವ॥ ಇಂತು ಸಂಸ್ಕೃತಗ್ರಂಥನಿಬಂಧದ್ವಯಮುಮಂ ವಿರಚಿಸಿ ಮತ್ತಮದಲ್ಲದನಂತರಂ ಗೀರ್ವಾಣಕರ್ಣಾಟಕ[1]ಭಾಷೆಗಳಿಂ[1]

ಕಂ॥ ಅನುಪಮಸೂಕ್ತಿಸುಧಾಕರ
ಮೆನಿಪಾ ವಸ್ತುಕಸುಕಾವ್ಯಮುಂ ವಿರಚಿಸಿ ಸೂ
ರಿನಿಕರಕಲ್ಪದ್ರುಮನೆಂ
ದೆನಿಪೀ ಬಿರುದಾಂತು ಮೆರೆದನಾ ಬಸವನೃಪಂ ೯

ವ॥ ಮತ್ತಮದಲ್ಲದೆ

ಕಂ॥ ದಾಸೋಹಂ ಪುರವರ್ಗಂ
ಭಾಸುರಮಠಮಾನ್ಯಸತ್ರಮೆಂಬಿವು ಮೊದಲಾ
ದಾ ಸಕಲಧರ್ಮಮಂ ಚಿ
ತ್ತೋಲ್ಲಾಸಂ ಬಸವಾವನೀಶನುರೆ ವಿರಚಿಸಿದಂ ೧೦

ವ॥ ಮತ್ತಮದಲ್ಲ[2]ದೆ ಪ್ರತಿವರ್ಷದೊಳ್ ಕಾರ್ತಿಕಮಾಸದೊಳ್ ಸೋಮವಾರಂಗಳೊಳ್ [3]ಜಂಗಮಪಾದಪೂಜೆಯಂ ಮಾಳ್ಪ ಪದ್ಧತಿಯಂ ರಚಿಸಿ ಸಕಲಜನಹಿತಾರ್ಥಂ[2] ವೇಣು[3]ಪುರೀನದಿಗೆ ಶಿಲಾಸೇತುಮಂ ಕಟ್ಟಿಸಿ ಪರಮಹಂಸಪಕೀರರ್ಗಂ ಪ್ರತಿದಿನದೊಳ್ ರೊಟ್ಟಿಗಳನೀವ ಧರ್ಮಮುಮಂ ಮತ್ತಂ ಪಸಿದವರ್ಗನ್ನಮುಂ ಶಿಶುಗಳ್ಗೆ ಪಾಲ್ಬೆಣ್ಣೆಗಳನೀ

[1] ಮಿಶ್ರಭಾಷೆಯೊಳ್ (ಕ) [2] ದಾ ಬಸಪ್ಪನಾಯಕಂ (ಮ) [3] ವಿಶೇಷಧರ್ಮಂಗಳ್ನಡೆವಂತು ಮತ್ತಂ ವೇಣು (ಬ)

Sri Vidyabharathi Book Centre, Sringeri

CC-O. In Public Domain. Digitized by eGangotri

ವಂತು ಕಟ್ಟಳೆಯುಮಂ ರಚಿಸಿ ಮತ್ತಂ ತಮ್ಮ ಮಾತೃ ಚನ್ನಮ್ಮಾಜಿಯವರ ತದ್ದಿವಸದೊಳ್ ಪ್ರತಿವರ್ಷ ಶ್ರಾವಣ ಶುದ್ಧ ೧೪ಯ ದಿವಸದೊಳನೇಕ ಜಂಗಮಾತಿಥಿ ಪರಮಹಂಸ ಪಕೀರ ರಾಮದಾಸ ಜೋಗಿ ಪರದೇಶಿ ಮುಂತಾದ ಜನರ್ಗನ್ನದಾನ ವಸ್ತ್ರದಾನಂಗಳಂ ಮಾಳ್ಪಂತು ಸ್ಥಿರಮಾದ ಕಟ್ಟಳೆಯಂ ರಚಿಯಿಸಿ ಮತ್ತಂ [1]ಸ್ವರಾಷ್ಟ್ರಂಗಳೊಳಕಾಲಚಕ್ರ[1] ದೊಳೆತ್ತುವುತ್ತಾರಪಗುಡಿಯನೆತ್ತದಂತು ನಿಯಾಮಕಮಂ ರಚಿಸಿ ಕೆಳದಿಯ [2]ವೀರಭದ್ರ[2] ದೇವಸ್ಥಾನದ ಶಿಲಾಮಯದ ಕೆಲಸಗತಿಯಂ [3]ಸಂಪೂರ್ಣಮಾಗಿಸಿ[3] ಮತ್ತಂ ತಮ್ಮ ಸೇವಕ ಗುರಿಕಾರ ಹರಿಕಾರರ ಮುಖದಿಂ[4]ದೆಯುಮ[4]ಗ್ರಹಾರಾದಿ ಧರ್ಮಂಗಳನಾಗಿಸಿ [5]ಶಾಶ್ವತಧರ್ಮಕೀರ್ತಿಗಳನುಪಾರ್ಜಿಸಿದನಂತರಮಲ್ಲದೆಯುಂ[5]

ಕಂ॥ ವಿಲಸತ್ಸಮಸ್ತಶಾಸ್ತ್ರಂ
ಗಳನುರೆ ಸಂಗ್ರಹಿಸಿ ಸರ್ವವಿದ್ವಜ್ಜನಸಂ
ಕುಲಮಂ ರಕ್ಷಿಸಿ ಧರ್ಮದೊ
ಳಿಳೆಯಂ ಪಾಲಿಸಿದನೊಲ್ದು ಬಸವಮಹೀಶಂ ೧೧

ವ॥ [6]ಈ[6] ಬಸವಪ್ಪನಾಯಕರ್ ತನುಗೆ ಪಟ್ಟವಾದ ಶಾಲಿವಾಹನ ಶಕ ವರ್ಷ ೧೬೨೦ನೆಯ ಈಶ್ವರ ಸಂವತ್ಸರ[7]ದ ಶ್ರಾವಣ ಶುದ್ಧ ೧೪ಯ ಆರಭ್ಯ ಜಯ ಸಂವತ್ಸರದ ಆಶ್ವಯುಜ[7]....ವರ್ಷ ೧೭ ತಿಂಗಳು ೫ ದಿನ ೧೧ ಪರ್ಯಂತಂ ರಾಜ್ಯವಾಳಿದರ್

[8]ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ[8] ಶಕ ವರ್ಷ ೧೬೩೬ನೆಯ ಜಯ ಸಂವತ್ಸರದ ಪುಷ್ಯ ಬಹುಳ ೧೦ಯಲ್ಲಿ ಬಸವಪ್ಪನಾಯಕರ ಜ್ಯೇಷ್ಠಪುತ್ರರಾದ ಸೋಮಶೇಖರನಾಯಕರ್ಗೆ ವೇಣುಪುರದರಮನೆ[9]ಯಲ್ಲಿ[9] ರಾಜಪಟ್ಟಂ ಈ ಸೋಮಶೇಖರ ನಾಯಕರ್ ರಾಜ್ಯವಾಳಿದ ವಿವರಣಮಂ ಪದ್ಯರೂಪದಿಂ ಪೇಳ್ವೆನದೆಂತೆಂದೊಡೆ.

---

1 ಸ್ವರಾಷ್ಟ್ರ (ಖ) 2 ರಾಮೇಶ್ವರ (ಮ) 3 ಸಾಂಗಮಾಗಿ ರಚಿಸಿ (ಕ) 4 ದನೇಕಮಠ ಮಾನ್ಯಾದಿ ಧರ್ಮಂಗಳನಾಗಿಸಿ ಶೈವವೈಷ್ಣವ ಗುರಿಕಾರರ ಮುಖದಿಂದವು ಅ (ಗ) 5 ತದನಂತರಂ (ಮ) 6 ಈ ಬಸಪ್ಪನಾಯಕರ ಕಾಲದಲ್ಲಿ ಬದುಕುಗಳ ಮಾಡಿದವರು: ಮರಿಯಪ್ಪ ಶೆಟ್ಟರು ನಿರ್ವಾಣಯ್ಯನವರು ಅವರ ತಮ್ಮ ಗುರವಪ್ಪನವರು ಪ್ರಧಾನಿ ಗುರುಬಸಪ್ಪ ದೇವರು ಗರಜಿನ ಶಾಂತದೇವರು ಸಬ್ಬನೀಸ ಕೋಳಿವಾಡದ ಬೊಮ್ಮರಸಯ್ಯ ಶರಜಾ ಹೂವಯ್ಯ ಚಿಟನೀಸ ಭದ್ರಯ್ಯ ಪಟ್ಟೆರಂಗಪ್ಪಯ್ಯ ಪಟ್ಟೆ ಲಕ್ಷ್ಮೀಪತಯ್ಯ ನೆಲ್ಲೂರ ವೆಂಕಟಪ್ಪಯ್ಯ ಗಾಜನೂರ ಲಕ್ಷ್ಮಯ್ಯ ಆ ಯಲ್ಲಪ್ಪಯ್ಯ ಶರಜಾ ತಿರುಮಲಯ್ಯ ಶರಜಾ ವೆಂಕಟಯ್ಯ ಚಿಕ್ಕ ತಿಮ್ಮಯ್ಯನ ಕೂಸಪ್ಪಯ್ಯ ಕೋಳಾಲದ ವೆಂಕಟಕೃಷ್ಣಯ್ಯ ಆ ವೆಂಕಟೇಶಯ್ಯ ಹೊನ್ನಾಳಿ ಸುಬ್ಬಯ್ಯ ರಾಯಸದ ಅಶ್ವತ್ಥಯ್ಯ ಶರಜಾ ನಾಗಪ್ಪಯ್ಯ ಆ ನರಸಪ್ಪಯ್ಯ ಚನ್ನಪ್ಪಯ್ಯ ಮನೆವಾರ್ತೆ ಹುದ್ದಾರ ವೀರಪ್ಪ ಮುಂತಾದವರು

ಈ ಬಸವಪ್ಪನಾಯಕರಿಗೆ ಬಿದುರೂರ ಕೊಪ್ಪಲ ಮಠದಲ್ಲೂ ಸಮಾಧಿಯಾಯಿತು ಈ (ಕಗ) 7 ದಾರಭ್ಯ ಜಯಸಂವತ್ಸರದ ಪುಷ್ಯಬ ೧ ವರೆಗೆ (ಮ) 8 ಆ ತರುವಾಯ ಸೋಮಶೇಖರ ನಾಯಕ (ಗಮ) 9 ಯೊಳಗಣ ಗಗನಮಹಲ ಚಾವಡಿಸದರಿನಲ್ಲು (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ॥ ಶ್ರೀಮದ್ವೃಷವಮಹೀಶಲ
ಲಾಮಾನ್ವಯದುಗ್ಧವಾರ್ಧಿಪೂರ್ಣಶಶಾಂಕಂ
[1]ಸೋಮಶೇಖರನೃಪಂ ರಿಪು
ಭೀಮಂ ಬಳಿಕೆಸೆವ ರಾಜ್ಯರಮೆಗರಸಾದಂ ೧೨

ವ॥ ಅದೆಂತೆಂದೊಡೆ ಮೋನಪ್ಪಸೆಟ್ಟರ ಮಗ ನಿರ್ವಾಣಯ್ಯನವರ್ ಗುರುವಪ್ಪ ಹುಜೂರು ಪಾರಪತ್ಯಗಾರ ಗರಜಿನ ಶಾಂತಪ್ಪೊಡೆಯರ್ ಎಡವ ಸಿದ್ದಪ್ಪ ಮಹದೇವ ಪುರದ ದೇವಪ್ಪ ಸುಬೇದಾರ ಸಿದ್ದಪ್ಪ ಕೋಹಿಲೆ ಲಿಂಗಪ್ಪ ಬೆಳ್ಳಾರೆ ಚನ್ನಪ್ಪಯ್ಯ ಕರಣಿಕ ಕೋಳಾಲದ ವೆಂಕಟೇಶಯ್ಯ ಗಾಜನೂರ ಲಕ್ಷ್ಮರಸಯ್ಯ ಆರಗದ ಪರಮೇಶ್ವರಯ್ಯ ಬಾರಕೂರ ಸೂರಯ್ಯ ಜಾಪೂರ ಮಲ್ಲಪ್ಪಯ್ಯ ರಾಯಸದ ಸೂರಯ್ಯ ಅಶ್ವತ್ಥಯ್ಯ ಗಂಗಾಧರಯ್ಯ ಸಬ್ಬುನೀಸ ಕೃಷ್ಣಪ್ಪಯ್ಯ ಕೋಳಿವಾಡದ ಬೊಮ್ಮರಸಯ್ಯನವರ ಮಗ ತಮ್ಮರಸಯ್ಯ ಮುಂತಾದ ಮಂತ್ರಿ ಮನ್ನೆಯ ನಿಯೋಗಿ ಸಾಮಾಜಿಕಜನರ್ಗೆ ತತ್ತದ್ಯೋಗ್ಯತಾನುಸಾರವರಿದುಚಿತಾಧಿಕಾರಂಗಳನಿತ್ತು ತಮ್ಮ ಜನಕ ಬಸವಪ್ಪನಾಯಕರಾಳಿಬರುತ್ತಿರ್ದ ರಾಜ್ಯರಾಷ್ಟ್ರ ದೇಶ ಕೋಶ ಪ್ರಜೆ ಪರಿವಾರ ಪರಿಸ್ತರಣ ಪುರಜನ ಪರಿಜನ ಬಂಧುಜನ ಸೇವಕಜನರಂ ಸಂರಕ್ಷಿಸುತ್ತುಂ ತಮ್ಮ ಅನುಜ ವೀರಭದ್ರನಾಯಕರಂ ಪ್ರೀತಿಯಿಂ ನಡೆಸಿಕೊಳುತ್ತುಂ ಮಾವ ನಿರ್ವಾಣಯ್ಯನವರ್ಗೆ ಸರ್ವಾಧಿಕಾರವನಿತ್ತು ಸದ್ಧರ್ಮದಿಂ ರಾಜ್ಯಪ್ರತಿಪಾಲನಂಗೆಯ್ಯುತ್ತುಮಿರಲಾ ಕಾಲದೊಳಿತ್ತಂ

ಕಂ॥ ವೈರಿಗಳುಪಟಳದಿಂ ಸವ
ಣೂರ ನಬಾಬಂ ಸ್ವದೇಶದೊಳ್ ನಿಸ್ತರಿಸ
ಲ್ಕಾರದೆ ಸಹಾಯಮುಂ ತಾಂ
ಹಾರುತೆ ರಾಯಸವನ್ನೈದೆ ಬರೆದಟ್ಟಲೊಡಂ ೧೩

ಕೋಹಿಲೆಯ ಸಿದ್ದಪನ ಕೂ
ಡಾಹವನಿಸ್ಸೀಮಸುಭಟರಂ ತೆರಳಿಸಿ ಸ
ನ್ನಾಹದೊಳೈದಿದ ಶತ್ರು
ವ್ಯೂಹವನಂಕದೊಳೆ ಸದೆದು ಮುರಿದೋಡಿಸುತುಂ ೧೪

---

1 ಮನ್ಮಥಸಂವತ್ಸರದಲ್ಲು (ಕ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕುಜನರನಲೆದು ಬಳಿಕ್ಕಂ
ನಿಜಪದದೊಳ್ ತನ್ನ ಬಾಬನಂ ನಿಲಿಸಿ ನೃಪ
ಪ್ರಜದೊಳ್ ಮಿಗೆ ಪರಮೋನ್ನತ
ಭುಜಬಲಮಂ ಮೆರೆದನಾ ನೃಪಾಲಕವರ್ಯಂ ೧೫

ವ|| ಆ ಸವಣೂರು ಸಂಸ್ಥಾನಮಂ ಕ್ರಮದಿಂ ಮುನ್ನಾಳ್ದ ವಿಜಾಪುರದ ಪಾತುಶಾಹರ ಬಗೆ: ವಜೀರ ರಗಟೇ ಬಲೂಲಖಾನಂ ಅವನ ಮಗಂ ಚಿಕ್ಕ ಬಬೂಲಖಾನಂ ಅವನ ಮಗನಬ್ದುಲ್ಲರಹೊ ಯೆಂಬನಂ ಡಿಳ್ಳಿಯವರಂಗಜೇಬ ಪಾತುಶಾಹಂ ವಿಜಾಪುರದ ಸಂಸ್ಥಾನಮಂ ಸ್ವಾಧೀನಂಗೈದನಂತರಮಾ ಅಬ್ದುಲ್ಲರಹೋಯೆಂಬನಂಗೆ ದಿಲಾಲನೆಂದು ಪ್ರತಿನಾಮಮನಿತ್ತು ನೀಂ ಮಲೆನಾಡು ಮುಂತಾದ ದಾಕ್ಷಿಣಾತ್ಯ ರಾಜ್ಯದ ಮೇಲುಸರಾಂಬರಿಕೆಯೊಳಿಹುದೆಂದು ನಿಯಾಮಕಂ ಗೆಯ್ದು ನಿಲಿಸಲವಂ ತತ್ಸವಣೂರೊಳ್ ಬಲಿಷ್ಠನಾಗಿ ನಿಂದಂ ಆ ದಿಲಾಲನ ಮಕ್ಕಳ್ ಅಬ್ದುಲ್ಲ ಮಹಮುದ್ದ ಕರೀಮ ಸತಾರ ಗಫಾರರೆಂದು ನಾಲ್ವರ್ ಅವರೊಳ್ ಗಫಾರನ ಮಗಂ ಮದೀಜಂ ಇಂತಿವರ್ ಸವಣೂರನಾಳ್ದವರ್ ಇಂತು ನೆಗಳ್ತೆವೆತ್ತ ಸವಣೂರ ನಬಾಬನ ವಂಶಸಂಜಾತರೊಳ್ ಅಬ್ದುಲ್ಲಮಹಮುದ್ದ ಖಾನನ ಶತ್ರುವರ್ಗಮಂ ವಾರಿಪೆಗೆಸಿ ಸಂಸ್ಥಾನದೊಳ್ ನಿಲಿಸಿ ಸವಣೂರ ನಬಾಬಂ ಕಳುಪಿದ ಪತ್ತೆಲಸ್ಕರಿಯೆಂಬಾನೆ ತುರುಗ ವುಚಿತ ವುಡುಗೊರೆಗಳಂ ಪರಿಗ್ರಹಿಸಿ ಪರಮ ಪ್ರಖ್ಯಾತಿಯಂ ಪಡೆದನಂತುಮಲ್ಲದೆಯುಂ

ಶಾ.ವಿ|| ಸೀಮಾಲೋಕನದಿಚ್ಛೆಯಿಂ ಜಡೆಯಕೈತಂದಲ್ಲಿರಲ್ ಕೇಳ್ದತಿ
ಪ್ರೇಮಂಬೆತ್ತು ಸಮಸ್ತಸೈನ್ಯಸಹಿತಂ ಪುತ್ರಾದ್ಯರಿಂ ಕೂಡಿಯುಂ
ತಾಮೆಳ್ತಂದು ಸದಾಶಿವೋರ್ವಿಪತಿಯುಂದಾ ಸೋದೆಯಿಂ ಬೇಟಿಗೊಂ
ಡಾ ಮಾನೋನ್ನತಸೋಮಶೇಖರಧರಾಭೃಚ್ಛೌರ್ಯಮಾರ್ತಾಂಡನಂ ೧೭

ವ|| ಇಂತು ಸೋದೆಸದಾಶಿವನಾಯಕಂ ತಾನೈತಂದು ಗುಡ್ಡಣಾಪುರದ ಕೆರೆಯ [1]ಬಯಲೊಳ್[1] ಭೇಟಿಯಂಕೊಂಡನಂತರಂ

ಕಂ|| ಕರೆದೊಯ್ದು ವಾನವಾಸೀ
ಪುರದೊಳ್ ಮಜ್ಜನಸುಭೋಜನಾದ್ಯುಪಚಾರೋ
ತ್ಕರದಿಂ ಮನ್ನಿಸಿ ದಿವ್ಯಾಂ
ಬರಭೂಷಣಗಜಹಯಾದಿಗಳನೊಸೆದಿತ್ತಂ ೧೮

---

1 ಬಳಿಯೊಳ್ (ಬ)

Sri Vidyabharathi Book Centre, Sringeri

CC-O. In Public Domain. Digitized by eGangotri

ಅವನಂಗೀಕರಿಸಿ ಬಳಿ
ಕ್ಕವನಿಪಕುಲತಿಲಕ ಸೋಮಶೇಖರಭೂಪಂ
ತವೆ ಸೀಮೆಯನಭಿವೀಕ್ಷಿಸು
ತವಿರಳ ಹರ್ಷದೊಳೆ ವೇಣುಪುರನುಂ ಪೊಕ್ಕಂ ೧೮

ವ|| ಮತ್ತಮದಲ್ಲದೆ ಹೇವಿಳಂಬಿ ಸಂವತ್ಸರದೊಳ್

ಕಂ|| * ದುರುಳ ಮೈಸೂರ ಮನ್ನೆಯ
ನುರುಮದಮಂ ತವಿಸವೇಳ್ಕೆನುತ್ತಗ್ರಜನೊಳ್
ಗುರುವಪನಾಳೋಚನೆಯಂ
ವಿರಚಿಸಿ ತದ್ರಾಜಕಾರ್ಯಮಂ ಮಿಗೆ ತೊಡಗಲ್ ೧೯

ಬಲವತ್ಸಹಾಯಮಿಲ್ಲದೆ
ನೆಲೆಗೊಳದೀ ಕಾರ್ಯಮಾಸಹಾಯಕೆ ತಮ್ಮಿಂ
ತೊಲಗದೆ ನಿಲ್ವೊಡಮೊರ್ವಗೆ
ಬಿಳಿಜೋಡಿಯ ಬರಮನಾಯಕನೆ ಮಿಗೆ ಪಾತ್ರಂ ೨೦

ಎಂದಾಳೋಚನೆಯಂ ತಾಂ
ಕುಂದದೆ ನಿಶ್ಚಯಿಸಿ ರಾಯಸದ ಸೂರಪಗಾ
ಪೊಂದಿಗೆಯನೊರೆದು ಬೀಳ್ಕೊಡೆ
ಮುಂದಾಗಿರಲಾತನೈದಿ ಚಿಂತನಕಲ್ಲಂ ೨೧

ಬರಮಣನಾಯಕನಂ ಕಂ
ಡೊರೆಯಲ್ಕೀ ರಾಜಕಾರ್ಯದಿರವನೊಡಂಬ
ಟ್ಟಿರುವವೊಲಂತಾಗಲ್ಕೆಂ
ದೊರೆಯಲ್ ದಿಟಮೆಂದು ಸೂರಪಂ ಬರೆದಟ್ಟಲ್ ೨೨

ಕುಟಿಲನೆಂದರಿಯದಾ ನುಡಿ
ದಿಟಮೆಂದೇ ಬಗೆದು ನಂಬಿ ಗುರುವಪನಾಗಲ್
ಕಟಕಸಹಿತೈದಿ ಬೇಟೆಯ
ನಟನೆಯೊಳಂ ಕೊಂಡು ಚನ್ನಗಿರಿಗಡಿಯೆಡೆಯೊಳ್ ೨೩

Sri Vidyabharathi Book Centre, Sringeri

CC-O. In Public Domain. Digitized by eGangotri

ವ|| ಇಂತು ಬೇಟೆಗೊಂಡು ಮುಂತಣ ರಾಜಕಾರ್ಯವಿಷಯಂಗಳನೊರೆದಿದಕ್ಕೆ ನೀಂ ಸಹಾಯಮಂ ವಿರಚಿಸಿದೆಯಾದೊಡೆ ಸೂರಯ್ಯನ ಕೂಡೊರೆದು ಕಳುಪಿದಂತೆ ನಿನ್ನ ಕಜ್ಜಂಗಳೇನಿರ್ದೊಡಂ ವಹಿಸಿ ನಡೆಸಿದಪೆವಾವುದರಲ್ಲಿಯುಂ ನಾವಿರ್ವರುಮೇಕಮತರಾಗಿ ಮಾಯಾವಿಗಳ ಮದನಿವಾರಣಮಂ ಮಾಳ್ಪವೆಂದುಸಿರಲೀ ಮಂತ್ರಾಲೋಚನೆಯಂ ಕೇಳ್ದ ದಕ್ಕೆ ಮಾರುತ್ತರಂಗೊಡದಾ ಬರಮನಾಯಕನತ್ಯಂತದುರಾಸೆ ಪುಟ್ಟೆ ವಕ್ರೋಕ್ತಿಗಳಂ ನುಡಿದು ವಾಗ್ವಾದದಿಂ ಕೆಣಕಿ ಗಜಬಜಮಂ ಪುಟ್ಟಿಸಿ ಮುನ್ನಂ ಮಾಡಿದ ತಹಬಂದು ಕಟ್ಟುಗಳ್ ಮುರಿದುವೆಂಬ ಭಾವಮಂ ಮಾಡಿ ಮುನ್ನೊರೆದಂತಸಿಬಲದಿಂ ತನ್ನೆಡೆಗೈತಂದ ಗುರುವಪಮಂತ್ರಿಯಂ ವೇಧೈಸವೇಳ್ಕೆಂದು ಯೋಚಿಪುದರೊಳ್ ಸಂಧಿ ವಿಸಂಚಿಸಲಾಗಳಾ ಅವನ ಕಪಟವೃತ್ತಿಯಂ ಗುರುವಪಮಂತ್ರಿಯರಿದಾಗಣ ವೇಳೆಯೊಳವನೇನೇನನಪೇಕ್ಷಿಸಿ ನುಡಿದನದಕಂತಾಗಲಿದೇತರ ಕಜ್ಜಮೆಂದೊಡಂಬಟ್ಟಾತನಾಗಿ ತತ್ಕಿರಾತಪತಿಯೊಳ್ ಮಧುರ ವಚನಮಂ ನುಡಿದಧಿಕಮಾದುಡುಗೊರೆವುಚಿತಗಳನಿತ್ತು ಪಿರಿದು ಮನ್ನಿಸಿ ಕಳುಹಿ ತಾಂ ಪಿಂದೆಗೆದು ಬಂದು ಕತಿಪಯದಿನಂಗಳ್ ಪೋಗಲೊಡನೆ

ಕಂ|| ಧುರಧೀರಂ ಚಿಂತನಕ
ಲ್ಲೆರೆಯಂ ಬಿಳಿಜೋಡಿಬರಮನಾಯಕನೆಸೆವಾ
ಹರಪುರದರಸನ ಸುಪರಿ
ಸ್ತರಣಗಳಂ ಕೊಂಡು ದಾಳಿಯಿಡಲತಿಚಲದಿಂ ೨೪

ವ|| ಪಿಂತೆ ಕ್ರಮದಿಂ ಚಿಂತನಕಲ್ಲುದುರ್ಗದ ಸಂಸ್ಥಾನಮಂ ಕಸ್ತೂರಿ ತಿಮ್ಮಪ್ಪ ನಾಯಕ ಸರ್ಜಪ್ಪನಾಯಕ ಹಿರಿಯಚಿಕ್ಕಣ್ಣ ನಾಯಕ ಹಿರಿಯಮೆದಕೆರೆನಾಯಕ ಮೆದ ಕೆರೆನಾಯಕ ಚಿಕ್ಕಣ್ಣನಾಯಕ ಮೆದಕೆರೆನಾಯಕ ರಂಗಪ್ಪನಾಯಕ ರಘುವಪ್ಪನಾಯಕ ರಂಗಪ್ಪನಾಯಕರೆಂಬವರಾಳ್ದರ್ ಆತರುವಾಯಮಾ ದುರ್ಗವನಾಳುತಿರ್ದ ಬಿಳಿಜೋಡಿ ಬರಮನಾಯಕನತ್ಯಂತಗರ್ವೋದ್ರೇಕದಿನಾದಿಯೊಳುಚ್ಚಂಗಿಯೆಂಬ ಸ್ಥಳದೊಳಿರ್ದನಂತರಂ ಹರಪುರ (ಪ್ರತಿನಾಮ ಹರಪನಹಳ್ಳಿ) ಯೆಂಬ ಕೋಂಟೆಯಂ ಬಲಿಸಿ ಆಕೋಂಟೆ ಯೊಳಿರ್ದು ರಾಜ್ಯಂಗೆಯ್ದ ದಾದೆನಾಯಕ ರಂಗರಾಜಯ್ಯ ಹಿರಿಯಬಸಂತರಾಯ ಇಮ್ಮಡಿಬಸವಪ್ಪನಾಯಕ ಕೊಟ್ಟೂರಪ್ಪನಾಯಕ ಹಿರಿಯಬಸವಪ್ಪನಾಯಕ ಕೊಟ್ಟೂ ರಪ್ಪನಾಯಕರೆಂಬಿವರಾಳ್ದನಂತರಂ ಬಸವಪ್ಪನಾಯಕನಾಳ್ದು ಬರುತ್ತಿರಲ್ (ಮುಂಪೇಳ್ದ ಚಿಂತನಕಲ್ಲುಬರಮಣ್ಣನಾಯಕಂ) ಆ ಹರಪನಹಳ್ಳಿ ಬಸವಪ್ಪನಾಯಕನ ಪರಿಸ್ತರಣಗಳಂ ಕೊಂಡು ರಾಜ್ಯಂಗಳನಾಕ್ರಮಿಸುತ್ತುಂ ಮಿಕ್ಕುಮೀರಿ ಕೈಗೆಯ್ಯುತ್ತುಂ ಬರಲಾ ಬರಮನಾಯಕನದಟನಾಂಪೊಡಶಕ್ಯಮಾಗಿ ಹರಪನಹಳ್ಳಿಯ ಬಾಗಳಿಬಸವಪ್ಪ ನಾಯಕಂ ದೈನ್ಯೋಕ್ತಿಯಿಂ ರಾಯಸಮಂ ಬರೆದು ಕಳುಪಿ ತಮ್ಮ ಸಂಸ್ಥಾನಮನುದ್ಧ ರಿಸವೇಳ್ಕೆಂದು ಪೇಳಿಸಲಂತಾಗಲೆಂದು ಗುರುವಪ್ಪ ಮಂತ್ರಿಯೊಡನಸಂಖ್ಯಾತಸಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ಸೈನ್ಯಮಂ ತೆರಳ್ಚಿ ಕಳುಹಿ ಯುದ್ಧರಂಗದೊಳಾ ಬರಮನಾಯಕನ ಪರಾಕ್ರಮಾತಿಶಯಮುಮಂ ಮುರಿದಾ ಪರಿಸ್ತರಣಗಳಂ ಕೊಂಡು ಬಸವಪ್ಪನಾಯಕಂಗಿತ್ತು ಪರಮಪ್ರಖ್ಯಾತಿಯಂ ಪಡೆದಂತಿರುತ್ತಮಿರಲ್ ಮಗುಳ್ದಾ ಬರಮನಾಯಕಂ ಗುತ್ತಳದ ಹನುಮಂತಗೌಡಂ ಹಿಂದೂರಾಯರ ವಂಶೋದ್ಭವನಾದ ಸಿದ್ಧೋಜಿ ಮುಂತಾದವರಂ ಸಹಾಯಕ್ಕೆ ಬರಿಸಿ ಕೊಂಡೈದಿ ರಣರಂಗಕಿದಿರ್ಚಿ ನಿಲಲಾಹವದೊಳಾ ಹನುಮಂತಗೌಡನಂ ಮಸೆಗಾಣಿಸಿಯ ನಂತರಂ

ಕಂ॥ ಚಿಂತನಕಲ್ಲರಸನ ಮದ
ಮಂ ತಗ್ಗಿಸಿ ಧುರದೊಳಾಂತ ಸಿದ್ಧೋಜಿಯ ಸ
ದ್ದಂತಿಯುಮಂ ಪಿಡಿದೊಪ್ಪುವ[1]
ಸಂತೆಯಬೆನ್ನೂರ ಕೋಂಟೆಯಂ ವಶಗೈದಂ ೨೫

ವ॥ ಇಂತು ಚಿಂತನಕಲ್ಲ ಬರಮನಾಯಕನ ಮದಮಂ ತಗ್ಗಿಸಿ ಸಂತೆಬೆನ್ನೂರ ಕೋಂಟೆಯಂ ಕೊಂಡು ಸುಖದಿಂ ರಾಜ್ಯವಾಳುತ್ತಿರಲಾ ಪ್ರಸ್ತಾವದೊಳ್

ಕಂ॥ ಮರಳ್ದಾ ಬರಮಣನಾಯಕ
ನುರುಬೆಗೆ ನಿತ್ತರಿಸಲಮ್ಮದಳವಳಿದು ತರೀ
ಕೆರೆರಾಯದುರ್ಗದರಸರ್
ಮರೆವುಗೆ ಮನ್ನಿಸುತುಮುಭಯಮಿತ್ತಂತಿದಯೆಯಿಂ ೨೬

ವ॥ ಇಂತಭಯಮಿತ್ತಪರಿಮಿತಸೇನಾಸಮೂಹಮಂ ತೆರಳ್ಚಿ ಕಳುಹಿ ಬರಮನಾಯಕಂಗೆ ಸಹಾಯಮಾಗಿ ಬಂದ ದರಮಾಖುಲ್ಲಿಯಂ ಯುದ್ಧದೊಳ್ ಪಿಂದೆಗೆಸಿ ತರಿಕೆರೆಯ ಸಂಸ್ಥಾನಮಂ ಕ್ರಮದಿಂ ಮುನ್ನಾಳ್ದ ಕಾಸಿನಾಯಕ ಬುಳ್ಳನಾಯಕ ಕೆಂಗಾನಾಯಕ ರಡ್ಡಿಹನುಮಪ್ಪನಾಯಕ ಕುಂಟಹನುಮಪ್ಪನಾಯಕ ಇಮ್ಮಡಿ ಹನುಮಪ್ಪನಾಯಕ ನಿಚ್ಚಮದವಣಿಗ ಹನುಮಪ್ಪನಾಯಕ ಶರಜಾ ಹನುಮಪ್ಪನಾಯಕ ಸೀತಾರಾಮಪ್ಪ ನಾಯಕ ಪಟ್ಟಾಭಿರಾಮಪ್ಪನಾಯಕರೆಂಬಿವರಾಳ್ದನಂತರಮಾ ಸಂಸ್ಥಾನಮನಾಳುತಿರ್ದ ಹನುಮಪ್ಪನಾಯಕನುಮಂ ರಾಯದುರ್ಗದ ಸಂಸ್ಥಾನಮಂ ಕ್ರಮದಿಂ ಮುನ್ನಾಳ್ದವರ ನಂತರಮಾಸಂಸ್ಥಾನಂ ವಿಸ್ಖಲಿತಮಾಗುತ್ತಿರಲ್ ಸಹಾಯಮಾಗಿ ಬಂದದರರಸನುಮಂ ಇಂತುಭಯಸಂಸ್ಥಾನಾಧಿಪತಿಗಳುಮಂ ಸ್ವಸ್ಥಾನಂಗಳೊಳ್ ನಿಲಿಸಿ ಪರಮಪ್ರಖ್ಯಾತಿಯಂ ಪಡೆದನಂತುಮಲ್ಲದೆಯುಂ

1 ಹೇವಿಳಂಬಿಸಂವತ್ಸರದ [illegible] ಸಲ್ಲ (ಕ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ॥ ಶೃಂಗಪುರಸ್ವಾಮಿಗಳು
ತ್ತುಂಗಮತಕ್ಕಧಿಕಮಾದ ಋಣಮಾಗಿರೆ ತ
ತ್ಸಂಗತಿಯಂ ಕೇಳ್ದಲ್ಲಿಗೆ
ಸಿಂಗದೆ ಶರಜಾಖ್ಯವೆಂಕಟಯ್ಯನನೊಲವಿಂ ೨೭

ತೆರಳಿಸುತುಂ ಪ್ಲವಸಂವ
ತ್ಸರದೊಳ್ ಶೃಂಗೇರಿಯಿಂದೆ ತತ್ಸ್ವಾಮಿಗಳಂ
ಬರಿಯಿಸಿ ತಚ್ಛೈತ್ರದ ಭಾ
ಸುರಮೇಚಕಪಕ್ಷದಾ ತ್ರಯೋದಶಿದಿನದೊಳ್ ೨೮

ವ॥ [1]ಇಂತು ಶೃಂ[1]ಗಪುರದಿಂ ಸಚ್ಚಿದಾನಂದಭಾರತೀಸ್ವಾಮಿಗಳಂ ಬರಿಸಿ [2]ಬಣ್ಣದ ಚಾವಡಿಯ ಸದರೊಳ್ ಬೇ[2]ಟಿಗೊಂಡು ಭಿಕ್ಷಾದ್ಯುಪಚಾರಂಗಳಂ ನಿಮಿ[3]ರ್ಚಿ[3] ಋಣ ಭಾರಮಂ ತೀರ್ಚಿಯಧಿಕಸನ್ಮಾನಂ[4]ಬಡಿಸಿ[4] ತೆರ[5]ಳ್ಚಿ[5] ಕಳುಪಿ ಬಳಿಕ್ಕಾ ಪ್ಲವಸಂವತ್ಸರದ ಮಾರ್ಗಶಿರ ಶುದ್ಧ ತದಿಗೆಯೊಳ್ ತಮ್ಮನುಜರಾದ ವೀರಭದ್ರನಾಯಕರ್ಗೊರ್ವ ಕುಮಾರನುದಿಸಲಾ ಕುಮಾರಂಗೆ ಬಸವಪ್ಪನಾಯಕನೆಂದು ನಾಮಕರಣಮಂ ರಚಿಸಿ [6]ಪೋಷಣೆಯಂ ಮಾಡಿ ಅಧಿಕವ್ಯಾಮೋಹದಿಂ ನಡೆಸಿಕೊಳುತ್ತುಂ ಮತ್ತಮಾ ಸಂವತ್ಸರದ ಫಾಲ್ಗುಣ ಬಹುಳ ತದಿಗೆಯೊಳ್ ನಿರ್ವಾಣಯ್ಯನವರ ಕುಮಾರಿ ನೀಲಮ್ಮಾಜಿಯವರ ನತ್ಯಂತೋತ್ಸವದಿಂ ವಿವಾಹಮಾಗಿ[6] ಸುಖಮಿರುತಿರ್ದು

ಕಂ॥ ಮಗಗಂ ಪೆಸರಿಟ್ಟುರಿ ಪದ
ಯುಗದರ್ಶನಗೈದ ಹರಪುರಾಧೀಶ್ವರಗಂ
ದಗಣಿತಪೊನ್ನುಡುಗೊರೆತೊಡ
ವುಗಳನವನಿತ್ತು ಪೆರ್ಮೆಯಿಂ ಮನ್ನಿಸಿದಂ ೨೯

ವ॥ ಇಂತು ಮನ್ನಿಸಿದನಂತರಮಾ ಹರಪುರದ ಸಂಸ್ಥಾನಕ್ಕೊದಗಿದ ಹೇರಳಋಣ ಭಾರಮಂ ತೀರ್ಚಿ ಕಳುಪಲಾ ವಾರ್ತೆಯಂ ಕೇಳ್ದು ಸೇನಾಸಮೂಹಂವೆರಸ್ಯೆತಂದ ಗುತ್ತಳದ ಹನುಮಂತ[7]ನಾಯಕನಂ[7] ಗಗನಮಹಲ ಚಾವಡಿಯೊಳ್ ಬೇಟಿಗೊಂಡು [8]ಸನ್ಮಾನಂ[8] ಬಡಿಸಿ ತೆರಳ್ಚಿಸಿದನಂತರಂ

---

[1] ಶ್ರ್ಯಂ (ಮ) [2] ಬೇ (ಮ) [3] ರ್ಚಿಸಿ (ಮ) [4] ನೆರಪಿ (ಮ) [5] ಳ್ಚಿಸಿ (ಮ)
[6] ಕತಿಪಯವರಪೋಗಲೊಡನೆ ನಿರ್ವಾಣಯ್ಯನವರ ಮಗಳನ್ನು ವಿವಾಹಂ ರಚಿಸಿ (ಮ)
[7] ಗಾಡನಂ (ಒ) [8] ತದ್ದ್ರುಣಭಾರಮಂ ತೀರ್ಚಿಸಿ ಕಳುಪಲೀವಾರ್ತೆಯಂ ಕೇಳ್ದನಂತರಮೈತಂದ ಬಳ್ಳರಿ ಶೋಭಕೃತ್ಸಂವತ್ಸರದ ಆಶ್ವೀಜ ಬಹುಳ ೩ ಯಲ್ಲು ರಾಮಪ್ಪನಾಯಕನನಧಿಕಸನ್ಮಾನಂ (ಕಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ|| [1]ಶುಭಕೃದ್ವತ್ಸರದೊಳ್ ಭೂ
ವಿಭು ತಾಂ[1] ಕೊಲ್ಲೂರಿಗೈದಿ ಮೂಕಾಂಬಿಕೆಯಂ
ವಿಭವದೆ ಪೂಜಿಸಿ ಬೀಳ್ಕೊಂ
ಡಭಿವೃದ್ಧಿಯನೀವ ಕೆಳದಿಪುರಮಂ ಸಾರ್ದಂ ೩೦

ರಾಮೇಶವೀರಭದ್ರ
ಸ್ವಾಮಿಯ ಪದಯುಗನ ಭಜಿಸಿ ಬಳಿಕಲ್ಲಿಂದಂ
*ಸೋಮಶೇಖರನೃಪಂ ತೆರ
ಳ್ದಾ ಮಂಜುಲವೇಣುಪುರವನಂದುರೆ ಸಾರ್ದಂ ೩೧

†ಅಲ್ಲಿಂ ತೆರಳ್ದು ತನ್ನೃಪ
ಮಲ್ಲಂ ತಾಂ ತೀರ್ಥರಾಜಪುರಕ್ಕೈದಿ ಬಳಿ
ಕ್ಕಲ್ಲಿಂದಂ ಮುಂತೈದಿ ಸ
ಮುಲ್ಲಾಸದೆ ಶೃಂಗಪುರವ[2]ನಂದುರೆ[2] ಸಾರ್ದಂ ೩೨

ವ|| ಮತ್ತಮದಲ್ಲದಾ ಸೋಮಶೇಖರರಾಜೇಂದ್ರಚಂದ್ರಂ ಶೃಂಗಪುರದೊಳ್ ಶಾರದಾಂಬಾಪೀಠಸನ್ನಿಧಿಯೊಳೆಸೆವ ಚೌ[3]ಕಿ[3]ಯೊಳ್ ಸರ್ವಸಂಭ್ರಮದಿಂ ಸಚ್ಚಿದಾನಂದ ಭಾರತೀಸ್ವಾಮಿಯವರಂ [4]ಬೇಟಿ[4]ಗೊಂಡಾ ಪುರದೊಳ್ ನಾಲ್ದಿವಸಮಿರ್ದಾ ಯತೀಂದ್ರನನುಚಿತಮಾದುಡುಗೊರೆಮುಂತಾದುಪಚಾರಂಗಳಿಂ ಸನ್ಮಾನಿಸಿಯವರಿಂ ತಾನುಂ ಸನ್ಮಾನಂಬೆತ್ತನಂತರಮಲ್ಲಿಂ ತೆರಳ್ದು

ಕಂ|| ಚಳಕದೆ ಕಳಸದ ಘಟ್ಟವ
ನಿಳಿದಾ ಭೂಮಿಪವರ್ಯ ಸುಬ್ರಹ್ಮಣ್ಯ
ಸ್ಥಳಕ್ಕೈದಿ ಪೆರ್ಮೆಯಿಂ ಮಂ
ಜುಳಸುಬ್ರಹ್ಮಣ್ಯದೇವರಂ ಭಜಿಯಿಸಿದಂ ೩೩

ಪೊರಮಟ್ಟಲ್ಲಿಂ ಕೋಟೀ
ಶ್ವರಕ್ಕೈದುತೆ ದಿವ್ಯಕೋಟಲಿಂಗೇಶ್ವರನಂ
ಧರಣೀಶಂ ಪೂಜಿಸಿ ವಸು
ಪುರದೆ ಮಹಾದೇವಲಿಂಗಮಂ ಭಜಿಯಿಸಿದಂ ೩೪

---

[1] ಶುಭಕೃತುಸಂವತ್ಸರದ ಆಶ್ವೀಜ ಬ ೫ಲ್ಲು ವಿಭು ತಾಂ (ಕ) [2] ರವನುರೆ (ಗ) [3] ಕಿ (ಗ) [4] ಬಟ್ಟಿ (ಗ)

† ಮತ್ತಂ ಶೋಭಕೃತ್ಸಂವತ್ಸರದೊಳ್ ಮಾವನಿರ್ವಾಣಯ್ಯನವರ್ ವೆರಸು ಸರ್ವಸಂಭ್ರಮದಿಂ ತೆರಳ್ದು ಭುವನಗಿರಿಯ ದುರ್ಗದರಮನೆಯೊಳ್ ವರ್ತಿಸುತ್ತಿರ್ದನಂತರಂ (ಗ) ಪ್ರತಿಯಲ್ಲಿ ೩೧ನೆಯ [illegible]ದೆ.

Sri Vidyabharathi Book Centre, Sringeri.

CC-O. In Public Domain. Digitized by eGangotri

ಕಂ॥ ಅಲ್ಲಿಂದಂ ತೆರಳ್ದೊಪ್ಪುವ
ಕೊಲ್ಲೂರಿಂಗೈದಿ ತನ್ನೃಪಾಲಂ ಪುರಜಿ
ದ್ವಲ್ಲಭೆ ಮೂಕಾಂಬೆಯ ಪದ
ಪಲ್ಲವಮಂ ಪರಮಭಕ್ತಿಯಿಂದರ್ಚಿಸಿದಂ ೩೫

ಬಳಿಕಲ್ಲಿಂ ಗೋಕರ್ಣ
ಕ್ಕೆಳಿದಾ ಕ್ಷೇತ್ರದ ಮಹಾಬಲೇಶ್ವರನಂ ತಾಂ
ನಲವಿಂದರ್ಚಿಸಿ ಕೇರಳ
ಕಿಳಿದೊಡನೆಳ್ತಂದು *ವೇಣುಪುರಮಂ ಸಾರ್ದಂ ೩೬

ವ॥ ಮತ್ತಮದಲ್ಲದಾನ್ನೃಪಾಲಪುಂಗವಂ ಪರಶುರಾಮಕ್ಷೇತ್ರದತ್ತಣಿಂ ಮಾತೃಗಳ್ವೆರಸಿರ್ದರ್ ಪಾರ್ಥಕುಮಾರರಂ ಬರಿಸಿಯವರ್ಗೆ ಷಡಕ್ಷರಿ ಪಂಚಾಕ್ಷರಿಯೆಂದು ಪೆಸರಿಟ್ಟು ಲಿಂಗಧಾರಣಮಂ ಮಾಡಿಸಿ ಪೋಷಿಸಿಯವರ್ಗೆ [1]ವಿದ್ಯಾಭ್ಯಾಸಮಂ ಮಾಡಿಸಿ [2]ಷಡಕ್ಷರಿಯೆಂಬ[1] ಸಣ್ಣವನ [3]ವಾ[3]ಕ್ಪಟುತ್ವಮಂ ನೋ[4]ಡಿ[4] ಚಿತ್ತಾಸಕ್ತಿಯಿಟ್ಟು [5]ವರ್ತಿಸುತ್ತಿರ್ದೊಂದವಸರದೊಳ್[2]

ಕಂ॥ †ರಾಣೋಜೀಘೋರ್ಪಡೆಯಂ
ಮಾಣದೆ ತಾಂ ಪೈಜೆಯಲ್ಲಿ ಖಾನಂ
[6]ಕ್ಷೀ[6]ಣಬಲನೈದಿ ರಾಜ್ಯ
ಪ್ರಾಣಿಗಳಂ ಬಾಧಿಸುತ್ತುಮೊಳಪುಗಲಾಗಲ್ ೩೭

ಸಂಗರರಂಗದೊಳವರಂ
ಭಂಗಿಸಿ ಪಿಂದೆಗೆಸಿ ಚತುರನಹ ರಾಯಸದಾ
ಗಂಗಾಧರಯ್ಯನ ಮುಖದೆ
ಪೊಂಗಳುಮಂ ಕೊಡಿಸಿ ಸೀಮೆಯಂ ದಾಂಟಿಸಿದಂ ೩೮

---

1 ಓದುಸಾಧನವಿದ್ಯಾಭ್ಯಾಸ ವಿವಾಹಂಗಳಂ ಮಾಡಿಸಿ ಆ ಇರ್ವರ್ ನಂದನರೊಳಗೆ ಕಿರಿಯನಾದ ಷಡಕ್ಷರಿಯೆಂಬ (ಗ) 2 ವಿವಾಹಂಗಳಂ ರಚಿಸಿ ಚಿತ್ತಾಸಕ್ತಿಯಿಂದ ವರ್ತಿಸುತ್ತಿರಲ್ (ಮ) 3 ತೇಜೋಬಲವಾ (ಗ) 4 ಡಿ ಅವನ ಮೇಲೆ (ಗ) 5 ಸಮೀಪದೊಳ್ ಬಳಸಿಕೊಂಡು ವ (ಗ) 6 ಕ್ಷೂ (ಗ)

* ಕ್ರೋಧಿಸಂವತ್ಸರದ ವೈಶಾಖ ೩ಯೊಳ್ (ಶ)

† ಆನಂದಸಂವತ್ಸರದಲ್ಲಿ (ಬ ಕ)

Sri Vidyabharathi Book Centre, Sringeri

CC-O. In Public Domain. Digitized by eGangotri

ವ|| ಮತ್ತಮದಲ್ಲದೊಂದವಸರದೊಳ್ ತರಿಕೆರೆಯರಸನಪ್ಪ ಪಟ್ಟಾಭಿರಾಮಪ್ಪ ನಾಯಕನಿಂ ದಿವಾಣಕ್ಕೆ ಸಲ್ವರ್ಥ-ಕ್ಕೋಸುಗಂ ದರದಾಖುಲ್ಲಿಯೆಂಬ ವಜೀರಂ ಭೂರಿ ಸೈನ್ಯಂವೆರಸೆಳ್ತಂದು ಸೀಮೆಯಂ ಲೂಟಿಸಿ ತರಿಕೆರೆಗಿಳಿದು ಪರನೋಪದ್ರವಮಂ ರಚಿಸುತ್ತಿರ ಲಲ್ಲಿಗೆ ಸೈನ್ಯಮಂ ತೆರಳ್ಚಿಸಿ ಕಳುಪಿ ಅವನಿಂ ಸಲ್ವರ್ಥಮಂ ತಾನೆ ವಹಿಸಿಕೊಂಡು ಕೊಡಿಸಿ ದರದಾಖುಲ್ಲಿಯಂ ಪಿಂದೆಗೆಸಿ ಪಟ್ಟಾಭಿರಾಮಪ್ಪನಾಯಕನಂ ಸಂಸ್ಥಾನದೊಳ್ ನಿಲಿಸಿ ಪ್ರಖ್ಯಾತಿಯಂ ಪಡೆದನಂತುಮಲ್ಲದೆಯುಂ

ಕಂ|| ಸೇನಾಸಮೂಹಕೊಪ್ಪಿಗೆ
ತಾನಪ್ಪಂತೇಕಕಾಲದೊಳ್ ವಿಕ್ರಯಕಂ
ದಾ ನೃಪವರನಿಪ್ಪತ್ತೊಂ
ದಾನೆಗಳಂ ಕೊಂಡು ಪಾಕರವನಾಗಿಸಿದಂ ೩೯*

ಆರೆಯರ ಮೊಗಲರುಪಟಳ
ಕಾರದೆಯುಳವಳಿದು ರಾಯದುರ್ಗದ ರಾಜಂ
ಹಾರಿ ಸಹಾಯದ ದೈನ್ಯಂ
ದೋರಿಯೆ ಬಿನ್ನವಿಸಿ ಕಳುಹೆ ಕೇಳ್ದವನಾಗಳ್ ೪೦

ಹಾರೋವೇದಪನಂ ನ
ಲ್ಲೂರಾ ಲಕ್ಷ್ಮೀಪತಿಪ್ರಮುಖಸಚಿವರುಮಂ
ಆರೈದವರಿರ್ವರೊಡನೆ
ವಾರಣತುರಗಾದಿಸೈನ್ಯಮಂ ತೆರಳಿಸುತುಂ ೪೧

*ಸಮರಸಂಧಾನಮುಖದಿಂ
ದಮರ್ದಾರೆಯರಂ ತುರುಷ್ಕ ಸೈನ್ಯವ್ರಜಮಂ
*ಕ್ರಮದೆ ಪಿಂಡೆಗೆಸಿ ಧಾತ್ರೀ
ರಮಣರೊಳತ್ಯಂತಕೀರ್ತಿಯಂ ಮಿಗೆ ಪಡೆದಂ ೪೨

ವ|| ಮತ್ತಮದಲ್ಲದೆ ಪುಂಗನೂರಾಣ್ಮನಾ ಸೋಮಶೇಖರನಾಯಕನೃಪಾಲನ ಪ್ರಭ ವಾತಿಶಯಮಂ ಕೇಳ್ದು ತನಗಿವರೊಳಗಣನುಸಂಧಾನವಿದ್ದೊಡೆ ಬಲಮಾಗಿರ್ದಪುದೆಂದಾ ಳೋಚಿಸಿ ಅದಕ್ಕೆ ತಕ್ಕಂತುಚಿತಲಿಖಿತಮಂ ಬರೆಸಿ ನಿಯೋಗಿಗಳಂ ಕಳುಪಿರಲವರ್ಗಳಂ

---

*೩೯ನೆಯ ಪದ್ಯವಾದ ಮೇಲೆ "ವ|| ಮತ್ತನೊಂದವಸರದೊಳ್" ಎಂಬ ವಚನ (ಗ) ಪ್ರತಿಯಲ್ಲಿ ಅಧಿಕವಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮನ್ನಿಸಿ ದಿಲಾಸನಿತ್ತು ರಾಯಸಮಂ ಬರೆಸಿ ಚಿನ್ನಭಂಡಾರದ ರಂಗಪ್ಪಯ್ಯನ ಕಯ್ಯೊಳು ಚಿತವುಡುಗೊರೆಗಳನಿತ್ತು ಕಳುಪಿಯವರ ಮನದಿಷ್ಟಮಂ ಸಲ್ಲಿಸಿದನಂತುಮಲ್ಲದೆಯುಂ

ಕಂ|| ದುರುಳರಹ ನಾಯಿಮಾರರ
ನುರುಕೂಡಿಸಿ ಕುಹಕಗೆಯ್ಯುತಿಹ ಕುಂಬಳೆಯಾ
ವರಸಾಮಂತರನುರೆ ಪಿಡಿ
ತರಿಸುತೆ ದುರ್ಗದೊಳಗಂಕೆಯಂ ಮಾಡಿಸಿದಂ ೪೩*

ತೊಳಪರ್ಕಲಗೋಡರಸುಗ
ಳೊಳತೋಟಿಯ ನಿಲಿಸಿ ವೆಂಕಟೇಂದ್ರನನಲ್ಲಿಂ
ತಳುವದೆ ಬರಿಯಿಸಿ ತದನುಜ
ಗೊಲವಿಂದಂ ರಾಜ್ಯಪಟ್ಟಮಂ ಕಟ್ಟಿಸಿದಂ ೪೪

ವ|| ಇಂತು ಬೇಲೂರ ಸಂಸ್ಥಾನದೊಳುನ್ಮದಾವಸ್ಥೆಯಿಂದವ್ಯವಸ್ಥಿತನಾಗಿ ವರ್ತಿಸುತಿರ್ದ ವೆಂಕಟಾದ್ರಿನಾಯಕನಂ [1]ಕದಲ್ಚಿ[1] ತದನುಜ ಗೋಪಾಲನಾಯಕನಂ ಸಂಸ್ಥಾನದೊಳ್ ನಿಲಿಸಲ್ ತದೀಯನಿಯೋಗಿ ಮಲ್ಲಪನ ಕುಮಂತ್ರದಿಂದ್ಬೈದಿದ ಮಾಯಾವಿಗಳ ಸೈನ್ಯಮಂ ಕೂಡಿಕೊಂಡ್ಬೈದಿದ ಸುಬ್ಬರಾಯನೆಂಬ ಸೇನಾಧಿಪತಿಯಂ ರಾಯಪಾಳ್ಯದ ಚನ್ನವೀರಪ್ಪನ ಮುಖದಿಂ ರಣರಂಗದೊಳ್ [2]ಪಿಂ[2]ದೆಗೆಸಿ ಗೋಪಾಲನಾಯಕನಂ ಸಂಸ್ಥಾನದೊಳ್‌ನಿಲಿಸಿ ಪರಮಪ್ರಖ್ಯಾತಿಯಂ ಪಡೆದನಂತುಮಲ್ಲದೆಯುಂ

ಮ.ವಿ|| ವರಡಿಳ್ಳೀಶ್ವರನಾಜ್ಞೆಯಿಂದುರೆ ನಿಜಾಮಂ ಲೇಖನಂಗೆಯ್ಸಿ ನೀಂ
ಮಿರಿಜಾಅದ್ದಮುಖಾನನಂ ತೆಗೆಸಿ ಸೀರೇದುಜ್ಜ್ವಲತ್ಕೋಂಟೆಯೊಳ್
ಮೆರೆವಾ ತಾಯರಖಾನನಂ ನಿಲಿಪುದೆಂದಟ್ಟಲ್ ಸುಬೇದಾರಶೇ
ಖರನಂ ಲಿಂಗಪನಂ ರಿಪುದ್ವಿಪಮಹೋದ್ಯತ್ಸಿಂಹನಂ ಬೀಳ್ಕೊಡಲ್ ೪೫

ವ|| ಇಂತು ಸುಬೇದಾರ ರೋಹಿಲೆಗಂಗನ ಕೋಟೆಲಿಂಗಪ್ಪನಂ ತೆರಳ್ಚಿಸಿ ಕಳುಪಲಾತನಸಂಖ್ಯಾತಸೇ[3]ನೆವೆರಸು[3] ಮಾಯಾವಿಗಳ ನಾಡೊಳಗಣ ಕಂದುಗೆರೆ ಚಿಕ್ಕನಾಯಕನ

1 ತೆರಳ್ಚಿಸಿ (ಗ) 2 ಮಾಯಾವಿಗಳ ದೈನ್ಯಮಂ ಪಿಂ (ಗ) 3 ನಾಸಮೂಹಂ ವೆರಸು ಭರದಿಂ ತೆರಳ್ದು (ಗ)

* ೪೩ ನೆಯ ಪದ್ಯವಾದ ಮೇಲೆ "ವ|| ಮತ್ತಮದಲ್ಲದೊಳೊಂದವಸರದೊಳ್" ಎಂಬ ವಚನ (ಗ) ಪ್ರತಿಯಲ್ಲಿ ಅಧಿಕವಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಹಳ್ಳಿಯ ಪ್ರಾಂತದೊಳ್ ಪಾಳೆಯಮಂ ಬಿಡಿಸಿ ಮಿರಿಜಾಅದ್ದಮಂಗೆ ಸಹಾಯಮಾಗ್ಯೆದಿದ ಮೈಸೂರವರ ಸೇನಾಸಮೂಹಮಂ ಬಹುಮುಖದೊಳ್ ಸಂಹರಿಸಿ ಪಲಾಯನಂಗೊಳಿಸಿ ಮತ್ತಮಲ್ಲಿಂದಂ ತೆರಳ್ದೈದಿ ಸೀರೆದ ಪರಿಸ್ತರಣಕ್ಕೆ ಮುತ್ತಿಗೆಯನಿಕ್ಕಿಸಿ ಕ್ರೋಧಿಸಂವತ್ಸರದ ಆಷಾಢಶುದ್ಧ ೧೩ಯೊಳ್ ಸೀರೆಯ ಕೋಂಟೆಯಂ ಕೊಂಡು ಮಿರಿಜಾಅದ್ದಮನಂ ಪಾರೆ ಡೆಗೆಸಿ [1]ಆ ಸ್ಥಳದೊಳ್ ತಾಯರಖಾನನಂ[1] ನಿಲಿಸಿ ಪಾತುಶಾಹನ ಕಜ್ಜಮಂ ಬಲ್ಪುಗೆಯ್ಸಿ [2]ಬರಲ್ ಬ[2]ಳಿಕ್ಕಂ ವೇಣುಪುರವರದೊಳೆಡೆವಿಡದೆ ಪಗಲಿರುಳ್ ಮೂರುದಿನಂಬರಂ ನವ ಬತ್ತುಗಳ ನಿನಾದಮಂ ಪೂರ್ಣಂಗೆಯ್ಸಿ ತತ್ಪುರದ ಪ್ರತಿಗೃಹಂ ತಪ್ಪದೆ ಸಕ್ಕರೆಯಂ ತಿದ್ದಿಸಿ ಬಳಿಕ್ಕಂ ಶಾದುಲ್ಲಖಾನನ ಪೌಜುಮೆರಸು ಸುಬೇದಾರಲಿಂಗಪ್ಪನಂ ಮಾಯಾವಿಗಳ ಸೀಮೆಯ ಮೇಲೆ ದಾಳಿವರಿಸಲಾತಂ ಪಟ್ಟಣದ ಕೋಂಟೆಯ ಸಮೀಪಮಂ ಸಾರ್ದು ನೀರಜಿಬಿಯಂ(?) ಕಟ್ಟಲವರ್ಗಳ್ ಭಯಸ್ಥರಾಗಿ ಪರಸಂಧಾನಮಂ ನಿಶ್ಚಯಿಸಲಾಗಲೆಂದವರ್ಗಳಿಂ ಭೂರಿ ದ್ರವ್ಯಾಭರಣಾಂಬರವಸ್ತುವಾಹನಂಗಳಂ ಕೊಂಡು 'ತಂದೊಪ್ಪಿಸಲೀ ವಾರ್ತೆಯಂ ಲಿಖಿತ ಮುಖದಿಂ ಚಿಕಲಿಸಖಾನಂಗೆ ತಿಳುಪಲಾ ನಿಜಾಮಂ ಕೇಳ್ದು ಸಂತಸಂದಳೆದು ಕಳುಪಿದಶ್ವ ಮುಚಿತಮುಡುಗೊರೆಗಳಂ ಪರಿಗ್ರಹಿಸಿ ನಾಲ್ದೆಸೆಯ ದೊರೆಗಳೊಳ್ ಪರಮಪ್ರಸಿದ್ಧಿಯಂ ಪಡೆದೊಡನಾ ಚಿಕಲೀಸಖಾ[3]ನ[3]ನುಮತಿಯಿಂ

ಕಂ|| ಮೆರೆವ ತುರುಷ್ಕರ ವಶವಾ
ಗಿರುವಜ್ಜಂಪುರದ ಪೊಳೆಯಪೊನ್ನೂರ ಸುವಿ
[2]ಸ್ತರದ ಸಾಸುನೆಯಹಳ್ಳಿಯ
ವರಕೋಟಾತ್ರಯವನಾನೃಪಂ ವಶಗೈದಂ ೪೬

ವ|| ಮತ್ತಮದಲ್ಲದೆ ಕ್ರೋ[4]ಧಿನಾಮ[4]ಸಂವತ್ಸರದ ಫಾಲ್ಗು[5]ಣಮಾಸ[5]ದೊಳ್

ಕಂ|| ರಾಜಿಪ ಕೊಲ್ಲೂರ್ಗೆ ತೆರ
ಳ್ದಾ ಜನಪತಿವರ್ಯನೆಸೆವ ಮೂಕಾಂಬಿಕೆಯಂ
ಪೂಜಿಸುತಿರುತಿರಲಿತ್ತಂ
ಭೂಜಾನಿಗಳೆರೆಯಪಾತುಶಾಹನ ಮುಖದಿಂ ೪೭

ವ|| ಇಂತು ಪಾತುಶಾಹನನುಜ್ಞೆಯಿಂದಾರೆಯರರಸನೆನಿಪ ಶಾಹುರಾಜನ ವಜೀರಂ ಶ್ರೀಪತಿರಾಯನಂ ಕೂಡಿಕೊಂಡು ತತ್ಸೈನ್ಯ ಸಮೂಹಮಾತ್ಮಸೈನ್ಯಂವೆರಸು

---

[1] ಬಳಿಕಾ ಸೀರೆದ ಕೋಂಟೆಯೊಳ್ ತಾಯರಖಾನನಂ ಸುಸ್ಥಿರಮಾಗಿ (ಗ)
[2] ಬ (ಗ) [3] ನನ (ಕ) [4] ಧಿ (ಕ) [5] ಅ (ಕ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ|| *ಅತಿಧನಾಪೇಕ್ಷೆಯಿಂದ
ಪ್ರತಿಮಂ ಚಿಕಲೀಸಖಾನನೈತರೆ ಮುನ್ನಂ
ಧೃತಿಗೆಡಿಸಿ ಲಿಂಗಪನ ಮುಖ
ದೆ ತದರ್ಥವ ಸಲಿಸಿ ರಾಜ್ಯಮಂ ರಕ್ಷಿಸಿದಂ ೪೮

ವ|| ಮತ್ತಮದಲ್ಲದಾಸೋಮಶೇಖರ[1]ನಾಯಕಂ[1] ರಾಕ್ಷಸಸಂವತ್ಸರದ ಮಾರ್ಗಶಿರ ಶುದ್ಧ ಸಪ್ತಮಿಯ[2]ಲ್ಲಿ[2] ನಾಲಕಿಯೆಂಬ ಮನೋಹರಮಾದ ಮಹಾಯಾನಮನಾರೂಢನಾಗಿ ಸಮಸ್ತಸೈನ್ಯಸಹಿತಂ ಸರ್ವಸಂಭ್ರಮದಿಂ ಮಹಾನವಮಿಯ ಬಯಲ್ಗೆ ತೆರಳ್ದಾಸ್ಥಾನದೊಳೋಲಗಂಗೊಟ್ಟು ಸ್ಥಳ ಪರಸ್ಥಳದ ಮನ್ನೆಯರ್ಕಳಿಂದುಚಿತವುಡುಗೊರೆ ಮುಂತಾದುಪಚಾರಂಗಳಿಂ ಸನ್ಮಾನಂಬೆತ್ತು ಮರಳ್ದು ರಾಜಾಲಯ[3]ಮಂ ಸಾರ್ದು[3] ವರ್ತಿಸುತ್ತುಮಿರಲ್ ನಳಸಂವತ್ಸರದ ಚೈತ್ರದೊಳ್

ಕಂ|| ನಾಲಕಿಯನೇರ್ದ ವಾರ್ತೆಯ
ಕೇಳಿ ಕನಲ್ದು ನಿಜಾಮನೈತರೆ ಧುರದೊಳ್
ತೇಲಿಸಿ ಪಣಮಿತ್ತುರೆ ಪಿಡಿ
ದೂಳಿಗನುಂ ನಡೆಸಿ ಮೆರೆದನತಿಚಲಪದಮಂ ೪೯

ವ|| ಮತ್ತಮದಲ್ಲದೆ ಪಿಂತೆ ಪರಾಭವಸಂವತ್ಸರದೊಳ್

ಕಂ|| *ಶಾಹುರಾಜನ ಹುಕುಮುದಿಂ
ಮೋಹರಸಹಿತೈದಿ ತಗುಳ್ದ ಬಾಜೀರಾಯಂ
ಗಾಹನಮಂ ಪೊನ್ನಂ ನಿ
ರ್ವಾಹಕಲಿಂಗಪನ ಮುಖಮೊಳಿತ್ತು ತೆಗೆಸಿದಂ ೫೦

*ಕೀಲಕಾಬ್ದದೊಳೆ ತದ್ಭೂ
ಪಾಲಂ ಕೊಲ್ಲೂರಿಗೈದಿ ಮೂಕಾಂಬಿಕೆಯಂ
ಲೀಲೆಯೊಳರ್ಚಿಸಿ ಭೂಸುರ
ಜಾಲವನತಿತುಷ್ಟಿಬಡಿಸಿದಂ ಭೋಜನದಿಂ ೫೧

---

1 ರಾಜೇಂದ್ರಚಂದ್ರಂ (ಮ) 2 ದಿವಸದೊಳ್ ಸಕಲ ಶೋಭಾಕರಮಪ್ಪ (ಗ)
3 ಪ್ರವೇಶನಂಗೈದು ರಾಜ್ಯಪ್ರತಿಪಾಲನಂ ಗೈವುತ್ತ (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ॥ ಮೆರೆವ ಸಹಸ್ರಸುವಾಸಿನಿ
ಯರಿಗುಂ ವರಕಂಚುಕಂಗಳಂ ನಲಿದಿತ್ತಾ
*ದರಿಸಿ ಮೂಕಾಂಬಿಕೆಗೆ ತ
ದ್ಧರಣಿಪನುನ್ನತರಥೋತ್ಸವವನಾಗಿಸಿದಂ ೫೨

ನೆರೆ ರಂಗಪೂಜೆಯಂ ಭಾ
ಸುರತರವರಲಕ್ಷದೀಪಪೂಜೆಯನನುವಿಂ
ವಿರಚಿಸಿ ತನ್ಮೂಕಾಂಬೆಯ
ಚರಣಾಬ್ಜವನಧಿಕಭಕ್ತಿಯಿಂದರ್ಚಿಸಿದಂ ೫೩

ವರಮೂಕಾಂಬಿಕೆಯಡಿದಾ
ವರೆಯಂ ಬೀಳ್ಕೊಂಡು ತನ್ನೃಪಾಲಂ ಕೆಳದೀ
ಪುರಮಂ ಸಾರುತೆ ರಾಮೇ
ಶ್ವರಲಿಂಗವನಧಿಕಭಕ್ತಿಯಿಂದರ್ಚಿಸಿದಂ ೫೪

ಶ್ರೀವೀರಭದ್ರನೆಸೆವಡಿ
ದಾವರೆಯಂ ಪರಮಭಕ್ತಿಯಿಂ ಪೂಜಿಸಿ ತ
ದ್ದೇವರದೇವಂಗವನಿಪ
ದೇವಂ ತಾಂ ಕೆಂಡದರ್ಚನೆಯನರ್ಪಿಸಿದಂ ೫೫

ವ॥ ಇಂತಾ ಕೆಳದಿಯ ವೀರಭದ್ರೇಶ್ವರಂಗೆ ಕೆಂಡದರ್ಚನಾದಿಪೂಜೆಗಳಂ ಸಮರ್ಪಿಸಿ ಬೀಳ್ಕೊಂಡನಂತರಂ ವೇಣುಪುರದರಮನೆಯಂ ಸಾರ್ದು ವರ್ತಿಸುತ್ತಮಿರ[1]ಲ್ಕೆ[1] ಭುಜಬಲ ಪರಾಕ್ರಮಾತಿಶಯದೇಳ್ಗೆಯಂ ಕೇಳ್ದು ಸಂದರ್ಶನೌತ್ಸುಕ್ಯದಿಂ ನಿಜಕುಟುಂಬಸಹಿತಮಾಗೆಳ್ತಂದ ಪ್ರಸಿದ್ಧನಿಯೋಗಿಯೆನಿಪ್ಪರ್ ಕಾಪಿಕೋನಯ್ಯನಂ ಬೇಟಿಗೊಂಡು ಭೂಸ್ವಾ[2]ಸ್ಥ್ಯಮು[2]ಮನುಚಿತಮಾದುಡುಗೊರೆಗಳುಮನಿತ್ತು ಮನ್ನಿಸಿ ಬೀಳ್ಕೊಟ್ಟು ಸುಖದಿಂ ರಾಜ್ಯಂಗೆಯ್ಯುತ್ತುಮಿರ್ದನಂತುಮಲ್ಲದೆಯುಂ

ಕಂ॥ ಬಳಿಕ ಕಿರಾತಾದಿಗಳುಪ
ಟಳದಿಂದಳವಳಿದ ಗುಡಿಯ ಕೋಂಟೆಯಧೀಶಂ
ಗೊಲವಿಂ ಸಹಾಯಮುಮಂ ರಚಿ
ಸಿ ಲಸದ್ವಿಖ್ಯಾತಿಯಾಂತನಾ ನೃಪವರ್ಯಂ ೫೬

---

[1] ಲ್ಕೆ ಸಮುಸ್ತವೃತ್ತಾಂತ (ಗ) [2] ಸ್ಥ್ಯಯು (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ವ|| ಮತ್ತಮದಲ್ಲದೆ

ಕಂ|| ಅಗಣಿತಸೈನ್ಯಸಮೇತಂ
ಸೊಗಯಿಪ ಪೊನ್ನಾಳಿಗೈದಿ ರಾಜ್ಯವನಲೆವಾ
ಸುಗುಣಾಬಾಯಿಯ ದಂಡಂ
ತೆಗೆಸಿ ವಿರಾಜಿಸುತೆ ರಾಜ್ಯಮಂ ರಕ್ಷಿಸಿದಂ ೫೭

ವ|| ಮತ್ತಮದಲ್ಲದೆ

ಕಂ|| ವೇಣುಪುರವರದ ಪಶ್ಚಿಮ
ದಾಣದೊಳತಿರಮ್ಯಮಾದ ರಾಜಾಲಯಮಂ
ಜಾಣರಿ[1]ನೊ[1]ಪ್ಪಮೆನಲ್ ನಿ
ರ್ಮಾಣವನಾಗಿಸಿದನಾನೃಪಾಲವರೇಣ್ಯಂ ೫೮

ವ|| ಮತ್ತಮಾರಾಜಾಲಯಮಂ

ಕಂ|| ದಾಳಿಂಬಂ ನವರಂಗಂ
ಪೇಳಲ್ಕಂ ಬಿರಿ[2]ದುದೆಂ[2]ಬ (?) ನಾಮಾಂಕಿತದಿಂ
ಮೇಳವಿಸಿದ ಚೌಕಿಯ ಸೌ
ಧಾಳಿಗಳಂ ರಚನೆಗೆಯ್ಸಿದಂ ಸಂತಸದಿಂ ೫೯

ಇನಿತಲ್ಲದೆ ಕೆರೆ ಕಾಳ್ಪುರ
ಮಿನಿಗರ್ಬು ಸುಪುಷ್ಪವಾಟ ಕೊಳಮುರುಶಾಲೀ
ವನ ವಾಪಿ ಕೂಪ ತೋಪುಗ
ಳನುದಿನಮುಜ್ಜ್ವಲಿಸೆ ರಚನೆಗೆಯ್ಸಿದನನುವಿಂ ೬೦

ವ||_ಇಂತು ರಚನೆಗೆಯ್ಸಿ ಬಳಿಕ್ಕಾ ಸ್ಥಳಕ್ಕೆ ಚಂದ್ರಶೇಖರಪುರಮೆಂದು ನಾಮಾಂಕಿತಮಂ ಮಾಡಿಯದಕ್ಕೆ ತಕ್ಕ ಕೆಲವು ಸೀಮೆ ಭೂಮಿಗಳಂ ವಿಂಗಡಿಸಿ ಮನಬಂದ ವೇಳೆಯೊಳ್ ತಾನಲ್ಲಿಗೆ ವಿನೋದದಿಂ ವೈಹಾಳಿಯನೆಸಗಿ ವಿಹರಿಸುತ್ತುಂ ಮತ್ತಂ ವೇಣುಪುರದರಮನೆಯಂ ಕಾಜಿನ ಭವಂತಿ ಹೊಸಭವಂತಿ ಐದಂಕಣದುಪ್ಪರಿಗೆ ವಸಂತಮಹಲ್ ಚಂದ್ರಮಹಲ್ಗಳೆಂಬೀಸ್ಥಾನಗಳಂ ವಿಸ್ತಾರಂಗೆಯ್ಸಿ ಕಟ್ಟಿಸಿ ಪೊಸತಾಗಿ ಗಜತುರಗಶಾಲೆಗಳಂ

1 ದೊ (ಗ) 2 ದೆಂಬು (ಕ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಟ್ಟಿಸಿ ಮತ್ತಮಾ ವೇಣುಪುರದೊತ್ತಿನೊಳಾ ವೇಣುಪುರಕ್ಕುಪಪುರಮಾಗಿರ್ಪಂತು ಸಾಧಾರಣ ಸಂವತ್ಸರದಲ್ಲಿ ನಾಗಪಟ್ಟಣಮೆಂಬ ಪೇಟೆಯಂ ನಿರ್ಮಾಣಂಗೆಯ್ಸಿ ಶ್ರೀಮನ್ನೀಲಕಂಠೇಶ್ವರ ಸ್ವಾಮಿಯ ದೇವಸ್ಥಾನದ ರಂಗಮಂಟಪಂ ಮುಂತಾದ ಕೆಲವು ಪ್ರದೇಶಂಗಳಂ ಜೀರ್ಣೋದ್ಧಾರಮಂ ಮಾಡಿಸಿ ತಚ್ಛಿಖರಮಂ ಚಾಮೀಕರರಸ ಲಾಂಛನಲಾಂಛಿತಮಾದ ಲೋಹಪತ್ರಪಟ್ಟಿಕೆಗಳ ಕೆಲಸಗತಿಯಿಂ ರಂಜಿಪಂತು ರಚನೆಗೆಯ್ಸಿ ಮತ್ತಮದಲ್ಲದೆ ಮುತ್ತಿನ ಸತ್ತಿಗೆ ಕರಿಬೆಗರಿಯ ಪಚ್ಚೆಯ ಸುವರ್ಣದ ಸುರುಗಿದಂಡೆ ಚಿನ್ನದ ಶಿಖರ ಮುಂತಾದ ವಿಚಿತ್ರನೂತನಪದಾರ್ಥಂಗಳಂ ನಿರ್ಮಾಣಂಗೆಯ್ಸಿ ಮತ್ತಂ ಭುವನ ಗಿರಿಯ ದುರ್ಗದರಮನೆಯ ಭವಂತಿಗಳೊಳ್ ಶಾರಾಬ್ದಾರನಾಗಪ್ಪನ ಮುಖದಿಂ ಶಿಲಾಸ್ತಂಭಂಗಳಂ ನಿಲಿಸಿ ಜೀರ್ಣೋದ್ಧಾರಮಂ ಮಾಡಿಸಿ ಗಾಳಿಯುಪ್ಪರಿಗೆಯಂ ಕಟ್ಟಿಸಿ ಇಂತಾ ರಾಜಾಲಯಮಂ ದೃಢತರಮನಾಗಿಸಿ ರಾಜ್ಯಪ್ರತಿಪಾಲನಂಗೆಯ್ಯುತ್ತುಮಿರ್ದನಂತುಮಲ್ಲದೆಯುಂ

ಕಂ|| *ಪಿಂಗಳಾಬ್ದದೊಳೆ ತನ್ನೃಪ
ಪುಂಗವನುರುಭುವನಗಿರಿಯನೈದೆ ಬಳಿಕ್ಕಂ
ಶೃಂಗಪುರಕ್ಕಾಗಿಯೆ ಮೇ
ಲ್ಬಂಗಾಡಿಯ ಘಟ್ಟವಿಳಿದು ಮುಂತೈದುತ್ತುಂ ೬೧

ಸುರುಚಿರಸುಬ್ರಹ್ಮಣ್ಯಾ
ಕ್ಕಿರದಾನೃಪವರ್ಯನೈದಿ ಸುಬ್ರಹ್ಮಣ್ಯೇ
ಶ್ವರನಂ ಸದ್ಭಕ್ತಿಯೊಳಂ
ದಿರದರ್ಚಿಸಿ ತಳರ್ದು ಮಂಗಲೂರಂ ಸಾರ್ದಂ ೬೨

ಎಸೆವ ಕೊಡೆಯಾಲದಿಂದಂ
ವಸುಪುರಕ್ಕೈತಂದು ತನ್ಮಹಾಲಿಂಗೇಶಂ
ಗೊಸೆದು ಮಹಾಪೂಜೆಯ ವಿರ
ಚಿಸಿ ಬೀಳ್ಕೊಂಡಾ ಹೊಸಂಗಡಿಯು ಸಾರ್ದಿರುತಂ ೬೩

ಆ ರಾಜೇಂದ್ರಂ ಶಂಕರ
ನಾರಾಯಣಕ್ಕೈದಿ ನಿಂದು ತತ್ಸ್ವಾಮಿಯ ಪಾ
*ದಾರವಿಂದಗಳನರ್ಚಿಸಿ
ಭೂರಮಣಂ ಸ್ವೈನ್ಯವೆರಸು ಮುಂತೈದುತ್ತುಂ ೬೪

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ|| *ಸಾರಿ ಕುಂದಾಪುರವ ಬೈ
ದೂರನಭೀಕ್ಷಿಸುತೆ ಸಾರ್ದು ಗೋಕರ್ಣಕ್ಕಾ
ಧಾರಿಣಿಯಧಿಪತಿ ಭಾಗ್ಯಕು
ಬೇರಂ ರಿಪುಭಯವಿದೂರನತಿಭಕ್ತಿಯೊಳಂ ೬೫

ಪಿಂಗದೆ ಮಹಾಬಲೇಶ್ವರ
ಲಿಂಗವನರ್ಚಿಸಿ ಬಳಿಕ್ಕಮಲ್ಲಿಂ ತೆರಳ್ದು
ತ್ತುಂಗಯಶೋನಿಧಿ ಕೊಲ್ಲೂ
ರಿಂಗೈದುತೆ ಪೂಜೆಗೆಯ್ದು ಮೂಕಾಂಬಿಕೆಯಂ ೬೬

ಭಜಿಯಿಸಿ ತತ್ಪದಮಂ ಬಳಿ
ಕ ಜನಪಶಾರ್ದೂಲನೇರ್ದು ಘಟ್ಟವನಖಿಲ
ಪ್ರಜೆ[1]ಯಿಂ ಕಾಣಿಕೆ[1]ಗೊಳುತುಂ
ನಿಜಸೈನ್ಯಂವೆರಸು ಸಾಗರಕ್ಕೈತಂದಂ ೬೭

ಆನಂದಪುರಕ್ಕಾಗಿ ಮ
ಹಾನಂದದೊಳೈದುತುಂ ಮಹಾದೇವಪುರ
ಕ್ಕಾನರಪತಿ ಪೊನ್ನಾಳಿಗೆ
ತಾನೈದುತ್ತೆಸೆವ ಸೀವೊಗೆಯನುರೆ ಸಾರ್ದಂ ೬೮

ಭೂಮಿಪವರೇಣ್ಯನಾಹವ
ಭೀಮಂ ರಿಪುಗಜವಿದಾರಣೋದ್ಧತಸಿಂಹಂ
*ಸೋಮಶೇಖರನೃಪಂ ತ
ತ್ರೀಮೊ[2]ಗ್ಗೆಯೊಳ್[2]ದರ್ ಸಾಂಬಶಿವನೊಳ್ ಬೆರೆದಂ ೬೯

ಆ ಸೋಮಶೇಖರೇಂದ್ರನು
ಹೀಶಂ ತಾನಿಂತು ಸರ್ವಪೃಥ್ವೀಶ್ವರರೊಳ್
ಭಾಸುರಕೀರ್ತಿಯನಾಂತು ವಿ
ಲಾಸದಿ ವರ್ತಿಸುತೆ ರಾಜ್ಯಮಂ ಪಾಲಿಸಿದಂ ೭೦

---

1 ಗಳಿಂ ಕಾಣ್ಕೆ (ಗ) 2 ಗೆಯೊಳಗಿ (ಮ)

Sri Vidyabharathi Book Centre, Sringeri

CC-O. In Public Domain. Digitized by eGangotri

ವ॥ ಈ ಸೋಮಶೇಖರನಾಯಕ[1]ರ್[1] ಪಟ್ಟವಾದ ಶಾಲಿವಾಹನ ಶಕವರ್ಷ ೧೬೩೬ನೆಯ ಜಯ ಸಂವತ್ಸರದ ಪುಷ್ಯ ಬಹುಳ ೧೦ ಆರಭ್ಯ [2]ಸಿ[2]ದ್ಧಾರ್ಥಿ ಸಂವತ್ಸರದ [3]ವೈಶಾಖ[3] ಬಹುಳ ೩ಯಲ್ಲಿಗೆ ವರ್ಷ ೨೪ ತಿಂಗಳು ೪ದಿನ ೨೩ ಪರ್ಯಂತಂ ರಾಜ್ಯವಾಳಿ [4]ಶಿವೊಗ್ಗೆ ಮಂಡಳಿಮಠದಲ್ಲಿ ಐಕ್ಯವಾದರ್[4]

ದಶಮಾಶ್ವಾಸಂ ಸಂಪೂರ್ಣಂ

---

[1] ರು ತಮಗೆ (ಗ) [2] ಈ ಬಸಪ್ಪನಾಯಕರು ಸಿ (ಮ) [3] ಜ್ಯೇಷ್ಠ (ಮ) [4] ದರು(ಮ) ಶಿವೊಗ್ಗೆ ಮಂಡಳಿ ಮಠದಲ್ಲಿ ಐಕ್ಯವಾದರ್. ಅಲ್ಲಿಂ ಬಿದರೂರ್ಗೆ ತೆರಳ್ಚಿಸಿ ಕೊಂಡು ಬರಲ್ ಆ ಬಹುಳ ೫ ಗುರುವಾರ ಕೊಪ್ಪಲಮಠದಲ್ಲಿ ಸಮಾಧಿಯಾಯಿತು.

ವಿಶ್ವಾವಸು ಸಂವತ್ಸರದ ಜ್ಯೇಷ್ಠ ಬಹುಳ ೨ ಯಲ್ಲು ಇವರ ಅನುಜ ವೀರಭದ್ರನಾಯಕರ್ಗೆ ಕೊಪ್ಪಲ ಮಠದಲ್ಲು ಸಮಾಧಿಯಾಯಿತು.

ಈ ಸೋಮಶೇಖರನಾಯಕರ ಕಾಲದಲ್ಲು ಬದುಕುಗಳ ಮಾಡಿದವರ ವಿವರ: ನಿರ್ವಾಣಯ್ಯನವರು ಅವರ ತಮ್ಮ ಗುರುವಪ್ಪನವರು ಗರಜಿನ ಶಾಂತದೇವರು ರೋಹಿಲೆ ಸಿದ್ಧಪ್ಪ ಸುಬೇದಾರ ಗಂಗನಹಳ್ಳಿ ರೋಹಿಲೆ ಲಿಂಗಪ್ಪ ನಲ್ಲೂರ ಲಕ್ಷ್ಮೀಪತಿಯಯ್ಯ ಆ ಗೋವಿಂದಯ್ಯ ಕರಣಿಕ ಕೋಳಾಲದ ವೆಂಕಟಯ್ಯ ಗಾಜನೂರ ಲಕ್ಷ್ಮರಸಯ್ಯ ಮಾದಪ್ಪೊಡೇರು ಆತನ ತಮ್ಮ ವೆಂಕಟಪತಿಯಯ್ಯ ಪರಮೇಶ್ವರಯ್ಯ ವಸುಧಾರೆ ಲಿಂಗಪ್ಪಯ್ಯ ಹಾರೋರ ಮಲ್ಲಪ್ಪಯ್ಯ ಸಬ್ನೀಸ ಕೃಷ್ಣಪ್ಪಯ್ಯ ಬೆಳ್ಳರೆ ಚನ್ನಪ್ಪಯ್ಯ ಆರಗದ ಪರಮೇಶ್ವರಯ್ಯ ಮಹದೇವಮಠದ ದೇವಪ್ಪ ಇಕ್ಕೇರಿ ಗೋಪಾಲಯ್ಯ ಪಟ್ಟಮರಿಯಪ್ಪಯ್ಯ ರಘುನಾಥಯ್ಯ ಬಾರಕೂರ ಸೂರಪ್ಪಯ್ಯ ಗಾಜನೂರ ಬಾನಪ್ಪ ರಾಯಸದ ಗಂಗಾಧರಯ್ಯ ವಿಶ್ವೇಶ್ವರಯ್ಯ ವೆಂಕಟರಾಮಯ್ಯ ಗಗನಮಹಲ ಚಾವಡಿ ಉಪ್ಪರಿಗೆ ಜಕಪ್ಪಯ್ಯ ಮನೆವಾರ್ತೆ ಹುದಾರ ವೀರಪ್ಪ ಬೈರಯ್ಯ ಯ[illegible]ದ್ದಪ್ಪ [illegible]ಬಸವಯ್ಯ ಮುಂತಾದವರು (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

[1]ಏಕಾದಶಾ[1]ಶ್ವಾಸಂ

ವ|| ಆ ಸೋಮಶೇಖರ ನಾಯಕರ ತರುವಾ[2]ಯ[2] ಸ್ವಸ್ತಿ ಶ್ರೀ [3]ವಿಜ[3]ಯಾಭ್ಯುದಯ ಶಾಲಿವಾಹನ ಶಕ ವರ್ಷ ೧೬೬೨ನೆಯ ಸಿದ್ಧಾರ್ಥಿ ಸಂವತ್ಸರದ *ಜ್ಯೇಷ್ಠ ಬಹುಳ ೫ ಯೊಳ್ (ವೀರಭದ್ರನಾಯಕರ ಪುತ್ರರಾದ ಬಸವಪ್ಪನಾಯಕರ್ಗೆ ರಾಜಪಟ್ಟಂ)*

ಚಂ.ಮಾ|| ಪದುಳದಿ ಸೋಮಶೇಖರಧರಾಧಿಪನಿಂತಿಳೆಯಾಳ್ದನಂತರಂ
ತದನುಜವೀರಭದ್ರನೃಪನಾತ್ಮಭವಂ ರಿಪುವರ್ಗಭೈರವಂ
ಸದಮಳದಾನಧರ್ಮನಯನೀತಿಸಮಸ್ತಲಸತ್ಕಲಾವಿಶಾ
ರದ ಬಸವಾವನೀಶನರಸಾದನಿಳಾತಳಕಿಂದ್ರವೈಭವಂ ೧

ವ|| ಇಂತೆಸೆವ ಬಸ[4]ವೇಂದ್ರ[4]ನೃಪಾಲಂ ತನ್ನ ಹಿರಿಯಪ್ಪನಾದ ಸೋಮಶೇಖರ ನಾಯಕರಾಳಬರುತ್ತಿರ್ದ ರಾಜ್ಯ ರಾಷ್ಟ್ರ ದೇಶ ಕೋಶ ಪ್ರಜೆ ಪರಿವಾರ [5]ಪರಿಸ್ತರಣ ಮಂತ್ರಿ ನಿಯೋಗಿ ಸಾಮಾಜಿಕ ಸುಭಟ ಸಾಮಂತ ಬಾಂಧವ ಭೃತ್ಯಜನ ಪುರಜನ ಪರಿಜನಂಗಳಂ ಸಂರಕ್ಷಿ[5] [6]ಸುತ್ತ್ತಂ [7]ರಾ[7]ಜ್ಯಪ್ರತಿಪಾಲನಂಗೆಯ್ಯುತ್ತುಮಿ[6]ರಲೊಡನೆ ಕ್ವಚಿತ್ಕಾಲದೊಳ್

---

[1] ಹನ್ನೆರಡನೆಯಾ (ಮ) [2] ಯ ಬಸಪ್ಪನಾಯಕರು (ಮ) [3] ಜ (ಗ) [4] ವ (ಮ) [5] ಮಂತ್ರಿಸಾಮಾಜಿಕ (ಮ) [6] ಮುಂತಾದವರ ಸಂತೈಸುತ್ತಂ ಸದ್ಧರ್ಮದಿಂ ರಾಜ್ಯಂಗೈವುತ್ತಮಿ (ಮ) [7] ತಮ್ಮ ಮಾತೃ ಮಲ್ಲಮ್ಮಾಜಿಯವರ ಸಪತ್ನಿ ಚನ್ನಮ್ಮಾಜಿಯವರ್ಗೆ ಪಿರಿಯತನವನಿತ್ತು ನಡೆಸಿಕೊಳುತ್ತುಂ ನಿರ್ವಾಣಯ್ಯನವರ ಕುಮಾರ ಗುರುವಪ್ಪಂಗೆ ಪಿರಿಯಧಿಕಾರವನಿತ್ತು ಮತ್ತಂ ಮಹದೇವಪುರದ ದೇವಪ್ಪ ತಮ್ಮ ಹಿರಿಯಪ್ಪ ಸೋಮಶೇಖರನಾಯಕರ್ ಮುನ್ನಂ ಲಿಂಗಧಾರಣಮಂ ಮಾಡಿಸಿ ಪೋಷಿಸಿದ ಷಡಕ್ಷರಯ್ಯ ಪಂಚಾಕ್ಷರಯ್ಯ ಶಿವಲಿಂಗಪ್ಪ ಸೌಂದರದಾಸ ಮರಿಯಪ್ಪಸೆಟ್ಟರ ಬಸವಲಿಂಗಪ್ಪ, ಬಸವಸೆಟ್ಟರ ಮಗ ಉಳುವಪ್ಪ ಸಾತಗೆರೆ ನಿರ್ವಾಣಪ್ಪನೆಂಬಿವರಂ ಪ್ರಮುಖರಂ ಮಾಡಿಕೊಂಡು ಕರಣಿಕ ಕೊಳಾಲದ ವೆಂಕಟೇಶಯ್ಯ ಆ ಮರಿಯಪ್ಪ ರಾಯಸದ ಸೂರಯ್ಯನ ಮಗ ವೆಂಕಟನಾರಣಪ್ಪ ಸಬ್ಬನೀಸ ಕೃಷ್ಣಪ್ಪಯ್ಯ ಜಕ್ಕಪ್ಪಯ್ಯ ರಾಯಸದ ಗಂಗಾಧರಯ್ಯ ಆ ವಿಶ್ವೇಶ್ವರಯ್ಯ ಆರಗದ ಪರಮೇಶ್ವರಯ್ಯ ಬೊಮ್ಮರಸಯ್ಯನವರ ಮಗ ತಮ್ಮರಸಯ್ಯ ಗಾಜನೂರ ಭಾನಪ್ಪ ಸುಬೇದಾರ ರೋಹಿಲೆ ಲಿಂಗಪ್ಪ ರಾಮಪ್ಪ ದಳವಾಯಿ ವೀರಭದ್ರಯ್ಯ ಅಂಡಿಗೆ ಶಾಂತಪ್ಪ ಮುಂತಾದ ಮಂತ್ರಿ ಮನ್ನೆಯ ಸಾಮಾಜಿಕ ನಿಯೋಗಿ ಗುರಿಕಾರ ಜನರ್ಗೆ ತತ್ತದ್ಯೋಗ್ಯತಾನುಸಾರಮರಿತಧಿಕಾರಂಗಳನಿತ್ತು ನಡೆಸಿಕೊಳುತ್ತುಂ ಸುಖಸಂಕಥಾವಿನೋದಗೋಷ್ಠಿಗಳಿಂ ಸದ್ಧರ್ಮದಿಂ ರಾ (ಕ)

* ಈ ಭಾಗ (ಗ) ನಲ್ಲಿಲ್ಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ॥ ಮಲವಮಾತೆ ನೆನೆದ ದುರ್ಮತ
ಕೊಳಗಾದಾರಗದ ಕುಮತಿ ಪರಮೇಶ್ವರನಂ
ಚಲಿಸದೆ ತತ್ಸಹಭವ[1]ನಂ[1]
ಚಳಕದೆ ಸಿಡಿತರಿಸಿ ಶಾಸ್ತಿಯಂ ಮಾಡಿಸಿದಂ ೨

[2]ಹು[2]ಗುಡಿಯ ಭೈರಪನಂ ಬ
ಲ್ವಿಗಡರುಮಂ ಬಂಧಿಸಿಕ್ಕಿ ಮಲತಾಯಿಯುಮಂ
ತೆಗೆದಂಕೆಯೊಳಿಟ್ಟರೆ ಖತಿ
ಯೊಗೆದಾಕೆ ಗತಾಸುವಾಗಲತಿಮೂರ್ಖತೆಯಿಂ ೩

ಬಳಿಕಾ ಬಲತಾಯಿಗೆ ಕೊ
ಪ್ಪಲ ಮಠದೊಳ್ ಸಾಂಗಮೆನೆ ಸಮಾಧಿಕ್ರಿಯೆಯಂ
ತಳುವದೆ ನಿರ್ಮಿಸಿದನಾ
ಗಳೆ ತನ್ನೃಪವರ್ಯನಾಗಮೋಕ್ತಕ್ರಮದಿಂ ೪

ವ॥ ಇಂತು ನಿಷ್ಕಾರ[3]ಣಂ[3] ತನಗೆ ವಿಘಾತಿಯಂ ನೆನೆದ [4]ದುಷ್ಟ[4]ಜನರ್ಗೆ ಶಾಸ್ತಿಗೈಸಿ ರಾಜಮುದ್ರಾಧಿಕಾರಮಂ ಸ್ವಾಧೀನಂಗೈ[5]ದು[5] ಮಾತೃ ಮಲ್ಲಮ್ಮಾಜಿಯವರಂ ಸಂತಸಂ ಬಡಿಸುತ್ತುಂ ವರ್ತಿಸುತ್ತುಮಿ[6]ರ್ದು[6]

ಕಂ॥ ಆ ರಾಜಾಧೀಶಂ ಕೊ
ಲ್ಲೂರಿಂಗಂ ತೆರಳ್ದು ದೇವಿಮೂಕಾಂಬೆಯನೊ
ಲ್ದಾರಾಧಿಸಿ ಕೆಳದಿಗೆ ತೆರ
ಳ್ದಾ ರಾಮೇಶ್ವರನ ವೀರಭದ್ರೇಶ್ವರನಂ ೫

*ಭಜಿಸಿ ಸದ್ಭಕ್ತಿಯಿಂ ನೃಪ
ತಿಜನಾಗ್ರೇಸರನೆನಿಪ್ಪ ಬಸವಮಹೀಶಂ
ನಿಜಸೈನ್ಯಂವೆರಸು ತೆರ
ಳ್ದು ಜಗದ್ವಿಖ್ಯಾತವೇಣುಪುರಮಂ ಪೊಕ್ಕಂ ೬

---

1 ರಂ (ಮ) 2 ಮ (ಮ) 3 ಣದಿಂ (ಗ) 4 ಕುಮತಿ (ಮ) 5 ದನಂತರಂ (ಮ) 6 ರ್ದು ಮಾರ್ಗಶಿರ ಶುದ್ಧ ಪೂರ್ಣಿಮೆಯೊಳ್ (ಕಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ವ|| ಇಂತು ವೇಣುಪುರಮಂ ಸಾರ್ದು ವರ್ತಿಸುತ್ತಿರ್ದಾ ಮಾಘ ಬಹುಳ ತದಿಗೆಯೊಳ್ ಕೋಟಪುರದ ಸಿದ್ದಪ್ಪ ಸೆಟ್ಟರ ಪುತ್ರ ಶಿವಯ್ಯನ ಕುಮಾರಿ ಚನ್ನಮ್ಮಾಜಿ ಪಾಳ್ಯದ ಶಿವಲಿಂಗಪ್ಪನವರ ಕುಮಾರಿ ಚನ್ನವೀರಮ್ಮಾಜಿ ಎಂಬಿರ್ವರ್ ಕನ್ಯಾರತ್ನಂಗಳನತ್ಯಂತೋತ್ಸವದಿಂ ವಿವಾಹಮಾಗಿ ತದ್ಧರ್ಮಪತ್ನಿಯರ್ವೆರಸು ರಾಜ್ಯಭಾರವಿಚಾರತತ್ಪರನಾಗಿ ಶಿವಲಿಂಗಪ್ಪನವರ್ಗೆ ಸರ್ವಾಧಿಕಾರಮನಿತ್ತು ನಡೆಸಿಕೊಳು[1]ತ್ತುಂ[1]

ಚಂ. ಮಾ|| ಮದಮುಖದುಷ್ಕಿರಾತನಿಕರಾಧಿಪಚಿಂತನಕಲ್ಲಧೀಶನಾ
ಮೆದೆಕೆರೆನಾಯಕಂ ಹರಪುರಾಧಿಪನಂ ಮುರಿದೊತ್ತಿ ನಿಲ್ವೊಡಾ
ಸ್ಪದಗಳನೀಯದಂತವನ ರಾಜ್ಯವನಾಕ್ರಮಿಸುತ್ತುಮಾಜಿರಂ
ಗದೊಳಿದಿರಾಂತುಪದ್ರವಗಳಂ ರಚಿಸುತ್ತಿರೆ ಶೌರ್ಯದೇಳ್ಗೆಯಿಂ ೭

ಕಂ|| ಮೆದೆಕೆರೆನಾಯಕನುರವಣೆ
ಗಿದಿರಾಂಪೊಡಶಕ್ಯಮಾಗಿ ಹರಪುರದರಸಂ
ಸದಯಬಸವರ್ವಿಪಂಗೀ
ಹದನಂ ಬಿನ್ನೈಸಿ ಕಳುಪಿ ಮರೆವುಗಲಾಗಲ್ ೮

ವ|| ಇಂತು ಹರಪುರಾಧಿಪನೆನಿಪ ಬಸಂತರಾಯಂ ಮೆದೆಕೆರೆನಾಯಕನದಟನಾಂಪೊಡಶಕ್ಯಮಾಗಿ ನಿಮ್ಮ ಪುತ್ರವರ್ಗದ ಮನೆತನದವರೆನಿಸಿ ವರ್ತಿಸುತ್ತಿರ್ಪೆಮ್ಮ ಸಂಸ್ಥಾನಮನುದ್ಧರಿಸವೇಳ್ಕೆಂದು ಲಿಖಿತಮುಖದಿಂ ಬಿನ್ನವಿಸಿ ಕಳುಪಲ್ ಕೇಳ್ದು ಸಿದ್ದೋಜಿಯೊಡನನುಸಂಧಾನಮಂ ರಚಿಸಿ ತತ್ಸೈನ್ಯಮಂ ಬರಿಸಿ ಸುಬೇದಾರ ಲಿಂಗಪ್ಪನೊಡನೆ ಅಸಂಖ್ಯಾತಸೇನಾಸಮೂಹಮಂ ತೆರಳ್ಚಿಸಿ ಕಳುಪಿ ತನ್ಮೆದೆಕೆರೆನಾಯಕನ ರಾಜ್ಯಮಂ ನಿಪಾತನಂಗೆಯ್ಸಿದನಂತುಮಲ್ಲದೆಯುಂ

ಕಂ|| ಹೊದಿಗೆರೆಯ ಸುಕೋಟೆಯೆನವ
ನಾದಂ ಕೊಂಡೊಡನೆ ಮೆರೆವ ಮೊರವಂಜಿಯ ಬ
ಲ್ಪಾದ ಪರಿಸ್ತರಣವನೆಸೆ
ವಾ ದುಮ್ಮಿಯೆನಿಪ್ಪ ಕೋಂಟೆಯಂ ವಶಗೈದಂ ೯

ವ|| ಮತ್ತಮದಲ್ಲದೆ

---

1 ತ್ತುಂ ಸದ್ಧರ್ಮದಿಂ ರಾಜ್ಯಪರಿಪಾಲನಂ ಗೈವುತ್ತಮಿರಲಾ ಪ್ರಸ್ತಾವದೊಳ್ (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ॥ ವಿಾಟಾದ ನಂದಿಗಾವೆಯ
ಕೋಟೆಯನುರೆ ಕೊಂಡು ತತ್ಕಿರಾತನ ಫೌಜಂ
ಲೂಟಿಸಿ ಬಸವನೃಪಂ ಕ
ರ್ಣಾಟಾಧಿಪನತಿಪರಾಕ್ರಮುವನುರೆ ಮೆರೆದಂ ೧೦

ವ॥ ಇಂತು ಹೊದಿಗೆರೆ ನಂದಿಗಾವೆ ಮೊರವಂಜಿಯೆಂಬ ಕೋಂಟೆಗಳಂ ಸ್ವಾಧೀನಂಗೆಯ್ಯಲೀವರ್ತಮಾನ[1]ಮಂ[1] ಕೇಳ್ದು ಪತ್ತೆಸಿಂಗನೊಡನನುಸಂಧಾನಮುಂ ರಚಿಸಿ ರಘೋಜಿ ಭೌಸಲ್ಯಾ ಮುಂತಾದ [2]ಪಟುಪರಾಕ್ರಮಶಾಲಿಗಳಿಂ ಯುಕ್ತಮಾದಸಂಖ್ಯಾತ[2]ಸೇನಾಸಮೂಹಂವೆರಸತ್ಯಂತಗರ್ವೋದ್ರೇಕದಿಂ ದಾಳಿಯಿಡುತ್ತುಂ ತೆರಳ್ದ್ಯೆತಂದು ಸಂತೆಬೆನ್ನೂರ ಪರಿಸ್ತರಣಂ ವೇಷ್ಠಿಸಿ ತಳಿಸುರಂಗಗಳಂ ನಡೆಸುತಿ[3]ರ್ದ[3] ತನ್ಮೆದೆಕೆರೆನಾಯಕನ ಪ್ರತಾಪಾತಿಶಯಮುಂ ಮುರಿದು ಮುತ್ತಿಗೆಡೆಗೆಸಿ ಪಲಾಯನಂಗೊಳಿಸಿ ದುರ್ಗಮಂ ಪೊಗಿಸಿ ಭುಜಬಲಪರಾಕ್ರಮಾತಿಶಯಮುಂ ಮೆರೆ[4]ದನಂತುಮಲ್ಲದೆಯುಂ[4]

ಕಂ॥ [5]ವರ[5]ವೇಣುಪುರದ ಮಧ್ಯದ
ವರಬಾಳೆಯಕೊಪ್ಪದೆಡೆಯ ಪಶ್ಚಿಮದೆಸೆಯೊಳ್
ಸುರುಚಿರಮಠಮಂ ಭೂಮೀ
ಶ್ವರಮಣಿ ಬಸವಾವನೀಶ್ವರಂ ಕಟ್ಟಿಸಿದಂ ೧೧

ವ॥ ಇಂತು ಮಠಮಂ ನಿರ್ಮಾಣಂಗೆಯ್ಸಿ ಆ ಸ್ಥಳಕ್ಕೆ ಭದ್ರರಾಜಪುರಮೆಂದು ನಾಮಾಂಕಿತಂಗೆಯ್ದು ಭೂರಿಭೂಸ್ವಾಸ್ಥೆ[6]ಯಂ ಕಲ್ಪಿಸಿ ದು[6]ರ್ಮತಿ ಸಂವತ್ಸರದ ಕಾರ್ತಿಕಮಾಸದೊಳ್ ಡಂಬಳದ ಸಿದ್ಧೇಶ್ವರ ದೇವರ ಗದ್ದುಗೆ ತೋಂಟದ ಸ್ವಾಮಿಗಳ್ಗೆ ಶಿವಾರ್ಪಿತಮಾಗಿ ಧಾರೆಯನೆರೆ[7]ದು[7] ಶಾಶ್ವತಮಾದ ಧರ್ಮಕೀರ್ತಿಯಂ ಸಂಪಾದಿಸಿದನಂತುಮಲ್ಲದೆಯುಂ[8]

ಕಂ॥ [9]ಉಡುಪಿನ ಬಳಿಯೊಳ್ ಮಲಪಿನ
ಪೊಡವಿಯೊಳಂ ಪಶ್ಚಿಮಾಂಬುಧಿಯ ತೀರದೊಳು
ಗ್ಗಡಮೆನೆ ದರಿಯಾಬಾದಿನ
ಗಡಮಂ ನಿರ್ಮಾಣಗೆಯ್ಸಿದಂ ಬಸವನೃಪಂ ೧೨

---

[1] ಮಂ ಮೆದೆಕೆರೆನಾಯಕಂ (ಗ) [2] ಪ್ರಮುಖ (ಮ) [3] ರ್ಪ (ಮ) [4] ದಂ (ಮ) [5] ಉರು (ಗ) [6] ಯುಮಂ ಬಿಡಿಸಿ ಸಕಲ ಸೋಪಸ್ಕರಂಗಳಂ ಸಂಪೂರ್ಣವಾಗಿಸಿ ಬಳಿಕ್ಕ ಮಠಮಂ ಶಿವಜಂಗಮ ಧರ್ಮಾರ್ಥವಾಗಿ ದು (ಗ) [7] ದು ಶಾಸನಮಂ ಬರೆಸಿತ್ತು ಮತ್ತಮ ವರ್ಗ....ಸುಖಾಸನಾಂದೋಳಿಕಾ ಛತ್ರ ಚಾಮರ ಸ್ವೀಕೃತ ವಾದ್ಯವೃಕ್ಕಾಗಿ ವಿಭವಂಗಳನೆರೆ ದಂತು ನಿಯಾಮಕಂಗೈಸಿ (ಗ) [8] ಇಲ್ಲಿಂದ ಮುಂದೆ ೨೨ನೆಯ ಕಂದದ ವರೆಗೂ ಇರತಕ್ಕ ಭಾಗವು ಓಲೆಯ ಪುಸ್ತಕವಲ್ಲಿಲ್ಲ. ಇದನ್ನು ನೋಡಿದರೆ ಪ್ರಕ್ಷಿಪ್ತವೆಂದು ತೋರುತ್ತದೆ. [9] ರುಧಿರೋದ್ಗಾರಿ ಸಂವತ್ಸರದೊಳ್

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಪರಿಯಲ್ಲದೆ ಪಡುವಣ
ಕೂಪಾರದ ತೀರದೊಳ್ ವಿರಾಜಿಸುತಿರ್ಪಾ
ಕಾಪಿನ ಸಮೀಪದೊಳ್ ತ
ದ್ಭೂಪಂ ನೆಲೆಗೊಳಿಸಿದಂ ಮನೋಹರಗಡಮಂ ೧೩

ವ॥ [1]ಈ ಪರಿಯಲ್ಲದೆ[1]

ಕಂ॥ ಭೂನುತಕಲ್ಯಾಣಪುರ
ಸ್ಥಾನದೊಳತಿರಮ್ಯಮಾಗೆ ಬಸವಮಹೀಶಂ
ತೋನಸೆಯೆಂಬ ಸುಕೋಟೆಯ
ತಾನುರೆ ನಿರ್ಮಾಣಗೆಯ್ಸಿದಂ ಸಂತಸದಿಂ ೧೪

ವ॥ ಮತ್ತಮದಲ್ಲದೆ

ಕಂ॥ ವರಕುಂದಾಪುರದೆಡೆಯೊಳ್
ಸ್ಥಿರಮಪ್ಪಂತೆಸೆವ ಬೆಣ್ಣೆಗೆರೆಯೆನಿಪ ಪರಿ
ಸ್ಫುರಣವನತಿಶಯಮೆನಲೆಸೆ
ವರಮನೆಯಂ ರಚನೆಗೆಯ್ಸಿದಂ ಬಸವನೃಪಂ ೧೫

ವ॥ ಮತ್ತಮದಲ್ಲದೆ

ಕಂ॥ ಇಂದ್ರವಿಭವನಿಭವಿಭವನ
ರೇಂದ್ರಂ ತಾಂ ಮಂಗಲೂರ ತಾಣದೆ ಶಿವರಾ
ಜೇಂದ್ರಗಿರಿಯೆಂಬ ಗಡಮಂ
ಸಾಂದ್ರಯಶಂ ರಚನೆಗೆಯ್ಸಿದಂ ಪೊಸಬಗೆಯಿಂ ೧೬

ವ॥ ಮತ್ತಮದಲ್ಲದಾ ಬಸವನರೇಂದ್ರಂ ಪರಶುರಾಮಕ್ಷೇತ್ರದೊಳೆಸೆವ ಸಿದ್ಧಾಪುರದ ಪೇಟೆಯ ಸಮೀಪದೊಳೊಪ್ಪುವ ಸ್ಥಳದೊಳ್....... ಆ ಸ್ಥಳಕ್ಕೆ ಮಂತ್ರರಾಜಪುರಮೆಂದು ನಾಮಾಂಕಿತಮಂ ಮಾಡಿ ಷಡಕ್ಷರಯ್ಯನ ಮುಖದಿನಾಸ್ಥಳದೊಳತ್ಯದ್ಭುತಮಾದ ಮಠಮಂ ಕಟ್ಟಿಸಿ ವಿಶೇಷ ಭೂಸ್ವಾಸ್ಥ್ಯಮಂ ಬಿಡಿಸಿ ಶಿವಜಂಗಮಧರ್ಮಾರ್ಥಮಾಗಿ ಆ ಮಠಮಂ ಗುರುನಂಜುಂಡಸ್ವಾಮಿಗಳ್ಗೆ ಧಾರೆಯನೆರೆದು ಶಿವಾರ್ಪಿತಮಾಗೆ ಸ್ಥಿರಶಾಸನಮಂ ಬರೆಸಿತ್ತು ಸದ್ಧರ್ಮಕೀರ್ತಿಯಂ ಸಂಪಾದಿಸಿದನಂತುಮಲ್ಲದೆಯುಂ

1 ಮತ್ತಮದಲ್ಲದೆ (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ॥ ಆ ಮಂತ್ರರಾಜಪುರದೊಳ್
ಶ್ರೀಮತ್ಸಿದ್ಧೇಶ್ವರಂಗೆ ಪ್ರತಿವರ್ಷದೊಳು
ದ್ದಾಮರಥೋತ್ಸವವಿಭವಂ
ನೇಮದೆ ನಡೆವಂತೆ ಕಟ್ಟಳೆಯನಾಗಿಸಿದಂ ೧೭

ವ॥ ಮತ್ತ[1]ಮಂತ[1]ಲ್ಲದೆ

ಕಂ॥ *ಮಿರುಗುವಾನಂದಪುರದೊಳ್
ಮುರಿಗೆಯ ದೇವರ್ಗೆ ವರರಥೋತ್ಸವಮಂ ವ
ತ್ಸರವತ್ಸರದೊಳ್ ನಡೆಸುವ
ಪರಿಯನೊಡರ್ಚಿಸಿದನಿಂತು ಬಸವಮಹೀಶಂ ೧೮

ವ॥ ಮತ್ತಮಂ[2]ತ[2]ಲ್ಲದೆ

ಕಂ॥ ಡಂಬಳದೊಳ್ ಸಿದ್ಧೇಶ್ವರ
ಗಿಂಬಾದಭಿನವರಥೋತ್ಸವಂ ಪ್ರತಿವರ್ಷಂ
ತಾಂ ಬಿಡದೆ ನಡೆವ ಪದ್ಧತಿ
ಯಂ ಬಸವನರೇಂದ್ರನಾಜ್ಞೆಯಿಂ ವಿರಚಿಸಿದಂ ೧೯

ವ॥ ಮತ್ತಮಂ[2]ತ[2]ಲ್ಲದೆ

ಕಂ॥ ಪೊಸತೆರವಿಾಪರಿ ಬಕುತಿಯೆ
ನಿಸಿ ಚಂಪಾಷಷ್ಠಿಯಲ್ಲಿ ಸುಬ್ರಹ್ಮಣ್ಯಂ
ಗೆಸೆವ ತದುತ್ಸವಮಂ ನಡೆ
ಯಿಸಿದಂ ಪ್ರತಿವರ್ಷಗಳೊಳೆ ತಪ್ಪದ ತೆರದಿಂ ೨೦

ವ॥ ಮತ್ತಮದಲ್ಲದೆ

ಕಂ॥ ನೆರೆ ಷಣ್ಣವತಿಸಹಸ್ರೋ
ತ್ತರಲಕ್ಷಸುಜಂಗಮುಕ್ಕಭೀಷ್ಟಪದಾರ್ಥೋ
ತ್ಕರಗಳನೊದವಿಸಿ ನೀಡಿಸಿ
ಸಿರಿದೆನೆ ಸಂತುಷ್ಟಿವಡಿಸಿದಂ ಬಸವನೃಪಂ ೨೧

---

[1] ಮದ (ಗ) [2] ತುವು (ಗ)

* ಪ್ರಜೋತ್ಪತ್ಯದಾರಂಭಂ (ಕ)

Sri Vidyabharathi Book Centre, Sringeri

CC-O. In Public Domain. Digitized by eGangotri

ವ|| ಇಂತು ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮಮೂರ್ತಿಗಳ್ಗೆ ನಾನಾವಿಧ ಭಕ್ಷ್ಯ ಭೋಜ್ಯ ರಸಾಯನ ಫಲಂಗಳ್ ಮುಂತಾದ ಇಚ್ಛಾಪದಾರ್ಥಂಗಳಂ ನೀಡಿಸಿ ಸಂತುಷ್ಟಿವಡಿಸಿಯವರ್ಗೆ ನಾನಾವಿಧ ವಿಚಿತ್ರತರ ವಸ್ತ್ರ ಕಂಬಳಿ ಕಂಥೆ ಶಿವಧಾರ ವಿಭೂತಿಯಾಧಾರ ಭಸ್ಮ ರುದ್ರಾಕ್ಷಿ ಆಗಮ ಶಿವಶಾಸ್ತ್ರ ಲಿಖಿತಪುಸ್ತಕ ಪಾವಡ ಛತ್ರ ಪಾದುಕೆ ಹಸ್ತಾಧಾರ ದಂಡ ಮುಂತಾದ ಇಚ್ಛಾಪದಾರ್ಥಂಗಳಂ ಕೊಡಿಸಿ ಪೇಟೆಯ[1]ಲ್ಲಿ[1] ಆರಾಧನಪೂರ್ವಕಂ ಮಹೋತ್ಸವಮೆರೆವಣಿಗೆಗಳಂ ಮಾಡಿಸಿ ಶಾಶ್ವತಧರ್ಮಕೀರ್ತಿಗಳಂ ಸಂಪಾದಿಸಿ ರಾಜ್ಯಂಗೆಯ್ಯುತಿರ್ದ ಬಸವನರೇಂದ್ರನೊಂದವಸರದೊಳ್

ಕಂ|| ಬಿಂಕದೆ ಸೈನ್ಯಸಮೇತಂ
ವೆಂಕಟರಾಯಂ ದಲೈದಿ ರಾಜ್ಯವನಲೆಯು
ತ್ತುಂಕದೊಳಿದಿರ್ಜೆ ಗಡಿಯೊಳ್
ತೇಂಕಿಸೆಯೊಡವಡಿಸಿ ಸೀಮೆಯಂ ದಾಂಟಿಸಿದಂ ೨೨

ವ|| ಇಂತು ದಾಳಿವರಿಯುತ್ತೈದಿ ಸುರಭಿಪುರಮಂ ಸೂರೆಗೊಂಡು ಕುಂಬಸೆಪ್ರಾಂತದೊಳಿಳಿದು ಪರಮೋಪದ್ರವಮಂ ರಚಿಸುತಿರ್ದಾರೆಯರ ವಜೀರ ವೆಂಕಟರಾಯನಂ ಪಿಂದೆಗೆಸಿ ರಾಜ್ಯಂಗೆಯ್ಯುತ್ತಿರಲತ್ತಂ ರಕ್ತಾಕ್ಷಿ ಸಂವತ್ಸರದ ಪುಷ್ಯಮಾಸದೊಳ್

ಕಂ|| ತಪ್ಪದೆ [2]ಶಾಹುವ[2] ನೇಮದೊ
ಳೊಪ್ಪುವ ಸಾಗರದೊಳಿಳಿದ ಬಾಪೂರಾಯನೆ
ನಿಪ್ಪನ ನಯಭಯದಿಂದಂ
ತಪ್ಪಿಸಿ [3]ಗಡಿಯಿಂದೆ[3] ರಾಜ್ಯಮಂ ಪಾಲಿಸಿದಂ ೨೩

ವ|| ಇಂತೈದಿ ರಾಜ್ಯಮಂ ಬಾಧಿಸುತಿರ್ದ ಬಾಪೂರಾಯನಂ ತೊಲಗಿಸಿ ರಾಜ್ಯವನಾಳುತ್ತುಮಿರಲೊಡನೆ ಪ್ರಭವಸಂವತ್ಸರದ ಚೈತ್ರಮಾಸದೊಳೈತಂದು

ಕಂ|| ನಾನಾಜಿಯನುಜನಗಣಿತ
ಸೇನಾಢ್ಯಂ ದಾಳಿಯಿಡೆ ಸದಾಶಿವರಾಯಂ
ತಾನವನಂ ಸಂಗರಸಂ
ಧಾನದೆ ಪಿಂದೆಗೆಸಿ ರಾಜ್ಯಮಂ ರಕ್ಷಿಸಿದಂ ೨೪

---

[1] ಲ್ಲು ಆವರ್ಗೆ (ಗ) [2] ಶಾಹುರಾಜನ (ಕ) [3] ಬರಿಗಿ ನರಶಿಂಗರಾವುಮಂ ತೆರಳ್ಚಿ (ಕ)

Sri Vidyabharathi Book Centre, Sringeri

CC-O. In Public Domain. Digitized by eGangotri

ವ॥ ಇಂತು ರಾಜ್ಯವನಲೆಯುತಿರ್ದಾರೆಯರ ವಜೀರ ಸದಾಶಿವರಾಯನಂ ಪಿಂದೆಗೆಸಲೊಡನಾಂಗಿರಸ ಸಂವತ್ಸರದ ಫಾಲ್ಗುಣಮಾಸದೊಳಂ ಮಗುಳ್ದು ಭಾವ ಸಂವತ್ಸರದ ಚೈತ್ರಮಾಸದೊಳಂ ಪೊಳೆಯ ಪೊನ್ನಾಳಿಯ ಪ್ರಾಂತಕ್ಕೈತಂದು ನಿಂದು

ಕಂ॥ ನಾನಾರಾಯನೆರಳ್ಪೊಳ್
ತಾನ್ನೈತಂದಿಳಿದು ದಾಳಿಯಿಡುತಿರಲಾಗಳ್
[1]ನಾನಾನಯಭಯ ಧನಸಂ
ಧಾನದೆ ಪಿಂದೆಗೆಸಿ[1] ರಾಷ್ಟ್ರಮಂ ರಕ್ಷಿಸಿದಂ ೨೫

ವ॥ ಇಂತಡಿಗಡಿಗೆಳ್ತಂದು ರಾಷ್ಟ್ರಮಂ ಬಾಧಿಸುತಿರ್ದಾರೆಯರ ವಜೀರರಂ ಪಿಂದೆಗೆಸಿ ರಾಜ್ಯವಾಳುತಿರ್ದ ಬಸವನಾಯಕಂ [2]ಸಿದ್ಧಾರ್ಥಿ ರಕ್ತಾಕ್ಷಿ ಪ್ರಭವ ವಿಭವ ಶುಕ್ಲ ಪ್ರಮೋದೂತ ಪ್ರಜೋತ್ಪತ್ತಿ ಸಂವತ್ಸರಂಗಳೊಳ್ ಸೈನ್ಯಸಮೇತಂ ವೇಣುಪುರದಿಂ ತೆರಳ್ದು ಕೊಲ್ಲೂರ್ ಕೋಟೀಶ್ವರ ವಸುಪುರ ಶಂಕರನಾರಾಯಣ ಕಮಲಶಿಲೆ ಕೆಳದಿ ಮುಂತಾದ ಪುಣ್ಯಕ್ಷೇತ್ರಸ್ಥಳಂಗಳನೈದಿ ತತ್ತದ್ದೇವತಾದರ್ಶನಂಗೈದು ಮಹಾಪೂಜೆ ಮುಂತಾದುಪಚಾರಂಗಳನೊಡರ್ಚಿಸುತ್ತುಮಲ್ಲಿಂ ತೆರಳ್ದೈತಂದು ಮಂತ್ರರಾಜಪುರದ ರಥೋತ್ಸವಮನೀಕ್ಷಿಸುತ್ತುಮಲ್ಲಿಂ ಮುಂತಳರ್ದು ಕೊಡೆಯಾಲ ಮಂಗಲೂರ್ ಕುಂದಾಪುರ ಕಾರಕಳ ಮುಂತಾದ ಸ್ಥಳಂಗಳನವಲೋಕನಂಗೆಯ್ಯುತ್ತುಂ ಸೈಹಾಳಿಯನೆಸಗುತ್ತೆ ಮರಳ್ದು ವೇಣುಪುರದರಮನೆಯಂ ಸಾರ್ದು ಸಂತತಂ ಶಿವಪೂಜೆ ಸತ್ಪುರಾಣಶ್ರವಣ ಸುಖಸಂಕಥಾವಿನೋದಗೋಷ್ಠಿಗಳಿಂ ಗುರುಲಿಂಗಜಂಗಮಸೇವಾತತ್ಪರನೆನಿಸಿ ವರ್ತಿಸುತ್ತುಮಿರಲ್ ತರಿಕೆರೆಯವರ್ ಮಾಯಾವಿಗಳೊಡನನುಸಂಧಾನಮಂ ರಚಿಸುತಿರ್ಪರೆಂಬ ವರ್ತಮಾನಮಂ ಕೇಳ್ದು ಸಬ್ಬನೀಸ ಕೃಷ್ಣಪ್ಪಯ್ಯನೊಡನೆ ಸೇನಾಸಮೂಹಮಂ ತೆರಳ್ಚಿಸಿ ಕಳುಹಿ

ಕಂ॥ ಮೆರೆವ ತರೀಕೆರೆಯಧಿಪನ
ಗರುವಿಕೆಯಂ ಮುರಿದು ಶೋಭಿಸುಬ್ರಾಣಿಯ ಭಾ
ಸುರರಂಗಯ್ಯನ ಹನುಮನ
ನರದುರ್ಗತ್ರಯವನಾನೃಪಂ ವಶಗೈದಂ ೨೬

ವ॥ ಇಂತು ಕೋಟಾತ್ರಯಂಗಳಂ ಸ್ವಾಧೀನಂಗೈಯಲ್ ಮದವಳಿದು ವೇಣುಪುರವರಕ್ಕೆಳ್ತಂದು ಸಂದರ್ಶನಂಗೆಯ್ದು ತನ್ನ ಸಂಸ್ಥಾನದ ಅರಭಾರಸುಖದುಃಖಾದಿವಿವರಣಂಗಳನುಸಿರ್ದು ದೈನ್ಯೋಕ್ತಿಗಳಂ ನುಡಿದಾ ತರಿಕೆರೆಯ ನಾಯಕನಂ ನಯೋಕ್ತಿಯಿಂ ಮನ್ನಿಸಿ ಗಜಾಶ್ವವಸ್ತ್ರಾಭರಣಾದಿಗಳನಿತ್ತು ಸನ್ಮಾನಿಸಿ ಕಳುಪಿ ಸುಖದಿಂ ರಾಜ್ಯಂಗೆಯ್ಯುತ್ತುಮಿರ್ದನಂತುಮಲ್ಲದೆಯುಂ

---

[1] ರಾಯಸದ ವಿಶ್ವೇಶ್ವರಯ್ಯ ನರಶಿಂಗರಾಯರಂ ಕಳುಹಿ (ಕ) [2] ಇಲ್ಲಿಂದ ೬೪ನೆಯ ಕಂದದವರೆಗೂ ಇರತಕ್ಕ ಭಾಗವು ಓಲೆಯ ಪುಸ್ತಕದಲ್ಲಿಲ್ಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ|| ಹರಪುರದರಸನುಮಂ ಭಾ
ಸುರತರಸವಣೂರ ಪತಿ ನಬಾಬನ ಫೌಜಂ
ಬರಿಸಿ ಬಹುಸೈನ್ಯಸಹಿತಂ
ತೆರಳಿಸಿ ವರಸಬ್ಬುನೀಸಕೃಷ್ಣಪ್ಪನುಮಂ ೨೭

ಚಂ. ಮಾ|| ಪದುಳಿಸಿ ಮಾಯಕೊಂಡದೆಡೆಯೊಳ್ ಬಹುಸೈನ್ಯಸಮೇತನಾಗುತು
ನ್ಮದದಿನಿದಿರ್ಚಿ ಮಾರ್ಮಲೆತು[1] ....ವೊ[1]ಳಪೊಕ್ಕು ಪೊರ್ದಿದಾ
ಮೆದೆಕೆರೆನಾಯಕಾಖ್ಯನೃಪನಂ ರಣದೊಳ್ ವಶಗೆಯ್ದು ಶಿಕ್ಷೆಗೆ
ಯ್ಸಿದ[2]ನಮುರಾಳಿ ಮೆಚ್ಚಲದಟಂ ಬಸವೇಂದ್ರಭೂಮಿಪಂ ೨೮

ವ|| ಇಂತು ಮೆದೆಕೆರೆನಾಯಕನಂ ಜಯಿಸಿದ ಮಹೋತ್ಸವಕಾಲದೊಳ್ ನಿಜಸೈನ್ಯಸಮೇತನಾಗುತ್ತುಮೆಳ್ತಂದು ಸಂದರ್ಶನಂಗೆಯ್ದ ಹರಪುರದರಸನಂ [3]ಸ[3]ನ್ಮಾನಿಸಿ ಗಜಾಶ್ವವಸ್ತ್ರಾಭರಣಾದಿಗಳನಿತ್ತು ಬಹಳ ಸಂತೋಷಂಬಡಿಸಿ ಕಳುಪಿ ರಾಜ್ಯಂಗೆಯ್ಯುತ್ತುಮಿರಲೊಂದವಸರದೊಳ್

ಕಂ|| ಮೆದೆಕೆರೆನಾಯಕನ ಸುತಂ
ಮದಮುಖಕಸ್ತೂರಿರಂಗನಾಯಕನೈತಂ
ದಿದಿ[4]ರ್ಚಿ[4]ಸಿ ಸಂತೆಯಬೆನ್ನೂ
ರದುಭುತಮಾಗಿರ್ಪ ಕೋಂಟೆಯಂ ವೇಢೈಸಲ್ ೨೯

ಕದನದೆ ಬಹಿರಾಯತಮೋ
ಹಿದಖಾನವಜೀರನದಟನುರೆ ಮುರಿದೊಡನಾ
ಮೆದೆಕೆರೆನಾಯಕಸುತನಂ
[5]ಸದೆದೋಡಿಸಿ ಜಯವನಾಂತನಾ ಬಸವನೃಪಂ ೩೦

ವ|| ಮತ್ತಮದಲ್ಲದೊಂದವಸರದೊಳ್ ಸಂದರ್ಶನಾಪೇಕ್ಷೆಯಿಂ ನಿಜಸೈನ್ಯಸಮೇತನಾಗೈತಂದು ಬೇಟಿಗೊಂಡು ತಮ್ಮ ಸಂಸ್ಥಾನದ ಸುಖದುಃಖಾದಿಗಳ ವಿವರಣಮನುಸಿರ್ದ ರಾಯದುರ್ಗದರಸನ ದೈನ್ಯೋಕ್ತಿಗಳಂ ಲಾಲಿಸಿ ಆವುದೊಂದು ಕಜ್ಜಕಮಾವಿರ್ಪೆವೆಂದು ಧೈರ್ಯಮಂ ಪೇಳ್ದು ದಿಲಾಸನಿತ್ತು ಚಿತಾಭರಣಾಂಬರಾದಿಗಳಿಂ ಪಿರಿದು ಸನ್ಮಾನಿಸಿ ಬೀಳ್ಕೊಟ್ಟನಂತುಮಲ್ಲದೆಯುಂ

---

[1] ಗೊಲೆವಿಳ್ದೊ (ಗ) [2] ವಿಭವ ಸಂವತ್ಸರದ ಫಾಲ್ಗುಣಮಾಸದೊಳ್ [3] ಪಿಂದು ಸ (ಗ) [4] ರಿ (ಮ) [5] ಶುಕ್ಲ ಸಂವತ್ಸರದ ಜ್ಯೇಷ್ಠ ಮಾಸದೊಳ್

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ॥ ಅಳವಿಯೊಳಿದಿರ್ಚಿದರಿಗಳ
ತಲೆಗಳುಮಂ ಕೇಣಿಗೊಂಡು ರಾರಾಜಿಪ ಗು
ತ್ತ್ರಳದಧಿನಾಥನ[1]............
ಹೊಳೆಯ ಪರಿಸ್ತರಣಮಂ ಕರಂ ವಶಗೈದಂ ೩೧

ವ॥ ಮತ್ತಮದಲ್ಲದೊಂದವಸರದೊಳ್ ನಾಯಿಮಾರರ್ಕಳ್ ಮಾರ್ಮಲೆತು

ಕಂ॥ ವರಚಂದ್ರಗಿರಿಯ ಸುಪರಿ
ಸ್ತರಣವನಾಕ್ರಮಿಸಿರಲ್ಕೆ ಸೈನ್ಯಸಮೇತಂ
ಧುರವಿಜಯನನಿಕ್ಕೇರಿಯ
ಮರಿಯಪನಂ ಕಳುಹಿ [2]ಮುಗುಳ್ದದಂ ವಶಗೆಯ್ದಂ ೩೨

ವ॥ ಇಂತು ನಾಯಿಮಾರರಾಕ್ರಮಿಸಿದ ಚಂದ್ರಗಿರಿಯ ಕೋಂಟೆಯುಂ ವಶಗೆಯ್ದು ಸುಖದಿರುತ್ತುಂ

ಕಂ॥ ಪನ್ನಿರ್ಛಾಸಿರಸಂಖ್ಯೆಯ
ಪೊನ್ನುಗಳುಮನಿತ್ತು ಪದಕಕೊಪ್ಪುವ ಧರೆಗ
ತ್ಯುನ್ನತವಾಗಿಹ ಪಚ್ಚೆಯ
ರನ್ನವನಾ ಬಸವನೃಪತಿ ಸಂಪಾದಿಸಿದಂ ೩೩

ವ॥ ಮತ್ತಮೊಂದವಸರದೊಳ್

ಕಂ॥ ವರಕರಿಯ ಮೇಲೆ ಮದುವೆಯ
ಮೆರೆವಣಿಗೆಯ ಮಾಡೆ ಜನರಿಗಪ್ಪಣೆಯಂ ತಾ
ನಿರದಿತ್ತ ಬಿಳಿಗಿಯರಸಗೆ
ಹರಮತಚಪಶೀಲವಂತನೆನಿಪಪ್ಪಣನಿಂ ೩೪

*ದೊರೆತನಂ ನಡೆಯದೊಲ್ವಿ
ಡ್ದುರಮಡಸಿಸೆ ತಾನೆ ಬಂದು ಬಿಳಿಗಿಯ ಭೂಪಂ
ನೆರೆ ಬೇಟಗೊಂಡು ದೈನ್ಯದೊ
ಳೊರೆಯಲ್ಕಪ್ಪಣನ ಮುಖದೆ ಬಂದಾದೆಸೆಯಂ ೩೫

---

1 ಪ್ರಜೋತ್ಪತ್ತಿಸಂವತ್ಸರದೊಳ್ (ಗ) 2 ಶ್ರೀಮುಖಸಂವತ್ಸರದೊಳ್

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ॥ ಲಾಲಿಸಿಯಪ್ಪಣನುಸುರಿದ
ಶೀಲಂ ನಡೆವಂತು ಮಾಡಿ ತತ್ಪ್ರತಿಷ್ಠೆಯುಮಂ
ತೇಲಿಸಿಯವರಂ ಮನ್ನಿಸಿ
ಲೀಲೆಯೊಳಂ ಬಸವನೃಪವರಂ ಬೀಳ್ಕೊಟ್ಟಂ ೩೬

ವ॥ ಮತ್ತಮದಲ್ಲದೆ

ಕಂ॥ ಶ್ರೀಮುಖದ ಮಾಘಮಾಸದೊ
ಳಾಮಹಿಪಂ ಸಕಲಜನಹಿತಾರ್ಥಂ ಪರಮೋ
*ದ್ದಾಮಶಾಸ್ತ್ರೋಕ್ತವಿಧಿಯಿಂ
ನೇಮದೊಳಂ ಗ್ರಾಮಶಾಂತಿಯಂ ವಿರಚಿಸಿದಂ ೩೭

ವ॥ ಇಂತು ಗ್ರಾಮಶಾಂತಿಯನೊಡರ್ಚಿಸಿ ಸುಖದಿಂ ರಾಜ್ಯಂಗೆಯ್ಯುತಿರ್ದಾ ಬಸವ ನರೇಂ[1]ದ್ರಚಂದ್ರಂ[1] ತನಗೆ ಸಂತಾನಮಿಲ್ಲದುದರಿಂ ಚಿಂತಿಸಿ ಮುಂದೆ ಸಂಸ್ಥಾನಾಧಿಪತಿತ್ವ ಕರ್ಹರಂ ಕಾಣದಾಳೋಚಿಸಿ ಭಾವ ಸಂವತ್ಸರದ ಭಾದ್ರಪದ ಶುದ್ಧ ನವಮಿಯ ದಿವಸ ದೊಳ್ ನಿರ್ವಾಣಯ್ಯನವರ ಮಗ ಗುರುವಪ್ಪನವರ ಕುಮಾರನಾದ ಚ[2]ನ್ನ[2]ಪ್ಪನವರಂ [3]ಸರ್ವಸಂಭ್ರಮದಿಂ ಪಲ್ಲಕ್ಕಿಯಮೇಲರಮನೆಗೆ ಬಿಜಯಂಗೆಯ್ಸಿ ತಂದು ಮನೆದೇವರ ಸನ್ನಿಧಿಯೊಳ್ ಆ ಕುಮಾರನಂ ತಮ್ಮ ಪತ್ನಿ[3] ವೀರಮ್ಮಾಜಿಯವರ ಮಡಿಲೊಳಿಡಿಸಿ ಗೃಹೀತಪುತ್ರನಂ ಮಾಡಿಕೊಂ[4]ಡಾ ಚನ್ನಪ್ಪನವರ್ಗೆ[4] ಚನ್ನಬಸವಪ್ಪನಾಯಕನೆಂ[5]ದು ನಾಮಕರಣಂ ರಚಿಸಿ ಓದು ಸಾಧನೆ ಮುಂತಾದ[5] ರಾಜೋಪಯುಕ್ತಮಾದ ವಿದ್ಯಾಭ್ಯಾಸಂ ಗಳನೊಡರ್ಚಿ[6]ಸುತ್ತಾ ಕುಮಾರನಂ[6] ಪೋಷಿಸಿ ಸಂತಸವಡುತ್ತುಂ

ಕಂ॥ ಇಂತಾ ಬಸವನೃಪಾಲಂ
ಸಂತತಮುರ್ಜಿತಲಕಾಲನತಿಶುಭಶೀಲಂ
ಸಂತಸಪಡೆ ಸುಜನರೊಡಬಡು
ವಂತಿರೆ ಕರಮಾಳ್ದನೊಪ್ಪುವವನೀತಳಮಂ ೩೮

ವ॥ [7]ಆ ತರುವಾಯ[7] ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷ ೧೬೭೬ನೆಯ ಭಾವ ಸಂವತ್ಸರದ ಕಾರ್ತಿಕ ಶುದ್ಧ [8]೫ ರವಿವಾಸರದೊಳ್[8]

---

[1] ದ್ರಂ (ಮ) [2] ನ್ನ ಬಸವ (ಮ) [3] ತನ್ನ ಪತ್ನಿಯವರಾದ (ಮ) [4] ಡು (ಮ) [5] ಬ ಪೆಸರಿಟ್ಟು (ಮ) [6] ಸಿ (ಮ) [7] ಮತ್ತಮಾ ಸಮಾನಂತರದೊಳ್ (ಗ) [8] ೫ಯಲ್ಲಿ ಬಿಡರೂರು ಭದ್ರರಾಜಪುರದ ವಟ್ಟದೇವರ ಮಠದ ಭೂಮಿಯಲ್ಲು ಕ್ರಿಯಾಸಮಾಧಿ ಇದೇ ಶುದ್ಧ ಪಂಚಮಿ ರವಿವಾಸರದೊಳ್ (ಕ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ|| ಉನ್ನತಸದ್ಗುಣಗಣಸಂ
ಪನ್ನಂ ಬಸವೇಂದ್ರನೃಪನ ತರುವಾಯಿಯೊಳಂ
ಚನ್ನಬಸವೇಂದ್ರನವನಿಪ
ರನ್ನಂ ರಂಜಿಸುವ ರಾಜ್ಯಕಧಿಪತಿಯಾದಂ ೩೯

ವ|| ಆ ಚನ್ನಬಸವಪ್ಪನಾಯಕನೃಪಾಲಂ ಮಾತೃ ಚನ್ನವೀರಮ್ಮಾಜಿಯವರ್ ನಿರೂಪಿಸಿದ ಬುದ್ಧಿಮಾ[1]ರ್ಗಂಬಿ[1]ಡಿದು ವರ್ತಿಸುತ್ತುಂ ತಂದೆ ಬಸವಪ್ಪನಾಯಕರಾಳಿ ಬರುತ್ತಿರ್ದ ರಾಜ್ಯ ರಾಷ್ಟ್ರ [2]ದೇಶ ಕೋಶ ಪ್ರಜೆ ಪರಿವಾರ ಪರಿಸ್ತರಣ ಮಂತ್ರಿ ನಿಯೋಗಿ ಸಾಮಾಜಿಕ ಸಾಮಂತ ಮಿತ್ರ[2] ಸುಭಟ ಪುರಜನ ಪರಿಜನ [3]ಸೇವಕಜನರ್ ಮುಂ[3]ತಾದ ಸಮಸ್ತಜನರಂ ಸಂರಕ್ಷಿಸುತ್ತುಂ ಸದ್ಧರ್ಮದಿಂ ರಾಜ್ಯವನಾಳುತ್ತುಮಿರಲ್ ಯುವ ಸಂವತ್ಸರದ ಫಾಲ್ಗುಣ ಮಾಸದೊಳ್ ನಾನಾರಾಯನ ಪ್ರೇರಣೆ[4]ಯಿಂ[4] ಮಾಧೋಜಿ ಪುರಂದರನೆಂಬ ವಜೀರಂ ಭೂರಿಸೈನ್ಯಸಮೇತನಾಗಿ ದಾಳಿ[5]ವರಿಯು[5]ತ್ತೈದಿ

ಕಂ|| ಇಕ್ಕೇರಿಯ ಕೋಂಟೆಗೆ ಬಂ
ದಿಕ್ಕಿರೆ ಮುತ್ತಿಗೆಯ ಸಮರಸಂಧಾನದೊಳಾ
ಇಕ್ಕೇರಿಯ ಮುತ್ತಿಗೆಯಂ
ಗಕ್ಕನೆ ತೆಗೆಸುತ್ತೆ ಸೀಮೆಯಂ ದಾಂಟಿಸಿದಂ† ೪೦

ವ|| ಇಂತು ದಾಳಿವರಿಯುತ್ತೈದಿ ರಾಜ್ಯಮಂ ಬಾಧಿಸುತಿರ್ದ ಮಾಧೋಜೀ ಪುರಂದರನಂ ಪಿಂದೆಗೆಸಿ ರಾಜ್ಯವಾಳುತಿರ್ದನಂತುಮಲ್ಲದೆಯುಂ

ಕಂ|| *ಮೆರೆವ ಡಂಬಳದ ಸಿದ್ಧೇ
ಶ್ವರಗಂ ವಿಲಸದ್ರಥೋತ್ಸವಾದ್ಯುಪಚಾರೋ
ತ್ಕರಗಳ್ ನಡೆವಂತಿರೆ ಸ
ದ್ಧರಣಿಯನುತ್ತಾರಗೆಯ್ಸಿಪಂ ತದ್ಭೂಪಂ ೪೧

ವ|| ಇಂತು ಡಂಬಳದ ಸಿದ್ಧೇಶ್ವರದೇವರ್ಗೆ ಭೂಸ್ವಾಸ್ಥೆಯನುತ್ತಾರಂಗೆಯ್ಸಿ ಸುಖದಿಂ ರಾಜ್ಯಮಾಳುತ್ತಿರಲ್ ಕ್ವಚಿತ್ಕಾಲದೊಳ್

---

[1] ಗರ್ಾನುಸಾರವಿಡಿದು (ಗ) [2] ಮಂತ್ರಿ ನಿಯೋಗಿ ಪ್ರಜೆ ಪರಿವಾರ (ಮ) [3] ಮುಂ (ಮ) [4] ಯಿಂದ (ಮ) [5] ಇಡು (ಮ)

† ಇಲ್ಲಿಂದ ಮುಂದಕ್ಕೆ "ಇರುತಿರುತುಂ" ಎಂಬ ೫೩ನೆಯ ಪದ್ಯದವರೆಗೂ ಇರತಕ್ಕ ಭಾಗವು ಓಲೆಯ ಪುಸ್ತಕದಲ್ಲಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ|| ಮಾದೇವಪುರದ ದೇವಪ
ನೈದಲ್ ಪಂಚತ್ವಮಂ ಕುವೃತ್ತಿಯಿನಾ ಸ
*ರ್ವಾಧಿಕಾರಮನೆ ನಡೆಸಿದ
ನಾದರದಿಂ ಬಸವಲಿಂಗಪಾರ್ಯನ ಮುಖದಿಂ ೪೨

ವ|| ಇಂತು ಬಸವಲಿಂಗಪಮಂತ್ರಿಯ ಮುಖದೊಳ್ ಸರ್ವಾಧಿಕಾರಮಂ ನಡೆಸುತ್ತುಂ ವರ್ತಿಸುತ್ತುಮಿರಲ್ ಕ್ವಚಿತ್ಕಾಲಂ ಪೋಗಲೊಡ[1]ನೆ[1]

ಕಂ|| ವರನಾನಾಜೀರಾಯನ
ನಿರೂಪದಿಂದಧಿಕಮಾದ ಸೈನ್ಯಸಮೂಹಂ
*ವೆರಸು ಗೋಪಾಲರಾಯಂ
ತೆರಳ್ದೈತಂದೊಡನೆ ನಿಲಲವಂ ಗಡಿಮುಖದೊಳ್ ೪೩

ವ|| ಮತ್ತಮಾಗಲ್

ಕಂ|| *ಬಸವಲಿಂಗಾಖ್ಯಮಂತ್ರಿ
ಪ್ರಸರಶಿರೋಮಣಿಯನಧಿಕಚತುರಾಗ್ರಣಿಯಂ
ಒಸೆದಖಿಲಸೈನ್ಯಮಂ ಕೂ
ಡಿಸಿ ತೆರಳಿಸಿ ಕಳುಪಿ ಚನ್ನಗಿರಿಗಡಿಯೆಡೆಯೊಳ್ ೪೪

ಇರೆ ಬೇಟಮುಖದೆ ಕಾರ್ಯದ
ನಿರುಗೆಯನರಿದುಚಿತವಚನರಚನೆಗಳಿಂದಂ
ಗುರುವಾತ್ಸಲ್ಯವ [2]ತೋರಿ[2]ಸಿ
ನೆರೆ ಸಂತಸವಡಿಸಿ ತೆಗೆಸಿ ಗಡಿಮುಖದಿಂದಂ ೪೫

ವರಮೈಸೂರ ಮುಖಕ್ಕಂ
ಮೆರೆವಾ ಗೋಪಾಲರಾಯನಂ ಬಲಸಹಿತಂ
ತೆರಳಿಸಿ ನಿಜರಾಜ್ಯವನಂ
ದುರೆ ರಕ್ಷಿಸಿ ಜಸವನಾಂತನಾ ನೃಪತಿಲಕಂ[3] ೪೬

ವ|| ಇಂತು ದಾಳಿಯಿಡುತ್ತೈದಿದ ಗೋಪಾಲರಾಯನಂ ಹೊರದೆಗೆಸಿ ರಾಜ್ಯಂಗೆಯ್ಯುತ್ತಿರಲೊಂದವಸರದೊಳ್

---

[1] ನೆ ಮತ್ತಂ (ಮ) [2] ನಾಗಿ (ಮ) [3] ಧಾತು ಸಂವತ್ಸರದ ಫಾಲ್ಗುಣದೊಳ್ (ಮ)
Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ॥ ಬೇಲೂರ ಕೃಷ್ಣಪೇಂದ್ರಂ
ಮೂಲಚ್ಯುತನಾಗಿ ಬಂದು ಕೊಡಗನ ದೆಸೆಯಿಂ
ಮೇಲಹ ಕಳಸದ ಕೋಟೆಯೊ
ಳಾಲೋಚಿಸುತಲ್ಲಿ ನಿಂದು ತನ್ನಯ ಕಥೆಯಂ ೮೭

ಚನ್ನಬಸವೇಂದ್ರನೆಡೆಗಂ
ಬಿನ್ನಪವಂ ಬರೆದು ನಿಮ್ಮ ಪೊಂದಿದ ಸುತನಾ
ದೆನ್ನಂ ಸಂಸ್ಥಾನದೊಳಂ
ಚೆನ್ನಾಗಿರೆ ನಿಲಿಸಿ ಪೊರೆಯಬೇಹುದೆನುತ್ತುಂ ೮೮

ಬಿನ್ನವಿಸಿ ಕಳುಪೆ ಲಾಲಿಸಿ
ತನ್ನಂ ಮರೆವೊಕ್ಕನಾವನಾಗಿರಲವನಂ
*ನನ್ನಿಯುದ್ಧರಿಪುದಿದು ನೃಪ
ರನ್ನರ್ಗಂ ನೀತಿಯೆಂದು ನಿಶ್ಚಯಿಸುತ್ತುಂ ೮೯

ವ॥ ಇಂತೆಂದು ನಿಶ್ಚಯಿಂಗೆಯ್ದೊಡನೆ ರಾಯಸದ ಶಂಕರನಾರಾಯಣಯ್ಯನೊಡನೆ ಭೂರಿಸೈನ್ಯಮಂ ತೆರಳ್ಚಿಸಿ ಕಳುಹಿ ಬಲಮಂ ವೇಷ್ಟೈಸಿದ ಕೊಡಗಸೈನ್ಯಮಂ ಪಿಂದೆಗೆಸಿಯಾ ಕೊಡಗರ ವೀರರಾಜನಂ ನಾನಾವಿಧನಯಭಯೋಕ್ತಿಗಳಿಂದೊಡಬಡಿಸಿ[1] ಕುಮಾರಕೃಷ್ಣಪ್ಪ ನಾಯಕನಂ ಭಲ್ಯದಿಂ ಹೊರದೆಗೆಸಿ ತಮ್ಮಂ ಮರೆವೊಕ್ಕ ಕೃಷ್ಣಪ್ಪನಾಯಕನಂ ಬೇಲೂರ ಸಂಸ್ಥಾನದ ರಾಜತ್ವಕ್ಕೆ ನಿಲಿಸಿ ಪರಮಪ್ರಖ್ಯಾತಿಯಂ ಪಡೆದನಂತುಮಲ್ಲದೆಯುಂ

---

[1] ಅರ್ಕಲಗೋಡ ಕೃಷ್ಣಪ್ಪನಾಯಕನ ಕುಮಾರ ವೆಂಕಟಾದ್ರಿನಾಯಕನ ಪತ್ನಿ ಗೊಣವೂರ ಲಿಂಗಮ್ಮನೆಂಬಾಕೆಗೆ ಗೃಹೀತಪುತ್ರನಾದ ಮೂಲಪುರುಷ ಬೇಲೂರ ವೆಂಕಟಾದ್ರಿನಾಯಕನ ಪಟ್ಟದ ಪ್ರಥಮಸ್ತ್ರೀಯಲ್ಲು ಜನಿಸಿದ ಕೃಷ್ಣಪ್ಪನಾಯಕನ ಕುಮಾರನಾದ ಕುಮಾರ ವೆಂಕಟಪ್ಪರಸರ ಪುತ್ರನಾದ ಕುಮಾರ ಕೃಷ್ಣಪ್ಪನಾಯಕನಂ ವಾರೆದೆಗೆಸಿ ಮೂಲಪುರುಷ ಬೇಲೂರ ವೆಂಕಟಾದ್ರಿನಾಯಕನ ತೃತೀಯಸ್ತ್ರೀಯಲ್ಲು ಜನಿಸಿದ ರಂಗಪ್ಪನಾಯಕನ ಕುಮಾರನಾದ ದೊಡ್ಡಯ್ಯರಸಿನ ಪುತ್ರನಾದ ಕೃಷ್ಣಪ್ಪನಾಯಕನಂ ಬೇಲೂರ ಸಂಸ್ಥಾನದ ರಾಜತ್ವಕ್ಕೆ ನಿಲಿಸಿದಂ

ಇನ್ನು ವೆಂಕಟಾದ್ರಿನಾಯಕನ ಪತ್ನಿಯಾದ ಗೊಣವೂರ ಲಿಂಗಮ್ಮಗೆ ಗೃಹೀತಪುತ್ರನಾದ ಕುಮಾರಕೃಷ್ಣಪ್ಪನೆಂದೊಡಾರೆಂಬುದಂ ವಿವರಣವಾಗಿ ಪೇಳ್ವನದೆಂತೆಂದೊಡೆ ಮೂಲಪುರುಷ ಬೇಲೂರ ವೆಂಕಟಾದ್ರಿನಾಯಕಂಗೆ ಮೂವರು ಸ್ತ್ರೀಯರ್ ಅವರೊಳ್ ಪಟ್ಟದ ಪ್ರಥಮಸ್ತ್ರೀಯಲ್ಲಿ ಜನಿಸಿದ ಪುತ್ರನ ಹೆಸರು ಕೃಷ್ಣಪ್ಪನಾಯಕ ಆ ಕೃಷ್ಣಪ್ಪನಾಯಕನ ಮಗ ಕುಮಾರ ವೆಂಕಟಪ್ಪರಸರು ಆ ಕುಮಾರ ವೆಂಕಟಪ್ಪರಸರ ಮಗನ ಹೆಸರು ಕುಮಾರಕೃಷ್ಣಪ್ಪ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ|| ಮುರಿಗೆಯ ಸಮಯದೆ ವರ್ತಿಸು
ತಿರುತಿಹ ವರಚನ್ನವೀರದೇವರನುರುಹಂ
ಗರದ ಮಠದಾಧಿಪತ್ಯಕೆ
ಚಿರಮೆನೆ ನೆಲೆಗೊಳಿಸಿ ನಿಲಿಸಿದಂ ತದ್ಭೂಪಂ ೫೦

ಆ ಕುಮಾರಕೃಷ್ಣಪ್ಪನಾಯಕನು ಕುಟುಂಬಸಮೇತನಾಗಿ ಕೊಡಗರ ವೀರರಾಜನ ಮೇಲುಪರಾಂಬರಿಕೆಯ ಮೇಲೆ ಮೈಸೂರವರ ಸೀಮೆಯೊಳಗಣ ಮೊಳವಿ ಮಟ್ಟಿಸಾಗರವೆಂಬ ಸ್ಥಳದಲ್ಲಿ ಇರುತ್ತಿರ್ದರು ಇನ್ನಾ ಬೇಲೂರು ವೆಂಕಟಾದ್ರಿನಾಯಕನ ದ್ವಿತೀಯ ಸ್ತ್ರೀಯಲ್ಲಿ ಜನಿಸಿದ ಕುಮಾರನ ಹೆಸರು ಅರ್ಕಲಗೋಡ ಕೃಷ್ಣಪ್ಪನಾಯಕ ಆ ಕೃಷ್ಣಪ್ಪನಾಯಕಗೆ ಮೂವರು ಕುಮಾರರು ಅವರಾರೆಂದೊಡೆ ಜ್ಯೇಷ್ಠಪುತ್ರ ವೆಂಕಟಾದ್ರಿನಾಯಕ ದ್ವಿತೀಯ ಪುತ್ರನ ಹೆಸರು ಗೋಪಾಲನಾಯಕ ತೃತೀಯ ಪುತ್ರನ ಹೆಸರು ಬೇಲೂರಯ್ಯ ಹಾಗೆ ಮೂವರು ಪುತ್ರರು ಆ ಮುವ್ವರು ಕುಮಾರರೊಳಗೆ ಗೋಪಾಲನಾಯಕ ಬೇಲೂರಯ್ಯನೆಂಬ ಇಬ್ಬರಿಗೂ ಸಂತಾನವಿಲ್ಲ ಈ ಇಬ್ಬರೊಳಗಾ ಗೋಪಾಲನಾಯಕನೆಂಬಾತನಂ ಹಿರಿಯಬಸವಪ್ಪನಾಯಕರ ಜ್ಯೇಷ್ಠಪುತ್ರನಾದ ಸೋಮಶೇಖರನಾಯಕರು ಬೇಲೂರ ರಾಜಾಧಿಕಾರಕ್ಕೆ ನಿಲಿಸಿ ಆತನ ಅಣ್ಣ ವೆಂಕಟಾದ್ರಿನಾಯಕನು ಉನ್ಮದಾವಸ್ಥೆಯಿಂದ ವರ್ತಿಸುತ್ತಿರಲಾಗಿ ಆತನಂ ಬಿದುರೂರಿಗೆ ಕರೆಸಿಕೊಂಡು ಇಟ್ಟುಕೊಂಡು ಈ ಪ್ರಕಾರವಿರುತ್ತುಮಿರಲಾಗಿ ಅರಕಲಗೂಡ ಚಾಡಯ್ಯನ ಅಳಿಯ ಮಲ್ಲಣ್ಣನೆಂಬಾತನು ಆ ವೆಂಕಟಾದ್ರಿನಾಯಕನ ಕಿರಿಯತಮ್ಮನಾದ ಬೇಲೂರಯ್ಯನೆಂಬಾತನಂ ಕೂಡಿಕೊಂಡು ಮೈಸೂರವರ ಬಳಿಗೆ ಹೋಗಿ ಬೇಲೂರಯ್ಯನ ಕಾಣಿಸಿಕೊಟ್ಟು ಆತನಂ ಅವರ ಬಳಿಯಲ್ಲಿ ಇಟ್ಟು ತಾನು ವೇಣುಪುರದಲ್ಲು ಇದ್ದ ವೆಂಕಟಾದ್ರಿನಾಯಕನ ಬಳಿಗೆ ಬಂದು ನಿನಗೆ ರಾಜ್ಯಪಟ್ಟಮಂ ಕಟ್ಟಿಸುತ್ತೇನೆ ನೀನು ಸುಮ್ಮನೆ ಈ ಸ್ಥಳದಲ್ಲಿ ಯಾಕೆ ಇರುತ್ತಿದ್ದೀಯೆಂದು ಕುಬೋಧೆಯಂ ಬೋಧಿಸಿ ರಾಜತ್ವದ ದುರಾಸೆಯಂ ಪುಟ್ಟಿಸಿ ಪಟ್ಟಣಕ್ಕೆ ತೆರಳಿಸಿಕೊಂಡು ಹೋಗಿ ಅರಸಂ ಕಾಣಿಸಿ ಕೆಳದಿದೊರೆಗಳು ರಾಜತ್ವಕ್ಕೆ ನಿಲಿಸಿದ ಗೋಪಾಲನಾಯಕನಂ ವಾರೆದೆಗೆಸಿ ಪಿರಿಯನಾದ ಈ ವೆಂಕಟಾದ್ರಿನಾಯಕನನ್ನೇ ರಾಜಾಧಿಕಾರಕ್ಕೆ ನಿಲಿಸಿ ಕೊಡಬೇಕೆಂದು ಬಹುವಿಧದಿಂದ ಮೈಸೂರವರನೊಡವಡಿಸಿ ಆ ಮಲ್ಲಣ್ಣನು ವೆಂಕಟಾದ್ರಿನಾಯಕನೊಡನೆ ಮೈಸೂರವರ ಫೌಜುಸುಬೇದಾರ ಕೊಣನೂರ ಸುಬ್ಬರಾಯನೆಂಬಾತನಂ ಸಹ ತೆರಳಿಸಿಗೊಂಡು ಬಂದು ಐಗೂರ ಸಮೀಪದಲ್ಲು ಕೊಡಲಿಪೇಟೆಯೆಂಬ ಸ್ಥಳದಲ್ಲು ಪಾಳ್ಯವನಿಳಿದು ಮುಸಲತಿಯಾದಲ್ಲಿ ಆ ವರ್ತಮಾನವನ್ನು ಗೋಪಾಲನಾಯಕಂ ಬಿನ್ನಹವಂ ಮಾಡಿ ಕಳುಹಲಾಗಿ ಆಗ ಗೋಪಾಲನಾಯಕಗೆ ಸಹಾಯವಾಗಿ ರಾಯಪಾಳ್ಯದ ಬೈದೂರೂರ ಚನ್ನವೀರಪ್ಪನ ಸಂಗಡ ಸೈನ್ಯಮಂ ಕೊಡಿಸಿ ತೆರಳ್ಚಿಸಿ ಕಳುಹಲಾಗಿ ಆ ಉಭಯ ಸೈನ್ಯಕ್ಕೂ ಕೈಗಲಸಿ ಮುಸಲತ್ತಿಯಲ್ಲು ಸಹಾಯಕ್ಕೆ ಬಂದ ಮೂಯಾವಿಗಳ ಸೈನ್ಯವು ಪಲಾಯನಂಬಡೆದು ಹೋಗಲಾಗಿ ಆಗಲಾ ವೆಂಕಟಾದ್ರಿನಾಯಕ ಮಲ್ಲಣ್ಣನೆಂಬವ ಸಹಾ ಮೈಸೂರವರ ಸೀಮೆಯೊಳಗಣ ಗೊರವೂರೆಂಬ ಸ್ಥಳದಲ್ಲು ಇರುತ್ತಿದ್ದಲ್ಲಿ ವೆಂಕಟಾದ್ರಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ|| ಇಂತಾ ಚನ್ನಬಸವಭೂ
ಕಾಂತಂ ಸುಯಶೋದಿಗಂತನನುಲಸ್ವಾಂತಂ
ಸಂತಸದಿಂ ರಿಪುನಿಕರಕೃ
ತಾಂತಂ ಧರ್ಮದೊಳ್ ರಾಜ್ಯಮಂ ಪಾಲಿಸಿದಂ ೫೧

ನಾಯಕನಹವಾಲಿಯಲ್ಲು ಇರುವ ಹಾಗೆ ಮಾಯಾವಿಗಳು ಬಂದು ಆನೆಯ ಹಾಕಿಕೊಟ್ಟಿದ್ದರು. ಹೀಗಿರುತ್ತಿದ್ದು ಕೆಲವು ದಿವಸದ ಮೇಲೆ ತಾವು ಹವಾಲೆಗೆ ಹಾಕಿಕೊಟ್ಟ ತಮ್ಮ ಬಗೆ ಆನೆಯನ್ನು ತಿರುಗಿ ತರಹೇಳಿ ಗುರುಮನುಷ್ಯರ ಕಳುಹಲಾಗಿ ವೆಂಕಟಾದ್ರಿನಾಯಕನು ಆ ಆನೆಯಂ ಕೊಡದೆ ಚಂಡಿಸಲಾಗಿ ಆ ವೆಂಕಟಾದ್ರಿನಾಯಕನಂ ಕೋವಿಗುಂಡಿನಲ್ಲು ಇಡಿಸಿ ಕೊಲಿಸಿ ತಮ್ಮ ಬಗೆ ಆನೆಯನ್ನು ತೆಗೆದುಕೊಂಡು ಹೋಗಲಾಗಿ ಆಗ ಮಾಯಾವಿಗಳು ಈ ವರ್ತಮಾನಮಂ ಕೇಳ್ದು ಈ ವೆಂಕಟಾದ್ರಿನಾಯಕನು ಹೇಗಾದರೂ ತಮ್ಮ ಹೊಂದಿದವನು ಈತನು ದುರ್ಬೋಧೆ ಕೇಳಿ ದುರ್ಬುದ್ಧಿಯಿಂ ಮೃತನಾದನು ಈತಗೆ ಸಂತಾನವಿಲ್ಲವೆಂಬುದಂ ತಿಳಿದು ಆ ವೆಂಕಟಾದ್ರಿ ನಾಯಕನ ಪತ್ನಿ ಗಣಗೂರ ಲಿಂಗಮ್ಮನೆಂಬಾಕೆಗೆ ಒಳಗೆ ಬರೆದ ವಿವರಪ್ರಕಾರ ಮೂಲಪುರುಷ ಬೇಲೂರ ವೆಂಕಟಾದ್ರಿನಾಯಕನ ಪಟ್ಟದ ಸ್ತ್ರೀಯಲ್ಲು ಜನಿಸಿದ ಕೃಷ್ಣಪ್ಪನಾಯ್ಕನ ಮೊಮ್ಮಗ ನಾದ ಕುಮಾರಕೃಷ್ಣಪ್ಪನಾಯಕನೆಂಬಾತನಂ ಗಣಗೂರು ಲಿಂಗಮ್ಮಗೆ ಸಾಕುಕೊಡಿಸಿ ಆಕೆಗೆ ಗೃಹೀತ ಪುತ್ರನು ಮಾಡಿಸಿ ಮೇಲುಪರಾಂಬರಿಕೆ ಮೇಲೆ ಇಟ್ಟು ಕೊಂಡು ಇದ್ದರು

ಇನ್ನು ಮೂಲಪುರುಷ ಬೇಲೂರ ವೆಂಕಟಾದ್ರಿನಾಯಕನ ತೃತೀಯಪತ್ನಿಯಲ್ಲು ಜನಿಸಿದ ಪುತ್ರನ ಹೆಸರು ರಂಗಪ್ಪನಾಯಕ ಈ ರಂಗಪ್ಪನಾಯಕನು ಉಚ್ಚಂಗಿಯೆಂಬ ಸ್ಥಳದಲ್ಲಿ ಮುಸಲತಿಯಲ್ಲು ಕೋವಿಗುಂಡಿನ ಘಾಯದಿಂದ ಮೃತನಾದನು ಆ ರಂಗಪ್ಪನಾಯಕನ ಮಕ್ಕಳ ಹೆಸರು ಹಿರಿಯಮಗನ ಹೆಸರು ದೊಡ್ಡಯ್ಯರಸು ಕಿರಿಯಮಗನ ಹೆಸರು ವೆಂಕಟಾದ್ರಿ ನಾಯಕ ಆ ರಂಗಪ್ಪನಾಯಕಗೆ ಹಾಗೆ ಇಬ್ಬರು ಮಕ್ಕಳು ಆ ಇಬ್ಬರೊಳಗೆ ವೆಂಕಟಾದ್ರಿ ನಾಯಕನೆಂಬಾತಗೆ ಸಂತಾನವಿಲ್ಲ ಈ ವೆಂಕಟಾದ್ರಿನಾಯಕನ ಅಣ್ಣನಾದ ದೊಡ್ಡಯ್ಯರಸಿನ ಮಕ್ಕಳ ಹೆಸರು ಕುಮಾರಸ್ವಾಮಿ ದೊಡ್ಡಯ್ಯರಸಿಗೆ ಹಾಗೆ ಇಬ್ಬರು ಪುತ್ರರು ಜನಿಸಿ ಬಲವಂತ ರಾಗಿ ಇರುತ್ತ ಭಳ್ಳದಲ್ಲು ಇದ್ದು ರಾಜ್ಯಂಗೆಯ್ಯುತ್ತಿರ್ಪ ಗೋಪಾಲನಾಯಕಂ ಬಹು ಮೂತ್ರವ್ಯಾಧಿಮೂಲದಿಂ ಮೃತನಾಗಲಾಗಿ ಆ ತರುವಾಯ ರಂಗಪ್ಪನಾಯಕನ ಕನಿಷ್ಠ ಪುತ್ರ ನಾದ ವೆಂಕಟಾದ್ರಿನಾಯಕನು ರಾಜ್ಯಾಧಿಕಾರಮಂ ವಹಿಸಿ ಭಳ್ಳದಲ್ಲು ಇರುತ್ತಿದ್ದಲ್ಲಿ ಆ ವೆಂಕ ಟಾದ್ರಿನಾಯಕನ ಅಣ್ಣ ದೊಡ್ಡಯ್ಯರಸಿನ ಕುಮಾರನಾದ ಕೃಷ್ಣಪ್ಪನಾಯಕನು ಧಾತು ಸಂವತ್ಸ ರದ ಭಾದ್ರಪದ ಬಹುಳದಲ್ಲು ತನ್ನ ಚಿಕ್ಕಪ್ಪನಾದ ವೆಂಕಟಾದ್ರಿನಾಯಕನ ಕಯ್ಯಾರ ಘಾತವ ಮಾಡಿ ತಾನು ತನ್ನ ತಮ್ಮ ಕೃಷ್ಣಸ್ವಾಮಿ ಸಹಾ ಭಳ್ಳದಲ್ಲು ರಾಜತ್ವಕ್ಕೆ ನಿಲಲಾಗಿ ಈ ವರ್ತ ಮಾನಮಂ ಕೊಡಗಿನ ವೀರರಾಜಂ ಕೇಳ್ದು ಈ ಕೃಷ್ಣಪ್ಪನಾಯಕಂ ಸ್ವಾಮಿದ್ರೋಹಿ ಇವನಂ ವಾರೆದೆಗೆಸಿ ಮೂಲಪುರುಷ ಬೇಲೂರ ವೆಂಕಟಾದ್ರಿನಾಯಕನ ಪಟ್ಟದ ಸ್ತ್ರೀಸಂತಾನಪರಂಪರೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ॥ ಇರುತಿರುತುಂ ತದ್ಧರಣೀ
ಶ್ವರನುರುವಿಧಿವಶದ ತಾಂ ಚತುರ್ದಶವರ್ಷಾಂ
ತರದೊಳ್ ಪರಿಣಯವಿಲ್ಲದೆ
ನೆರೆ ರೋಗಾರ್ತಿಯೊಳ್ ಶಿವನೊಳ್ಳೈಕ್ಯಂಬಡೆದಂ[1] ೫೨

ವ॥ ಈ ಚನ್ನಬಸವಪ್ಪನಾಯಕರ್ ತಮಗೆ ಪಟ್ಟವಾದ ಶಾಲಿವಾಹನ ಶಕ ವರ್ಷ ೧೬೭೭ನೆಯ ಭಾವ ಸಂವತ್ಸರದ ಕಾರ್ತಿಕ ಶುದ್ಧ ೫ಯಾರಭ್ಯ ಈಶ್ವರ ಸಂವತ್ಸರದ ಶ್ರಾವಣ ಶುದ್ಧ ೨ಯವರೆಗೆ ವರ್ಷ ೨ ತಿಂಗಳು ೮ ದಿನ ೨೭ ಪರ್ಯಂತಂ ರಾಜ್ಯವನಾಳಿ ಐಕ್ಯವಾದರ್[2]

ಏಕಾದಶಾಶ್ವಾಸಂ ಸಂಪೂರ್ಣಂ

ಯಲ್ಲಿ ಜನಿಸಿದ ಗಣಗೂರ ಲಿಂಗಮ್ಮಗೆ ಗೃಹೀತ ಪುತ್ರನಾಗಿ ಇರುತ್ತಮಿದ್ದ ಕುಮಾರಕೃಷ್ಣಪ್ಪ ನಾಯಕನಂ ರಾಜತ್ವಕ್ಕೆ ನಿಲಿಸಬೇಕೆಂದಾಳೋಚಿಸಿ ಭಲ್ಕಮಂ ವೇಷ್ಟೈಸುದೆಂದು ಸೈನ್ಯಮಂ ಕಳುಹಿ ಈ ಪ್ರಕಾರ ಪ್ರಯತ್ನಮಂ ಮಾಡುತ್ತಿರಲಾಗಿ ಆ ಕೃಷ್ಣಪ್ಪನಾಯಕನು ಭಲ್ಕದಲ್ಲಿ ನಿಸ್ತರಿಸಲಾರದೆ ಪಲಾಯನಂಬಡೆದು ಬಂದು ಕುಟುಂಬಸಹ ಕಳಸದ ಕೋಟೆಯಲ್ಲಿ ನಿಂತು ತನ್ನ ವೃತ್ತಾಂತಮಂ ಚನ್ನಬಸವಪನಾಯಕರ್ಗೆ ರಾಯಸಮಂ ಬರೆಸಿ ನಿಮ್ಮ ಹೊಂದಿದ ಪುತ್ರಮನೆ ತನದವನಾದೆನ್ನಂ ರಾಜತ್ವಕ್ಕೆ ನಿಲಿಸಬೇಕೆಂದು ಬಿನ್ನವಿಸಿ ಕಳುಪಲ್ ತಮ್ಮ ಮರೆವೊಕ್ಕವನು ಆವ ನೆಂತವನಾಗಿದೊರ್ಡಂ ಅವನ ಉದ್ಧಾರ ಮಾಡಬೇಕೆಂದು ಆಲೋಚಿಸಿ ರಾಯಸದ ಶಂಕರ ನಾರಣಯ್ಯನೊಡನೆ ಭೂರಿಸೈನ್ಯಮಂ ಕಳುಪಿ ಭಲ್ಕಮಂ ವೇಷ್ಟೈಸಿದ ಕೊಡಗುಸೈನ್ಯಮಂ ವಾರೆ ದೆಗೆಸಿ ಕೊಡಗಿನ ವೀರರಾಜನಂ ನಯಭಯೋಕ್ತಿಗಳಿಂದೊಡಂಬಡಿಸಿ ಕುಮಾರ ಕೃಷ್ಣಪ್ಪ ನಾಯ್ಕನಂ ಭಲ್ಕದಿಂ ಹೊರದೆಗೆಸಿ ತಮ್ಮಂ ಮರೆವೊಕ್ಕ ಕೃಷ್ಣಪ್ಪನಾಯ್ಕನಂ ಬೇಲೂರ ಸಂಸ್ಥಾ ನದ ರಾಜತ್ವಕ್ಕೆ ನಿಲಿಸಿ ಪರಮಪ್ರಖ್ಯಾತಿಯಂ ಪಡೆದಸಂತುಮಲ್ಲದೆಯುಂ

[1] ಇವರು ಉಭಯತ್ರರ ಕಾಲದಲ್ಲಿ ಬದುಕುಗಳ ಮಾಡಿದವರು ಕರಣಿಕ ಕೋಳಾಲದ ವೆಂಕಟೇಶಯ್ಯ ಆ ಮರಿಯಪ್ಪಯ್ಯ ಅರಗದ ಪರಮೇಶ್ವರಯ್ಯ ಸಬ್ಬನೀಸ ಕೃಷ್ಣಪ್ಪಯ್ಯ ಕೋಳಿವಾಡದ ತಮ್ಮರಸಯ್ಯ ರಾಯಸದ ಗಂಗಾಧರಯ್ಯ ವಿಶ್ವೇಶ್ವರಯ್ಯ ಹಲಸನಾಡ ನಾಗಪ್ಪ ಗಾಜನೂರ ಭಾಸಪ್ಪ ಗರಜಿನ ಶಾಂತದೇವರು ಮಹದೇವಪುರದ ದೇವಪ್ಪ ಅಂಗಡಿ ಶಿವಲಿಂಗಪ್ಪ ಸಿದ್ಧಪ್ಪ ಸೀಜಂ (?) ಶಿವಯ್ಯ ಸೌಂದರದಾಸ ಷಡಕ್ಷರಯ್ಯ ಪಂಚಾಕ್ಷರಯ್ಯ ದಳವಾಯಿ ಅಂಚೆ ಶಾಂತಪ್ಪ ಆ ವೀರಭದ್ರಯ್ಯ ರಾಯಸದ ವೆಂಕಟನಾರಣಪ್ಪ ಆ ಶೇಷಣ್ಣ ಸೋದೆ ಅನಂತಯ್ಯ ಸುಬೇದಾರ ರಾಮಪ್ಪ ಮನೆವಾರ್ತೆಹುದಾರ ವೀರಭದ್ರಯ್ಯ ಮರಿಯಪ್ಪಸೆಟ್ಟರ ಬಸವಲಿಂಗಪ್ಪ ನವರು ಮುಂತಾದವರು (ಕ)

[2] ಇವರಿಗೆ ಬಿದರೂರು ಕೊಪ್ಪಲಮಠದಲ್ಲಿ ಸಮಾಧಿಯಾಯಿತು (ಕ)

Sri Vidyabharathi Book Centre, Sringeri

CC-O. In Public Domain. Digitized by eGangotri

ದ್ವಾದಶಾಶ್ವಾಸಂ

ವ॥ ಆ ತರುವಾ[1]ಯ[1] ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷ ೧೬೮೦ನೆಯ ಈಶ್ವರ ಸಂವತ್ಸರದ ಶ್ರಾವಣ ಬಹುಳ ೫ ಗುರುವಾರದೊಳ್ ಬಸವಪ್ಪ ನಾಯಕರ ಪತ್ನಿ ಚನ್ನವೀರಮ್ಮಾಜಿಯವರ್ಗೆ ಗೃಹೀತಪುತ್ರನಾದ ಸೋಮಶೇಖರನಾಯಕರ್ಗೆ ರಾಜಪಟ್ಟಮಾದುದಾ ವಿವರಣಮೆಂತೆಂದೊಡೆ

ಕಂ॥ ಚನ್ನಬಸವೇಂದ್ರ ಭೂಪಂ
ಪನ್ನಗಭೂಷಣನೊಳೈಕ್ಯಮಾಗಲ್ಕೊಡನಾ
*ಚನ್ನವೀರಾಂಬೆ ಸಂಸ್ಥಾ
ನನ್ನಡೆವೊಡೆ ಮುಂತೆ ಮಾರ್ಗಮಂ ಕಾಣದಣಂ ೧

ಪಿರಿದುಂ ಚಿಂತಿಸಿ ಬಳಿಕೊಂ
ದುರುಪಥಮಂ ಕಂಡು ತಮ್ಮ ಸೋದರಮಾವಂ
ಗುರೆ ಪುತ್ರರ್ ನಾಲ್ವರಿರ್ಪರ್
ಪರಿಕಿಪೊಡಾ ನಾಲ್ವರೊಳ್ ಕನಿಷ್ಠಾತ್ಮಜನಂ ೨

ಸುಲಭದೆ ಗೃಹೀತಪುತ್ರನ
ನೊಲವಿಂದಂ ಮಾಡಿಕೊಂಡು ಸಂಸ್ಥಾನಕ್ಕಂ
ನಿಲಿಪುದೆ ಸುಮಂತ್ರಮೆಂದಾ
ಲಲನಾಮಣಿ ತನ್ನ ಮನದೆ ನಿಶ್ಚಯಿಸುತ್ತುಂ ೩

ವರಬಸವಲಿಂಗಪಾಗ್ರೇ
ಸರಸಿದ್ದಪನಾಯಕಾರ್ಯಶಿವಲಿಂಗಪಮು
ಖ್ಯರೊಳಿದನಾಳೋಚಿಸಿ ಸ
ರ್ವರ ಸಮ್ಮತದಿಂದೆ ತಹುದ ನಿಶ್ಚಯಗೈದಳ್ ೪

ವ॥ ಇಂತು ನಿಶ್ಚಯಂಗೈದನಂತರಮಾ ಚನ್ನವೀರಮ್ಮಾ[2]ಜಿ[2] ಈಶ್ವರ ಸಂವತ್ಸರದ ಶ್ರಾವಣ ಬಹುಳ ಪಂಚಮಿ ಗುರುವಾ[3]ರ[3]ದೊಳ್ ತಮ್ಮ ಸೋದರಮಾವನಾದ ಬಂಕಾಪುರದ

[1] ಯ ಸೋಮಶೇಖರನಾಯಕ (ಮ) [2] ಜಿಯವರು (ಗಮ) [3] ಸರ (ಮ)

Sri Vidyabharathi Book Centre, Sringeri

CC-O. In Public Domain. Digitized by eGangotri

ಪಟ್ಟಣಸೆಟ್ಟಿಚನ್ನವೀರಪ್ಪನವರ ಕನಿಷ್ಠಪುತ್ರನಂ [1]ಸರ್ವಸಂಭ್ರಮದೊಳರಮನೆಯ ದೇವರ ಭವಂತಿಗೆ ಬಿಜಯಂಗೈಸಿ ತಂದ[1]ಶೇಷಗುರಿಕಾರರಂ ಮುಂದಿಟ್ಟು ಕುಮಾರ[2]ನಂ ಶಾಸ್ತ್ರೋಕ್ತ ಪ್ರಕಾರದಿಂ ತನಗೆ ಗೃಹೀತಪುತ್ರನಂ ಮಾಡಿಕೊಂಡಾ ಕುಮಾರಂಗಂ[2] ಸೋಮಶೇಖರ ನಾಯಕನೆಂದು ನಾಮ[3]ಕರಣಮಂ[3] ರಚಿಯಿಸಿ [4]ಗಗನ ಮಹಲ ಚಾವಡಿಯ ಸ[4]ದರಿನೊಳ್ ಕುಳ್ಳಿರಿಸಿ [5]*ರಾಜಪಟ್ಟಮಂ ಕಟ್ಟಿಸಿ ಸಂಸ್ಥಾನಾಧಿಪತ್ಯಕ್ಕೆ ನಿಲಿಸಿ ತದಾರಭ್ಯಮಾಸೋಮ ಶೇಖರನಾಯಕರ್[5] ಬಾಲಕ[6]ರಾ[6]ದ ಕಾರಣ[7]ದಿಂದಾ ಕು[7]ಮಾರನಂ ಮುಂದಿಟ್ಟು ಕೊಂಡು ತಮ್ಮರಸ[8]ನಾಳ್[8]ಬರುತಿರ್ದ ರಾಜ್ಯ ರಾಷ್ಟ್ರ[9]ದೇಶ ಕೋಶ ಪ್ರ[9]ಜೆ ಪರಿವಾರ [10]ಪರಿಸ್ತರಣ ಮಂ[10]ತ್ರಿ ನಿಯೋಗಿ [11]ಸಾಮಾಜಿಕ ಸಾಮಂತ ಗುರಿಕಾರ ಪುರಜನ ಪರಿಜನ ಮಿತ್ರಜನ ಸೇವಕಜನರ್ ಮುಂತಾದ ಸಮಸ್ತಜ[11]ನರಂ [12]ಸಂರಕ್ಷಿಸುತ್ತುಂ ಸಂಸ್ಥಾನದೊಳಗುಂಟಾದ ಕಾರ್ಯ[13]ಗಳ[13]ನೆಲ್ಲಮಂ ತಾನೆ ವಹಿಸಿ ವಿಚಾರಂಗೆಯ್ದು ನಿರ್ವಹಿಸಿ ನಡೆಸು[12]ತ್ತುಂ †ಸದ್ಧರ್ಮದಿಂ ರಾಜ್ಯಪ್ರತಿಪಾಲನಂಗೆಯ್ಯುತ್ತುಮಿ[14]ರ್ದು[14] ಶೃಂಗಪುರದ [15]ಧರ್ಮಸಂಸ್ಥಾನದ ಸ್ವಾಮಿಗಳ ಮಠ[15]ಕ್ಕೆ ಬಹಳ ಋಣಭಾರಮಾಗಿರ್ಪುದೆಂಬ ವರ್ತಮಾನಮಂ ಕೇಳ್ದಲ್ಲಿಗೆ [16]ಚಿನ್ನಭಂಡಾರದ ಪುರುಷೋತ್ತಮಯ್ಯನ ಮಗ ಹೂವಯ್ಯನಂ[16] ಕಳುಪಿ ಅಭಿನವಸಚ್ಚಿದಾನಂ[17]ದ[17]ಸ್ವಾಮಿಯವರಂ ವೇಣುಪುರಕ್ಕೆ ಬಿಜಯಮಾಡಿಸಿದಳ್

---

1 ಅ (ಮ) 2 ನಂ (ಮ) 3 ಗ್ರಹಣಮಂ (ಗಮ) 4 ಸ (ಕ) 5 ತದಾರಭ್ಯ (ಮ) 6 ನಾ (ಮ) 7 ಕು (ಮ) 8 ರಾದ ಬಸವಪ್ಪ ನಾಯಕರುಂ ಕುಮಾರ ಚೆನ್ನಬಸವಪ್ಪ ನಾಯಕರುಂ ಮುನ್ನಾಳಿ (ಗ) ಪ್ರ (ಮ) 10 ಮಂ (ಮ) 11 ಜ (ಮ) 12 ನಡೆಸಿಕೊಳ್ಳು (ಮ) 13 ಕಾರಣಂಗಳಿರ್ದವ (ಗ) 14 ರಲ್ (ಮ) 15 ಮ (ಮ) 16 ನಿಯೋಗಿಗಳಂ (ಒ) ನಿಯೋಗಿ ಜನರಂ (ಮ) 17 ದ ಭಾರತಿ (ಗ)

* ಸಮಸ್ತ ಮಂತ್ರಿ ನಿಯೋಗಿ ಸಾಮಾಜಿಕ ಗುರಿಕಾರ ಪ್ರಜೆ ಪರಿವಾರ ಮಹಾನಾಡು ಕೋಟೆ ಕಂದಾಚಾರ ಮಂದಿ ಮಕ್ಕಳು ಮುಂತಾದವರಿಂದುಡುಗೊರೆಗಳಂ ಮಾಡಿಸಿ ಕೈಮುಗಿಸಿ (ಕಮ)

† ವಸುಧಾರೆ ಕಳಸಯ್ಯ ಆ ಕೃಷ್ಣಪ್ಪಯ್ಯ ಹಲಸಗಾರ ನಾಗಪ್ಪ ಕೋಳಾಲದ ಮರಿಯಪ್ಪಯ್ಯ ಮುಂತಾದ ಬ್ರಾಹ್ಮಣ ಗುರಿಕಾರರ್ಗಂ ರಾಯಸದ ವೆಂಕಟನಾರಣಪ್ಪಯ್ಯ ಶಂಕರ ನಾರಾಯಣ[illegible]ಯ್ಯ ಗಂಗಾಧರಯ್ಯ ವಿಶ್ವೇಶ್ವರಯ್ಯ ಸಬ್ಬುನೀಸ ಕೃಷ್ಣಪ್ಪಯ್ಯ ಆ ವಿಶ್ವೇಶ್ವರಯ್ಯ ಸಬ್ಬಾಯಿತ ಹೊಸಂಗಡಿ ವೆಂಕಪ್ಪಯ್ಯ ಈ ಮುಂತಾದ ಬ್ರಾಹ್ಮಣನಿಯೋಗಿಗಳ್ಗಂ ಸಿದ್ದಪ್ಪ ನಾಯಕ ನಂಬಯ್ಯ ದಳವಾಯಿ ಅಂಡಿಗೆ ವೀರಭದ್ರಯ್ಯ ಮನೆವಾರ್ತೆ ವೀರಭದ್ರಯ್ಯ ಅವಸರದ ಕೆಂಡಪ್ಪ ಮುಂತಾದ ಶಿವಭಕ್ತ ಗುರಿಕಾರ ಜನರ್ಗಂ ತತ್ತದ್ಯೋಗ್ಯತಾನುಸಾರವಂದುಚಿತಾಧಿಕಾರಂಗಳನಿತ್ತು ನಡೆಸಿಕೊಳುತ್ತುಂ (ಕಮ)

Sri Vidyabharathi Book Centre, Sringeri

CC-O. In Public Domain. Digitized by eGangotri

ಇನ್ನಾ ಅಭಿನವ ಸಚ್ಚಿದಾನಂ[1]ದ[1]ಸ್ವಾಮಿಯವರಾರೆಂದೊಡೆ ಸರ್ವಜಗತ್ಕರ್ತೃವಪ್ಪ ಶ್ರೀಮತ್ಪರಮೇಶ್ವರನಿಂ ಹರಿ ಹರಿಯಿಂ ಬ್ರಹ್ಮನಾ ಬ್ರಹ್ಮನಿಂ ವಸಿಷ್ಠನಾ ವಸಿಷ್ಠನಿಂ ಶಕ್ತಿಯಾ ಶಕ್ತಿಯಿಂ ಪರಾಶರನಾ ಪರಾಶರನಿಂ ವ್ಯಾಸನಾ ವ್ಯಾಸನಿಂ ಶುಕಯೋಗೀಂದ್ರನಾ ಶುಕಯೋಗೀಂದ್ರನ ಶಿಷ್ಯರ್ ಗೌಡಪಾದಾಚಾರ್ಯರಾ ಗೌಡಪಾದಾಚಾರ್ಯರ ಶಿಷ್ಯರ್ ಗೋವಿಂದ ಭಗವತ್ಪಾದಾಚಾರ್ಯರಾ ಗೋವಿಂದಭಗವತ್ಪಾದಾಚಾರ್ಯರಿಂದಿತ್ತಮಯೋನಿಜರೆಂದೆನಿಸಿ ಭೂಮಿಯೊಳವತರಿಸಿದ ಈಶ್ವರಾಂಶೀಭೂತರಾದ ಕಾರಣರೂಪರಾದ ಶ್ರೀಮಚ್ಛಂಕರಾಚಾರ್ಯರಾ ಶಂಕರಾಚಾರ್ಯರ್ಗೆ ನಾಲ್ವರ್ ಶಿಷ್ಯರವರಾರೆಂದೊಡೆ ಹಸ್ತಾಮಳಕಾಚಾರ್ಯರ್ ತೋಟಕಾಚಾರ್ಯರ್ ಪಾದಪದ್ಮಾಚಾರ್ಯರ್ ಸುರೇಶ್ವರಾಚಾರ್ಯರ್ [2]ಇಂತೀ ನಾಲ್ವರ್[2]ಶಿಷ್ಯರ್ಗೆ ಪೂರ್ವಪಶ್ಚಿಮದಕ್ಷಿಣೋತ್ತರಂಗಳೊಳ್ ದಿಗಂ[3]ತ[3]ವಾಗಿ ತಾವು ನಿರ್ಮಾಣಂಗೆಯ್ಸಿದ ಸಂಕೇತಮಠಗಳಂ ಹಸುಗೆಯಂ ಮಾಡಿಕೊಟ್ಟು ತತ್ತನ್ಮತಗಳಾಚಾರ ವಿಚಾರಂಗಳಂ ವಿಚಾರಮಂ ಮಾಡಿ ಕೊರತೆಹುಗದಂತೆ ನಡೆಸುವುದೆಂದು ನಿಯಾಮಕಂಗೆಯ್ದು ತಾವು ಪನ್ನೆರಡು ಪದಿನಾರು ವತ್ಸರಂಗಳೊಳಗೆ ಸಮಸ್ತವಿದ್ಯಾಪಾರಂಗತರೆನಿಸಿ ಚಿಕ್ಕತನದಲ್ಲಿಯೇ ಆಶ್ರಮಮಂ ತೆಗೆದುಕೊಂಡು ಸಮಸ್ತದಿಗ್ದೇಶಂಗಳೊಳ್ ಸಂಚರಿಸಿ ಬಹುವಿಧ ವಿಚಿತ್ರಚರಿತ್ರಂಗಳಿಂ ಮಹಿಮೆಯಂ ಮೆರೆದು ಸೌಂದರ್ಯಲಹರಿ ಮುಂತಾದ ಗ್ರಂಥಗಳಂ ಮಾಡಿ ಬ್ರಹ್ಮಾಂಶೀಭೂತನಾಗೊಗೆದ ಮಂಡನಮಿಶ್ರನೊಡನೆ ವಿದ್ಯಾವಾದಮಂ ಮಾಡಿ ಮತ್ತಮಾ ಪಣದೊಳ್ ಪರಕಾಯಪ್ರವೇಶಮಂ ಮಾಡಿ ಮಗುಳ್ದು ಸ್ವಕಾಯಮಂ ಸಾರ್ದು ಅಮರುಕವೆಂಬ ಗ್ರಂಥಮಂ ಮಾಡಿ ಬಳಿಕ್ಕಾ ಶಾರದಾಂಶೀಭೂತೆಯಾದ ಮಂಡನಮಿಶ್ರನ ಧರ್ಮಪತ್ನಿಯಂ ವಿದ್ಯಾವಾದದಿಂ ಗೆಲ್ದು ಬಳಿಕ್ಕಂ ಶಾರದಾದೇವಿಯಂ ಕರ್ಣಾಟದೇಶದೆಡೆಯೊಳೊಪ್ಪುವ ತುಂಗಭದ್ರಾನದೀತೀರದೊಳೆಸೆವ ವಿಭಾಂಡಕರ್ಷೀಶ್ವರನ ಪುತ್ರನಾದ ಋಷ್ಯಶೃಂಗಮುನಿಯಾಶ್ರಮಮಧ್ಯದೊಳ್ ತಾವು ನಿರ್ಮಾಣಂಗೆಯ್ಸಿದ ಶೃಂಗಪುರದ ಮಠಕ್ಕೆ ಬಿಜಯಂಗೆಯ್ಸಿ ತಂದು ಶಾರದಾ ಪೀಠದೊಳ್ ಸ್ಥಿರಮಾಗಿ ನೆಲೆಗೊಳಿಸಿ ನಿಲಿಸಿ ಶಾರದಾ ಪೀಠದಿಂ ಯುಕ್ತಮಾದ [4]ಧ[4]ರ್ಮ ಸಂಸ್ಥಾನಮೆಂದು ಸಮಸ್ತ ದಿಗ್ದೇಶದೊಳ್ ಪ್ರಖ್ಯಾತಿಗೆ ತಂದು ಸಾಂಖ್ಯತ್ರಯಪ್ರತಿಪಾದಕ ವಿಶುದ್ಧಾದ್ವೈತಸಿದ್ಧಾಂತ ಮತಸ್ಥಾಪಕ ಪದವಾಕ್ಯ ಪಾರಾವಾರಪಾರೀಣ ಅಷ್ಟಾಂಗಯೋಗಾನುಸಂಧಾನನಿರತ ಷಣ್ಮತ ಸ್ಥಾಪನಾಚಾರ್ಯ ಜಗದ್ಗುರು ಪರಮಹಂಸಪರಿವ್ರಾಜಕಾಚಾರ್ಯಶಂಕರಾಚಾರ್ಯರೆಂಬಿವು ಮೊದಲಾದ ಬಿರುದಂ ಪಡೆದು ಪರಮಪ್ರಸಿದ್ಧಿವೆತ್ತು ಮತ್ತಮಾಶೃಂಗಪುರದೊಳ್ ತಮ್ಮ ಶಿಷ್ಯರಾದ ಸುರೇಶ್ವರಾಚಾರ್ಯರಂ ನೆಲೆಗೊಳಿಸಿ ತಾವು ಸ್ವತಂತ್ರಸಂಚಾರವಿನೋದಶೀಲರಾಗಿರುತಿಂತು ವರ್ತಿಸುತ್ತುಂ ಕೆಲವು ವತ್ಸರಮಿರ್ದು ಮುಕ್ತಿಗೆ ಸಂದರ್

---

[1] ದಭಾರತೀ (ಗ) [2] ಎಂಬೀಮೂರ್ವರ್ (ಗ) [3] ತ ವಿಶ್ರಾಂತ (ಗ) [4] ಶೃಂಗಪುರದ ಧ (ಗ)

Sri Vidyabharathi Book Centre, Sringeri

CC-O. In Public Domain. Digitized by eGangotri

ಇನ್ನಾ ಸುರೇಶ್ವರಾಚಾರ್ಯಕರಕಮಲಸಂಜಾತರಾರೆಂದೊಡೆ ಅವರ ನಾಮಂಗಳ್:- ನಿತ್ಯಬೋಧಘನಾಚಾರ್ಯರ್ ಅವರ ತರುವಾಯ [1]ನೃಸಿಂಹಾಚಾರ್ಯರ್[1] ಆ ತರುವಾಯ ಜ್ಞಾನೋತ್ತಮಶಿವಾಚಾರ್ಯರ್ ಆ ತರುವಾಯ ಜ್ಞಾನಗಿರ್ಯಾಚಾರ್ಯರ್ ಆ ತರುವಾಯ ನೃಸಿಂಹಗಿರ್ಯಾಚಾರ್ಯರ್ ಆ ತರುವಾಯ ಈಶ್ವರತೀರ್ಥಾಚಾರ್ಯರ್ ಆ ತರುವಾಯ ನೃಸಿಂಹಾಚಾರ್ಯರ್ ಆ ತರುವಾಯ ವಿದ್ಯಾತೀರ್ಥಾಚಾರ್ಯರ್ [2]ಆ ತರುವಾಯ ಭಾರತೀ ತೀರ್ಥಕೃಷ್ಣಾಚಾರ್ಯರ್[2] ಆ ತರುವಾಯ ವಿದ್ಯಾರಣ್ಯಯೋಗೀಂದ್ರರ್

ಮತ್ತಮಾ ವಿದ್ಯಾರಣ್ಯರೆಂಬವರ್ ಪಂಪಾಕ್ಷೇತ್ರದೊಳಿರ್ದ ಶ್ರೀಚಕ್ರೋಪಾಸನೆಯಿಂ ದೇವಿಯಂ ಮೆಚ್ಚಿಸಿ ಬಳಿಕ್ಕಾ ಶೃಂಗೇರಿಯ ಮಠದೊಳ್ ವರ್ತಿಸುತ್ತಿರ್ದ ವಿದ್ಯಾಶಂಕರರಿಂದ ಮಾಶ್ರಮಮಂ ಕೈಕೊಂಡು ಭಾಗ್ಯಮಂ ಪಡೆದು ಬಳಿಕ್ಕಾ ದೇವಿಯ ನಿರೂಪದಿಂ ಪಂಪಾಕ್ಷೇತ್ರಸಮೀಪದೊಳ್ ವಿದ್ಯಾನಗರಿಯೆಂಬ ಪಟ್ಟಣಮಂ ನಿರ್ಮಾಣಂಗೆಯ್ಸಿ ಆ ರತ್ನಸಿಂಹಾಸನದಲ್ಲಿ ಹರಿಹರ ಬುಕ್ಕರೆಂಬಿರ್ವರ್ ಸಹೋದರರೊಳ್ ಪಿರಿಯನಾದ ಹರಿಹರರಾಯಂಗೆ ಪಟ್ಟಮಂ ಕಟ್ಟಿಸಿ ಪಂಪಾಕ್ಷೇತ್ರಮಾರಭ್ಯ ಕೃಷ್ಣವೇಣೀಪರ್ಯಂತಮಾದ ರಾಜ್ಯಕ್ಕೆಲ್ಲಂ ಶ್ರೀವಿರೂಪಾಕ್ಷನೆ ಕರ್ತೃ ಸೀವಾ ಸ್ವಾಮಿಯ ಹೆಸರಿನಲ್ಲಿ ಒಪ್ಪಮಂ ಹಾಕಿಕೊಂಡು ಆ ಸ್ವಾಮಿಯಲ್ಲಿ ಪರಮಭಕ್ತಿಯೊಳ್ ನಡೆದುಕೊಂಡು ಸದ್ಧರ್ಮದಿಂ ರಾಜ್ಯಪ್ರತಿಪಾಲನಂಗೆಯ್ವುದೆಂದು ನಿಯಾಮಿಸಿ ನಿಲಿಸಿ ಆ ಬಳಿಕಂ ತಾವು ರೇವಣಸಿದ್ಧೇಶ್ವರನೆಂಬ ಗಣಾಧೀಶ್ವರನಿಂ ಚಂದ್ರಮೌಳೀಶ್ವರನೆಂಬ ಲಿಂಗಮಂ ಪಡೆದು ಶೃಂಗಪುರವರಕ್ಕೈತಂದಾಮಠದೊಳ್ ನಿಂದು ಕೆಲಕಾಲಂ ವರ್ತಿಸುತ್ತುಮಿರ್ದು ಮುಕ್ತರಾದರ್

ಆ ವಿದ್ಯಾರಣ್ಯರ ತರುವಾಯ ಚಂದ್ರಶೇಖರಭಾರತೀಂದ್ರರ್ ಆ ತರುವಾಯ ನೃಸಿಂಹಭಾರತಿಗಳ್ ಆ ತರುವಾಯ ಪುರುಷೋತ್ತಮಭಾರತಿಗಳ್ ಆ ತರುವಾಯ ಶಂಕರಭಾರತಿಗಳ್ ಆ ತರುವಾಯ ಚಂದ್ರಶೇಖರಭಾರತಿಗಳ್ [3]ಆ ತರುವಾಯ ನೃಸಿಂಹಭಾರತಿಗಳ್ ಆ ತರುವಾಯ ಪುರುಷೋತ್ತಮಭಾರತಿಗಳ್ ಆ ತರುವಾಯ ರಾಮಚಂದ್ರಭಾರತಿಗಳ್ ಆ ತರುವಾಯ ನೃಸಿಂಹಭಾರತಿಗಳ್[3] ಆ ತರುವಾಯ ಮತ್ತಂ ನೃಸಿಂಹಭಾರತಿಗಳ್ ಆ ತರುವಾಯ ಅಭಿನವ ನೃಸಿಂಹಭಾರತಿಗಳ್ ಆ ತರುವಾಯ ಸಚ್ಚಿದಾನಂದಭಾರತಿಗಳ್ ಆ ತರುವಾಯ ಸಚ್ಚಿದಾನಂದಭಾರತೀಸ್ವಾಮಿಗಳ ಕರಕಮಲಸಂಜಾತರಾದ ಅಭಿನವಸಚ್ಚಿದಾನಂದಭಾರತಿಗಳ್

ಇಂತಪ್ಪ ಅಭಿನವಸಚ್ಚಿದಾನಂದಭಾರತೀಸ್ವಾಮಿಯವರಂ ಈಶ್ವರ ಸಂವತ್ಸರದ ಮಾರ್ಗಶಿರ ಬಹುಳ ೧೨ಯೊಳ್

---

[1] ಜ್ಞಾನಘನಚಾರ್ಯರ್ (ಕ) [2] ಭಾರತೀಕೃಷ್ಣಾಚಾರ್ಯರ್ (ಕ) [3] ಈ ನಾಲ್ಕು ಹೆಸರುಗಳು (ಕ) ಪುಸ್ತಕದಲ್ಲಿಲ್ಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ॥ ಭಾವಿ[1]ಸಿ[1] ಬರ್ಸಾ ನಾಮದ
ಚಾವಡಿಗೈತಂದು ನಿಂದು ಕರದೊಯ್ದೊಲವಿಂ
ದಾ ವಿಲಸಿತವಹ ಬಣ್ಣದ
ಚಾವಡಿಯೊಳ್ ಬೇಟಗೊಂಡು ಪರಮೋತ್ಸವದಿಂ ೫

ನೆರೆಯುಚಿತಮಾದ ಮಿಗಿಲುಡು
ಗೊರೆಗಳನಿತ್ತನರನ್ನೈದೆ ಸನ್ಮಾನಿಸಿಯಾ
*ದರಿಸಿ ಬೀಳ್ಕೊಟ್ಟು ಬಳಿಕಂ
ವರನೃಪನನಡೆಡೆಯನ್ನೈದೆ ಶೃಂಗರಿಸುತ್ತುಂ ೬

ನೆರೆ ರಮ್ಯಮಾಗಿ ಸತತಂ
ಮಿರುಪಾ ಸ್ಥಳಕಾ ಯತೀಂದ್ರನಂ ಕರೆದೊಯ್ದಾ
ದರದಿಂ ಭಿಕ್ಷವನಾಗಿಸಿ
ಪಿರಿದೆನೆ ಸಂತುಷ್ಟಿವಡಿಸಿ ಕಳುಪಿ [2]ಬಳಿಕ್ಕಂ[2]† ೭

ಪುರದೊಳ್ ಪ್ರತಿದಿನಗಳೊಳಂ
ಗುರಿಕಾರರಿನೆಸೆವ ಪರದರಿಂದಂ ಹೆಜ್ಜೀ
ಬರಿನುರುಭಿಕ್ಷವನಾಗಿಸಿ
ನೆರೆ ಸಂತಸವಡಿಸಿದಳ್ ದಲಾ ಯತಿವರನಂ ೮

ವ॥ ಮತ್ತಮುದಲ್ಲದಾ ತರುವಾಯಿಯೊಳಾ ಸ್ವಾಮಿಗಳ್ಗತ್ಯಂತದಿವ್ಯಮಾದ ಸ್ಫಟಿಕಲಿಂಗಮುಮಂ ಅನರ್ಘ್ಯರತ್ನಖಚಿತಗೋಪಾಲಕೃಷ್ಣಮೂರ್ತಿಯುಮಂ ಪದಕ ತಾಳಿಸರಪಣಿಸಹಿತಂ ಶಿವಾರ್ಪಿತಮಾಗಿ ಧಾರೆಯನೆರೆದು ಮತ್ತಮಾದೇವರ್ಗೆಪ್ಪತ್ತುನಾಲ್ಕುವರಹದ ಭೂಸ್ವಾಸ್ಥ್ಯಮಂ ನಿರೂಪಮಂ ಬರಿಸಿತ್ತು ಮತ್ತಮಂತುಮಲ್ಲದೆ ಶೃಂಗಪುರದ ಮಠಕ್ಕೋಸುಗಂ ತನ್ನ ಭಕ್ತಿಯಿಂ ಬೇರೆ ಮುನ್ನೂರು ವರಹದ ಭೂಸ್ವಾಸ್ಥ್ಯಮಂ ಶಿವಾರ್ಪಿತಮಾಗಿ ಉತ್ತಾರಮಂ ನೊಡಿಸಿ[3] ಅಕಾಲಚಕ್ರದೊಳ್ ಕೊಳುತ್ತಿರ್ದು[3]ತ್ತಾರಪಗುದಿಯಂ ಬಿಡಿಸಿ ಆ ಮಠದ ರುಣಭಾರಕ್ಕಂ ಉಚಿತಮರಿತು ಖಂಡಿತ ಕಾಯಕಂಗಳಂ ಮಾಡಿಸಿಕೊಟ್ಟು ಮೇಲೆನಿಪ್ಪುಡುಗೊರೆಯುಚಿತಮುಂತಾದುಪಚಾರಂಗಳಿಂ ಪಿರಿದು ಸನ್ಮಾನಿಸಿ ಸಂತಸಂಬಡಿಸಿ ತೆರಳ್ಚಿ ಕಳುಪಿದಳಂತಮಲ್ಲದೆಯುಂ

---

1 ಸಿ (ಮ) 2 ದ ಬಳಿಕಂ (ಮ) 3 ಆರಮನೆಗೆ ತೆಗೆದುಕೊಳ್ಳುವವು (ಕ)

† ಇಲ್ಲಿಂದ ಮುಂದಿನ ಭಾಗ (ಗ) ಪ್ರತಿಯಲ್ಲಿಲ್ಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂ॥ *ಅಡಸಿದಾರೆಯರ ಫೌಜಂ
ಕಡೆದೆಗೆಸುತೆ ವೀರಭದ್ರಪೇಂದ್ರನ ಮುಖದಿಂ
ಪಡುಗಡಲೆಡೆಯೊಳಗೊಪ್ಪುವ
ಮಿಡಿಜೆಯ ಕೋಂಟೆಯನೆ ಮಗುಳೆ ತಾಂ ವಶಗೈ[1]ದಳ್[1]

ವ॥ ಈ ವೀರಮ್ಮಾಜಿ ಸೋಮಶೇಖರನಾಯಕರ್ ರಾಜ್ಯವಾಳಿದುದು ಈಶ್ವರಸಂವತ್ಸರದ ಶ್ರಾವಣ ಬಹುಳ ೫ ಯಾರಭ್ಯ ಚಿತ್ರಭಾನು ಸಂವತ್ಸರದ ಮಾಘ ಶುದ್ಧ........ ವರೆಗೆ ವರ್ಷ ೫ ತಿಂಗಳು ೬ ಪರ್ಯಂತಂ

ದ್ವಾದಶಾಶ್ವಾಸಂ ಸಂಪೂರ್ಣಂ

[2]ಶಕವರ್ಷ ೧೬೮೫ನೆಯ ಚಿತ್ರಭಾನು ಸಂವತ್ಸರದ ಮಾಘ ಶುದ್ಧ ೫ ಯೊಳ್ ನಗರ ಸಂಸ್ಥಾನಂ ವಿಸ್ಖಲಿತಮಾಯ್ತು ಈ ಶಿವಭಕ್ತರ ಸಂಸ್ಥಾನಂ ಇಲ್ಲಿಗೆ ಸಮಾಪ್ತಂ[2]

ಕೆಳದಿನೃಪವಿಜಯಂ ಸಂಪೂರ್ಣಂ

ಮಂಗಳಮಸ್ತು

---

[1] ದು ಸುಖದಿಂದಿರ್ದರ್ (ಕ) [2] ಶಕವರ್ಷ ೧೬೮೫ನೆಯ ಚಿತ್ರಭಾನು ಸಂವತ್ಸರದ ಮಾಘ ಶುದ್ಧ ೯ ವರೆಗೆ ವರ್ಷ ೫ ತಿಂಗಳು ೫ ದಿನ ೧೯ ಪರಿಯಂತ್ರ ಶಿವಭಕ್ತರ ಸಂಸ್ಥಾನ ಸಮಾಪ್ತಿ ಆ ತರುವಾಯ ಮ್ಲೇಂಚ್ಛರ ಹೈದರುನವಾಬು ಶುಭಕೃತು ಸಂವತ್ಸರದ ಫಾಲ್ಗುಣ ಶುದ್ಧ ೧೫ ವರೆಗೆ ವರ್ಷ ೨೦ ತಿಂಗಳು ೧ ದಿನ ೬ ಪರಿಯಂತ್ರ ಶ್ರೀರಂಗಪಟ್ಟಣದ ರಾಜ ಆಳಿದ ಅನಂತರ ಮೈಸೂರವರಿಗೆ ಸೇರಿತು. ಸಮಾಪ್ತ ಮಂಗಳ (ಕ)

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri



Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

ಕನ್ನಡ ಅಧ್ಯಯನ ಸಂಸ್ಥೆ

CC-O. In Public Domain. Digitized by eGangotri

ಪ್ರಾಚ್ಯಕಾವ್ಯಮಾಲೆ ಪ್ರಕಟಣೆಗಳು

1 ಪದಾರ್ಥಸಾರ ಭಾಗ-೧ — ಸಂ. ಎಂ. ಸಿ. ಪದ್ಮನಾಭ ಶರ್ಮ
2 ದ್ರೋಣಪರ್ವ — ಸಂ. ಎನ್. ಅನಂತರಂಗಾಚಾರ್
3 ಕರ್ಣಪರ್ವ — ಸಂ. ಎನ್. ಅನಂತರಂಗಾಚಾರ್
4 ಸೂಪಶಾಸ್ತ್ರ — ಸಂ. ಎಸ್. ಎಸ್. ಕೃಷ್ಣಜೋಯಿಸ್
5 ಸೊಬಗಿನ ಸೋನೆ — ಸಂ. ಬಿ. ಎಸ್. ಸಣ್ಣಯ್ಯ
6 ಬಸವರಾಜ ಚಾರಿತ್ರ (ಸಿಂಗಿರಾಜ ಪುರಾಣ) — ಸಂ. ಎಚ್. ದೇವೀರಪ್ಪ
7 ಕೋಲಶಾಂತಯ್ಯ ಮತ್ತು ಮಧುವಯ್ಯಗಳ ವಚನಗಳು — ಸಂ. ಬಿ. ಎಸ್. ಸಣ್ಣಯ್ಯ
8 ಸನತ್ಕುಮಾರ ಚರಿತೆ — ಸಂ. ಜಿ. ಜಿ. ಮಂಜುನಾಥನ್
9 ಶಲ್ಯಗದಾಪರ್ವಗಳು — ಸಂ. ಎನ್. ಅನಂತರಂಗಾಚಾರ್
10 ಅರಿವಿನ ಮಾರಿತಂದೆಗಳ ವಚನಗಳು — ಸಂ. ಬಿ. ಎಸ್. ಸಣ್ಣಯ್ಯ
11 ನಳಚಂಪು — ಸಂ. ಎಚ್. ಆರ್. ರಂಗಸ್ವಾಮಿ ಅಯ್ಯಂಗಾರ್; ಎಸ್. ಎನ್. ಕೃಷ್ಣಜೋಯಿಸ್
12 ಶಿವಲೆಂಕ ಮಂಚಣ್ಣ ಮತ್ತು ಡಕ್ಕೆಯ ಬೊಮ್ಮಣ್ಣಗಳ ವಚನಗಳು — ಸಂ. ಬಿ. ಎಸ್. ಸಣ್ಣಯ್ಯ
13 ಸಭಾಪರ್ವ — ಸಂ. ಎಸ್. ಬಸಪ್ಪ
14 ವಿಷ್ಣು ಪುರಾಣ — ಸಂ. ಎಸ್. ಎನ್. ಕೃಷ್ಣಜೋಯಿಸ್
15 ಬಿಬ್ಬಿಬಾಚಯ್ಯ ಮತ್ತು ಮೆರೆಮಿಂಡಯ್ಯಗಳ ವಚನಗಳು — ಸಂ. ಬಿ. ಎಸ್. ಸಣ್ಣಯ್ಯ
16 ಕಂಠೀರವ ನರಸರಾಜ ವಿಜಯ — ಸಂ. ಆರ್. ಶಾಮಶಾಸ್ತ್ರಿ
17 ಸೌಂದರ್ಯ ಲಹರೀ — ಸಂ. ಎಸ್. ನಾರಾಯಣಸ್ವಾಮಿ ಶಾಸ್ತ್ರೀ
18 ಆದಿಪರ್ವ — ಸಂ. ಕೆ. ಆರ್. ಶೇಷಗಿರಿ
19 ರಸರತ್ನಾಕರಂ — ಸಂ. ಎಚ್. ಕೆ. ನರಸಿಂಹೇಗೌಡ
20 ಕರಸ್ಥಲ ನಾಗಲಿಂಗನ ಚರಿತ್ರೆ — ಸಂ. ಕೆ. ಆರ್. ಶೇಷಗಿರಿ
21 ಅನಂತನಾಥ ಪುರಾಣಂ — ಸಂ. ಎಚ್. ದೇವೀರಪ್ಪ; ಎಂ. ಸಿ. ಪದ್ಮನಾಭ ಶರ್ಮ
22 ಮದನಮೋಹಿನಿಯ ಕಥೆ — ಸಂ. ಬಿ. ಎಸ್. ಸಣ್ಣಯ್ಯ
23 ಸೂಕ್ತಿ ಸುಧಾರ್ಣವ — ಸಂ. ಎನ್. ಅನಂತರಂಗಾಚಾರ್
24 ದೀಕ್ಷಾಬೋಧೆ — ಸಂ. ಎಸ್. ಬಸಪ್ಪ
25 ಗುರುಭಕ್ತ ಚಾರಿತ್ರ — ಸಂ. ಕೆ. ಆರ್. ಶೇಷಗಿರಿ
26 ಪದಾರ್ಥಸಾರ ಭಾಗ-೨ — ಸಂ. ಎಂ. ಸಿ. ಪದ್ಮನಾಭ ಶರ್ಮ
27 ಹರಿಹರನ ಐದು ರಗಳೆಗಳು — ಸಂ. ಎಂ. ಎನ್. ಲೀಲಾವತಿ
28 ಅಬ್ಬಲೂರು ಚರಿತೆ — ಸಂ. ಎನ್. ಬಸವಾರಾಧ್ಯ
29 ಕುಮಾರ ರಾಳಗ — ಸಂ. ಕೆ. ರಾಘವೇಂದ್ರರಾವ್
30 ಕೆಳದಿನೃಪ ವಿಜಯಂ — ಸಂ. ಆರ್. ಶಾಮಶಾಸ್ತ್ರಿ

Sri Vidyabharathi Book Centre, Sringeri